ಬುಧವಾರ, ಸೆಪ್ಟೆಂಬರ್ 3, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಿನ್ನರ್ ಸಂಭ್ರಮ

ಕಜಾಕಸ್ತಾನದ ಅಲೆಕ್ಸಾಂಡರ್ ಬುಬ್ಲಿಕ್ ಅವರನ್ನು ಸೋಲಿಸಿ ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಸೋಮವಾರ ಎಂಟರ ಘಟ್ಟ ತಲುಪಿದ ಇಟಲಿಯ ಯಾನಿಕ್ ಸಿನ್ನರ್





ಕೆರೆ ಹಾವು ರಕ್ಷಣೆ

ಕನಕಪುರದ ಮಳಗಾಳು ನಿವಾಸಿ ಮರಸಪ್ಪ ರವಿ ಅವರ ಮನೆಯಲ್ಲಿ ಕಾಣಿಸಿಕೊಂಡ ಎಂಟು ಅಡಿ ಉದ್ದದ ಕೆರೆ ಹಾವನ್ನು ಸ್ನೇಕ್ ನವೀನ್ ರಕ್ಷಿಸಿದ್ದಾರೆ

ಮುನ್ಸಿಪಲ್ ಬೋರ್ಡ್‌ನಿಂದ ನಗರ ಪಾಲಿಕೆವರೆಗೆ..

18 ಸದಸ್ಯರಿಂದ 198 ಕಾರ್ಪೊರೇಟರ್‌ಗಳವರೆಗೆ ಬೆಂಗಳೂರು ಆಡಳಿತ

• ಆರ್. ಮಂಜುನಾಥ್

ಬೆಂಗಳೂರು: ನಗರದ ಆಡಳಿತ 1862ರಲ್ಲಿ 18 ಸದಸ್ಯರಿಂದ ಆರಂಭವಾಗಿ, 2010ರಲ್ಲಿ 198 ಕಾರ್ಪೊರೇಟರ್‌ಗಳನ್ನು ಹೊಂದುವವರೆಗೂ ನಾಲ್ಕು ಬಾರಿ ತನ್ನ 'ಆಡಳಿತ ವಿನ್ಯಾಸ'ವನ್ನು ಬದಲಿಸಿಕೊಂಡಿದೆ.

ನಗರ ಆಡಳಿತಕ್ಕೇ ಪ್ರತ್ಯೇಕವಾದ ಬೋರ್ಡ್ ರಚನೆಯಾಗಿ 142 ವರ್ಷಗಳಾಗುತ್ತಿದ್ದು, ಎರಡು ಮುನ್ಸಿಪಲ್ ಬೋರ್ಡ್‌ನಿಂದ ಆರಂಭವಾಗಿ, 198 ವಾರ್ಡ್‌ಗಳ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ, ಇದೀಗ ಐದು ನಗರ ಪಾಲಿಕೆಗಳಿಗೆ ನಗರದ ಆಡಳಿತ ಹಂಚಿಕೆಯಾಗಿದೆ.

1862ರ ಮಾರ್ಚ್ 27ರಂದು ಬೆಂಗಳೂರಿನಲ್ಲಿ ಸ್ಥಳೀಯ ಆಡಳಿತ ಪ್ರಾಯೋಗಿಕವಾಗಿ ಜಾರಿಗೆ ಬಂದಿತ್ತು. ಬ್ರಿಟನ್ ಮಾದರಿಯಲ್ಲಿ ಅಂದಿನ ಮೈಸೂರಿನ ಆಯುಕ್ತ ಬೌರಿಂಗ್ ಅವರು 1850 ಕಾಯ್ದೆಯನ್ವಯ ಬೆಂಗಳೂರಿನಲ್ಲಿ ಮುನ್ಸಿಪಲ್ ಬೋರ್ಡ್ ರಚಿಸಿದರು. ನಾಲ್ಕು ತಿಂಗಳ ನಂತರ 1862ರ ಆಗಸ್ಟ್ 1ರಂದು ಬೆಂಗಳೂರು ಮುನ್ಸಿಪಲ್ ಬೋರ್ಡ್ ಹಾಗೂ ಮುನ್ಸಿಪಲ್ ಕಂಟೋನ್ಮೆಂಟ್ ಬೋರ್ಡ್ (ದಂಡುಪ್ರದೇಶ) ಎಂದು ರಚಿಸಲಾಯಿತು.

ಮುನ್ಸಿಪಲ್ ಬೋರ್ಡ್‌ನಲ್ಲಿ ಒಂಬತ್ತು ಅಧಿಕಾರಿಗಳನ್ನು ಸರ್ಕಾರ ನಾಮನಿರ್ದೇಶನ ಮಾಡಿತ್ತು. ದಂಡು ಪ್ರದೇಶ ಬೋರ್ಡ್‌ನಲ್ಲಿ ತಲಾ ಆರು ಅಧಿಕಾರಿಗಳು ಹಾಗೂ ಸೈನ್ಯಾಧಿಕಾರಿಗಳು ಸದಸ್ಯರಾಗಿದ್ದರು. ಎರಡೂ ಬೋರ್ಡ್‌ಗಳು ಪ್ರತ್ಯೇಕವಾಗಿ ತಮ್ಮ ವ್ಯಾಪ್ತಿಯಲ್ಲಿ ನೈರ್ಮಲ್ಯ, ತೆರಿಗೆ, ಪೊಲೀಸ್ ಹಾಗೂ ಲೆಕ್ಕಪತ್ರದ ನಿರ್ವಹಣೆ ಮಾಡುತ್ತಿದ್ದವು.

ಎರಡು ಬೋರ್ಡ್‌ಗಳಿಗೆ 1883ರಲ್ಲಿ ಮೊದಲ ಬಾರಿಗೆ ಚುನಾವಣೆ ನಡೆದು, 18 ಸದಸ್ಯರು ಚುನಾಯಿತರಾದರು. ಅಧಿಕಾರಿಗಳೇ ಕಾರ್ಯ ನಿಯಂತ್ರಣ ಹೊಂದಿದ್ದರು. ಬೆಂಗಳೂರು ಮುನ್ಸಿಪಲ್ ಬೋರ್ಡ್‌ಗೆ 1897ರಲ್ಲಿ ಸರ್ಕಾರದ ಪ್ರತಿನಿಧಿಯಾದ ಅರ್ಕಾಡ್ ಶ್ರೀನಿವಾಸ ಚಾರ್ಯ ಮೊದಲ ಅಧ್ಯಕ್ಷರಾದರು. ಅಧಿಕಾರೇತರ ಸದಸ್ಯರಾದ ಪುಟ್ಟಣ್ಣಶೆಟ್ಟಿ ಅವರು 1913ರಲ್ಲಿ ಅಧ್ಯಕ್ಷರಾದರು. ಮುನ್ಸಿಪಲ್ ಕಂಟೋನ್ಮೆಂಟ್ ಬೋರ್ಡ್‌ನಲ್ಲಿ ಅಧಿಕಾರಿಗಳೇ ಇದ್ದರು.

ದಂಡುಪ್ರದೇಶ ಹಾಗೂ ಬೆಂಗಳೂರು ಮುನ್ಸಿಪಲ್ ಬೋರ್ಡ್‌ಗಳನ್ನು 1949ರಲ್ಲಿ ಸಿಟಿ ಕಾರ್ಪೊರೇಷನ್ ಕಾಯ್ದೆಯನ್ವಯ ವಿಲೀನಗೊಳಿಸಿ, 'ಬೆಂಗಳೂರು ಸಿಟಿ ಕಾರ್ಪೊರೇಷನ್' (ಬೆಂಗಳೂರು ನಗರ ಸಭೆ– ಬಿಸಿಸಿ) ಎಂದು ಹೆಸರಿಸಲಾಯಿತು. ಆರ್. ಸುಬ್ಬಣ್ಣ ಪ್ರಥಮ ಮೇಯರ್ ಹಾಗೂ ವಿ.ಪಿ. ದೀನದಯಾಳು ನಾಯ್ಡು ಪ್ರಥಮ ಉಪಮೇಯರ್ ಆದರು. 1951ರಲ್ಲಿ ಬಿಸಿಸಿಗೆ ಚುನಾವಣೆ ನಡೆದು, 69 ಸದಸ್ಯರು ಆಯ್ಕೆಯಾದರು. ಆರು ಜನರು ನಾಮಕರಣ ಸದಸ್ಯರಿದ್ದರು. ಐದು ಸ್ಥಾಯಿ ಸಮಿತಿಗಳೂ ಅಸ್ತಿತ್ವಕ್ಕೆ ಬಂದವು.

1971ರ ಚುನಾವಣೆ ವರೆಗೂ ಬೆಂಗಳೂರು ನಗರ ಸಭೆಯ ಒಟ್ಟಾರೆ ಸದಸ್ಯರ ಸಂಖ್ಯೆ 75 (ನಾಮಕರಣ ಸದಸ್ಯರು ಸೇರಿ) ಆಗಿತ್ತು. 1983ರಲ್ಲಿ 87 ವಾರ್ಡ್‌ಗಳನ್ನಾಗಿ ವಿಂಗಡಿಸಲಾಯಿತು. 1996ರಲ್ಲಿ 100 ವಾರ್ಡ್‌ಗಳಿಗೆ ವಿಸ್ತರಣೆ ಮಾಡಿ, 'ಬೆಂಗಳೂರು ಮಹಾನಗರ ಪಾಲಿಕೆ' (ಬಿಎಂಪಿ) ಅಸ್ತಿತ್ವಕ್ಕೆ ಬಂದಿತು. 2007ರಲ್ಲಿ ನಗರದ ಸುತ್ತಮುತ್ತಲಿನ ಏಳು ನಗರ ಸಭೆ ಹಾಗೂ ಒಂದು ಪುರಸಭೆ ಮತ್ತು 110 ಹಳ್ಳಿಗಳು ಸೇರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ (ಬಿಬಿಎಂಪಿ) ರಚಿಸಿ, 198 ವಾರ್ಡ್‌ಗಳನ್ನು ವಿಂಗಡಿಸಲಾಯಿತು. 2010ರಲ್ಲಿ ಬಿಬಿಎಂಪಿಗೆ ಚುನಾವಣೆ ನಡೆದಿತ್ತು.

2020ರ ಸೆಪ್ಟೆಂಬರ್ 10ರಂದು ಕೌನ್ಸಿಲ್ ಅವಧಿ ಮುಕ್ತಾಯಗೊಂಡಿತ್ತು. 2022ರಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲೇ 243 ವಾರ್ಡ್‌ಗಳನ್ನು ಸರ್ಕಾರ ರಚಿಸಿತ್ತು. 2023ರ ಆಗಸ್ಟ್‌ನಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲೇ 225 ವಾರ್ಡ್‌ಗಳಿಗೆ ಮರು ವಿಂಗಡಣೆ ಮಾಡಲಾಗಿತ್ತು. 2025ರ ಸೆಪ್ಟೆಂಬರ್ 2ರಂದು ಬಿಬಿಎಂಪಿ ಅಸ್ತಿತ್ವ ಕಳೆದುಕೊಂಡು, ಅದೇ ವ್ಯಾಪ್ತಿಯಲ್ಲಿ 'ಗ್ರೇಟರ್ ಬೆಂಗಳೂರು' ಅಸ್ತಿತ್ವ ಕಂಡುಕೊಂಡು, ಐದು ನಗರ ಪಾಲಿಕೆಗಳೂ ರಚನೆಯಾಗಿವೆ.

ಬೋರ್ಡ್ ಪಾಲಿಕೆ ಸದಸ್ಯರು	1883	1951	1971	1983	1996	2010
	18 ಸದಸ್ಯರು	69 ಕಾರ್ಪೊರೇಟರ್	75 ಕಾರ್ಪೊರೇಟರ್	87 ಕಾರ್ಪೊರೇಟರ್	100 ಕಾರ್ಪೊರೇಟರ್	198 ಕಾರ್ಪೊರೇಟರ್

ಮೆಯೊಹಾಲ್‌ನಿಂದ ಕೆಂಪೇಗೌಡ ಪೌರ ಸಭಾಂಗಣ





ಮಹಾತ್ಮಗಾಂಧಿ ರಸ್ತೆಯಲ್ಲಿರುವ ಮೆಯೊ ಹಾಲ್‌ನಲ್ಲಿ 1996ರವರೆಗೆ ಕಾರ್ಪೊರೇಟರ್‌ಗಳ ಸಭೆ ನಡೆಯುತ್ತಿತ್ತು. ಎನ್.ಆರ್. ಚೌಕದಲ್ಲಿ 1996ರಲ್ಲಿ ಕೆಂಪೇಗೌಡ ಸಭಾಂಗಣ ನಿರ್ಮಾಣವಾದ ಮೇಲೆ ಅಂದಿನಿಂದ ಪಾಲಿಕೆಯ ಸಭೆ ಅಲ್ಲಿ ನಡೆಯುತ್ತಿತ್ತು. ಆಡಳಿತ ಯಂತ್ರದ ಕೇಂದ್ರ ಸ್ಥಾನವೂ ಅದೇ ಆವರಣದಲ್ಲಿತ್ತು.

1949ರಿಂದ 1994ರವರೆಗೆ ಬೆಂಗಳೂರು ನಗರ ಸಭೆಯಲ್ಲಿ 33 ಮೇಯರ್‌ಗಳಿದ್ದರು. 1996ರಿಂದ 2006ವರೆಗೆ 10 ಮೇಯರ್‌ಗಳು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿದ್ದರು. 2010ರಿಂದ 2020ರವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 10 ಮೇಯರ್‌ಗಳನ್ನು ಕಂಡಿದೆ.


1967ರಿಂದ 1990ರವರೆಗಿನ ಬೆಂಗಳೂರು ನಗರ ಸಭೆಯಲ್ಲಿ 17 ಆಡಳಿತಾಧಿಕಾರಿಗಳು ವಿವಿಧ ಅವಧಿಯಲ್ಲಿದ್ದರು. 1995ರಿಂದ 1996ರವರೆಗಿನ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆರು ಮಂದಿ ಆಡಳಿತಾಧಿಕಾರಿ, 2006ರಿಂದ 2025ರವರೆಗಿನ ಬಿಬಿಎಂಪಿ ಅವಧಿಯಲ್ಲಿ ಏಳು ಮಂದಿ ಆಡಳಿತಾಧಿಕಾರಿಗಳು ಕಾರ್ಯನಿರ್ವಹಿಸಿದ್ದಾರೆ. 2020ರಿಂದ ಬಿಬಿಎಂಪಿಯಲ್ಲಿ ಅಧಿಕಾರಿಗಳ ಆಡಳಿತವೇ ಇತ್ತು. ಇದೀಗ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ದ ಆಡಳಿತ ಆರಂಭವಾಗಿದೆ.

ಬೆಂಗಳೂರು ಜನಸಂಖ್ಯೆ

ವರ್ಷ	ಜನಸಂಖ್ಯೆ
1971	16,54,000
1981	29,22,000
1991	41,30,000
2001	51,01,000
2010	96,21,551
2025	1,44,00,000 (ಅಂದಾಜು)

5 ನಗರ ಪಾಲಿಕೆಗಳ ವ್ಯಾಪ್ತಿ

28 ವಿಧಾನಸಭೆ ಕ್ಷೇತ್ರ
198 ವಾರ್ಡ್‌ಗಳು



ಬೆಂಗಳೂರು ಕೇಂದ್ರ ನಗರ ಪಾಲಿಕೆ



ಸಿ.ವಿ. ರಾಮನ್‌ನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಗಾಂಧಿನಗರ, ಶಾಂತಿನಗರ; ಶಿವಾಜಿನಗರ ವಿಧಾನಸಭೆ ಕ್ಷೇತ್ರದ ಎಲ್ಲ ವಾರ್ಡ್‌ಗಳು. ಪುಲಕೇಶಿನಗರ ವಿಧಾನಸಭೆ ಕ್ಷೇತ್ರದ ಕುಶಾಲನಗರ ವಾರ್ಡ್.

ಪ್ರದೇಶ: 78 ಚದರ ಕಿ.ಮೀ, ವ್ಯಾಪ್ತಿ; 42 ವಾರ್ಡ್

2025ರಂತೆ ತೆರಿಗೆ ಸಂಗ್ರಹ; ₹659 ಕೋಟಿ

ವಲಯ 1ರ ಕಚೇರಿ, ವ್ಯಾಪ್ತಿ: ಪೂರ್ವ ವಲಯ ಕಚೇರಿ; ಶಾಂತಿನಗರ, ಸಿ.ವಿ. ರಾಮನ್‌ನಗರ ವಿಧಾನಸಭೆ ಕ್ಷೇತ್ರ

ವಲಯ 2ರ ಕಚೇರಿ, ವ್ಯಾಪ್ತಿ: ಎನ್.ಆರ್. ಚೌಕದಲ್ಲಿರುವ ಅನೆಕ್ಸ್–3 ಕಟ್ಟಡ; ಶಿವಾಜಿನಗರ, ಗಾಂಧಿನಗರ, ಚಿಕ್ಕಪೇಟೆ, ಚಾಮರಾಜಪೇಟೆ

ಆಯುಕ್ತ: ಪಿ. ರಾಜೇಂದ್ರ ಚೋಳನ್

ಹೆಚ್ಚುವರಿ ಆಯುಕ್ತ (ಅಭಿವೃದ್ಧಿ): ರಾಹುಲ್ ಶರಣಪ್ಪ ಸಂಕನೂರ

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಬಿಟಿಎಂ ಲೇಔಟ್, ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ, ಜಯನಗರ ವಿಧಾನಸಭೆ ಕ್ಷೇತ್ರದ ಎಲ್ಲ ವಾರ್ಡ್‌ಗಳು. ಮಹದೇವಪುರ ವಿಧಾನಸಭೆ ಕ್ಷೇತ್ರದ ಬೆಳ್ಳಂದೂರಿನ ಕೆಲವು ಭಾಗ, ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಬನಶಂಕರಿ ದೇವಸ್ಥಾನ, ಕುಮಾರಸ್ವಾಮಿ ಲೇಔಟ್, ಪದ್ಮನಾಭ ನಗರ, ಚಿಕ್ಕಲಸಂದ್ರ ವಾರ್ಡ್, ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರ ರಾಜರಾಜೇಶ್ವರಿ ವಾರ್ಡ್‌ನ ಕೆಲವು ಭಾಗ, ಯಶವಂತಪುರ ವಿಧಾನಸಭೆ ಕ್ಷೇತ್ರದ ಹೆಮ್ಮಿಗೆಪುರ ವಾರ್ಡ್‌ನ ಕೆಲವು ಭಾಗ. ಆನೇಕಲ್ ವಿಧಾನಸಭೆ ಕ್ಷೇತ್ರದ ಸಿಂಗಸಂದ್ರ (ಕೂಡ್ಲು) ವಾರ್ಡ್.

ಪ್ರದೇಶ: 155 ಚದರ ಕಿ.ಮೀ, ವ್ಯಾಪ್ತಿ; 37 ವಾರ್ಡ್


2025ರಂತೆ ತೆರಿಗೆ ಸಂಗ್ರಹ; ₹733 ಕೋಟಿ

ವಲಯ 1ರ ಕಚೇರಿ, ವ್ಯಾಪ್ತಿ: ದಕ್ಷಿಣ ವಲಯ ಕಚೇರಿ; ಪದ್ಮನಾಭನಗರ (ಭಾಗಶಃ), ರಾಜರಾಜೇಶ್ವರಿನಗರ (ಭಾಗಶಃ), ಯಶವಂತಪುರ (ಭಾಗಶಃ), ಜಯನಗರ, ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರ

ವಲಯ 2ರ ಕಚೇರಿ, ವ್ಯಾಪ್ತಿ: ಬೊಮ್ಮನಹಳ್ಳಿ ವಲಯ ಕಚೇರಿ; ಬಿಟಿಎಂ ಲೇಔಟ್, ಬೊಮ್ಮನಹಳ್ಳಿ, ಮಹದೇವಪುರ (ಭಾಗಶಃ), ಆನೇಕಲ್ (ಭಾಗಶಃ) ವಿಧಾನಸಭೆ ಕ್ಷೇತ್ರ

ಆಯುಕ್ತ: ಕೆ.ಎನ್. ರಮೇಶ್

ಹೆಚ್ಚುವರಿ ಆಯುಕ್ತ (ಅಭಿವೃದ್ಧಿ): ಪದ್ವೆ ರಾಹುಲ್ ತುಕಾರಾಮ್



ಬೆಂಗಳೂರು ಉತ್ತರ ನಗರ ಪಾಲಿಕೆ



ಬ್ಯಾಟರಾಯನಪುರ, ಹೆಬ್ಬಾಳ, ಸರ್ವಜ್ಞನಗರ, ಯಲಹಂಕ ವಿಧಾನಸಭೆ ಕ್ಷೇತ್ರದ ಎಲ್ಲ ವಾರ್ಡ್‌ಗಳು ಹಾಗೂ ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಶೆಟ್ಟಿಹಳ್ಳಿ, ಮಲ್ಲಸಂದ್ರ, ಬಾಗಲಕುಂಟೆ, ಟಿ. ದಾಸರಹಳ್ಳಿ, ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರದ ಜಾಲಹಳ್ಳಿ, ಜೆ.ಪಿ. ಪಾರ್ಕ್, ಯಶವಂತಪುರ ವಾರ್ಡ್‌ಗಳು, ಪುಲಕೇಶಿನಗರ ವಿಧಾನಸಭೆ ಕ್ಷೇತ್ರದ ಕುಶಾಲನಗರ ವಾರ್ಡ್ ಹೊರತುಪಡಿಸಿ ಎಲ್ಲ ವಾರ್ಡ್‌ಗಳು.

ಪ್ರದೇಶ: 158 ಚದರ ಕಿ.ಮೀ, ವ್ಯಾಪ್ತಿ; 41 ವಾರ್ಡ್

2025ರಂತೆ ತೆರಿಗೆ ಸಂಗ್ರಹ; ₹543 ಕೋಟಿ

ವಲಯ 1ರ ಕಚೇರಿ, ವ್ಯಾಪ್ತಿ: ಯಲಹಂಕ ವಲಯ ಕಚೇರಿ; ಬ್ಯಾಟರಾಯನಪುರ, ಪುಲಕೇಶಿನಗರ, ಸರ್ವಜ್ಞನಗರ ವಿಧಾನಸಭೆ ಕ್ಷೇತ್ರ

ವಲಯ 2ರ ಕಚೇರಿ, ವ್ಯಾಪ್ತಿ: ದಾಸರಹಳ್ಳಿ ವಲಯ ಕಚೇರಿ; ದಾಸರಹಳ್ಳಿ (ಭಾಗಶಃ), ರಾಜರಾಜೇಶ್ವರಿ ನಗರ (ಭಾಗಶಃ), ಹೆಬ್ಬಾಳ, ಯಲಹಂಕ ವಿಧಾನಸಭೆ ಕ್ಷೇತ್ರ

ಆಯುಕ್ತ: ಪೊಮ್ಮಲ ಸುನೀಲ್‌ಕುಮಾರ್

ಹೆಚ್ಚುವರಿ ಆಯುಕ್ತ (ಅಭಿವೃದ್ಧಿ): ಆರ್. ಲತಾ

ಬೆಂಗಳೂರು ಪೂರ್ವ ನಗರ ಪಾಲಿಕೆ



ಕೆ.ಆರ್. ಪುರ ವಿಧಾನಸಭೆ ಕ್ಷೇತ್ರದ ಎಲ್ಲ ವಾರ್ಡ್‌ಗಳು ಹಾಗೂ ಬೆಳ್ಳಂದೂರು ವಾರ್ಡ್‌ನ ಕೆಲವು ಪ್ರದೇಶವನ್ನು ಹೊರತುಪಡಿಸಿ ಮಹದೇವಪುರ ವಿಧಾನಸಭೆ ಕ್ಷೇತ್ರದ ಎಲ್ಲ ವಾರ್ಡ್‌ಗಳು

ಪ್ರದೇಶ: 168 ಚದರ ಕಿ.ಮೀ, ವ್ಯಾಪ್ತಿ; 17 ವಾರ್ಡ್

2025ರಂತೆ ತೆರಿಗೆ ಸಂಗ್ರಹ; ₹912 ಕೋಟಿ

ವಲಯ 1ರ ಕಚೇರಿ, ವ್ಯಾಪ್ತಿ: ಮಹದೇವಪುರ ವಲಯ ಕಚೇರಿ; ಮಹದೇವಪುರ ವಿಧಾನಸಭೆ ಕ್ಷೇತ್ರ

ವಲಯ 2ರ ಕಚೇರಿ, ವ್ಯಾಪ್ತಿ: ಕೆ.ಆರ್. ಪುರ ಮುಖ್ಯ ಎಂಜಿನಿಯರ್ ಕಚೇರಿ; ಕೆ.ಆರ್. ಪುರ ವಿಧಾನಸಭೆ ಕ್ಷೇತ್ರ

ಆಯುಕ್ತ: ಡಿ.ಎಸ್. ರಮೇಶ್

ಹೆಚ್ಚುವರಿ ಆಯುಕ್ತ (ಅಭಿವೃದ್ಧಿ): ಲೋಕಂಡೆ ಸ್ನೇಹಲ್ ಸುಧಾಕರ್

ಬೆಂಗಳೂರು ಪಶ್ಚಿಮ ನಗರ ಪಾಲಿಕೆ



ಬಸವನಗುಡಿ, ಗೋವಿಂದರಾಜನಗರ, ವಿಜಯನಗರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ರಾಜಾಜಿನಗರ ವಿಧಾನಸಭೆ ಕ್ಷೇತ್ರದ ಎಲ್ಲ ವಾರ್ಡ್‌ಗಳು. ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಚೊಕ್ಕಸಂದ್ರ, ರಾಜಗೋಪಾಲ ನಗರ; ಹೆಗ್ಗನಹಳ್ಳಿ ವಾರ್ಡ್, ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಹೊಸಕೆರೆಹಳ್ಳಿ, ಗಣೇಶಮಂದಿರ, ಕರಿಸಂದ್ರ, ಯಡಿಯೂರು ವಾರ್ಡ್, ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರದ ಎಚ್‌ಎಂಟಿ, ಲಕ್ಷ್ಮಿದೇವಿನಗರ, ಲಗ್ಗೆರೆ, ಕೊಟ್ಟಿಗೆಪಾಳ್ಯ, ಜ್ಞಾನಭಾರತಿ ವಾರ್ಡ್, ರಾಜರಾಜೇಶ್ವರಿ ನಗರ ವಾರ್ಡ್‌ನ ಕೆಲವು ಭಾಗ, ಯಶವಂತಪುರ ವಿಧಾನಸಭೆ ಕ್ಷೇತ್ರದ ಹೆಮ್ಮಿಗೆಪುರ ವಾರ್ಡ್‌ನ ಕೆಲವು ಭಾಗ ಹೊರತುಪಡಿಸಿ ಎಲ್ಲ ವಾರ್ಡ್.

ಪ್ರದೇಶ: 161 ಚದರ ಕಿ.ಮೀ, ವ್ಯಾಪ್ತಿ; 64 ವಾರ್ಡ್

2025ರಂತೆ ತೆರಿಗೆ ಸಂಗ್ರಹ; ₹580 ಕೋಟಿ

ವಲಯ 1ರ ಕಚೇರಿ, ವ್ಯಾಪ್ತಿ: ಆರ್.ಆರ್. ನಗರ ವಲಯ ಕಚೇರಿ; ಯಶವಂತಪುರ (ಭಾಗಶಃ), ದಾಸರಹಳ್ಳಿ, ರಾಜರಾಜೇಶ್ವರಿನಗರ, ಮಹಾಲಕ್ಷ್ಮಿ ಲೇಔಟ್ ವಿಧಾನಸಭೆ ಕ್ಷೇತ್ರ

ವಲಯ 2ರ ಕಚೇರಿ, ವ್ಯಾಪ್ತಿ: ಐಪಿಪಿ, ಮಲ್ಲೇಶ್ವರ; ಮಲ್ಲೇಶ್ವರ, ರಾಜಾಜಿನಗರ, ಗೋವಿಂದರಾಜನಗರ, ಬಸವನಗುಡಿ, ಪದ್ಮನಾಭನಗರ (ಭಾಗಶಃ) ವಿಧಾನಸಭೆ ಕ್ಷೇತ್ರ

ಆಯುಕ್ತ: ಕೆ.ವಿ. ರಾಜೇಂದ್ರ

ಹೆಚ್ಚುವರಿ ಆಯುಕ್ತ (ಅಭಿವೃದ್ಧಿ): ದಿಗ್ವಿಜಯ್ ಬೋಡ್ಕೆ

ಕಾರ್ಯಾಚರಣೆಯಲ್ಲಿ ಇನ್ನೆರಡು ದಿನ ಗೊಂದಲ!

ಬೆಂಗಳೂರು: ಬಿಬಿಎಂಪಿ ಅಸ್ತಿತ್ವ ಕಳೆದುಕೊಂಡು ಐದು ನಗರ ಪಾಲಿಕೆಗಳು ಅಸ್ತಿತ್ವಕ್ಕೆ ಬಂದಿದ್ದು, ಆಯಾ ನಗರ ಪಾಲಿಕೆಗಳಂತೆಯೇ ಕಾರ್ಯನಿರ್ವಹಿಸಲು ಲಾಗಿನ್ ಸೃಷ್ಟಿಯಾಗಬೇಕಿದೆ. ಹೀಗಾಗಿ, ಇನ್ನೆರಡು ದಿನ ಗೊಂದಲ ಹಾಗೂ ಸರ್ವರ್ ಸಮಸ್ಯೆಗಳು ಅಧಿಕಾರಿಗಳನ್ನು ಮಾತ್ರವಲ್ಲದೆ, ನಾಗರಿಕರನ್ನೂ ಕಾಡಲಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಂತೆಯೇ ಕಾರ್ಯನಿರ್ವಹಿಸಬೇಕಿರುವುದರಿಂದ ಈಗಿರುವ ಬಿಬಿಎಂಪಿ ಇ-ಆಫೀಸ್ ಲಾಗಿನ್‌ನಲ್ಲಿ ಯಾವುದೇ ಕಡತ ಅಥವಾ ಪತ್ರಗಳನ್ನು ಮಂಗಳವಾರದಿಂದ ವಿಲೇವಾರಿ ಮಾಡುವಂತಿಲ್ಲ. ಐದು ನಗರ ಪಾಲಿಕೆಗಳಿಗೆ ಆಯಾ ಇ-ಆಫೀಸ್ ಲಾಗಿನ್‌ಗಳನ್ನು ಸಿಬ್ಬಂದಿಗೆ ನೀಡುವ ಕೆಲಸ ಆರಂಭವಾಗಿದ್ದು, ಅದು ಪೂರ್ಣಗೊಳ್ಳಲು ಇನ್ನೆರಡು ದಿನ ಬೇಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೂ ಇದೇ ಪ್ರಕ್ರಿಯೆ ನಡೆಯಬೇಕಿದ್ದು, ಜಿಬಿಎ ಸಂಪೂರ್ಣವಾಗಿ ಕಾರ್ಯನಿರ್ವಹಿಸಲು ಸಮಯಬೇಕಾಗುತ್ತದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ನಿರ್ದೇಶನದಂತೆ ಸಮಿತಿ ರಚಿಸಿ, ಕಾಮಗಾರಿಗಳ ಹಸ್ತಾಂತರದಲ್ಲಿ ಮೊದಲ ಹಂತದಲ್ಲಿ, ಕೇಂದ್ರೀಕೃತ ವಿಭಾಗಗಳು ಬಜೆಟ್ ಹಾಗೂ ಪ್ಯಾಕೇಜ್‌ವಾರು ಪ್ರಗತಿಯಲ್ಲಿರುವ ಕಾಮಗಾರಿಗಳು, ಕ್ರಿಯಾಯೋಜನೆ ಅನುಮೋದನೆಗೊಂಡು ಚಾಲ್ತಿಯಲ್ಲಿರುವ ಕಾಮಗಾರಿಗಳ ಪಟ್ಟಿ ಸಿದ್ಧಪಡಿಸಿ, ಅವುಗಳನ್ನು ಜಿಬಿಎ ಅಥವಾ ಬಿ-ಸ್ಮೈಲ್‌ಗೆ ವರ್ಗಾಯಿಸಲಾಗುತ್ತದೆ.

ಎರಡನೇ ಹಂತದಲ್ಲಿ, ಬಿಬಿಎಂಪಿ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಅನುದಾನದ ಕಾಮಗಾರಿಗಳ ಪಟ್ಟಿ ಮಾಡಿ, ನಗರ ಪಾಲಿಕೆಗಳ ವ್ಯಾಪ್ತಿಗೆ ಬರುವುದನ್ನು ಅಲ್ಲಿಗೆ ಹಸ್ತಾಂತರಿಸಲಾಗುತ್ತದೆ. ರಸ್ತೆ ಮೂಲಸೌಕರ್ಯ, ಬೃಹತ್ ನೀರುಗಾಲುವೆ, ಕೆರೆ, ಅರಣ್ಯ, ತೋಟಗಾರಿಕೆ, ಆರೋಗ್ಯ–ನೈರ್ಮಲ್ಯ, ವಲಯ ಮಟ್ಟದ ಕಾಮಗಾರಿಗಳನ್ನು ಪಟ್ಟಿ ಮಾಡಿ ನಗರ ಪಾಲಿಕೆಗಳಿಗೆ ಹಸ್ತಾಂತರಿಸಲಾಗುತ್ತದೆ.

ಕಡತ ಮತ್ತು ನೋಂದಣಿ ಪುಸ್ತಗಳನ್ನು ಆಯಾ ನಗರ ಪಾಲಿಕೆಗಳಿಗೆ ಹಸ್ತಾಂತರಿಸಲು ನೋಡಲ್ ಅಧಿಕಾರಿಯನ್ನು ನೇಮಿಸಬೇಕಾಗಿದೆ. ಈ ಪ್ರಕ್ರಿಯೆಗಳು ಬುಧವಾರದಿಂದ ಆರಂಭವಾಗಲಿದ್ದು, ಇದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

ಮಂಗಳವಾರದಿಂದಲೇ ನಗರ ಪಾಲಿಕೆಗಳು ಕಾರ್ಯಾಚರಣೆ ಮಾಡಬೇಕೆಂಬ ಸೂಚನೆ ಇದ್ದರೂ, ಯಾವ ಸಿಬ್ಬಂದಿ ಎಲ್ಲಿ ಕೆಲಸ ಮಾಡಬೇಕು ಎಂಬುದಕ್ಕೆ ಆದೇಶಗಳಾಗಬೇಕಿವೆ. ಐಎಎಸ್, ಐಪಿಎಸ್, ಕೆಎಎಸ್, ಎಂಜಿನಿಯರಿಂಗ್ ವಿಭಾಗವರಿಗೆ ಆದೇಶವಾಗಿವೆ. ಆದರೆ, ಎಲ್ಲ ವಿಭಾಗಗಳ ಸಿಬ್ಬಂದಿಗೆ ನಿಯೋಜನೆ / ವರ್ಗಾವಣೆ ಆದೇಶ ಕೈಸೇರಿಲ್ಲ. ಆದೇಶ ಕೈಸೇರಿದರೂ ಅವರು ಜಿಬಿಎ ಆಡಳಿತ ವಿಭಾಗದಲ್ಲಿ ಹಾಜರಾಗಿ, ಹಾಜರಾತಿಯನ್ನು ಖಾತರಿಪಡಿಸಿಕೊಳ್ಳಬೇಕಿದೆ. ಹೀಗಾಗಿ, ಒಂದಷ್ಟು ದಿನ ಗೊಂದಲ ಮುಂದುವರಿಯಲಿದೆ ಎನ್ನಲಾಗಿದೆ.

'ಇಂದಿನಿಂದಲೇ ಪಾಲಿಕೆಗಳಿಗೆ ತೆರಿಗೆ ಹಣ'

ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ನಗರ ಪಾಲಿಕೆಗಳಿಗೆ ಹೊಸ ಪ್ರದೇಶಗಳು ಸೇರ್ಪಡೆ: ಡಿಸಿಎಂ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸಂಗ್ರಹ ವಾಗುವ ತೆರಿಗೆ ಹಣ ಆಯಾ ಪಾಲಿಕೆಗಳಿಗೆ ಬುಧವಾರದಿಂದಲೇ ಸಂದಾಯವಾಗಲಿದೆ. ಜಿಬಿಎ ಅಥವಾ ರಾಜ್ಯ ಸರ್ಕಾರಕ್ಕೆ ಬರುವುದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಸಂವಿಧಾನದ 74ನೇ ತಿದ್ದುಪಡಿಗೆ ಧಕ್ಕೆಯಾಗುವುದಿಲ್ಲ. ಪಾಲಿಕೆಗಳಿಗೆ ಸ್ವಾಯತ್ತತೆ ನೀಡಲಾಗಿದೆ. ಮುಂದೆ ಜಿಬಿಎ ಮೂಲಕ ದೊಡ್ಡ ಯೋಜನೆಗಳ ಜಾರಿ, ಉತ್ತಮ ಆಡಳಿತ, ಸೇವೆಗೆ ಮೀಸಲಾಗಿರಲಿದೆ. ಸರ್ಕಾರದಿಂದ ಬಂದ ಹಣ ಜಿಬಿಎ ಹಾಗೂ ಪಾಲಿಕೆಗಳಿಗೆ ಹೋಗಲಿದೆ. ಇನ್ನು ಮುಂದಿನ ದಿನಗಳಲ್ಲಿ ಕಾನೂನು ಚೌಕಟ್ಟಿನಲ್ಲಿ ಚುನಾವಣೆ ನಡೆಯಲಿದೆ' ಎಂದು ಸುದ್ದಿಗಾರರಿಗೆ ಮಂಗಳವಾರ ಮಾಹಿತಿ ನೀಡಿದರು.

'ನಗರದ ಜನಸಂಖ್ಯೆ 1.44 ಕೋಟಿ ಎಂದು ಅಂದಾಜಿಸಲಾಗಿದೆ. 2011ರ ಜನಗಣತಿ ಪ್ರಕಾರ, ವಾರ್ಡ್‌ನಲ್ಲಿ 20 ಸಾವಿರ ಜನಸಂಖ್ಯೆ ಇತ್ತು. ಈಗ 35-40 ಸಾವಿರ ಸರಾಸರಿಯಲ್ಲಿ ವಾರ್ಡ್ ರಚನೆ ಮಾಡಲಾಗುವುದು' ಎಂದು ವಿವರಿಸಿದರು.

'ಮುಂದಿನ ದಿನಗಳಲ್ಲಿ ಪೂರ್ವ, ಪಶ್ಚಿಮ, ಉತ್ತರ ದಕ್ಷಿಣ ಪಾಲಿಕೆಗಳಿಗೆ ಹೊಸ ಪ್ರದೇಶಗಳು ಸೇರ್ಪಡೆಯಾಗಲು ಅವಕಾಶ ಕಲ್ಪಿಸಿದ್ದೇವೆ. ಕಾನೂನಿಗೆ ತೊಡಕಾಗಬಾರದು ಎಂಬ ಉದ್ದೇಶದಿಂದ ಆ ಬಗ್ಗೆ ಚರ್ಚೆ ಮಾಡುವುದಿಲ್ಲ. ಆಯಾ ಪಾಲಿಕೆಗಳು ಸರ್ಕಾರವನ್ನು ವಿಶ್ವಾಸಕ್ಕೆ ಪಡೆದು ಮುಂದಿನ ದಿನಗಳಲ್ಲಿ ಈ ಪ್ರಕ್ರಿಯೆಗಳನ್ನು ಮಾಡಿಕೊಳ್ಳಲಿವೆ. ಈಗ ಹಾಲಿ ಇದ್ದ ಪಾಲಿಕೆ ವ್ಯಾಪ್ತಿಗೆ ಜಿಬಿಎ ರಚಿಸಿ, ಐದು ಪಾಲಿಕೆ ಮಾಡಿದ್ದೇವೆ. ಆನೇಕಲ್ ಕ್ಷೇತ್ರಕ್ಕೆ ಸೇರಿದ್ದ ಒಂದು ವಾರ್ಡ್ ಬಿಟ್ಟುಹೋಗಿತ್ತು. ಈಗ ಅದನ್ನು ಸರಿಪಡಿಸಿದ್ದೇವೆ' ಎಂದು ಹೇಳಿದರು.

ಐತಿಹಾಸಿಕ ದಿನ:' 'ಬೆಂಗಳೂರಿನ ಪಾಲಿಗೆ ಇದೊಂದು ಐತಿಹಾಸಿಕ ದಿನ. ಅಧಿಕಾರ ವಿಕೇಂದ್ರೀಕರಣಗೊಳಿಸುವ ರಾಜೀವ್ ಗಾಂಧಿ ಅವರ ಆಶಯದಂತೆ ಸಂವಿಧಾನದ 74ನೇ ತಿದ್ದುಪಡಿಯನ್ನು ಪಾಲಿಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಲಾಗಿದೆ. 1993ರ ಜೂನ್ 1ರಂದು ಕರ್ನಾಟಕದಲ್ಲಿ 74ನೇ ತಿದ್ದುಪಡಿ ಜಾರಿಗೆ ಬಂದಿತು' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಪೂರ್ವ ನಗರ ಪಾಲಿಕೆಯ ಆದಾಯ ಪೂರ್ವ ಪಾಲಿಕೆಗೇ ಸೀಮಿತವಾಗಲಿದೆ. ಪಶ್ಚಿಮ ನಗರ ಪಾಲಿಕೆ ಆದಾಯ ಕಡಿಮೆ ಇದ್ದಾಗ ಸರ್ಕಾರ ಅವರಿಗೆ ನೆರವು ನೀಡಬೇಕು. ನಾವು ಪೂರ್ವದ ಹಣವನ್ನು ಪಶ್ಚಿಮದ ಪಾಲಿಕೆಗೆ ನೀಡಿದರೆ ಅದು ಸಂವಿಧಾನಕ್ಕೆ ವಿರುದ್ಧವಾಗಿರಲಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಉತ್ತಮ ಆಡಳಿತ, ಸೇವೆ ನೀಡ ಬೇಕು, ಸಂವಿಧಾನ ರಕ್ಷಣೆ ಮಾಡಬೇಕು. ಈ ಹಿಂದೆ ನಗರದ ಸಣ್ಣಪುಟ್ಟ ವಿಚಾರಕ್ಕೂ ಬೆಂಗಳೂರು ಆಯುಕ್ತರಿಗೆ ಕರೆ ಮಾಡಬೇಕಿತ್ತು. ಈಗ ಪರಿಸ್ಥಿತಿ ಹಾಗಿಲ್ಲ. ಜಿಬಿಎ ಅಧಿಕಾರಿಗಳು ನಗರದ ದೊಡ್ಡ ಯೋಜನೆಗಳ ಜವಾಬ್ದಾರಿ ಮಾತ್ರ ನಿಭಾಯಿಸುತ್ತಾರೆ. ಸುರಂಗ ರಸ್ತೆ ಸೇರಿದಂತೆ ಬೇರೆ ಬೇರೆ ಪಾಲಿಕೆಗಳ ಮೂಲಕ ಹಾದುಹೋಗುವ ದೊಡ್ಡ ದೊಡ್ಡ ಯೋಜನೆ ನೋಡಿಕೊಳ್ಳುತ್ತಾರೆ. ಆಯಾ ಪಾಲಿಕೆಗೆ ನಿಯೋಜನೆಯಾಗಿರುವ ಆಯುಕ್ತರು ಹೊಣೆಗಾರಿಕೆ ಹೊಂದಿರುತ್ತಾರೆ' ಎಂದರು.

ಕಟ್ಟಡಗಳಿಗೆ ನ.1ರಂದು ಭೂಮಿ ಪೂಜೆ

ನಗರ ಪಾಲಿಕೆಗಳ ಕಚೇರಿಗಾಗಿ, ಹೊಸ ಕಟ್ಟಡಗಳ ನಿರ್ಮಾಣಕ್ಕೆ ನವೆಂಬರ್ 1ರಂದು ಭೂಮಿ ಪೂಜೆ ನಡೆಯಲಿದೆ. ಇದಕ್ಕಾಗಿ ಜಾಗ ಗುರುತಿಸಿದ್ದು, ಐದೂ ನಗರ ಪಾಲಿಕೆಗಳ ಕಟ್ಟಡಗಳು ಒಂದೇ ರೀತಿ ನಿರ್ಮಾಣವಾಗಲಿವೆ' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಎಲ್ಲಾ ವಲಯಗಳಲ್ಲಿ ಆಯಾ ವ್ಯಾಪ್ತಿಯ ಅಧಿಕಾರಿಗಳನ್ನು ನೇಮಕ ಮಾಡಿದ್ದೇವೆ. ಪ್ರತಿ ನಗರ ಪಾಲಿಕೆಯಲ್ಲಿ ಆಡಳಿತಾಧಿಕಾರಿಯಾಗಿ ಆಯುಕ್ತರನ್ನು ನೇಮಕ ಮಾಡಲಾಗಿದೆ. ಆಯುಕ್ತರಿಗೆ ನೆರವಾಗಲು, ಹೆಚ್ಚುವರಿ ಆಯುಕ್ತರು, ಜಂಟಿ ಆಯುಕ್ತರು, ಕೆಎಎಸ್ ಅಧಿಕಾರಿಗಳು ಹಾಗೂ ಮುಖ್ಯ ಎಂಜಿನಿಯರ್ ಕಡ್ಡಾಯವಾಗಿ ಇರುತ್ತಾರೆ. ಈ ಹಿಂದೆ ಇದ್ದ 27 ವಿಭಾಗಗಳನ್ನು 50 ವಿಭಾಗಗಳಾಗಿ ಮಾಡಿದ್ದೇವೆ. 75 ಉಪ ವಿಭಾಗಗಳನ್ನು 150ಕ್ಕೆ ಏರಿಸಿದ್ದೇವೆ. ಪ್ರತಿ ಪಾಲಿಕೆಯಲ್ಲಿ ಗರಿಷ್ಠ 150 ವಾರ್ಡ್‌ಗಳವರೆಗೆ ಅವಕಾಶ ಕಲ್ಪಿಸಲಾಗಿದೆ. ಪ್ರತಿ ನಗರ ಪಾಲಿಕೆಯಲ್ಲಿ ಸರಾಸರಿಯಲ್ಲಿ 100 ವಾರ್ಡ್‌ಗಳಂತೆ ಬೆಂಗಳೂರಿನಲ್ಲಿ ಸುಮಾರು 500 ಹೊಸ ನಾಯಕರನ್ನು ಆಯ್ಕೆ ಮಾಡುವ ಅವಕಾಶ ಕಲ್ಪಿಸಲಾಗಿದೆ. ಇದರಲ್ಲಿ ಮಹಿಳೆಯರು ಹಾಗೂ ಪುರುಷರು 50:50 ಇರುತ್ತಾರೆ' ಎಂದು ವಿವರ ನೀಡಿದರು.

ಅತ್ಯುತ್ತಮ ವಿನ್ಯಾಸಕ್ಕೆ ₹5 ಲಕ್ಷ

'ನಗರ ಪಾಲಿಕೆಗಳ ವಾಸ್ತುಶಿಲ್ಪಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸಾರ್ವಜನಿಕರೂ ಸಲಹೆ ನೀಡಬಹುದು. ಅತ್ಯುತ್ತಮ ವಿನ್ಯಾಸಕ್ಕೆ ₹5 ಲಕ್ಷ ಬಹುಮಾನ ನೀಡಲಾಗುತ್ತದೆ. ಜಿಬಿಎ ಲೋಗೊ ರಚಿಸಲೂ ಸಲಹೆ ನೀಡಬಹುದಾಗಿದೆ' ಎಂದರು.

ಗ್ರೇಟರ್ ಬೆಂಗಳೂರು ರಚನೆ ಹಾದಿ...

'2007ರ ಜನವರಿ 16ರಂದು 198 ವಾರ್ಡ್‌ಗಳೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಯಾಗಿತ್ತು. 2024ರ ಸೆಪ್ಟೆಂಬರ್ 22ರಂದು ಬಿ.ಎಸ್ ಪಾಟೀಲ್ ಅವರ ನೇತೃತ್ವದಲ್ಲಿ ಸಮಿತಿ ರಚಿಸಿ ಬೆಂಗಳೂರಿನಲ್ಲಿ ಉತ್ತಮ ಆಡಳಿತ ನೀಡುವ ಬಗ್ಗೆ ಅಧ್ಯಯನ ನಡೆಸಲಾಯಿತು. ಈ ಸಮಿತಿ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿ ಅಧ್ಯಯನ ಮಾಡಿ ಒಂಬತ್ತು ವರದಿಗಳನ್ನು ಸಲ್ಲಿಸಿತ್ತು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'2015ರಲ್ಲಿ ಬೆಂಗಳೂರಿನಲ್ಲಿ ಮೂರು ಪಾಲಿಕೆಗಳನ್ನು ಮಾಡಬೇಕು ಎಂಬ ತೀರ್ಮಾನಕ್ಕೆ ಬರಲಾಯಿತು. ಈ ಪ್ರಸ್ತಾಪವನ್ನು ರಾಜ್ಯಪಾಲರಿಗೆ ಕಳುಹಿಸಿಲಾಗಿತ್ತಾದರೂ ನಂತರ ರಾಜ್ಯ ಸರ್ಕಾರ 2019ರ ಜುಲೈ 26ರಂದು ಅದನ್ನು ಹಿಂಪಡೆಯಿತು' ಎಂದರು.

'ನಮ್ಮ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದ ನಂತರ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಲು ತೀರ್ಮಾನಿಸಿ, 2023ರ ಜುಲೈ 18ರಂದು ಬಿ.ಎಸ್ ಪಾಟೀಲ್ ಅವರ ಸಮಿತಿ ರಚಿಸಿದೆವು. ಈ ಸಮಿತಿ 2024ರ ಜುಲೈ 12ರಂದು ವರದಿ ಸಲ್ಲಿಸಿತ್ತು. ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ ಸಿದ್ಧಪಡಿಸಿ, ಜುಲೈ 25ರಂದು ವಿಧಾನಸಭೆಯಲ್ಲಿ ಮಂಡಿಸಲಾಯಿತು. ವಿರೋಧ ಪಕ್ಷಗಳ ಸದಸ್ಯರ ಸಲಹೆ ಮೇರೆಗೆ ಶಾಸಕ ರಿಜ್ವಾನ್ ಅರ್ಷದ್ ನೇತೃತ್ವದಲ್ಲಿ 15 ಸದಸ್ಯರ ಜಂಟಿ ಸದನ ಸಮಿತಿ ರಚಿಸಲಾಯಿತು. ಈ ಸಮಿತಿ 15ಕ್ಕೂ ಹೆಚ್ಚು ಸಭೆಗಳನ್ನು ನಡೆಸಿ ನೀಡಿದ ವರದಿಯನ್ವಯ, 2025ರ ಮಾರ್ಚ್ 10ರಂದು ತಿದ್ದುಪಡಿ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು. ಮಾ.12ರಂದು ವಿಧಾನ ಪರಿಷತ್‌ನಲ್ಲಿ ಚರ್ಚೆ ಮಾಡಿ ಅನುಮೋದನೆ ಪಡೆದು ರಾಜ್ಯಪಾಲರಿಗೆ ಕಳುಹಿಸಲಾಯಿತು. 2025ರ ಏಪ್ರಿಲ್ 23ರಂದು ರಾಜ್ಯಪಾಲರು ಅಂಕಿತ ಹಾಕಿದರು. ಮೇ 15ರಿಂದ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಜಾರಿಗೆ ಬಂದು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿತು. ಜುಲೈ 19ರಂದು ಐದು ನಗರ ಪಾಲಿಕೆಗಳ ಕರಡು ಅಧಿಸೂಚನೆ ಹೊರಡಿಸಿ, 30 ದಿನಗಳ ಕಾಲಾವಕಾಶ ನೀಡಲಾಯಿತು. 55 ಆಕ್ಷೇಪಣೆಗಳು ಬಂದಿದ್ದವು. ಇದೆಲ್ಲವನ್ನು ಬಗೆಹರಿಸಿ ಐದು ಪಾಲಿಕೆಗಳ ಗಡಿಯ ನಕ್ಷೆ ರೂಪಿಸಿ ರಾಜ್ಯಪಾಲರಿಂದ ಅಂಕಿತ ಪಡೆಯಲಾಯಿತು. ಅಂತಿಮ ಅಧಿಸೂಚನೆ ಹೊರಡಿಸಲಾಯಿತು ಎಂದು ಮಾಹಿತಿ ನೀಡಿದರು.

ವಾರ್ಡ್ ಪುನರ್ ವಿಂಗಡಣೆಗೆ ಆಯೋಗ

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿ ರಚಿಸಲಾಗಿರುವ ಐದು ನಗರ ಪಾಲಿಕೆಗಳ ವಾರ್ಡ್‌ಗಳನ್ನು ಪುನರ್ ವಿಂಗಡಣೆ ಮಾಡಲು ಮೂರು ತಿಂಗಳ ಅವಧಿ ಹೊಂದಿರುವ 'ವಾರ್ಡ್‌ಗಳ ಪುನರ್ ವಿಂಗಡಣಾ ಆಯೋಗ' ರಚಿಸಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಆಯೋಗದ ಅಧ್ಯಕ್ಷರಾಗಿದ್ದು, ಐದು ನಗರ ಪಾಲಿಕೆಗಳ ಅತ್ಯಂತ ಹಿರಿಯ ಆಯುಕ್ತರು, ನಗರ ಜಿಲ್ಲಾಧಿಕಾರಿಯವರು ಸದಸ್ಯರಾಗಿದ್ದಾರೆ. ಜಿಬಿಎಯ ಆಡಳಿತ, ಕಂದಾಯ ಮತ್ತು ಮಾಹಿತಿ ತಂತ್ರಜ್ಞಾನದ ವಿಶೇಷ ಆಯುಕ್ತರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ಪುನರ್ ವಿಂಗಡಣೆ ಮಾರ್ಗಸೂಚಿಗಳು

- ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ನಗರ ಪಾಲಿಕೆಗಳ ಒಳಗಿನ ಪ್ರತಿಯೊಂದು ವಾರ್ಡ್‌ನ ಜನಸಂಖ್ಯೆ ಸಾಧ್ಯವಾದಷ್ಟೂ ಒಂದೇ ಆಗಿರಬೇಕು. 2011ರ ಜನಗಣತಿಯ ಅಂಕಿ–ಅಂಶವನ್ನು ಪರಿಗಣಿಸಬೇಕು.
- ವಿಧಾನಸಭೆಯ ಸದಸ್ಯರ ಚುನಾವಣೆ ಕ್ಷೇತ್ರ ವ್ಯಾಪ್ತಿಯೊಳಗೆ ವಾರ್ಡ್‌ಗಳನ್ನು ವಿಂಗಡಿಸಬೇಕು, ಇತರೆ ಕ್ಷೇತ್ರಕ್ಕೆ ವ್ಯಾಪಿಸುವಂತಿಲ್ಲ
- ಪ್ರತಿಯೊಂದು ನಗರ ಪಾಲಿಕೆಯ ವಾರ್ಡ್‌ಗಳ ಸಂಖ್ಯೆ 150ಕ್ಕಿಂತ ಹೆಚ್ಚಾಗುವಂತಿಲ್ಲ

ಆಯೋಗಕ್ಕೆ ಗಡುವು

2025ರ **ಸೆ.23**; ಆಯೋಗದಿಂದ ಸರ್ಕಾರಕ್ಕೆ ವಾರ್ಡ್‌ಗಳ ರಚನಾ ವರದಿ ಸಲ್ಲಿಕೆ

2025ರ **ಸೆ.26**; ಸರ್ಕಾರದಿಂದ ಕರಡು ಅಧಿಸೂಚನೆ ಪ್ರಕಟ

2025ರ **ಅ.10**; ಕರಡಿಗೆ ಸಲಹೆ/ ಆಕ್ಷೇಪನೆಗೆ ಗಡುವು

2025ರ **ಅ.17**; ಸಲಹೆ/ ಆಕ್ಷೇಪಣೆ ಪರಿಗಣಿಸಿ ಆಯೋಗದಿಂದ ಅಂತಿಮ ಶಿಫಾರಸು ಸಲ್ಲಿಕೆ

2025ರ **ನ.1**; ಐದೂ ನಗರ ಪಾಲಿಕೆಗಳ ವಾರ್ಡ್‌ಗಳ ಅಂತಿಮ ಅಧಿಸೂಚನೆ ಪ್ರಕಟ

ಮಹೇಶ್ವರ್ ರಾವ್ ಜಿಬಿಎ ಮುಖ್ಯ ಆಯುಕ್ತ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಂಜೂರಾಗಿದ್ದ ಹುದ್ದೆಗಳನ್ನು 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ಕ್ಕೆ (ಜಿಬಿಎ) ಹಂಚಿಕೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.

ಬಿಬಿಎಂಪಿ ಮುಖ್ಯ ಆಯುಕ್ತರಾಗಿದ್ದ ಮಹೇಶ್ವರ್ ರಾವ್ ಅವರನ್ನು ಜಿಬಿಎ ಮುಖ್ಯ ಆಯುಕ್ತರನ್ನಾಗಿ ನೇಮಿಸಲಾಗಿದೆ. ಬಿಬಿಎಂಪಿಯಲ್ಲಿ ವಿಶೇಷ ಆಯುಕ್ತರಾಗಿದ್ದ ಮುನೀಶ್ ಮೌದ್ಗಿಲ್, ಸುರಳ್ಕರ್ ವಿಕಾಸ್ ಕಿಶೋರ್, ಕೆ. ಹರೀಶ್ ಕುಮಾರ್, ಪ್ರೀತಿ ಗೆಹ್ಲೋಟ್ ಅವರನ್ನು ಜಿಬಿಎ ವಿಶೇಷ ಆಯುಕ್ತರನ್ನಾಗಿ ನೇಮಿಸಲಾಗಿದೆ.

ಮುನೀಶ್ ಮೌದ್ಗಿಲ್ ಅವರಿಗೆ ಆಡಳಿತ, ಕಂದಾಯ ಮತ್ತು ಮಾಹಿತಿ ತಂತ್ರಜ್ಞಾನ ನೀಡಲಾಗಿದೆ. ಸುರಳ್ಕರ್ ವಿಕಾಸ್ ಕಿಶೋರ್ ಅವರಿಗೆ ಆರೋಗ್ಯ ಮತ್ತು ಶಿಕ್ಷಣ, ಹರೀಶ್ ಕುಮಾರ್ ಅವರಿಗೆ ಹಣಕಾಸು ಮತ್ತು ಮುಖ್ಯ ಹಣಕಾಸು ಅಧಿಕಾರಿ, ಪ್ರೀತಿ ಗೆಹ್ಲೋಟ್ ಅವರಿಗೆ ಎಫ್‌ಇಸಿಸಿ, ಚುನಾವಣೆ, ವಿಪತ್ತು ನಿರ್ವಹಣೆ, ಸಾರ್ವಜನಿಕ ಸಂಪರ್ಕದ ಜವಾಬ್ದಾರಿ ವಹಿಸಲಾಗಿದೆ.

ಐದೂ ನಗರ ಪಾಲಿಕೆಗಳಿಗೆ ಐಎಎಸ್ ಅಧಿಕಾರಿಗಳನ್ನು ಆಯುಕ್ತರು ಹಾಗೂ ಅಭಿವೃದ್ಧಿ ಆಯುಕ್ತರನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

ಐದು ನಗರ ಪಾಲಿಕೆಗಳಿಗೆ ತಲಾ ಇಬ್ಬರು ಜಂಟಿ ಆಯುಕ್ತರು ಹಾಗೂ ತಲಾ ಇಬ್ಬರು ಉಪ ಆಯುಕ್ತರನ್ನಾಗಿ ಕೆಎಎಸ್ ಅಧಿಕಾರಿಗಳನ್ನು ನೇಮಕ ಮಾಡಿ ನಗರಾಭಿವೃದ್ಧಿ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.

ಬುಧವಾರ, ಸೆಪ್ಟೆಂಬರ್ 3, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 244 | ಪುಟ 16

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ಮುಶಾಯರಾ’ ಮುಂದೂಡಿಕೆ

ಕವಿ ಜಾವೇದ್ ಅಖ್ತರ್ ಕೋಲ್ಕತ್ತದಲ್ಲಿ ಪಾಲ್ಗೊಳ್ಳಬೇಕಿದ್ದ ‘ಮುಶಾಯರಾ’ (ಕವಿತೆಗಳ ಪ್ರಸ್ತುತಿ) ಕಾರ್ಯಕ್ರಮವನ್ನು ಪಶ್ಚಿಮ ಬಂಗಾಳ ಉರ್ದು ಅಕಾಡೆಮಿ ಮುಂದೂಡಿದೆ. ಮುಸ್ಲಿಂ ಸಂಘಟನೆಗಳು ಅಖ್ತರ್ ಮಾತಿನಿಂದ ತಮ್ಮ ಭಾವನೆಗೆ ಧಕ್ಕೆಯಾಗಿದೆ ಎಂದು ಪ್ರತಿಭಟಿಸಿದ್ದವು



ಭರದ ಸಿದ್ಧತೆ

ದಸರೆಗೆ ಭರದ ಸಿದ್ಧತೆ ನಡೆದಿದ್ದು ಮೈಸೂರಿನ ಚಾಮರಾಜ ವೃತ್ತದ ಗೋಪುರದ ಸ್ವಚ್ಛತಾ ಕಾರ್ಯ ಮಂಗಳವಾರ ನಡೆಯಿತು.



ಸೆನ್ಸೆಕ್ಸ್ 80,157 | ನಿಫ್ಟಿ 24,579 | $/₹ 88.15 | ಚಿನ್ನ (Std. 10g) ₹1,10,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,31,100 (ಬೆಂಗಳೂರು)

ಗ್ರೇಟರ್ ಬೆಂಗಳೂರಿಗೆ 5 ಪಾಲಿಕೆ

ಇತಿಹಾಸದ ಪುಟ ಸೇರಿದ ಬಿಬಿಎಂಪಿ ● ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಆಡಳಿತ ಯಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಆಡಳಿತ ಯಂತ್ರವನ್ನು ನಿಭಾಯಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಅಸ್ತಿತ್ವಕ್ಕೆ ಬಂದಿರುವ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ದ (ಜಿಬಿಎ) ಅಡಿಯಲ್ಲಿ ಐದು ನಗರ ಪಾಲಿಕೆಗಳು ರಚನೆಯಾಗಿವೆ.

‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024’ (ಜಿಬಿಜಿಎ) ಅಡಿಯಲ್ಲಿ ಬಿಬಿಎಂಪಿ ವ್ಯಾಪ್ತಿಯನ್ನು ‘ಗ್ರೇಟರ್ ಬೆಂಗಳೂರು ಪ್ರದೇಶ’ (ಜಿಬಿಎ) ಎಂದು ಗುರುತಿಸಿ 2025ರ ಮೇ 15ರಂದು ಸರ್ಕಾರ ಅಧಿಸೂಚಿಸಿತ್ತು. ‘ಗ್ರೇಟರ್ ಬೆಂಗಳೂರು ಪ್ರದೇಶ’ದಲ್ಲೇ ಐದು ನಗರ ಪಾಲಿಕೆಗಳನ್ನು ರಚಿಸಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಇದರಿಂದ ಬಿಬಿಎಂಪಿ ತನ್ನ ಅಸ್ತಿತ್ವ ಕಳೆದುಕೊಂಡಿದೆ.

ಜಿಬಿಜಿಎ ಕಾಯ್ದೆಯ ಪ್ರಕರಣ 4ರ ಉಪ ಪ್ರಕರಣ (1) ಹಾಗೂ ಪ್ರಕರಣ 7ರ ಉಪ ಪ್ರಕರಣದಡಿ (1) ಅಧಿಕಾರ ಚಲಾಯಿಸಿರುವ ಸರ್ಕಾರ, ಜನಸಂಖ್ಯೆ, ವಿಸ್ತೀರ್ಣ, ಜನಸಂಖ್ಯಾ ಸಾಂದ್ರತೆ, ಬರುವ ಆದಾಯ, ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗ ಪ್ರಮಾಣ, ಆರ್ಥಿಕ ಪ್ರಾಮುಖ್ಯವನ್ನು ಪರಿಗಣಿಸಿ ಐದು ನಗರ ಪಾಲಿಕೆಗಳನ್ನು ರಚಿಸಿದೆ.

ವಿಧಾನಸಭೆಯಂತೆ ವಿಂಗಡಣೆ ಇಲ್ಲ: ಬಿಬಿಎಂಪಿ ವ್ಯಾಪ್ತಿಯಲ್ಲಿ 225 ವಾರ್ಡ್‌ಗಳನ್ನು ಮರುರಚಿಸಿ 2023ರ ಸೆಪ್ಟೆಂಬರ್ 25ರಂದು ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಹೊಸ ಐದು ನಗರ ಪಾಲಿಕೆಗಳನ್ನು ಬಿಬಿಎಂಪಿ ಚುನಾವಣೆ ನಡೆದಿದ್ದ 198 ವಾರ್ಡ್‌ಗಳಿಗೆ ಅನುಗುಣವಾಗಿ ವಿಂಗಡಿಸಲಾಗಿದೆ. ಜೊತೆಗೆ 225 ವಾರ್ಡ್‌ಗಳ ವಿಂಗಡಣೆ ಸಮಯದಲ್ಲಿ ಸೇರಿಸಲಾದ ಪ್ರದೇಶಗಳನ್ನು ಸೇರಿಸಿಕೊಳ್ಳಲಾಗಿದೆ.

712 ಚದರ ಕಿ.ಮೀ. ವ್ಯಾಪ್ತಿಯಲ್ಲಿ ಐದು ನಗರ ಪಾಲಿಕೆಗಳನ್ನು ರಚಿಸಿ ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ಆನೇಕಲ್ ವಿಧಾನಸಭೆ ಕ್ಷೇತ್ರದ ಸಿಂಗಸಂದ್ರ (ಕೂಡ್ಲು) ವಾರ್ಡ್ ಸೇರಿದಂತೆ 225 ವಾರ್ಡ್‌ಗಳನ್ನು ಪುನರ್ ವಿಂಗಡಿಸಿದಾಗ ಸೇರಿಕೊಂಡ ಪ್ರದೇಶಗಳು ಸೇರಿದಂತೆ 9 ಚದರ ಕಿ.ಮೀ. ವೃದ್ಧಿಸಿ 720.9 ಚದರ ಕಿ.ಮೀ. ವ್ಯಾಪ್ತಿಯಲ್ಲಿ ಐದು ನಗರ ಪಾಲಿಕೆಗಳ ಗಡಿಗಳನ್ನು ಗುರುತಿಸಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.



ಮುಖ್ಯಾಂಶಗಳು

- ವಾರ್ಡ್‌ಗಳ ಪುನರ್ ವಿಂಗಡಣೆಗೆ ಆಯೋಗ
- ಮಹೇಶ್ವರ್ ರಾವ್ ಜಿಬಿಎ ಮುಖ್ಯ ಆಯುಕ್ತ
- ನಗರ ಪಾಲಿಕೆಗಳಿಗೆ ಆಯುಕ್ತರಾಗಿ ಐಎಎಸ್ ಅಧಿಕಾರಿಗಳ ನೇಮಕ



ನಾಗರಿಕ ಸ್ನೇಹಿ ಸೇವೆ, ಉತ್ತಮ ಆಡಳಿತ, ಪರಿಣಾಮಕಾರಿಯಾಗಿ ಯೋಜನೆಗಳನ್ನು ಜಾರಿಗೊಳಿಸಲು ಜಿಬಿಎ ಜಾರಿಗೆ ತಂದು, ಐದು ಪಾಲಿಕೆಗಳನ್ನು ರಚಿಸಲಾಗಿದೆ

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ನ.30ಕ್ಕೆ ವಾರ್ಡ್ ಮೀಸಲಾತಿ ಪ್ರಕಟ: ಡಿಸಿಎಂ

ಐದು ನಗರ ಪಾಲಿಕೆಗಳ ವಾರ್ಡ್ ಪುನರ್ ವಿಂಗಡಣೆಗೆ ಆಯೋಗ ರಚಿಸಿದ್ದು, ನವೆಂಬರ್ 1ಕ್ಕೆ ವಾರ್ಡ್‌ಗಳ ಅಂತಿಮ ಅಧಿಸೂಚನೆ ಹೊರಡಿಸಲಾಗುತ್ತದೆ. ನ.30ರಂದು ವಾರ್ಡ್‌ಗಳ ಮೀಸಲಾತಿ ಅಧಿಸೂಚನೆ ಹೊರಡಿಸಿ, ಚುನಾವಣೆ ನಡೆಸಲಾಗುತ್ತದೆ’ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ನಾವು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದು, ನಮಗೆ ಕಾಲಮಿತಿ ಇದೆ. ವಾರ್ಡ್ ಮೀಸಲಾತಿ ಅಧಿಸೂಚನೆಯಾದ ನಂತರ ಆಯೋಗಕ್ಕೆ ನೀಡಿ, ಚುನಾವಣೆ ನಡೆಸಲು ಮನವಿ ಮಾಡಲಾಗುತ್ತದೆ. ಚುನಾವಣೆ ನಡೆಸಲು ಪೂರ್ವಸಿದ್ಧತೆ ಆರಂಭಿಸಬೇಕು ಎಂದು ರಾಜ್ಯ ಚುನಾವಣಾ ಆಯೋಗಕ್ಕೆ ಪತ್ರ ಬರೆಯಲಾಗಿದೆ. ಅತಿ ಶೀಘ್ರದಲ್ಲೇ ಅವರು ಮತದಾರರ ಪಟ್ಟಿ ಸಿದ್ಧಪಡಿಸಲಿದ್ದಾರೆ’ ಎಂದು ಮಂಗಳವಾರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘ಪಾಲಿಕೆಗಳ ಮೇಲೆ ಜಿಬಿಎ ಇರುವುದರಿಂದ 74ನೇ ತಿದ್ದುಪಡಿಗೆ ತೊಂದರೆಯಾಗುವುದಿಲ್ಲವೇ, ಇದನ್ನು ಪ್ರಶ್ನಿಸಿ ಯಾರಾದರೂ ನ್ಯಾಯಾಲಯದ ಮೊರೆ ಹೋಗುವುದಿಲ್ಲವೇ’ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, ‘ನ್ಯಾಯಾಲಯಗಳಲ್ಲಿ ಅರ್ಜಿ ಹಾಕಿ, ತಿರಸ್ಕೃತವಾಗಿವೆ. ಸುಪ್ರೀಂ ಕೋರ್ಟ್ ಪ್ರಮಾಣಪತ್ರ ಒಪ್ಪಿದೆ. ವಾರ್ಡ್ ಪುನರ್ ವಿಂಗಡಣೆ ಬಳಿಕ, ನವೆಂಬರ್ 3ರಂದು ವಿಚಾರಣೆಗೆ ಬರುವಂತೆ ತಿಳಿಸಿದೆ’ ಎಂದರು.



ಬಿಬಿಎಂಪಿ ಅಸ್ತಂಗತ... ಬೆಂಗಳೂರಿನ ಎನ್‌.ಆರ್‌. ಚೌಕದಲ್ಲಿರುವ ಪ್ರಧಾನ ಕಚೇರಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಫಲಕವನ್ನು ತೆರವುಗೊಳಿಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಫಲಕವನ್ನು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ನೇತೃತ್ವದಲ್ಲಿ ಅಳವಡಿಸಲಾಯಿತು

2025ರ ಆಸ್ತಿ ತೆರಿಗೆ ಸಂಗ್ರಹವನ್ನು ಐದು ನಗರ ಪಾಲಿಕೆಗಳಿಗೆ ವಿಂಗಡಿಸಿದರೆ, ಮಹದೇವಪುರ ಹಾಗೂ ಕೆ.ಆರ್. ಪುರ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯನ್ನು ಹೊಂದಲಿರುವ ಪೂರ್ವ ನಗರ ಪಾಲಿಕೆಗೆ ಅತಿಹೆಚ್ಚು (₹912 ಕೋಟಿ) ಸಂಗ್ರಹ ಇರಲಿದೆ. ಉತ್ತರ ನಗರ ಪಾಲಿಕೆಗೆ ಅತಿ ಕಡಿಮೆ (₹543 ಕೋಟಿ) ತೆರಿಗೆ ಸಂಗ್ರಹವಾಗಲಿದೆ.

ಒಂದು ಚದರ ಕಿ.ಮೀ.ಗೆ ಸರಾಸರಿ 20,225 ಜನಸಂಖ್ಯೆ ಸಾಂದ್ರತೆ ಬರುವಂತೆ ವಿಂಗಡಿಸಲಾಗಿದೆ. ಕೇಂದ್ರ ನಗರ ಪಾಲಿಕೆಯಲ್ಲಿ ಅತಿಹೆಚ್ಚು ಜನಸಂಖ್ಯೆ ಸಾಂದ್ರತೆ (32,051) ಇರಲಿದ್ದು, ಪೂರ್ವ ನಗರ ಪಾಲಿಕೆಯಲ್ಲಿ ಅತಿ ಕಡಿಮೆ ಜನಸಂಖ್ಯೆ ಸಾಂದ್ರತೆ (7,738) ಇರಲಿದೆ. ಪ್ರತಿ ನಗರ ಪಾಲಿಕೆಯ ಗಡಿಯಲ್ಲಿ ಅತಿದೊಡ್ಡ ರಸ್ತೆ ಇರುವಂತೆ ವಿಂಗಡಣೆ ಮಾಡಲಾಗಿದೆ.



ಅಫ್ಗಾನಿಸ್ತಾನದ ಕುನಾರ್ ಪ್ರಾಂತ್ಯದ ಮಜರ್ ದರಾ ಗ್ರಾಮದಲ್ಲಿ ಭೂಕಂಪದಲ್ಲಿ ಸಾವಿಗೀಡಾದ ಮಕ್ಕಳ ಮೃತದೇಹಗಳನ್ನು ಅಂತ್ಯಕ್ರಿಯೆಗೆ ಸಾಗಿಸಲಾಯಿತು — ಎಎಫ್‌ಪಿ ಚಿತ್ರ

ಅಫ್ಗಾನಿಸ್ತಾನ: ಮತ್ತೆ ಭೂಕಂಪ ಸಾವಿನ ಸಂಖ್ಯೆ 1,400ಕ್ಕೆ ಏರಿಕೆ

ಜಲಾಲಾಬಾದ್ (ಎಪಿ/ಎಎಫ್‌ಪಿ): ‘ನಮ್ಮ ಇಡೀ ಮನೆ ಕುಸಿದು ಬಿತ್ತು. ನನ್ನ ಸಹೋದರರು, ತಂದೆ ಎಲ್ಲರೂ ಅವಶೇಷಗಳ ಅಡಿಯಲ್ಲಿ ಸಿಲುಕಿದರು. ನಾನೊಬ್ಬನೇ ಬದುಕುಳಿದಿರುವೆ’– ನಂಗರಹಾರ್‌ನಲ್ಲಿ ಭೂಕಂಪದಿಂದ ತನ್ನ ಕುಟುಂಬದ ಐವರನ್ನೂ ಕಳೆದುಕೊಂಡಿರುವ 14 ವರ್ಷದ ಬಾಲಕ ರೋದಿಸಿದ್ದು ಹೀಗೆ...

ಅಫ್ಗಾನಿಸ್ತಾನದಲ್ಲಿ ಭಾನುವಾರ ತಡರಾತ್ರಿ ಸಂಭವಿಸಿದ ಪ್ರಬಲ ಭೂಕಂಪದಲ್ಲಿ ಸಾವಿಗೀಡಾದವರ ಸಂಖ್ಯೆ 1,400 ದಾಟಿದ್ದು, 3,100ಕ್ಕೂ ಅಧಿಕ ಜನರು ಗಾಯಗೊಂಡಿದ್ದಾರೆ. ಇದು ದಶಕಗಳಲ್ಲಿಯೇ ದೇಶದಲ್ಲಿ ಸಂಭವಿಸಿದ ಅತ್ಯಂತ ಭೀಕರ ಭೂಕಂಪ ಎಂದು ತಾಲಿಬಾನ್ ಸರ್ಕಾರ ಹೇಳಿದೆ. ▶10

ಪೀಡಿತರನ್ನು ತಲುಪುವುದೇ ಕಷ್ಟ

ಭೂಕಂಪದ ತೀವ್ರತೆಯಿಂದ ಹಲವಾರು ರಸ್ತೆಗಳು ಹಾನಿಗೊಳಗಾಗಿರುವುದರಿಂದ, ಅನೇಕ ಹಳ್ಳಿಗಳನ್ನು ಹಾಗೂ ಪರ್ವತ ಪ್ರದೇಶಗಳಲ್ಲಿರುವ ಪೀಡಿತರನ್ನು ತಲುಪಲು ಇನ್ನೂ ಸಾಧ್ಯವೇ ಆಗುತ್ತಿಲ್ಲ. ಪರ್ವತ ಪ್ರದೇಶಗಳನ್ನು ತಲುಪಲು ರಕ್ಷಣಾ ಪಡೆಗಳು ಹರಸಾಹಸ ಮಾಡುತ್ತಿವೆ. ಅನೇಕ ಹಳ್ಳಿಗಳಲ್ಲಿ ಗಾಯಗೊಂಡಿರುವ ಹಲವಾರು ಜನರಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲು ಹೆಲಿಕಾಪ್ಟರ್‌ಗಳನ್ನು ಬಳಸಲಾಗುತ್ತಿದೆ.ಜನರು ಕೈಗಳಿಂದಲೇ ಅವಶೇಷಗಳನ್ನು ಎತ್ತಿಹಾಕುತ್ತಿದ್ದಾರೆ.

ಭೂಕಂಪವು ಲಕ್ಷಾಂತರ ಜನರ ಮೇಲೆ ಪರಿಣಾಮ ಬೀರಬಹುದು. ಎಲ್ಲರೂ ನಿದ್ರಿಸುತ್ತಿದ್ದ ವೇಳೆ ಅವಘಡ ಸಂಭವಿಸಿರುವುದರಿಂದ ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಅಪಾಯ ಇದೆ

ಇಂದ್ರಿಕಾ ರತ್ವಾಟ್ಟೆ, ಅಫ್ಗಾನಿಸ್ತಾನದಲ್ಲಿರುವ ವಿಶ್ವಸಂಸ್ಥೆಯ ಮಾನವ ನೆರವಿನ ಸಮನ್ವಯಕಾರರು

ಚಿನ್ನ ಕಳ್ಳಸಾಗಣೆ ಪ್ರಕರಣ: ₹277 ಕೋಟಿ ದಂಡ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ₹277 ಕೋಟಿ ದಂಡ ಪಾವತಿಸಿ ಎಂದು ರವೆನ್ಯು ಗುಪ್ತಚರ ನಿರ್ದೇಶನಾಲಯವು (ಡಿಆರ್‌ಐ) ನಟಿ ರನ್ಯಾ ರಾವ್, ಉದ್ಯಮಿ ತರುಣ್ ಕೊಂಡರಾಜು ಮತ್ತು ಇಬ್ಬರು ಆಭರಣ ವ್ಯಾಪಾರಿಗಳಿಗೆ ನೋಟಿಸ್ ನೀಡಿದೆ.



ರನ್ಯಾ ರಾವ್

ಈ ನಾಲ್ವರು ದುಬೈನಿಂದ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 14.2 ಕೆ.ಜಿ.ಯಷ್ಟು ಚಿನ್ನ ಕಳ್ಳಸಾಗಣೆ ಮಾಡಿ, ಮಾರ್ಚ್ 3 ರಂದು ಡಿಆರ್‌ಐ ಅಧಿಕಾರಿಗಳಿಗೆ ಸಿಕ್ಕಿಬಿದ್ದಿದ್ದರು. ಇವರಲ್ಲಿ ನಟಿ ರನ್ಯಾ ರಾವ್‌ಗೆ ಗರಿಷ್ಠ, ₹102 ಕೋಟಿ ದಂಡ ವಿಧಿಸಲಾಗಿದೆ. ▶5

ಎಷ್ಟೆಷ್ಟು ದಂಡ

- ₹102 ಕೋಟಿ — ನಟಿ ರನ್ಯಾ ರಾವ್
- ₹63 ಕೋಟಿ — ಉದ್ಯಮಿ ತರುಣ್ ಕೊಂಡರಾಜು
- ₹56 ಕೋಟಿ — ಚಿನ್ನಾಭರಣ ವ್ಯಾಪಾರಿ ಸಾಹಿಲ್ ಸಖಾರಿಯಾ ಜೈನ್
- ₹56 ಕೋಟಿ — ವ್ಯಾಪಾರಿ ಭರತ್ ಕುಮಾರ್ ಜೈನ್

ವಿದೇಶಿ ದೇಣಿಗೆ: ಇ.ಡಿ ತನಿಖೆ?

ಧರ್ಮಸ್ಥಳ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋಮುಗಲಭೆ ಸೃಷ್ಟಿಸಲು ವಿದೇಶಿ ದೇಣಿಗೆ ಬಳಕೆ ಆಗಿದೆಯೇ ಎಂಬುದರ ಬಗ್ಗೆ ಜಾರಿ ನಿರ್ದೇಶನಾಲಯ (ಇ.ಡಿ) ಪ್ರಾಥಮಿಕ ತನಿಖೆ ನಡೆಸುತ್ತಿದೆ’ ಎಂದು ಮೂಲಗಳನ್ನು ಉಲ್ಲೇಖಿಸಿ ಪಿಟಿಐ ಸುದ್ದಿಸಂಸ್ಥೆ ವರದಿ ಮಾಡಿದೆ.

‘ಧರ್ಮಸ್ಥಳ ಪ್ರಕರಣದಲ್ಲಿ ಹೋರಾಟ ನಡೆಸುತ್ತಿರುವವರೆಲ್ಲರ ಹಣಕಾಸು ವ್ಯವಹಾರಗಳ ಬಗ್ಗೆ ಇ.ಡಿ ಮಾಹಿತಿ ಕಲೆಹಾಕುತ್ತಿದೆ. ಕೆಲ ಸ್ವಯಂ ಸೇವಾ ಸಂಸ್ಥೆಗಳ ಬ್ಯಾಂಕ್ ವಹಿವಾಟು ವಿವರಗಳನ್ನು ಪರಿಶೀಲಿಸುತ್ತಿದೆ. ವಿದೇಶಿ ದೇಣಿಗೆ ಪಡೆಯುವಲ್ಲಿ ಮತ್ತು ಅದರ ಬಳಕೆಯಲ್ಲಿ ಅಕ್ರಮಗಳಾಗಿದ್ದರೆ, ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಅಡಿ ತನಿಖೆ ನಡೆಸಲಾಗುವುದು ಎಂದೂ ಮೂಲಗಳು ಹೇಳಿವೆ’ ಎಂದು ಪಿಟಿಐ ವಿವರಿಸಿದೆ.

ಖಚಿತಪಡಿಸದ ಇ.ಡಿ: ಧರ್ಮಸ್ಥಳ ಪ್ರಕರಣದಲ್ಲಿ ವಿದೇಶಿ ದೇಣಿಗೆ ಆರೋಪದ ತನಿಖೆಯನ್ನು ಇ.ಡಿ ಬೆಂಗಳೂರು ಕಚೇರಿ ಖಚಿತಪಡಿಸಿಲ್ಲ.

‘ಧರ್ಮಸ್ಥಳ ಕ್ಷೇತ್ರಕ್ಕೆ ಮಸಿ ಬಳಿಯಲು ಯೂಟ್ಯೂಬರ್‌ಗಳಿಗೆ ವಿದೇಶಿ ಹಣ ಬಂದಿರುವ ಸಾಧ್ಯತೆ ಇದೆ ಎಂದು ವರದಿಯಾಗಿದೆ. ಈ ಬಗ್ಗೆ ತನಿಖೆ ನಡೆಸಲು ಇ.ಡಿಗೆ ನಿರ್ದೇಶಿಸಿ’ ಎಂದು ಬಿಜೆಪಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದರು. ಧರ್ಮಸ್ಥಳದ ವಿರುದ್ಧ ಹೋರಾಟ ನಡೆಸುತ್ತಿರುವವರಿಗೆ ವಿದೇಶಗಳಿಂದ ದೇಣಿಗೆ ಬಂದಿದೆ. ಈ ಬಗ್ಗೆ ತನಿಖೆ ನಡೆಸಿ ಎಂದು ಬಜರಂಗ ದಳದ ಕಾರ್ಯಕರ್ತರೊಬ್ಬರು ಇ.ಡಿಗೆ ದೂರು ನೀಡಿದ್ದರು.

‘ಮಂಗಳೂರು ಕುಕ್ಕರ್ ಸ್ಫೋಟ ಪ್ರಕರಣದಲ್ಲಿ ವಿದೇಶಿ ದೇಣಿಗೆ ಬಳಕೆ ಆಗಿದೆ. ಸ್ಫೋಟದ ಸಂಚುಕೋರ ಧರ್ಮಸ್ಥಳ ಮಂಜುನಾಥ ದೇವಾಲಯ ಸ್ಫೋಟಿಸಲು ಯೋಜಿಸಿದ್ದ’ ಎಂದು ಇ.ಡಿ ಈಚೆಗೆ ಹೇಳಿತ್ತು. ಈ ಪ್ರಕರಣದ ಸಂಚುಕೋರರನ್ನು ಇ.ಡಿ ಈಚೆಗೆ ವಿಚಾರಣೆಗೆ ಒಳಪಡಿಸಿತ್ತು.

‘ಸಕಾರಣವಿಲ್ಲದ ಡಿಎನ್‌ಎ ಪರೀಕ್ಷೆ ಸಲ್ಲ’

ಪ್ರಜಾವಾಣಿ ವಾರ್ತೆ



ನ್ಯಾ. ನಾಗಪ್ರಸನ್ನ

ಬೆಂಗಳೂರು: ‘ಸಕಾರಣ ಮತ್ತು ಅಗತ್ಯ ಇಲ್ಲದೇ ಡಿಎನ್‌ಎ ಪರೀಕ್ಷೆಗೆ ಒತ್ತಾಯಿಸುವುದು ವಿವಾಹದ ಪಾವಿತ್ರ್ಯ, ಸಾಂವಿಧಾನಿಕ ಚೌಕಟ್ಟುಗಳ ಅಡಿಯಲ್ಲಿ ದಂಪತಿಗಳಿಗೆ ಕೊಡಮಾಡಿದ ಗೋಪ್ಯತೆ ಹಾಗೂ ಘನತೆಯ ಮೂಲಭೂತ ಹಕ್ಕನ್ನು ಉಲ್ಲಂಘಿಸಿದಂತೆ’ ಎಂದು ಹೈಕೋರ್ಟ್, ಆಸ್ತಿ ಪಾಲುದಾರಿಕೆಯ ಪ್ರಕರಣವೊಂದರಲ್ಲಿ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ಸಂಬಂಧ 39 ವರ್ಷದ ಪುರುಷರೊಬ್ಬರು ಸಲ್ಲಿಸಿದ್ದ ರಿಟ್ ಅರ್ಜಿ (ಡಬ್ಲ್ಯು.ಪಿ 20342/2025) ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿದೆ.

‘ಡಿಎನ್‌ಎ ಪರೀಕ್ಷೆ ನಡೆಸುವಂತೆ ಕೋರಿ ಸಲ್ಲಿಸಲಾಗುವ ಅರ್ಜಿಗಳಿಗೆ ಉತ್ತರಿಸುವಾಗ ವಿಚಾರಣಾ ನ್ಯಾಯಾಲಯಗಳು ಸದರಿ ತೀರ್ಪಿನ ಸಮಯದಲ್ಲಿ ಮಾಡಲಾಗಿರುವ ಎಲ್ಲ ಅವಲೋಕನಾ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮುಂದುವರಿಯಬೇಕು. ಅಂತೆಯೇ, ಈ ತೀರ್ಪನ್ನು ಸಂಬಂಧಪಟ್ಟ ನ್ಯಾಯಾಲಯಗಳಿಗೆ ರವಾನಿಸಬೇಕು’ ಎಂದು ಹೈಕೋರ್ಟ್ ರಿಜಿಸ್ಟ್ರಿಗೆ ತಾಕೀತು ಮಾಡಿದೆ. ▶7

ಕಲಂ 112ರ ಘನತೆಗೆ ಧಕ್ಕೆಯಾಗಬಾರದು...

‘ಭಾರತೀಯ ಸಾಕ್ಷ್ಯ ಕಾಯ್ದೆ-1872ರ ಕಲಂ 112ರ ಅಸ್ತಿತ್ವವೇ ಸಾರ್ವಜನಿಕ ನೈತಿಕತೆ ಮತ್ತು ಸಾಮಾಜಿಕ ಸ್ವಾಸ್ಥ್ಯ ಅಥವಾ ಶಾಂತಿಯ ಭದ್ರತೆಯನ್ನು ಹೊಂದಿದೆ. ದಾಂಪತ್ಯ ಅಸ್ತಿತ್ವದಲ್ಲಿರುವಾಗ ಮತ್ತು ಗರ್ಭ ಧರಿಸಿದ 280 ದಿನಗಳ ಮೇಲೆ ಮಗು ಜನಿಸಿದರೆ ಅದು ಆತನೇ ತಂದೆ ಎಂದು ತಿಳಿಯಬೇಕು. ಈ ನಿರ್ಣಾಯಕ ಪುರಾವೆಯನ್ನು ಮೀರಿ ಒಂದು ವೇಳೆ ಮಗುವಿನ ಪಿತೃತ್ವವನ್ನು ಪ್ರಶ್ನಿಸಿದ್ದೇ ಆದರೆ ಅದು 112ರಲ್ಲಿ ಅಡಕವಾಗಿರುವ ತತ್ವಗಳನ್ನು ಮೀರಿದ ಕಾರಣಕ್ಕೆ ಉದ್ಭವಿಸಿದೆ ಎನ್ನುವಂತಿರಬೇಕು. ಇಂತಹ ಮೀರಿದ ಸಂದರ್ಭಗಳಲ್ಲಿ ಮಾತ್ರವೇ ಡಿಎನ್‌ಎ ಪರೀಕ್ಷೆಗೆ ಅನುಮತಿ ನೀಡುವುದು ಸಮ್ಮತ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ▶7



ಭೋವಿ ನಿಗಮಕ್ಕೆ ರವಿಕುಮಾರ್ ರಾಜೀನಾಮೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಎಸ್. ರವಿಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ ಎಂದು ಗೊತ್ತಾಗಿದೆ. ರವಿಕುಮಾರ್ ಅವರು ಮಾತನಾಡಿರುವ ವಿಡಿಯೊ ಹಾಗೂ ಆಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಹೀಗಾಗಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ನಿಗಮದ ಅಧ್ಯಕ್ಷ ರವಿಕುಮಾರ್ ಅವರು ಭೂ ಒಡೆತನ ಯೋಜನೆ ಅಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಂದ ಶೇ 60ರಷ್ಟು ಲಂಚ ನೀಡುವಂತೆ ಬೇಡಿಕೆ ಇಡುತ್ತಿದ್ದಾರೆ’ ಎಂದು ಭಾರತೀಯ ಭೋವಿ ಸಮಾಜ ಸೇವಾ ಸಂಘದ ರಾಷ್ಟ್ರೀಯ ಅಧ್ಯಕ್ಷ ವೆಂಕಟೇಶ್ ಮೌರ್ಯ ಆರೋಪಿಸಿದ್ದರು. ▶6

ಭೋವಿ ಅಭಿವೃದ್ಧಿ ನಿಗಮದಲ್ಲಿ ಶೇ 60 ಕಮಿಷನ್ ತೆಗೆದುಕೊಳ್ಳಲಾಗುತ್ತಿದೆ ಎಂಬ ಆರೋಪ ಮಾಡಿದವರು ದಾಖಲೆಗಳನ್ನು ಸಲ್ಲಿಸಲಿ, ಸರ್ಕಾರ ತನಿಖೆ ಮಾಡುತ್ತದೆ

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

ಭೂಮಿ ಮಂಜೂರಾದವರಿಗೆ ₹25 ಲಕ್ಷ ಸಹಾಯಧನ ಬಿಡುಗಡೆ ಮಾಡಲು ₹5 ಲಕ್ಷ ಕಮಿಷನ್‌ಗೆ ಬೇಡಿಕೆ ಇಟ್ಟಿರುವ ಭೋವಿ ನಿಗಮದ ಅಧ್ಯಕ್ಷ ರವಿಕುಮಾರ್ ವಿರುದ್ಧ ಕೂಡಲೇ ಕಠಿಣ ಕ್ರಮ ಕೈಗೊಳ್ಳಬೇಕು

ನಿಖಿಲ್ ಕುಮಾರಸ್ವಾಮಿ, ಯುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

ಮರಾಠರಿಗೆ ಮೀಸಲಾತಿ: ಒಪ್ಪಿಗೆ

ಮುಂಬೈ (ಪಿಟಿಐ): ‘ಮರಾಠರಿಗೆ ಕುಣಬಿ ಜಾತಿ ಪ್ರಮಾಣಪತ್ರ ನೀಡಲು ಮಹಾರಾಷ್ಟ್ರ ಸರ್ಕಾರ ಮಂಗಳವಾರ ಒಪ್ಪಿಕೊಂಡಿದೆ. ಸ್ನೇಹಿತರೇ ನಾವು ಗೆದ್ದುಬಿಟ್ಟೆವು’ ಎಂದು ಹೋರಾಟಗಾರ ಮನೋಜ್ ಜರಾಂಗೆ ಘೋಷಿಸಿದರು. ಕಳೆದ 5 ದಿನಗಳಿಂದ ಸಾವಿರಾರು ಹೋರಾಟಗಾರರೊಂದಿಗೆ ಜರಾಂಗೆ ಅವರು ಇಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರು. ▶11



ಮನೋಜ್

6 ವರ್ಷದಿಂದ ಪೊಲೀಸ್ ಸಿಬ್ಬಂದಿ ರಕ್ತದಾನ ● ಮಾದರಿಯಾದ ಆಡೂರು ಠಾಣೆ

ಥಲಸ್ಸೇಮಿಯಾ ಬಾಧಿತರಿಗೆ ಆರಕ್ಷಕರ ರಕ್ತೆ

● ಸಂತೋಷ ಜಿಗಳಿಕೊಪ್ಪ

ಹಾವೇರಿ: ಜಿಲ್ಲೆಯ ಹಾನಗಲ್ ತಾಲ್ಲೂಕಿನ ಆಡೂರು ಠಾಣೆ ಪೊಲೀಸ್ ಸಿಬ್ಬಂದಿಯು ಥಲಸ್ಸೇಮಿಯಾ (ಆನುವಂಶಿಕ ರಕ್ತದ ಕಾಯಿಲೆ) ಪೀಡಿತ ಮಕ್ಕಳಿಗೆ ನೆರವು ಮತ್ತು ಅಪಘಾತದಲ್ಲಿ ಗಾಯಗೊಂಡವರ ಜೀವರಕ್ಷಣೆಗಾಗಿ ಆರು ವರ್ಷಗಳಿಂದ ರಕ್ತದಾನ ಮಾಡುತ್ತಿದ್ದಾರೆ.

2019ರಿಂದ 2025ರ ನಡುವೆ ಆರು ಶಿಬಿರಗಳನ್ನು ಆಯೋಜಿಸಿರುವ ಆಡೂರು ಠಾಣೆಯ ಪೊಲೀಸರು, 193 ಯೂನಿಟ್ (ಪ್ರತಿ ಯೂನಿಟ್ 450 ಎಂ.ಎಲ್.) ರಕ್ತದಾನ ಮಾಡಿದ್ದಾರೆ.

ಜಿಲ್ಲೆಯಲ್ಲಿ ಥಲಸ್ಸೇಮಿಯಾ ಪೀಡಿತ 183 ಮಕ್ಕಳಿದ್ದು ಇವರಲ್ಲಿ ಪೊಲೀಸ್ ಸಿಬ್ಬಂದಿಯ 12 ಮಕ್ಕಳೂ ಇದ್ದಾರೆ. ಅವರ ಚಿಕಿತ್ಸೆಗಾಗಿ ಪೊಲೀಸರಿಂದ ಸಂಗ್ರಹಿಸಿದ ರಕ್ತ ಬಳಕೆ ಆಗುತ್ತದೆ.

ಜಿಲ್ಲೆಯಲ್ಲಿ ತಿಂಗಳಿಗೆ 420 ಯೂನಿಟ್ ರಕ್ತಕ್ಕೆ ಬೇಡಿಕೆ ಇದೆ. ಮಾಸಿಕ 70 ರೋಗಿಗಳಿಗೆ 150 ಯೂನಿಟ್ ರಕ್ತ ಬೇಕು. ಜಿಲ್ಲೆಯ 113 ರೋಗಿಗಳು ಶಿವಮೊಗ್ಗ, ದಾವಣಗೆರೆ, ಹುಬ್ಬಳ್ಳಿ, ದಕ್ಷಿಣ ಕನ್ನಡ ಜಿಲ್ಲೆಗಳಿಂದ ರಕ್ತ ಪಡೆಯುತ್ತಾರೆ.

‘ರಾಜ್ಯದ ಇತರೆ ಠಾಣೆಗಳಿಗೆ ಹೋಲಿಸಿದರೆ 6 ಬಾರಿ ರಕ್ತದಾನ ಶಿಬಿರ ಏರ್ಪಡಿಸಿ, 193 ಯೂನಿಟ್ ರಕ್ತ ಕೊಟ್ಟ ಮೊದಲ ಠಾಣೆ ಎಂಬ ಸಾಧನೆಗೆ ಆಡೂರು ಠಾಣೆ ಪಾತ್ರವಾಗಿದೆ. ಶಿವಮೊಗ್ಗ ಜಿಲ್ಲೆಯ ಹೊಸನಗರ ಪೊಲೀಸ್ ಠಾಣೆಯು ನಾಲ್ಕು ಬಾರಿ ರಕ್ತದಾನ ಶಿಬಿರ ಏರ್ಪಡಿಸಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಥಲಸ್ಸೇಮಿಯಾ ಪೀಡಿತ ಮಕ್ಕಳಿಗೆ 30ರಿಂದ 45 ದಿನಕ್ಕೊಮ್ಮೆ ರಕ್ತ ಬದಲಿಸಬೇಕು. ಅದಕ್ಕಾಗಿ 2019ರಿಂದ ಶಿಬಿರ ನಡೆಸಲಾಗುತ್ತಿದೆ’ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಲ್‌.ವೈ. ಶಿರಕೋಳ ‘ಪ್ರಜಾವಾಣಿ’ಗೆ ತಿಳಿಸಿದರು. ▶10

ಮುಖ್ಯಾಂಶಗಳು

- ಹಾವೇರಿ ಜಿಲ್ಲೆಯಲ್ಲಿ ಥಲಸ್ಸೇಮಿಯಾ ಪೀಡಿತ 183 ಮಕ್ಕಳು
- ಪೊಲೀಸ್ ಸಿಬ್ಬಂದಿಯ 12 ಮಕ್ಕಳಿಗೂ ಸಮಸ್ಯೆ
- 30ರಿಂದ 45 ದಿನಕ್ಕೊಮ್ಮೆ ರಕ್ತ ಬದಲಿಸುವುದು ಅಗತ್ಯ



ಹಾವೇರಿ ಜಿಲ್ಲೆಯ ಆಡೂರು ಠಾಣೆಯಲ್ಲಿ ಆಗಸ್ಟ್ 24ರಂದು ನಡೆದ 6ನೇ ವರ್ಷದ ಶಿಬಿರದಲ್ಲಿ ಪೊಲೀಸರು ರಕ್ತದಾನ ಮಾಡಿದರು

ಪೊಲೀಸ್ ಸಿಬ್ಬಂದಿಯ ರಕ್ತದಾನ ಶಿಬಿರ ಇತರರಿಗೆ ಮಾದರಿಯಾಗಿದೆ. ಸಂಗ್ರಹವಾದ ರಕ್ತವನ್ನು ಥಲಸ್ಸೇಮಿಯಾ ಮಕ್ಕಳ ಚಿಕಿತ್ಸೆಗೆ ಬಳಸುತ್ತೇವೆ

ಬಸವರಾಜ ತಳವಾರ, ವೈದ್ಯಾಧಿಕಾರಿ, ಹಾವೇರಿ ಜಿಲ್ಲಾ ರಕ್ತ ಕೇಂದ್ರ

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸೂರ್ಯೋದಯ: 6:09 ಸೂರ್ಯಾಸ್ತ : 6:30 | ಚಂದ್ರೋದಯ: ರಾ. 12:50 ಚಂದ್ರಾಸ್ತ: ಮ. 2:18 | ಮಂಗಳವಾರದ ಉಷ್ಣಾಂಶ : ಗರಿಷ್ಠ 27° ಕನಿಷ್ಠ 20°

ಬುಧವಾರದ ಉಷ್ಣಾಂಶ 27° ಗರಿಷ್ಠ 19° ಕನಿಷ್ಠ | ಗುರುವಾರ 28° : 20° | ಶುಕ್ರವಾರ 27° : 20° | ಶನಿವಾರ 27° : 19°

ಬುಧವಾರ • ಸೆಪ್ಟೆಂಬರ್ 3, 2025

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗುಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ಮಣ್ಣು ಕುಸಿತ: ಮತ್ತೊಬ್ಬ ಕಾರ್ಮಿಕ ಸಾವು

ಯಲಹಂಕದ ವೆಂಕಟಾಲದಲ್ಲಿ ನಿರ್ಮಾಣ ಹಂತದ ಕಟ್ಟಡದ ಬಳಿ ಸಂಭವಿಸಿದ್ದ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ವೆಂಕಟಾಲದಲ್ಲಿ ನಿರ್ಮಾಣ ಹಂತದ ಕಟ್ಟಡದ ಬಳಿ ಸೋಮವಾರ ಸಂಜೆ ಮಣ್ಣು ಕುಸಿದು ಸಂಭವಿಸಿದ ದುರಂತದಲ್ಲಿ ಮತ್ತೊಬ್ಬ ಕಾರ್ಮಿಕ ಮೃತಪಟ್ಟಿದ್ದಾರೆ. ಸಾವಿನ ಸಂಖ್ಯೆ 2ಕ್ಕೆ ಏರಿಕೆಯಾಗಿದೆ.

ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಮಧುಸೂದನ್ ರೆಡ್ಡಿ (58) ಅವರು ಮಂಗಳವಾರ ಮೃತಪಟ್ಟಿದ್ದಾರೆ.

ಕಾರ್ಮಿಕರು ಕಟ್ಟಡದ ಅಡಿಪಾಯಕ್ಕೆ ಗುಂಡಿ ತೆಗೆಯುತ್ತಿದ್ದರು. ಸೋಮವಾರ ಸಂಜೆ ಧಾರಾಕಾರ ಮಳೆ ಸುರಿದಿದ್ದರಿಂದ ಗುಂಡಿಯಲ್ಲಿ ಮಳೆ ನೀರು ತುಂಬಿಕೊಂಡು ಮಣ್ಣು ಕುಸಿದಿತ್ತು. ಶಿವು ಮತ್ತು ಮಧುಸೂದನ್ ರೆಡ್ಡಿ ಅವರು ಹೊರಕ್ಕೆ ಬರಲು ಸಾಧ್ಯವಾಗದೇ ಮಣ್ಣಿನ ಅಡಿ ಸಿಲುಕಿದ್ದರು. ಇತರೆ ಕಾರ್ಮಿಕರು ಸ್ಥಳೀಯರ ನೆರವಿನಿಂದ ಮಣ್ಣು ತೆರವುಗೊಳಿಸಲು ಯತ್ನಿಸಿದ್ದರು. ಶಿವು ಅವರು ಮಣ್ಣಿನ ಅಡಿ ಸಿಲುಕಿ ಮೃತಪಟ್ಟಿದ್ದರು. ಮಧುಸೂದನ್ ರೆಡ್ಡಿ ಅವರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಯಲಹಂಕ ಠಾಣೆ ಪೊಲೀಸರು ಹೇಳಿದರು.

ಮೃತ ಕಾರ್ಮಿಕರು ಆಂಧ್ರಪ್ರದೇಶ ಮೂಲದವರು. ವೆಂಕಟಾಲ ಬಡಾವಣೆಯಲ್ಲಿ ಶಿವು ಮತ್ತು ಕೊಂಡಪ್ಪ ಲೇಔಟ್‌ನಲ್ಲಿ ಮಧುಸೂದನ್ ರೆಡ್ಡಿ ಅವರು ವಾಸವಾಗಿದ್ದರು. ಘಟನೆ ಸಂಬಂಧ ಕಟ್ಟಡ ನಿರ್ಮಾಣ ಸಂಸ್ಥೆಯ ವಿರುದ್ಧ ನಿರ್ಲಕ್ಷ್ಯ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದರು.

ಎಂಬೆಸ್ಸಿ ಕಂಪನಿ ಮಾಲೀಕ ಸೇರಿ 14 ಮಂದಿ ವಿರುದ್ಧ ಎಫ್‌ಐಆರ್

ಮಣ್ಣು ಕುಸಿದು ಕಾರ್ಮಿಕರಿಬ್ಬರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಬೆಸ್ಸಿ ಕಂಪನಿ ಮಾಲೀಕ ಸೇರಿ 14 ಮಂದಿ ವಿರುದ್ಧ ಯಲಹಂಕ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸಂದೀಪ್, ಕಿರಣ್, ಚಿರಂಜೀವಿ, ರೆಹಮಾನ್, ಜಗದೀಶ್, ರಾಜೇಶ್, ನರೇಂದ್ರ, ಅಂಕಿತ್, ಪ್ರಿಯಾಂಕ್ ಜೈನ್, ನಿರಂಜನ್ ಚೌಹಾಣ್, ಪ್ರಣವ್, ಶ್ರೀನಿವಾಸ್, ಶಿವಶಂಕರ್ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

ಜೋಗಿ ಸರಸ್ವತಿ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

‘ಸುರಕ್ಷತಾ ಉಪಕರಣಗಳನ್ನು ಅಳವಡಿಸಿಕೊಳ್ಳದೇ ಕಾಮಗಾರಿ ನಡೆಸಲಾಗುತ್ತಿತ್ತು. ಕಟ್ಟಡ ನಿರ್ಮಾಣಕ್ಕೆ ಹೆಚ್ಚು ಆಳದಲ್ಲಿ ಗುಂಡಿ ತೆಗೆದ ಪರಿಣಾಮ ಮಣ್ಣು ಕುಸಿಯಲು ಕಾರಣವಾಗಿದೆ. ಸಂಬಂಧಿಸಿದವರ ನಿರ್ಲಕ್ಷ್ಯದಿಂದ ಘಟನೆ ನಡೆದಿದೆ. ಘಟನೆಯಲ್ಲಿ ಪತಿ ಶಿವು ಹಾಗೂ ಅವರ ಸ್ನೇಹಿತ ಮಧುಸೂದನ್ ರೆಡ್ಡಿ ಅವರು ಮೃತಪಟ್ಟಿದ್ದಾರೆ. ಇಬ್ಬರ ಸಾವಿಗೆ ಕಾರಣರಾದ ಕಂಪನಿ ಮಾಲೀಕ, ನಿರ್ದೇಶಕರು ಹಾಗೂ ಉಸ್ತುವಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಜೋಗಿ ಸರಸ್ವತಿ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪ್ರಯಾಣಿಕರ ಸಮೇತ ಬಸ್ ಜಪ್ತಿ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿದ ಆರೋಪದ ಮೇಲೆ ಸಂಚಾರ ಪೊಲೀಸರು ಪ್ರಯಾಣಿಕರ ಸಮೇತ ಕೆಎಸ್‌ಆರ್‌ಟಿಸಿ ಬಸ್ ಜಪ್ತಿ ಮಾಡಿ ಠಾಣೆಗೆ ಕರೆದೊಯ್ದ ಘಟನೆ ಸಂಜಯನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಈ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಸಂಚಾರ ಪೊಲೀಸರ ವರ್ತನೆಗೆ ಆಕ್ರೋಶ ವ್ಯಕ್ತವಾಗಿದೆ.

ಹೊಸಪೇಟೆಯಿಂದ ಬೆಂಗಳೂರು ಕಡೆಗೆ ಬರುತ್ತಿದ್ದ ಬಸ್ ಚಾಲಕ ಎಸ್ಟೀಮ್ ಮಾಲ್ ಮುಂದೆ ನಿಲುಗಡೆ ಮಾಡಿದ ಎಂಬ ಕಾರಣಕ್ಕೆ ಬಸ್ ಒಳಗೆ ಹೋದ ಕಾನ್‌ಸ್ಟೆಬಲ್ ಕುಮಾರ, ‘ಎಸ್ಟೀಮ್ ಮಾಲ್ ಮುಂದೆ ನಿಲುಗಡೆ ಇಲ್ಲ’ ಎಂದು ಚಾಲಕನಿಗೆ ಬೈದಿದ್ದಾರೆ. ಬಳಿಕ ಬಸ್ ಅನ್ನು ಪ್ರಯಾಣಿಕರ ಸಮೇತ ಠಾಣೆಗೆ ಕರೆತಂದಿದ್ದಾರೆ.

ಕಚೇರಿ, ಶಾಲಾ, ಕಾಲೇಜಿಗೆ ತೆರಳಬೇಕಿದ್ದು, ಬಸ್ ಜಪ್ತಿ ಮಾಡದೇ ಬಿಟ್ಟುಬಿಡಿ ಎಂದು ಪ್ರಯಾಣಿಕರು ಮನವಿ ಮಾಡಿದರೂ ಪೊಲೀಸರು, ಪರ್ಯಾಯ ವ್ಯವಸ್ಥೆ ಮಾಡದೆ ಠಾಣೆಯಲ್ಲಿ ಇರಿಸಿದ್ದಾರೆ. ಪೊಲೀಸರ ತಪ್ಪು ಪ್ರಶ್ನೆ ಮಾಡಿದ್ದಕ್ಕೆ ಪ್ರಯಾಣಿಕರಿಗೆ ನಿಮ್ಮ ಮೇಲೆ ಎಫ್‌ಐಆರ್ ದಾಖಲಿಸುವುದಾಗಿ ಬೆದರಿಕೆ ಹಾಕಿದ್ದಾರೆ. ಈ ನಡುವೆ ಪ್ರಯಾಣಿಕರು, ಚಾಲಕ ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆದಿದೆ. ಕೊನೆಗೆ ಪ್ರಯಾಣಿಕರು ಬೇರೆ ಬಸ್‌ಗಳಲ್ಲಿ ತೆರಳಿದರು.

₹2.30 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬ್ಯುಸಿನೆಸ್ ವೀಸಾ ಪಡೆದು ಬಂದಿದ್ದ ಆರೋಪಿ
- ಈ ಹಿಂದೆಯೂ ಚಿಕೋಜಿ ಬಂಧನ
- ಕಾರಾಗೃಹದಿಂದ ಬಂದ ಬಳಿಕವೂ ಕೃತ್ಯ


ಚಿಕೋಜಿ ಹೇಡಾಹಾ

ಬೆಂಗಳೂರು: ಬ್ಯುಸಿನೆಸ್ ವೀಸಾ ಪಡೆದು ಭಾರತಕ್ಕೆ ಬಂದು ಡ್ರಗ್ಸ್ ಮಾರಾಟ ದಂಧೆಯಲ್ಲಿ ತೊಡಗಿದ್ದ ನೈಜೀರಿಯಾ ದೇಶದ ಚಿಕೋಜಿ ಹೇಡಾಹಾ ಎಂಬುವವರನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತನಿಂದ 2 ಕೆ.ಜಿ 36 ಗ್ರಾಂ ಎಂಡಿಎಂಎ, ₹3 ಸಾವಿರ ನಗದು, ತೂಕದ ಯಂತ್ರ, ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಇದರ ಮೌಲ್ಯ ₹2.30 ಕೋಟಿ ಎಂದು ಅಂದಾಜಿಸಲಾಗಿದೆ.

ಬಾಗಲೂರಿನ ಸಂತೆ ವೃತ್ತದ ಬಳಿ ಆರೋಪಿ ಮಾದಕ ಪದಾರ್ಥಗಳ ಮಾರಾಟದಲ್ಲಿ ತೊಡಗಿದ್ದ ಬಗ್ಗೆ ಖಚಿತ ಮಾಹಿತಿ ಬಂದಿತ್ತು. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಬ್ಯುಸಿನೆಸ್ ವೀಸಾ ಪಡೆದು 2011ರಲ್ಲಿ ಆರೋಪಿ ಭಾರತಕ್ಕೆ ಬಂದಿದ್ದ. ವೀಸಾ ಅವಧಿ ಮುಕ್ತಾಯವಾಗಿದ್ದರೂ ಬೆಂಗಳೂರಿನಲ್ಲೇ ನೆಲಸಿದ್ದ. ಅಪರಿಚಿತ ವ್ಯಕ್ತಿಯಿಂದ ಕಡಿಮೆ ಬೆಲೆಗೆ ಎಂಡಿಎಂಎ ಖರೀದಿಸುತ್ತಿದ್ದ ಆರೋಪಿ, ನಗರದ ಹೊರವಲಯದ ಕಾಲೇಜು ಹಾಗೂ ಪೇಯಿಂಗ್ ಗೆಸ್ಟ್ ಬಳಿ ಮಾರಾಟ ಮಾಡುತ್ತಿದ್ದ. ಈ ಹಿಂದೆಯೂ ಮಾದಕ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದಾಗ ಚಿಕೋಜಿ ಹೇಡಾಹಾನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ಆತ ಕಾರಾಗೃಹದಿಂದ ಹೊರಬಂದ ಬಳಿಕ ಅದೇ ಕೃತ್ಯ ಮುಂದುವರಿಸಿದ್ದ ಎಂದು ಪೊಲೀಸರು ತಿಳಿಸಿದರು.

ಕಾಡುಗೋಡಿ ಪೊಲೀಸರ ಕಾರ್ಯಾಚರಣೆ • ₹6.50 ಲಕ್ಷ ಮೌಲ್ಯದ 22 ವಿಗ್ರಹಗಳ ಜಪ್ತಿ

ದೇವಸ್ಥಾನಕ್ಕೆ ಕನ್ನ: ಮೂವರು ಕಳ್ಳರ ಬಂಧನ

ಪ್ರಜಾವಾಣಿ ವಾರ್ತೆ


ರಬ್ಬಿ


ಬಾಬು


ಯೂಸಫ್

ಬೆಂಗಳೂರು: ದೇವಸ್ಥಾನಗಳಿಗೆ ನುಗ್ಗಿ ವಿಗ್ರಹಗಳನ್ನು ಕಳ್ಳತನ ಮಾಡುತ್ತಿದ್ದ ಮೂವರು ಅಂತರ ರಾಜ್ಯ ಕಳ್ಳರನ್ನು ಕಾಡುಗೋಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೋಲ್ಕತ್ತದ ಮೊಹಮ್ಮದ್ ಯೂಸಫ್ (20), ಮೊಹಮ್ಮದ್ ರಬ್ಬಿ (22), ಮೊಹಮ್ಮದ್ ಬಾಬು (21) ಬಂಧಿತರು. ಬಂಧಿತರಿಂದ ₹6.50 ಲಕ್ಷ ಮೌಲ್ಯದ ದೇವರ 22 ವಿಗ್ರಹಗಳು, ಕೃತ್ಯಕ್ಕೆ ಬಳಸಿದ್ದ ಆಟೊ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕಾಡುಗೋಡಿಯ ಖಾಜಿ ಸೊನ್ನೇನಹಳ್ಳಿಯ ಮುನೇಶ್ವರಸ್ವಾಮಿ ದೇವಸ್ಥಾನದ ಉಸ್ತುವಾರಿ ಎಂ.ಕೃಷ್ಣಪ್ಪ ಅವರು ನೀಡಿದ ದೂರು ಆಧರಿಸಿ, ಆರೋಪಿಗಳನ್ನು ಬಂಧಿಸಲಾಯಿತು ಎಂದು ಮೂಲಗಳು ಹೇಳಿವೆ.

ಜುಲೈ 30ರಂದು ದೇವಸ್ಥಾನಕ್ಕೆ ತೆರಳಿ ನೋಡಿದಾಗ ಬಾಗಿಲು ಒಡೆದು ದೇವರ ವಿಗ್ರಹಗಳು ಹಾಗೂ ಹುಂಡಿಯಲ್ಲಿದ್ದ ಹಣವನ್ನು ಕಳ್ಳತನ ಮಾಡಿರುವುದು ಗೊತ್ತಾಗಿತ್ತು ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

ಕನ್ನಮಂಗಲ ಮುಖ್ಯರಸ್ತೆಯಲ್ಲಿ ಗಸ್ತು ನಡೆಸುತ್ತಿರುವಾಗ ಮೂವರು ವ್ಯಕ್ತಿಗಳು ಅನುಮಾನಸ್ಪದವಾಗಿ ಓಡಾಟ ನಡೆಸುತ್ತಿದ್ದರು. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಬ್ಯಾಗ್ ಪರಿಶೀಲಿಸಲಾಯಿತು. ಬ್ಯಾಗ್‌ನಲ್ಲಿ ಆ್ಯಕ್ಸೆಲ್ ಬ್ಲೇಡ್ ಹಾಗೂ ಕಬ್ಬಿಣದ ರಾಡುಗಳು ಪತ್ತೆ ಆಗಿದ್ದವು. ಹೆಚ್ಚಿನ ವಿಚಾರಣೆ ನಡೆಸಿದಾಗ ಮುನೇಶ್ವರ ದೇವಸ್ಥಾನಕ್ಕೆ ನುಗ್ಗಿ ವಿಗ್ರಹ ಹಾಗೂ ಹಣ ಕಳ್ಳತನ ಮಾಡಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದರು ಎಂದು ಪೊಲೀಸರು ಹೇಳಿದರು.

‘ಪಶ್ಚಿಮ ಬಂಗಾಳದಿಂದ ನಗರಕ್ಕೆ ಬಂದಿದ್ದ ಆರೋಪಿಗಳು, ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ಕಾರು ವಾಷಿಂಗ್ ಕೆಲಸವನ್ನು ಆರೋಪಿಗಳು ಮಾಡುತ್ತಿದ್ದರು. ಹಗಲು ದೇವಸ್ಥಾನಗಳನ್ನು ಗುರುತಿಸುತ್ತಿದ್ದರು. ರಾತ್ರಿ ವೇಳೆ ದೇವಸ್ಥಾನದ ಬಾಗಿಲು ಒಡೆದು ಕಳ್ಳತನ ಮಾಡುತ್ತಿದ್ದರು. ಮೂವರು ಆರೋಪಿಗಳಾಗಿದ್ದು, ಕಾಡುಗೋಡಿ, ಹೊಸಕೋಟೆ, ಸೂಲಿಬೆಲೆ, ಆವಲಹಳ್ಳಿ ಸೇರಿದಂತೆ ಹಲವು ಕಡೆಗಳಲ್ಲಿ ದೇವಸ್ಥಾನಗಳಿಗೆ ನುಗ್ಗಿ ಕಳ್ಳತನ ಮಾಡಿದ್ದರು. ಇವರ ಬಂಧನದಿಂದ ನಾಲ್ಕು ಪ್ರಕರಣಗಳು ಪತ್ತೆಯಾಗಿವೆ’ ಎಂದು ಪೊಲೀಸರು ಹೇಳಿದರು.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಅಪರಾಧ ಸುದ್ದಿ

ಬೆಂಗಳೂರು: ಮಲ್ಲೇಶ್‌ಪಾಳ್ಯ ಮತ್ತು ಕನ್ನಮಂಗಲ–ದಿಣ್ಣೂರು ಮುಖ್ಯರಸ್ತೆಯಲ್ಲಿ ಸೋಮವಾರ ತಡರಾತ್ರಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಜೆ.ಬಿ.ನಗರದ ಬಳಿಯ ಮಲ್ಲೇಶ್‌ಪಾಳ್ಯ ಮುಖ್ಯರಸ್ತೆಯಲ್ಲಿ ಬೈಕ್ ಹಾಗೂ ಕಾರು ನಡುವೆ ಸಂಭವಿಸಿದ ಅಪಘಾತದಲ್ಲಿ ಕೋಡಿಹಳ್ಳಿಯ ನಿವಾಸಿ ಶರಣಬಸಪ್ಪ (22) ಅವರು ಮೃತಪಟ್ಟಿದ್ದಾರೆ. ಶರಣಬಸಪ್ಪ ಮೂಲತಃ ಕಲಬುರಗಿ ಜಿಲ್ಲೆಯವರು.

ಶರಣಬಸಪ್ಪ ಅವರು ಬೈಕ್‌ನಲ್ಲಿ ತೆರಳುತ್ತಿದ್ದಾಗ, ಎದುರಿನಿಂದ ಬಂದ ಕಾರು ಡಿಕ್ಕಿ ಹೊಡೆದಿದೆ. ತಲೆಗೆ ತೀವ್ರ ಪೆಟ್ಟಾಗಿ ಶರಣಬಸಪ್ಪ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ಸಂದರ್ಭದಲ್ಲಿ ಬೈಕ್ ಸವಾರ ಹೆಲ್ಮೆಟ್ ಧರಿಸಿರಲಿಲ್ಲ. ಘಟನೆ ನಂತರ ಕಾರು ಚಾಲಕ ವಾಹನ ಬಿಟ್ಟು ಪರಾರಿಯಾಗಿದ್ದಾನೆ ಎಂದು ಸಂಚಾರ ಪೊಲೀಸರು ಹೇಳಿದರು. ಜೆ.ಬಿ.ನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ಯಾಬ್ ಚಾಲಕ ಸಾವು: ಕನ್ನಮಂಗಲ–ದಿಣ್ಣೂರು ಮುಖ್ಯರಸ್ತೆಯಲ್ಲಿ ಸರಕು ಸಾಗಣೆ ವಾಹನ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಶ್ರೀನಿವಾಸ್ (23) ಮೃತಪಟ್ಟಿದ್ದಾರೆ.

ಖಾಜಿ ಸೊನ್ನೇನಹಳ್ಳಿಯಲ್ಲಿ ನೆಲಸಿದ್ದ ಶ್ರೀನಿವಾಸ್ ಅವರು ಕ್ಯಾಬ್ ಚಾಲಕರಾಗಿದ್ದರು. ಅವರು ಸ್ನೇಹಿತ ಮಲ್ಲಿಕಾರ್ಜುನ್ ಜತೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ. ಬೈಕ್‌ನ ಹಿಂದೆ ಕುಳಿತಿದ್ದ ಮಲ್ಲಿಕಾರ್ಜುನ್ ಅವರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಹದೇವಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಣ ಸುಲಿಗೆ: ಆರು ಮಂದಿ ಸೆರೆ

ಉದ್ಯಮಿಗೆ ಬೆದರಿಕೆ: ಸಿಸಿಬಿ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರನ್ನು ಅಪಹರಿಸಿ, ಬೆದರಿಕೆ ಹಾಕಿ ಹಣ ಸುಲಿಗೆ ಮಾಡಿದ್ದ ಆರೋಪದ ಅಡಿ ರೌಡಿಶೀಟರ್‌ಗಳೂ ಸೇರಿದಂತೆ ಆರು ಮಂದಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ರಾಜೇಶ್ ಅಲಿಯಾಸ್ ಅಪ್ಪಿ, ಸೀನಾ ಅಲಿಯಾಸ್ ಬಾಂಬೆ ಸೀನಾ, ಲೋಕೇಶ್ ಕುಮಾರ್, ನವೀನ್ ಕುಮಾರ್, ಸೋಮಯ್ಯ ಮತ್ತು ಯುಕೇಶ್ ಬಂಧಿತ ಆರೋಪಿಗಳು.

ಆಗಸ್ಟ್ 26ರಂದು ರಾಜಾಜಿನಗರದ ಮೋದಿ ಆಸ್ಪತ್ರೆ ಬಳಿ ರಿಯಲ್ ಎಸ್ಟೇಟ್ ಉದ್ಯಮಿ ಎಚ್.ವಿ. ಮನೋಜ್ ಕುಮಾರ್ ಅವರನ್ನು ಆರೋಪಿಗಳು ಅಪಹರಿಸಿ ಹಣ ಸುಲಿಗೆ ಮಾಡಿದ್ದರು. ಈ ಸಂಬಂಧ ದಾಖಲಾದ ದೂರಿನ ಮೇರೆಗೆ ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

‘ಕಾರ್ಯಕ್ರಮಕ್ಕೆ ತೆರಳಿದ್ದ ವೇಳೆ ಉದ್ಯಮಿ ಮನೋಜ್ ಕುಮಾರ್ ಅವರಿಗೆ ಆರೋಪಿ ರಾಜೇಶ್ ಪರಿಚಯವಾಗಿದ್ದ. ಮನೋಜ್ ಅವರಿಂದ ₹1.20 ಲಕ್ಷ ಸಾಲ ಪಡೆದಿದ್ದ ರಾಜೇಶ್, ಆ ಹಣವನ್ನು ಸಿನಿಮಾ ನಿರ್ದೇಶಕರೊಬ್ಬರಿಗೆ ನೀಡಿದ್ದ. ಸಾಲ ವಾಪಸ್ ಕೊಡದಿದ್ದಾಗ ಮನೋಜ್ ಅವರು ಒತ್ತಡ ಹೇರಿದ್ದರು. ಆಗಸ್ಟ್ 26ರಂದು ಸಂಜೆ 6.30ಕ್ಕೆ ಹಣ ಕೊಡುವುದಾಗಿ ರಾಜಾಜಿನಗರದ ಮೋದಿ ಆಸ್ಪತ್ರೆ ಬಳಿಯ ವೃತ್ತಕ್ಕೆ ಮನೋಜ್ ಕುಮಾರ್ ಅವರನ್ನು ರಾಜೇಶ್ ಕರೆಸಿಕೊಂಡಿದ್ದ. ಬಳಿಕ ದೊಡ್ಡವರು ಹಣ ಕೊಡುತ್ತಾರೆಂದು ಹೇಳಿ, ಕಾರಿನಲ್ಲಿ ಕೂರಿಸಿಕೊಂಡು ಹೋಗಿದ್ದ. ಮಾರ್ಗ ಮಧ್ಯೆ ಮತ್ತೊಂದು ಕಾರಿನಲ್ಲಿ ಮನೋಜ್ ಕುಮಾರ್ ಅವರನ್ನು ಕೂರಿಸಿಕೊಂಡು ಆರೋಪಿಗಳು ಅಪಹರಿಸಿದ್ದರು’ ಎಂದು ಪೊಲೀಸರು ಹೇಳಿದರು.

ಹಣ ವರ್ಗಾವಣೆ

ನಗರದ ವಿವಿಧೆಡೆ ಸುತ್ತಾಡಿಸಿ ಬಳಿಕ ಚಾಕು ತೋರಿಸಿ ಬೆದರಿಸಿ ಮನೋಜ್ ಅವರ ಎರಡು ಖಾತೆಗಳಿಂದ ಒಟ್ಟು ₹2.96 ಲಕ್ಷ ವರ್ಗಾಯಿಸಿಕೊಂಡಿದ್ದರು. ಇನ್ನೂ ₹10 ಲಕ್ಷ ಕೊಡುವಂತೆ ಬೆದರಿಸಿದ್ದರು. ಎರಡು ದಿನ ಬಿಟ್ಟು ಹಣ ನೀಡುವುದಾಗಿ ಮನೋಜ್ ಭರವಸೆ ನೀಡಿದ್ದರಿಂದ, ಅವರನ್ನು ಜ್ಞಾನಭಾರತಿ ಕ್ಯಾಂಪಸ್ ಬಳಿ ಆರೋಪಿಗಳು ಬಿಟ್ಟು ಹೋಗಿದ್ದರು’ ಎಂದು ಸಿಸಿಬಿ ಪೊಲೀಸರು ಹೇಳಿದರು.

ಬಳಿಕ ಮನೋಜ್‌ಕುಮಾರ್ ಅವರು ಸಿಸಿಬಿ ಪೊಲೀಸರಿಗೆ ದೂರು ನೀಡಿದ್ದರು. ದೂರು ಆಧರಿಸಿ ವಿವಿಧೆಡೆ ಕಾರ್ಯಾಚರಣೆ ನಡೆಸಿ ಆರು ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮದ್ಯದ ಅಮಲಿನಲ್ಲಿ ವಿದ್ಯಾರ್ಥಿನಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ಅಮಲಿನಲ್ಲಿ ಯುವಕರ ಗುಂಪು ನಗರದ ಕಾಲೇಜುವೊಂದರ ವಿದ್ಯಾರ್ಥಿನಿ ಹಲ್ಲೆ ಮೇಲೆ ನಡೆಸಿದೆ.

ವಿದ್ಯಾರ್ಥಿನಿ ತ್ರಿಷಾ ಗೌಡ ನೀಡಿದ ದೂರು ಆಧರಿಸಿ ಅಲ್ಬಿನ್, ನವನೀತ್ ಮತ್ತು ಇತರರ ವಿರುದ್ಧ ಸೋಲದೇವನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಕಾಲೇಜಿನಲ್ಲಿ ಓಣಂ ಹಬ್ಬದ ಆಚರಣೆ ವೇಳೆ ಕುಸಿದು ಬಿದ್ದ ಸ್ನೇಹಿತೆಗೆ ಹಣ್ಣಿನ ರಸ ತರಲು ತ್ರಿಷಾ ಅವರು ಅಚ್ಯುತ್ ನಗರಕ್ಕೆ ಬಂದಿದ್ದ ವೇಳೆ ಮದ್ಯದ ಅಮಲಿನಲ್ಲಿದ್ದ ವಿದ್ಯಾರ್ಥಿಗಳ ಗುಂಪು, ಆಕೆಯನ್ನು ನಿಂದಿಸಿ, ರ‍್ಯಾಗಿಂಗ್ ಮಾಡಲು ಯತ್ನಿಸಿದೆ. ಇದನ್ನು ಪ್ರಶ್ನಿಸಿದ ವಿದ್ಯಾರ್ಥಿನಿ ಮೇಲೆ ಹಲ್ಲೆ ನಡೆಸಿದ್ದಾರೆ. ಅಲ್ಲದೇ ಸಹಾಯಕ್ಕೆ ಬಂದ ಆಕೆಯ ಸ್ನೇಹಿತರ ಮೇಲೂ ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ನಗರದ ಮಲ್ಲೇಶ್ವರದ ದಿ ಜನತಾ ಕೋಆಪರೇಟಿವ್ ಬ್ಯಾಂಕ್‌ನ 60ನೇ ವಾರ್ಷಿಕ ಸರ್ವಸದಸ್ಯರ ಸಭೆ ಸಿ.ಎಲ್. ಮರಿಗೌಡ ಅವರ ಅಧ್ಯಕ್ಷತೆಯಲ್ಲಿ ಈಚೆಗೆ ನಡೆಯಿತು. 2024–25ನೇ ಸಾಲಿಗೆ ₹17.54 ಕೋಟಿ ನಿವ್ವಳ ಲಾಭ ಹಾಗೂ ಸದಸ್ಯರಿಗೆ ಶೇಕಡ 12ರಷ್ಟು ಲಾಭಾಂಶವನ್ನು ಇದೇ ಸಂದರ್ಭದಲ್ಲಿ ಘೋಷಿಸಲಾಯಿತು

ಚಟಿಕೆ ಸುದ್ದಿ

ಎನ್‌ಎಚ್‌ಆರ್‌ಡಿಗೆ ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ನ್ಯಾಷನಲ್ ಎಚ್‌ಆರ್‌ಡಿ ನೆಟ್‌ವರ್ಕ್‌ನ ಬೆಂಗಳೂರು ಘಟಕಕ್ಕೆ ನಡೆದ ಚುನಾವಣೆಯಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಈಚೆಗೆ ನಡೆದ ವಾರ್ಷಿಕ ಸರ್ವ ಸದಸ್ಯರ ಸಭೆ ಹಾಗೂ ಚುನಾವಣೆಯಲ್ಲಿ 2025–2027ರ ಅವಧಿಗೆ ಅಧ್ಯಕ್ಷರಾಗಿ ಸ್ವಾತಿ ರುಸ್ತಗಿ ಮತ್ತು ಉಪಾಧ್ಯಕ್ಷರಾಗಿ ಕಸ್ತೂರಿ ಕೋತಾ ಆಯ್ಕೆಯಾಗಿದ್ದಾರೆ.

ಎಸ್‌.ಜೆ.ನಾಗನಗೌಡ (ಗೌರವ ಕಾರ್ಯದರ್ಶಿ), ಕೆ.ಎಸ್‌.ಮಾಲತಿ (ಖಜಾಂಚಿ), ಡಾ.ಅನುರಾಧ ಮಹೇಶ್ (ಜಂಟಿ ಕಾರ್ಯದರ್ಶಿ), ಲಲಿತಾ ಗೌಡ, ಮೌಮಿತಾ ಮಹಾಪಾತ್ರ, ಡಾ.ನಂದೀಶ್ ಹಿರೇಮಠ, ಸೋನು ಗುಪ್ತಾ (ಕಾರ್ಯಕಾರಿ ಸಮಿತಿ ಸದಸ್ಯರು).

5ಕ್ಕೆ ಅಂತರಿಕ್ಷ ಹೊಂಗಿರಣ

ಬೆಂಗಳೂರು: ಕುಂಭಮೇಳಕ್ಕೆ ತೆರಳಿದ್ದ ವೇಳೆ ಅಕಾಲಿಕ ಮರಣ ಹೊಂದಿದ ಮಗ ಅಂತರಿಕ್ಷ ನೆನಪಿನಲ್ಲಿ ಸೆಪ್ಟೆಂಬರ್ 5ರಂದು ‘ಅಂತರಿಕ್ಷ ಹೊಂಗಿರಣ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಂದೆ ವಾಸುಕಿ ಆಚಾರ್ಯ ತಿಳಿಸಿದ್ದಾರೆ.

ಬನಶಂಕರಿ ಎರಡನೇ ಹಂತದಲ್ಲಿರುವ ಶಾಸಕರ ಭವನದ ಆರ್‌.ಅಶೋಕ ಸಭಾಂಗಣದಲ್ಲಿ ಬೆಳಿಗ್ಗೆ 10ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ್, ಸಂಸದ ತೇಜಸ್ವಿ ಸೂರ್ಯ, ಲೇಖಕಿ ದೀಪಾ ಫಡ್ಕೆ, ಆರ್‌.ಕೆ.ಪದ್ಮನಾಭ ಭಾಗವಹಿಸಲಿದ್ದಾರೆ. ಇದೇ ವೇಳೆ ರಾಷ್ಟ್ರೀಯ ರಕ್ಷಣಾ ನಿಧಿ, ನೆಲೆ ಫೌಂಡೇಷನ್, ಶುಭಂಕರೋತಿ ಮೈತ್ರೇಯಿ ಗುರುಕುಲ, ಪತಂಜಲಿ ಯೋಗ ಶಿಕ್ಷಣ ಸಮಿತಿ, ಮಧ್ವಾದಿರಾಜ ಆರಾಧಾನಾ ಟ್ರಸ್ಟ್ (ಶಾರದಾ ಕಲಾ ಕೇಂದ್ರ), ನವಚೇತನಾ ಟ್ರಸ್ಟ್, ಕನ್ನಡ ಗಣಕ ಪ್ರತಿಷ್ಠಾನ, ವಿದ್ಯಾನಿಧಿ ಟ್ರಸ್ಟ್, ಸತ್ಯತೀರ್ಥ ಫೌಂಡೇಷನ್, ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಕನಕ ಪ್ರತಿಷ್ಠಾನ, ಯೋಗ ಶಿಕ್ಷಕ ಎಚ್‌.ಡಿ.ಚೇತನ್, ವಿದ್ಯಾರ್ಥಿನಿ ಮಾನ್ಯ, ಸುಬ್ರಹ್ಮಣ್ಯ, ನಾಗವೇಣಿ, ಹ್ಯುಮಾನಿಟಿ ರೈಡರ್ಸ್‌ಗೆ ಸಹಾಯಧನ ನೀಡಲಾಗುವುದು ಎಂದು ಶುಭಾ ವಾಸುಕಿ ತಿಳಿಸಿದ್ದಾರೆ.

ವಿಚಾರಸಂಕಿರಣ ಇಂದು

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಕೇಂದ್ರದಿಂದ ಇದೇ 3ರಂದು ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ವಿಕ್ಟರ್ ಹುಗೊ ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿದೆ.

ಫ್ರಾನ್ಸ್‌ನ ಕಾನ್ಸಲ್ ಜನರಲ್ ಮಾರ್ಕ್ ಲಾಮಿ, ಕುಲಪತಿ ಕೆ.ಆರ್‌. ಜಲಜಾ, ವಿದೇಶಿ ಭಾಷೆಗಳ ವಿಭಾಗದ ಸಂಸ್ಥಾಪಕಿ ಹಾಗೂ ಲೇಖಕಿ ಸುಮನ್ ವೆಂಕಟೇಶ್ ಅವರು ಪಾಲ್ಗೊಳ್ಳಲಿದ್ದಾರೆ.

ಅಪಘಾತ: ಹಿಂಬದಿ ಸವಾರ ಸಾವು

ಬೆಂಗಳೂರು: ಯಲಹಂಕ ಸಮೀಪದ ಬಾಗಲೂರು ಕ್ರಾಸ್‌ನ ಪಾಲನಹಳ್ಳಿ ಬಳಿ ಮಂಗಳವಾರ ಮಧ್ಯಾಹ್ನ ಸಂಭವಿಸಿದ ಅಪಘಾತದಲ್ಲಿ ಬೈಕ್‌ನ ಹಿಂಬದಿಯ ಸವಾರರೊಬ್ಬರು ಮೃತಪಟ್ಟಿದ್ದಾರೆ.

ಕಿರಣ್ ವರ್ಮಾ (32) ಮೃತಪಟ್ಟವರು.

ಕೆ.ವಿ. ಸುಬ್ಬರಾಜು ಹಾಗೂ ಕಿರಣ್ ವರ್ಮಾ ಅವರು ಹುಣಸಮಾರನಹಳ್ಳಿ ಕಡೆಯಿಂದ ಆರ್‌ಟಿ ನಗರದ ಕಡೆಗೆ ಸ್ಕೂಟಿಯಲ್ಲಿ ತೆರಳುತ್ತಿದ್ದರು. ಪಾಲನಹಳ್ಳಿ ಗೇಟ್ ಬಳಿ ರಸ್ತೆಗೆ ಅಡ್ಡಲಾಗಿ ಖಾಸಗಿ ಬಸ್‌ವೊಂದನ್ನು ನಿಲುಗಡೆ ಮಾಡಲಾಗಿತ್ತು. ಸ್ಕೂಟರ್ ನಿಯಂತ್ರಣ ತಪ್ಪಿ ಬಸ್‌ಗೆ ಡಿಕ್ಕಿ ಹೊಡೆದ ಪರಿಣಾಮ, ಬೈಕ್ ಸವಾರರಿಬ್ಬರು ರಸ್ತೆಯ ಮೇಲೆ ಬಿದ್ದಿದ್ದರು. ಅದೇ ವೇಳೆ ವೇಗವಾಗಿ ಬಂದ ಬೊಲೆರೊ ವಾಹನದ ಚಕ್ರಗಳು ಬೈಕ್ ಸವಾರರ ಮೇಲೆ ಹರಿದ ಪರಿಣಾಮ ಕಿರಣ್ ವರ್ಮಾ ಅವರು ಸ್ಥಳದಲ್ಲೇ ಮೃತಪಟ್ಟರು. ಸುಬ್ಬರಾಜು ಅವರು ಗಾಯಗೊಂಡಿದ್ದಾರೆ. ಅಪಘಾತದ ಬಳಿಕ ಚಾಲಕ ಬೊಲೆರೊ ವಾಹನವನ್ನು ನಿಲುಗಡೆ ಮಾಡದೇ ಪರಾರಿ ಆಗಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪುಷ್ಪ ಮಾರುಕಟ್ಟೆ: 942 ಮರಗಳ ಹನನ?

₹40 ಕೋಟಿ ವೆಚ್ಚದಲ್ಲಿ ಜಿಕೆವಿಕೆ ಆವರಣದಲ್ಲಿ ನಿರ್ಮಿಸಲು ಸಿದ್ಧತೆ

• ಖಲೀಲಅಹ್ಮದ ಶೇಖ

ಬೆಂಗಳೂರು: ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆವರಣದ ಐದು ಎಕರೆ ಜಾಗದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಅಂತರರಾಷ್ಟ್ರೀಯ ಪುಷ್ಪ ಮಾರುಕಟ್ಟೆ ನಿರ್ಮಿಸಲು ತೋಟಗಾರಿಕೆ ಇಲಾಖೆ ಸಿದ್ಧತೆ ನಡೆಸಿದೆ. ಇದಕ್ಕಾಗಿ 942 ಮರಗಳನ್ನು ಕಡಿಯುವ ಸಾಧ್ಯತೆ ಇದೆ.

ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಸೇರಿದ 125 ಎಕರೆ ಜಾಗ ಜಿಕೆವಿಕೆ ಆವರಣದಲ್ಲಿ ಇದೆ. ಈ ಪೈಕಿ ಐದು ಎಕರೆ ಜಾಗವನ್ನು ಅಂತರರಾಷ್ಟ್ರೀಯ ಪುಷ್ಪ ಮಾರುಕಟ್ಟೆ ನಿರ್ಮಿಸಲು ನೀಡುವಂತೆ ತೋಟಗಾರಿಕೆ ಇಲಾಖೆ ಪ್ರಸ್ತಾವ ಸಲ್ಲಿಸಿದೆ. ಆದರೆ, ಐದು ಎಕರೆ ಜಾಗದಲ್ಲಿ ಹಲಸು, ಗೋಡಂಬಿ, ಮಾವು ಮತ್ತು ತೆಂಗು ಸೇರಿದಂತೆ 942 ಮರಗಳಿದ್ದು, ವಾರ್ಷಿಕ ₹4.85 ಲಕ್ಷ ಆದಾಯ ಬರುತ್ತಿದೆ. ಇವುಗಳನ್ನು ಕಡಿಯದೇ ಹಾಗೆಯೇ ಉಳಿಸಿಕೊಳ್ಳಬೇಕು ಎಂದು ತೋಟಗಾರಿಕೆ ವಿಶ್ವವಿದ್ಯಾಲಯ ತಿಳಿಸಿದೆ.

ಮಾರುಕಟ್ಟೆ ಕಾರ್ಯಾರಂಭ ಮಾಡಿದ ನಂತರ ಬರುವ ಆದಾಯದಲ್ಲಿ ಶೇಕಡ 50ರಷ್ಟನ್ನು ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ನೀಡಬೇಕು. ರಸ್ತೆ, ಕಾಂಪೌಂಡ್ ಸೇರಿದಂತೆ ಸಿವಿಲ್ ಕಾಮಗಾರಿಗಳನ್ನು ಮಾಡಿಕೊಡಬೇಕು. ಈ ಬಗ್ಗೆ ವಿಶ್ವವಿದ್ಯಾಲಯದೊಂದಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ), ತೋಟಗಾರಿಕೆ ಇಲಾಖೆ ಒಪ್ಪಂದ ಮಾಡಿಕೊಳ್ಳಬೇಕು ಎಂಬ ಷರತ್ತುಗಳನ್ನು ವಿಧಿಸಿದೆ.

‘₹40 ಕೋಟಿ ವೆಚ್ಚದಲ್ಲಿ ಅಂತರರಾಷ್ಟ್ರೀಯ ಪುಷ್ಪ ಮಾರುಕಟ್ಟೆ ನಿರ್ಮಿಸಲಾಗುತ್ತಿದೆ. ಇದರಲ್ಲಿ 250 ರಿಂದ 300 ಮಳಿಗೆಗಳು, ಡಿಜಿಟಲ್ ಹರಾಜು ಸಭಾಂಗಣ, ಶೀತಲ ಗೃಹಗಳು, ವಾಹನ ನಿಲುಗಡೆ ವ್ಯವಸ್ಥೆ, ಪುಷ್ಪ ಬೆಳೆಗಳ ಕೊಯ್ಲೋತ್ತರ ನಿರ್ವಹಣೆ, ಹೂವು ಒಣಗಿಸುವ ತಂತ್ರಜ್ಞಾನ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಬೇಕಾಗಿದೆ’ ಎಂದು ಕೃಷಿ ಮಾರಾಟ ಇಲಾಖೆ ತಿಳಿಸಿದೆ.

‘ತೋಟಗಾರಿಕೆ ಮಹಾ ವಿದ್ಯಾಲಯದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಹೂವಿನ ಬೆಳೆ, ಮಾರಾಟ ಮಾಡುವ ಕುರಿತು ಮಾಹಿತಿ ಒದಗಿಸುವ ಕೇಂದ್ರ ಸ್ಥಾಪಿಸಲಾಗುತ್ತದೆ. ಇದು ಸಾರ್ವಜನಿಕರು, ರೈತರು, ಹಾಗೂ ಉದ್ಯಮಿಗಳಿಗೆ ಅನುಕೂಲವಾಗಲಿದೆ’ ಎಂದು ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿದೆ.

‘ಕೆ.ಆರ್‌. ಮಾರುಕಟ್ಟೆಯ ಹೂವಿನ ವರ್ತಕರನ್ನು ಜಿಕೆವಿಕೆಯಲ್ಲಿ ನಿರ್ಮಿಸುವ ಪುಷ್ಪ ಮಾರುಕಟ್ಟೆಗೆ ಸ್ಥಳಾಂತರಿಸುವುದು ಬೇಡ. ಇದರಿಂದ ನಮ್ಮ ವ್ಯಾಪಾರ–ವಹಿವಾಟಿಗೆ ಹೊಡೆತ ಬೀಳಲಿದೆ. ಇಲ್ಲಿ ಒಟ್ಟು 136 ಹೂವಿನ ಮಳಿಗೆಗಳಿದ್ದು, ಹೂವಿನ ಹಾರ ಮಾಡುವ 96 ಮಳಿಗೆಗಳಿವೆ’ ಎಂದು ಕೆ.ಆರ್‌. ಮಾರುಕಟ್ಟೆ ಹೂವಿನ ವರ್ತಕರ ಸಂಘದ ಅಧ್ಯಕ್ಷ ಎಸ್‌. ದಿವಾಕರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮರಗಳ ತಳಿ	ವಯಸ್ಸು	ಸಂಖ್ಯೆ
ಮಾವು	12	307
ಹಲಸು	9	50
ಸಿಲ್ವರ್ ಓಕ್	10	30
ಗೋಡಂಬಿ	10	292
ತೆಂಗು	8	58
ಇತರೆ	8	205
ಒಟ್ಟು		942

‘ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ’

‘ಎಸ್‌ಜೆಪಿ ರಸ್ತೆಯಲ್ಲಿ ಬೆಳಗಿನ ಜಾವ 2ರಿಂದ 7 ಗಂಟೆಯವರೆಗೆ ಕಟ್ ಫ್ಲವರ್ಸ್‌ನ ವ್ಯಾಪಾರ–ವಹಿವಾಟು ನಡೆಸುವ ಹೂವಿನ ವರ್ತಕರನ್ನು ಮಾತ್ರ ನೂತನ ಮಾರುಕಟ್ಟೆಗೆ ಸ್ಥಳಾಂತರಿಸಲಾಗುತ್ತಿದೆ. ಇದರಿಂದ ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ ಸಿಗಲಿದೆ. ವರ್ತಕರಿಗೆ ಶಾಶ್ವತ ನೆಲೆ ಕಲ್ಪಿಸಿದಂತಾಗುತ್ತದೆ’ ಎಂದು ತೋಟಗಾರಿಕೆ ಇಲಾಖೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಜಿಕೆವಿಕೆ ಆವರಣದಲ್ಲಿ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಜಮೀನಿನಲ್ಲಿ ಪುಷ್ಪ ಮಾರುಕಟ್ಟೆ ನಿರ್ಮಿಸುವ ಪ್ರಸ್ತಾವ ಇದೆ. ಈ ಬಗ್ಗೆ ತೋಟಗಾರಿಕೆ ಇಲಾಖೆ, ಕೃಷಿ ಮಾರಾಟ ಇಲಾಖೆ ಹಾಗೂ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ನಡುವೆ ಒಪ್ಪಂದ ಮಾಡಿಕೊಳ್ಳಬೇಕಿದೆ. ನಂತರ ಅಲ್ಲಿ ಎಷ್ಟು ಮರಗಳನ್ನು ಕಡಿಯಬೇಕು ಎಂಬ ಮಾಹಿತಿ ಸಿಗಲಿದೆ’ ಎಂದು ಕೃಷಿ ಮಾರಾಟ ಇಲಾಖೆ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.



270 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



ಸಮಾರಂಭದಲ್ಲಿ ವಿದ್ಯಾರ್ಥಿನಿಯೊಬ್ಬರಿಗೆ ಪದವಿ ಪ್ರದಾನ ಮಾಡಲಾಯಿತು. ಎ.ಸಿ. ಷಣ್ಮುಗಂ, ವಿನೋದ್ ಕುಮಾರ್, ಅಮೃತಾ ಪ್ರೇಮ್ ಭಾಗವಹಿಸಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸಿಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮಂಗಳವಾರ ನಡೆದ 13ನೇ ಪದವಿ ಪ್ರದಾನ ಸಮಾರಂಭದಲ್ಲಿ ವಿವಿಧ ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿಎಚ್‌.ಡಿ ಪಡೆದ 270 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಎಸಿಎಸ್ ಎಂಜಿನಿಯರಿಂಗ್ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಎ.ಸಿ. ಷಣ್ಮುಗಂ ಮಾತನಾಡಿ, ‘ಶಿಕ್ಷಣದ ಸದುಪಯೋಗ ಪಡೆದುಕೊಂಡು ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ವಿಯಾಗುವುದರ ಮೂಲಕ ಸಮಾಜಕ್ಕೆ ಕೊಡುಗೆ ನೀಡಬೇಕು. ಶಿಕ್ಷಣವೆಂಬುದು ವಿದ್ಯಾರ್ಥಿಗಳು ಉದ್ಯೋಗ ಪಡೆದುಕೊಳ್ಳಲು ಮತ್ತು ಉತ್ತಮ ಜೀವನ ರೂಪಿಸಿಕೊಳ್ಳಲು ಇರುವ ಒಂದು ಸಾಧನವಾಗಿದೆ. ಎಂಜಿನಿಯರಿಂಗ್ ಪದವಿ ಸಮಸ್ಯೆಗಳನ್ನು ಬಗೆಹರಿಸುವುದರ ಜೊತೆಗೆ ಸಮುದಾಯಕ್ಕೂ ಕೊಡುಗೆ ನೀಡುವಂತಾಗಬೇಕು ಎಂದು ಸಲಹೆ ನೀಡಿದರು.

ಬಾಹ್ಯಾಕಾಶ ಇಲಾಖೆಯ ನಿರ್ದೇಶಕ ವಿನೋದ್ ಕುಮಾರ್, ನಟಿ ಅಮೃತಾ ಪ್ರೇಮ್, ಕಾಲೇಜಿನ ಪ್ರಾಂಶುಪಾಲ ಆನಂದತೀರ್ಥ ಬಿ.ಗುಡಿ, ಎ.ಸಿ.ಎಸ್ ಅರುಣ್ ಕುಮಾರ್, ಲಲಿತಾ ಲಕ್ಷ್ಮಿ, ಎಸ್‌. ವಿಜಯಾನಂದ್, ನಿವೃತ್ತ ಐಎಎಸ್ ಅಧಿಕಾರಿ ಸಿ.ಎನ್‌. ಸೀತಾರಾಮ್ ಉಪಸ್ಥಿತರಿದ್ದರು.

‘ಯುರೋಪ್, ಏಷ್ಯಾದತ್ತ ಗಮನಹರಿಸಿ’

ಅಮೆರಿಕ ಹೇರಿರುವ ಶೇ 50ರಷ್ಟು ಸುಂಕದ ಹೊರೆ ಎದುರಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಿಂದ ರಫ್ತಾಗುವ ಉತ್ಪನ್ನಗಳ ಮೇಲೆ ಅಮೆರಿಕ ಹೇರಿರುವ ಶೇ 50ರಷ್ಟು ಸುಂಕದ ಹೊರೆಯ ಸವಾಲನ್ನು ಸಮರ್ಥವಾಗಿ ಎದುರಿಸಲು ಯೂರೋಪ್ ಹಾಗೂ ಏಷ್ಯಾದ ದೇಶಗಳತ್ತ ಉದ್ಯಮಿಗಳು ಗಮನ ಹರಿಸಬೇಕು ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಅಧ್ಯಕ್ಷ ಎಂ.ಜಿ.ಬಾಲಕೃಷ್ಣ ಸಲಹೆ ನೀಡಿದರು.

ಮಂಗಳವಾರ ಇಲ್ಲಿ ನಡೆದ ಎಫ್‌ಕೆಸಿಸಿಐನ ರಫ್ತು ಶ್ರೇಷ್ಠತಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ‘ಅಮೆರಿಕ ಮೇಲೆ ಅವಲಂಬನೆ ಆಗುವುದನ್ನು ತಪ್ಪಿಸಲು ಉದ್ಯಮಿಗಳು ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬೇಕು. ಯುಎಇ, ಆಸ್ಟ್ರೇಲಿಯಾ, ಜಪಾನ್‌ನಂತಹ ಪ್ರಮುಖ ದೇಶಗಳ ಜತೆಗೆ ರಫ್ತು ಒಪ್ಪಂದ ಮಾಡಿಕೊಳ್ಳಬೇಕು’ ಎಂದರು.

ಅದರಲ್ಲೂ ಯೂರೋಪ್‌ನ ದೇಶಗಳೊಂದಿಗೆ ಸಿಇ ಪ್ರಮಾಣ ಪತ್ರ, ಸುಸ್ಥಿರತೆ ಲೇಬಲ್‌ಗಳು, ಗುಣಮಟ್ಟ ಬೆಂಚ್‌ಮಾರ್ಕ್‌ಗಳನ್ನು ಪಡೆದುಕೊಂಡು ಸ್ಥಳೀಯ ಹಂತದಲ್ಲೂ ಸಹಭಾಗಿತ್ವವನ್ನು ವಿಸ್ತರಿಸಿ. ಆ ದೇಶಗಳಲ್ಲಿ ನಡೆಯುವ ಉದ್ಯಮ ಮೇಳಗಳಲ್ಲೂ ಭಾಗವಹಿಸಿ ಎಂದು ಸೂಚಿಸಿದರು.

ವಿಯೆಟ್ನಾಂ, ಇಂಡೋನೇಷ್ಯಾ, ದಕ್ಷಿಣ ಕೊರಿಯಾ ಕೂಡ ಪರ್ಯಾಯ ಆಯ್ಕೆಗಳಾಗಿವೆ. ಚೀನಾ ರೂಪಿಸಿರುವ +1 ರಣನೀತಿಯನ್ನು ಭಾರತ ಅನುಸರಿಸುವುದು ಒಳ್ಳೆಯದು. ಇದರಿಂದ ಭಾರತದ ರಫ್ತು ಪರಂಪರೆಯನ್ನು ಬಲಪಡಿಸಲು ಸಹಕಾರಿಯಾಗಲಿದೆ ಎಂದರು.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಎಂಜಿನಿಯರಿಂಗ್ ವಲಯದ ರಫ್ತು ಪ್ರಮಾಣ ಹೆಚ್ಚಬೇಕು. ನಾವೀನ್ಯತೆ ಜತೆಗೆ ದೇಶಿಯವಾಗಿಯೂ ಮೌಲ್ಯ ಹೆಚ್ಚಿಸಲು ಗಮನ ನೀಡಬೇಕು. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಕೆಗೂ ಒತ್ತು ನೀಡುವುದು ಸೂಕ್ತ ಎಂದು ಅವರು ತಿಳಿಸಿದರು.



ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಮಂಗಳವಾರ ಬೆಂಗಳೂರಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ರಫ್ತು ಶ್ರೇಷ್ಠತಾ’ ಪ್ರಶಸ್ತಿ' ಯನ್ನು ಉದ್ಯಮಿಗಳಿಗೆ ಪ್ರದಾನ ಮಾಡಲಾಯಿತು –ಪ್ರಜಾವಾಣಿ ಚಿತ್ರ

ಕೇಂದ್ರ ಪ್ರೋತ್ಸಾಹಕ ಯೋಜನೆ ಘೋಷಿಸಲಿ: ರಾಮಲಿಂಗಾರೆಡ್ಡಿ

ಅಮೆರಿಕ ಹೇರಿರುವ ಸುಂಕದ ಹೊರೆ ತಪ್ಪಿಸಲು ಕೇಂದ್ರ ಸರ್ಕಾರವು ಪ್ರೋತ್ಸಾಹಕ ಯೋಜನೆಗಳನ್ನು ಘೋಷಿಸಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತದ ರಫ್ತು ಯಶಸ್ಸಿಗೆ ಕರ್ನಾಟಕದ ಕೊಡುಗೆ ಬಹಳಷ್ಟಿದೆ. ಐಟಿ, ಏರೋಸ್ಪೇಸ್, ಜೈವಿಕ ತಂತ್ರಜ್ಞಾನ, ಕಾಫಿ, ಜವಳಿ ಮತ್ತು ಉತ್ಪಾದನಾ ವಲಯಗಳಿಗೆ ಸಂಬಂಧಿಸಿ ರಫ್ತಿನಲ್ಲಿ ಕರ್ನಾಟಕವು ಅಗ್ರಸ್ಥಾನದಲ್ಲಿದೆ ಎಂದು ಹೇಳಿದರು.

ಕಂಪನಿಗಳಿಗೆ ಪ್ರಶಸ್ತಿ: 40 ರಫ್ತು ಕಂಪನಿಗಳಿಗೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟದ ರಫ್ತು ಶ್ರೇಷ್ಠತಾ ಪ್ರಶಸ್ತಿಯನ್ನು ರಾಮಲಿಂಗಾರೆಡ್ಡಿ ಪ್ರದಾನ ಮಾಡಿದರು. ಬೆಂಗಳೂರು, ಕರ್ನಾಟಕದ ವಿವಿಧ ವಲಯಗಳ ಉದ್ಯಮಿಗಳು ಚಿನ್ನ, ಬೆಳ್ಳಿ ವಿಭಾಗದಡಿ ಪ್ರಶಸ್ತಿಗಳನ್ನು ಸ್ವೀಕರಿಸಿದರು.

ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ಮುಂದಿನ ಅಧ್ಯಕ್ಷರಾದ ಉಮಾರೆಡ್ಡಿ, ಹಿರಿಯ ಉಪಾಧ್ಯಕ್ಷ ಟಿ. ಸಾಯಿರಾಮ್ ಪ್ರಸಾದ್, ನಿಕಟಪೂರ್ವ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಮತ್ತು ಪ್ರಶಸ್ತಿ ಸಮಿತಿಯ ಅಧ್ಯಕ್ಷ ತಿಪ್ಪೇಶಪ್ಪ ಇದ್ದರು.

ಮೂಳೆ ಕ್ಯಾನ್ಸರ್: ಕಾಲು ತೆಗೆಯದೆ ಮಗುವಿಗೆ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರೂಪದ ‘ಆಸ್ಟಿಯೊಸಾರ್ಕೊಮಾ’ ಎಂಬ ಮೂಳೆ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಐದು ವರ್ಷದ ಮಗುವಿಗೆ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆ ವೈದ್ಯರು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

‘ರೊಟೇಶನ್‌ಪ್ಲಾಸ್ಟಿ’ ಎಂಬ ಶಸ್ತ್ರಚಿಕಿತ್ಸೆ ವಿಧಾನ ಅನುಸರಿಸಲಾಗಿದೆ. ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಗೆ ಬರುವ ಮೊದಲು ಈ ಮಗು ಕಿಮೋಥೆರಪಿಗೆ ಒಳಗಾಗಿತ್ತು. ವಿವಿಧ ಆಸ್ಪತ್ರೆಗಳು ‘ಹಿಪ್ ಡಿಸ್‌ಆರ್ಟಿಕುಲೇಷನ್’ ಎಂಬ ಸಂಕೀರ್ಣ ಶಸ್ತ್ರಚಿಕಿತ್ಸೆಗೆ ಶಿಫಾರಸು ಮಾಡಿದ್ದವು. ಈ ಶಸ್ತ್ರಚಿಕಿತ್ಸೆ ವಿಧಾನದಲ್ಲಿ ರೋಗಿಯ ಕ್ಯಾನ್ಸರ್ ಬಾಧಿತ ಕಾಲನ್ನು ಸಂಪೂರ್ಣ ತೆಗೆಯಲಾಗುತ್ತದೆ. ಇದರಿಂದ ಅಂಗವಿಕಲವಾಗುವ ಜತೆಗೆ, ಸೊಂಟಕ್ಕೆ ಕೃತಕ ಕಾಲನ್ನು ಅಳವಡಿಸಬೇಕಾಗುತ್ತದೆ. ಆದ್ದರಿಂದ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆ ವೈದ್ಯರು ‘ರೊಟೇಶನ್‌ಪ್ಲಾಸ್ಟಿ’ ಶಸ್ತ್ರಚಿಕಿತ್ಸೆ ವಿಧಾನ ಅನುಸರಿಸಿದರು ಎಂದು ಆಸ್ಪತ್ರೆ ತಿಳಿಸಿದೆ.

‘ಈ ಶಸ್ತ್ರಚಿಕಿತ್ಸೆ ಸಂಕೀರ್ಣವಾಗಿದ್ದು, ತೊಡೆಯ ಭಾಗ ಮತ್ತು ಮಂಡಿಯನ್ನು ಈ ವಿಧಾನದಲ್ಲಿ ಉಳಿಸಿಕೊಳ್ಳಬಹುದಾಗಿದೆ. ಮಂಡಿ ಕೆಳಗಿನ ಭಾಗಕ್ಕೆ ಮಾತ್ರ ಕೃತಕ ಅಂಗಾಂಶ ಜೋಡಿಸುವ ಅಗತ್ಯವಿರುತ್ತದೆ. ಸುಮಾರು 8 ಗಂಟೆ ನಡೆದ ಈ ಶಸ್ತ್ರಚಿಕಿತ್ಸೆಯಿಂದ ಮಗುವಿನ ಸೊಂಟ ಮತ್ತು ಮಂಡಿಯನ್ನು ಉಳಿಸಲು ಸಾಧ್ಯವಾಯಿತು’ ಎಂದು ಆಸ್ಪತ್ರೆಯ ಹಿರಿಯ ಸಲಹೆಗಾರ ಡಾ. ಸುಮನ್ ಬೈರೇಗೌಡ ಹೇಳಿದ್ದಾರೆ.

ನೀರಿನ ಅದಾಲತ್ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿಯು ಸೆ.4 ರಂದು ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಂಡಿದೆ.

ಕುಂದು ಕೊರತೆ ದೂರುಗಳನ್ನು ಸಹಾಯವಾಣಿ 1916, ವಾಟ್ಸ್‌ಆಪ್ ಸಂಖ್ಯೆ 8762228888 ಮೂಲಕ ಸಲ್ಲಿಸಬಹುದು.

ಕೆಐಎಡಿಬಿ ನೋಟಿಸ್: 6ಕ್ಕೆ ಜಮೀನು ದರ ನಿಗದಿ ಸಭೆ • ತಾಲ್ಲೂಕು ಕಚೇರಿಗೆ ಮುತ್ತಿಗೆ

ಭೂ ಸ್ವಾಧೀನ: ಚನ್ನರಾಯಪಟ್ಟಣ ರೈತರಲ್ಲಿ ಗೊಂದಲ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಸಾವಿರಕ್ಕೂ ಹೆಚ್ಚು ದಿನ ರೈತರು ನಡೆಸಿದ ಹೋರಾಟಕ್ಕೆ ಮಣಿದ ಸರ್ಕಾರವು ಭೂಸ್ವಾಧೀನದಿಂದ ಹಿಂದೆ ಸರಿದಿರುವುದಾಗಿ ಘೋಷಿಸಿದ ಬಳಿಕವೂ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ), ಚನ್ನರಾಯಪಟ್ಟಣ ರೈತರಿಗೆ ಜಮೀನು ದರ ನಿಗದಿ ನೋಟಿಸ್ ಜಾರಿಗೊಳಿಸಿದೆ.

ಕೆಐಎಡಿಬಿ ಕೇಂದ್ರ ಕಚೇರಿಯ ವಿಶೇಷ ಭೂಸ್ವಾಧೀನ ಅಧಿಕಾರಿ ಆ.29 ರಂದು ಚನ್ನರಾಯಪಟ್ಟಣ ಹೋಬಳಿಯ ಹ್ಯಾಡಾಳ ಮತ್ತು ಗೋಕರೆ ಬಚ್ಚೇನಹಳ್ಳಿ ರೈತರಿಗೆ ಜಮೀನು ದರ ನಿಗದಿ ನೋಟಿಸ್ ಜಾರಿಗೊಳಿಸಿದ್ದಾರೆ. ಇದು ರೈತರಿಗೆ ಆತಂಕ ಮೂಡಿಸುವ ಜೊತೆಗೆ ಗೊಂದಲಕ್ಕೂ ಕಾರಣವಾಗಿದೆ.

ಕೆಐಎಡಿಬಿ ಜಾರಿ ಮಾಡಿರುವ ನೋಟಿಸ್ ಹಿಂಪಡೆಯುವಂತೆ ಒತ್ತಾಯಿಸಿ ಚನ್ನರಾಯಪಟ್ಟಣ ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿ ಸದಸ್ಯರು ಹಾಗೂ ರೈತರು ಸೋಮವಾರ ದೇವನಹಳ್ಳಿ ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿ, ಪ್ರತಿಭಟಿಸಿದರು. ದೇವನಹಳ್ಳಿ ತಹಶೀಲ್ದಾರ್ ಅನಿಲ್ ಅವರಿಗೆ ಪ್ರತಿಭಟನಾ ಪತ್ರ ಸಲ್ಲಿಸಿದರು.

ರೈತರ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 15ರಂದು ರೈತರೊಂದಿಗೆ ನಡೆಸಿದ ಸಭೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ಕೈಬಿಟ್ಟಿರುವುದಾಗಿ ಘೋಷಿಸಿದ್ದರು. ಈ ಬಗ್ಗೆ ಆ.15ರಂದು ಪತ್ರಿಕೆಗಳಿಗೆ ಜಾಹೀರಾತು ಕೂಡ ನೀಡಿದ್ದರು. ಆದರೆ, ಕೆಐಎಡಿಬಿ ಅಧಿಕಾರಿಗಳು ವ್ಯತಿರಿಕ್ತವಾಗಿ ನಡೆದು ಕೊಳ್ಳುತ್ತಿದ್ದಾರೆಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

‘ರೈತರ ಭೂಮಿಯನ್ನು ರೈತರಿಗೆ ಉಳಿಸಿದ್ದೇವೆ’ ಎಂದು ಸರ್ಕಾರ ಜಾಹೀರಾತು ನೀಡಿ 15 ದಿನ ಕಳೆಯುವುದರ ಒಳಗೆ ರೈತರಿಗೆ ದರ ನಿಗದಿಗಾಗಿ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ. ನೋಟಿಸ್ ನೀಡಿರುವುದು ರೈತರಲ್ಲಿ ಆತಂಕ, ಗೊಂದಲಕ್ಕೂ ಕಾರಣವಾಗಿದೆ ಎಂದರು.

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 1,777 ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಕೆಐಎಡಿಬಿ ಭೂಸ್ವಾಧೀನ ಪ್ರಕ್ರಿಯೆಯಿಂದ ಬಿಡಿಸಿಕೊಳ್ಳಲು 13 ಹಳ್ಳಿಗಳು ರೈತರು ನಿರಂತರವಾಗಿ ಮೂರೂವರೆ ವರ್ಷ ಹೋರಾಟ ಮಾಡಿದ್ದೇವೆ ಎಂದರು.

ಭೂಸ್ವಾಧೀನ ಕೈಬಿಟ್ಟಿದ್ದೇವೆ ಎಂದು ಮುಖ್ಯಮಂತ್ರಿ ಘೋಷಿಸಿದ ಬಳಿಕವೂ ನೀವು ನೋಟಿಸ್ ಕೊಟ್ಟಿರುವುದು ಸರಿಯಲ್ಲ. ಈ ಕೂಡಲೇ ಆದೇಶ ವಾಪಸ್ ಪಡೆಯಬೇಕು. ನಕಲಿ ಸಹಿ ಮಾಡಿ, ಭೂಮಿ ಕೊಡಲು ರೈತರ ಒಪ್ಪಿಗೆ ಇದೆ ಎಂದು ಪತ್ರ ಕೊಟ್ಟಿರುವವರ ವಿರುದ್ಧ ಎಫ್‌ಐಆರ್ ದಾಖಲಿಸಿ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಟಿ.ಯಶವಂತ್ ಆಗ್ರಹಿಸಿದರು.



ಚನ್ನರಾಯಪಟ್ಟಣ ಹೋಬಳಿಯ ಹ್ಯಾಡಾಳ ಮತ್ತು ಗೋಕರೆ ಬಚ್ಚೇನಹಳ್ಳಿ ರೈತರಿಗೆ ಕೆಐಎಡಿಬಿ ದರ ನಿಗದಿ ನೋಟಿಸ್ ಜಾರಿಗೊಳಿಸಿರುವುದನ್ನು ವಿರೋಧಿಸಿ ದೇವನಹಳ್ಳಿಯ ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿದ ಪ್ರತಿಭಟನಕಾರರು ತಹಶೀಲ್ದಾರ್ ಅನಿಲ್ ಅವರಿಗೆ ಮನವಿ ಪತ್ರ ಸಲ್ಲಿಸಿದರು

ಸಚಿವರ ಜೊತೆ ಚರ್ಚೆ: ಕೆಐಎಡಿಬಿ ಸಿಇಒ

‘ಸೆ.6 ರಂದು ದರ ನಿಗದಿ ಸಭೆಗೆ ಆಗಮಿಸುವಂತೆ ಹ್ಯಾಡಾಳ ಮತ್ತು ಗೋಕರೆ ಬಚ್ಚೇನಹಳ್ಳಿ ಗ್ರಾಮಗಳ ರೈತರಿಗೆ ಕೆಐಎಡಿಬಿ ನೋಟಿಸ್ ಜಾರಿಗೊಳಿಸಿದೆ. ಇದಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ. ದರ ನಿಗದಿ ಸಭೆ ರದ್ದುಗೊಳಿಸುವ ಬೇಡಿಕೆ ಮುಂದಿಟ್ಟಿದ್ದಾರೆ. ಇದನ್ನು ಸಚಿವರ ಗಮನಕ್ಕೆ ತರುತ್ತೇನೆ’ ಎಂದು ಕೆಐಎಡಿಬಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಮಹೇಶ್ ಭರವಸೆ ನೀಡಿದ್ದಾರೆ.

ನಗರದಲ್ಲಿ ಇಂದು

ರಾಜ್ಯ ಮಟ್ಟದ ಚರ್ಚಾ ಮತ್ತು ಭಾಷಣ ಸ್ಪರ್ಧೆಯ ಫೈನಲ್ಸ್: ಆಯೋಜನೆ: ವರ್ಬ್ಯಾಟಲ್ ಕರ್ನಾಟಕ, ಸ್ಥಳ: ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 10ರಿಂದ


‘ಭಾರತದ ಮೂವರು ಮಹಾನ್ ಮಹಿಳಾ ಯೋಧರು’ ಉಪನ್ಯಾಸ: ಉದ್ಘಾಟನೆ: ಗುಂಟಾ ಲಕ್ಷ್ಮಣ, ಸಂಪನ್ಮೂಲ ವ್ಯಕ್ತಿ: ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಪ್ರಾಸ್ತಾವಿಕ ನುಡಿ: ತಿಪ್ಪೇಸ್ವಾಮಿ ಎನ್‌.ಎ., ಅತಿಥಿಗಳು: ಛಲವಾದಿ ನಾರಾಯಣಸ್ವಾಮಿ, ಕೆ. ಲತಾ ನರಸಿಂಹಮೂರ್ತಿ, ನಿರ್ಮಲಾ ಕೆ., ಅಧ್ಯಕ್ಷತೆ: ರಾಗಿಣಿ ಎನ್‌., ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಎಚ್‌ಎಸ್‌ಆರ್ ಲೇಔಟ್, ಬೆಳಿಗ್ಗೆ 11

ಸಂತಾನ ಸಾಫಲ್ಯ ಚಿಕಿತ್ಸೆಯಲ್ಲಿ 50 ವರ್ಷಗಳು: ಅತಿಥಿಗಳು: ದಿನೇಶ್ ಗುಂಡೂರಾವ್, ರವಿ ಸುಬ್ರಮಣ್ಯ, ಡಾ. ದೇವಿಕಾ ಗುಣಶೀಲ, ಡಾ. ರಾಜಶೇಖರ ನಾಯಕ್, ಆಯೋಜನೆ ಮತ್ತು ಸ್ಥಳ: ಗುಣಶೀಲ ಸರ್ಜಿಕಲ್ ಮತ್ತು ಮೆಟರ್ನಿಟಿ ಆಸ್ಪತ್ರೆ, ಬಸವನಗುಡಿ, ಬೆಳಿಗ್ಗೆ 11.30

ಐತಿಹಾಸಿಕ ನೆಲೆ ಹಿರೇಬೆಣಕಲ್‌ನ ಛಾಯಾಚಿತ್ರ ಪ್ರದರ್ಶನದ ಉದ್ಘಾಟನೆ: ಎಚ್‌.ಕೆ. ಪಾಟೀಲ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ, ಸ್ಥಳ: ವೆಂಕಟಪ್ಪ ಚಿತ್ರಶಾಲೆ, ಕಸ್ತೂರಬಾ ರಸ್ತೆ, ಸಂಜೆ 6

ಪ್ರವಚನ ವಾಹಿನಿ: ‘ವಾಮನ–ತ್ರಿವಿಕ್ರಮನ ಕಥೆ’ ಉಪನ್ಯಾಸ: ಗುರುಪ್ರಸಾದ್ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಒಂಬತ್ತನೇ ಬಡಾವಣೆ, ಜಯನಗರ, ಸಂಜೆ 6.30

‘ಜಾನಪದ ಅಧ್ಯಯನ–ಹೊಸ ಸಾಧ್ಯತೆಗಳು’ ರಾಷ್ಟ್ರೀಯ ವಿಚಾರಸಂಕಿರಣ, ಲೋಕ ಜಾನಪದ ತ್ರೈಮಾಸಿಕ ಪತ್ರಿಕೆ ಬಿಡುಗಡೆ, ಸಂವಾದ, ಕಲಾ ಪ್ರದರ್ಶನ: ಉದ್ಘಾಟನೆ: ರಹಮತ್ ತರೀಕೆರೆ, ಲೋಕ ಜಾನಪದ ಸಂಚಿಕೆ ಬಿಡುಗಡೆ: ರವೀಂದ್ರ ಭಂಡಾರಿ, ಜಿತೇಂದ್ರ ಕುಮಾರ್ ಮಿಶ್ರಾ, ದಿನೇಶ್ ನೀಲಕಂಠ್, ಅಧ್ಯಕ್ಷತೆ: ಗೊಲ್ಲಹಳ್ಳಿ ಶಿವಪ್ರಸಾದ್, ಪ್ರಾಸ್ತಾವಿಕ ನುಡಿ: ಮಲ್ಲಿಕಾರ್ಜುನ ಕಲಮರಹಳ್ಳಿ, ಹುಲಿಕುಂಟೆ ಮೂರ್ತಿ, ‘ಜಾನಪದ–ಸಬಾಲ್ಟ್ರನ್ ಅಧ್ಯಯನ’ ಮಂಡನೆ: ಸಿ.ಜಿ. ಲಕ್ಷ್ಮೀಪತಿ, ‘ಜನಪದ ಪ್ರದರ್ಶನ ಕಲಾ ಪರಂಪರೆಗಳು ಮತ್ತು ವರ್ತಮಾನ’ ಮಂಡನೆ: ವಡ್ಡಗೆರೆ ನಾಗರಾಜಯ್ಯ, ಅಧ್ಯಕ್ಷತೆ: ಎಂ.ಕೆ. ಶ್ರೀಧರ್, ಆಯೋಜನೆ: ಕರ್ನಾಟಕ ಜಾನಪದ ಅಕಾಡೆಮಿ, ಜೈನ್ ವಿಶ್ವವಿದ್ಯಾಲಯದ ಕನ್ನಡ ಭಾಷಾ ವಿಭಾಗ, ಸ್ಥಳ: ಜೆ.ಜಿ.ಐ ನಾಲೆಡ್ಜ್ ಕ್ಯಾಂಪಸ್, ಎರಡನೇ ಮಹಡಿ, ಸಭಾಭವನ–3, ಒಂಬತ್ತನೇಯ ಬಡಾವಣೆ, ಜಯನಗರ, ಮಧ್ಯಾಹ್ನ 12ರಿಂದ



ರಹಮತ್ ತರೀಕೆರೆ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ..
nagaradalli_indu@prajavani.co.in



ಕೋಲ್ಕತ್ತ ರೇಸ್

ಶೈನ್ ಗೆಲ್ಲುವ ನಿರೀಕ್ಷೆ

ಕೋಲ್ಕತ್ತ ಫಿಲ್ಲೀಸ್ ಟ್ರಯಲ್ ಸ್ಟೇಕ್ಸ್ ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಶೈನ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:45ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗ್ಲೋಬಲ್ ವಿಷನ್ 2, ಆರ್ಟೆಮಿಸ್ ಜೆಲ್ಡಾ 4, ಜಸ್ಟ್ ಡ್ಯಾಶ್ 3

2ನೇ ರೇಸ್: ಗಾಲ್ವೆ ಗರ್ಲ್ 4, ಅರೆಬೆಸ್ಕ 3, ಗುಡ್ ಡೀಡ್ಸ್ 1

3ನೇ ರೇಸ್: ಸಟಿವರ್ 3, ಸ್ಟಾರ್ಮಿ ಓಷನ್ 4, ಚಾಪಿನ್ 1

4ನೇ ರೇಸ್: ಇಂಡಿಯನ್ ಜ್ಯಾಕ್ 4, ಜಾಂಬೇಜಿ 1, ಡ್ಯಾನ್ಸಿಂಗ್ ಕ್ವೀನ್ 8

5ನೇ ರೇಸ್: ಶೈನ್ 8, ಮೊರಾನೊ 5, ಎಲಿಯೊನೊರ 11

6ನೇ ರೇಸ್: ಸಬರ್ 5, ಓಷಿಕ 4, ಟ್ರೆಸ್ ಬೀನ್ 1

7ನೇ ರೇಸ್: ಎನ್‌ಆರ್‌ಐ ಫ್ಯಾಂಟಸಿ 9, ಟ್ರಿಲಿಯನೇರ್ 4, ಕೀಟಾರೊ 7

ಉತ್ತಮ ಬೆಟ್: ಗ್ಲೋಬಲ್ ವಿಷನ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸರ್ಕಾರಿ ಆಸ್ಪತ್ರೆಗಳಲ್ಲಿ ಪೌಷ್ಟಿಕ ಆಹಾರ

ಇಸ್ಕಾನ್‌ನೊಂದಿಗೆ ಆರೋಗ್ಯ ಇಲಾಖೆ ಒಪ್ಪಂದ • ಸಚಿವರಿಂದ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ವಿಶೇಷ ಪೌಷ್ಟಿಕ ಆಹಾರ ವಿತರಿಸುವ ಸಂಬಂಧ ಆರೋಗ್ಯ ಇಲಾಖೆಯು ಇಸ್ಕಾನ್ ಜತೆಗೆ ಒಪ್ಪಂದ ಮಾಡಿಕೊಂಡಿದ್ದು, ಕೆ.ಸಿ. ಜನರಲ್ ಆಸ್ಪತ್ರೆ, ಜಯನಗರ ಸಾರ್ವಜನಿಕ ಆಸ್ಪತ್ರೆ ಹಾಗೂ ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಪೌಷ್ಟಿಕ ಆಹಾರ ವಿತರಣೆಗೆ ಮಂಗಳವಾರ ಚಾಲನೆ ನೀಡಲಾಯಿತು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಆಹಾರ ವಿತರಿಸುವ ಮೂಲಕ, 'ಸರ್ಕಾರಿ ಆಸ್ಪತ್ರೆಗಳಲ್ಲಿ ಪೌಷ್ಟಿಕ ಆಹಾರ' ಯೋಜನೆಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, 'ಒಂದೇ ರೀತಿಯ ಸಾಮಾನ್ಯ ಆಹಾರದ ಬದಲು, ರೋಗಿಗಳಿಗೆ ಅಗತ್ಯ ಪೌಷ್ಟಿಕಾಂಶ ಒದಗಿಸುವ ಆಹಾರವನ್ನು ನೀಡುವುದು ಈ ಯೋಜನೆಯ ಉದ್ದೇಶವಾಗಿದೆ. ರೋಗಿಗಳ ಚೇತರಿಕೆಗೆ ಚಿಕಿತ್ಸೆಯ ಜತೆಗೆ ಪೌಷ್ಟಿಕ ಆಹಾರ ಸೇವನೆ ಕೂಡ ಮಹತ್ವದ ಪಾತ್ರ ವಹಿಸಲಿದೆ. ಈ ಯೋಜನೆಯ ಮೂಲಕ ರೋಗಿಗಳಿಗೆ ನಿರ್ದಿಷ್ಟ ಪೌಷ್ಟಿಕಾಂಶದ ಅಗತ್ಯಗಳನ್ನು ಪೂರೈಸುವ ಆಹಾರ ಒದಗಿಸಲಾಗುವುದು' ಎಂದು ಹೇಳಿದರು.

'ರೋಗಿಗಳ ಆರೋಗ್ಯ ಸ್ಥಿತಿ ಮತ್ತು ವಯಸ್ಸಿಗೆ ಅನುಗುಣವಾಗಿ ಪೌಷ್ಟಿಕಾಂಶದ ಅಗತ್ಯಗಳು ಭಿನ್ನವಾಗಿರುವುದರಿಂದ, ಎಲ್ಲರಿಗೂ ಒಂದೇ ರೀತಿಯ ಆಹಾರ ಸೂಕ್ತವಲ್ಲ. ಆಹಾರ ಪದ್ಧತಿಯನ್ನು ಸಂಪೂರ್ಣವಾಗಿ ಪರಿಷ್ಕರಿಸಲಾಗಿದ್ದು, ರೋಗಿಗಳ ವೈದ್ಯಕೀಯ ಅಗತ್ಯಗಳ ಆಧಾರದ ಮೇಲೆ ಆಹಾರವನ್ನು ವಿಂಗಡಿಸಲಾಗಿದೆ' ಎಂದರು.

ಜಿಲ್ಲಾಸ್ಪತ್ರೆಗಳಿಗೆ ವಿಸ್ತರಣೆ: 'ಮೊದಲ ಹಂತದಲ್ಲಿ ಕೆ.ಸಿ. ಜನರಲ್ ಆಸ್ಪತ್ರೆ, ಜಯನಗರ ಸಾರ್ವಜನಿಕ ಆಸ್ಪತ್ರೆ ಹಾಗೂ ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳಿಗೆ ವಿಶೇಷ ಪೌಷ್ಟಿಕ ಆಹಾರವನ್ನು ಪ್ರತಿನಿತ್ಯ ಒದಗಿಸಲಾಗುವುದು. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲ ಸರ್ಕಾರಿ ಜಿಲ್ಲಾಸ್ಪತ್ರೆಗಳಿಗೆ ಪೌಷ್ಟಿಕ ಆಹಾರ ವಿತರಿಸುವ ಯೋಜನೆಯನ್ನು ಜಾರಿಗೆ ತರಲಾಗುವುದು' ಎಂದು ದಿನೇಶ್ ಗುಂಡೂರಾವ್ ಹೇಳಿದರು.

'ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳು ರೋಗನಿರೋಧಕ ಶಕ್ತಿ ಹಾಗೂ ಸೂಕ್ತ ಬೆಳವಣಿಗೆಗೆ ವಿಶೇಷ ಪೌಷ್ಟಿಕಾಂಶಗಳನ್ನು ಪಡೆಯುವುದು ಬಹಳ ಮುಖ್ಯ. ಈ ಯೋಜನೆಯು ಇಂತಹವರ ಅಗತ್ಯಗಳಿಗೆ ಆದ್ಯತೆ ನೀಡಿದೆ' ಎಂದರು.

ಆರೋಗ್ಯ ಇಲಾಖೆ ಆಯುಕ್ತ ಶಿವಕುಮಾರ್ ಕೆ.ಬಿ. ಹಾಗೂ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.

'ಉಪಾಹಾರ, ಊಟ'

'ಇಸ್ಕಾನ್ ಜತೆಗಿನ ಒಪ್ಪಂದದ ಪ್ರಕಾರ, ಪ್ರತಿ ಆಸ್ಪತ್ರೆಗೆ ಸುಮಾರು 250 ರೋಗಿಗಳಿಗೆ ಪ್ರತಿ ದಿನ ಆಹಾರ ಸರಬರಾಜು ಮಾಡಲಾಗುತ್ತದೆ. ಇದಕ್ಕಾಗಿ 9 ತಿಂಗಳ ಅವಧಿಗೆ ₹ 1.37 ಕೋಟಿಯನ್ನು ಆರೋಗ್ಯ ಇಲಾಖೆಯಿಂದ ಭರಿಸಲಾಗುತ್ತದೆ. ಯೋಜನೆಯಡಿ ರೋಗಿಗಳಿಗೆ ಪ್ರತಿದಿನ ಬೆಳಿಗ್ಗೆ ಉಪಾಹಾರ, ಸಂಜೆ ಲಘು ಉಪಾಹಾರ, ಮಧ್ಯಾಹ್ನ ಮತ್ತು ರಾತ್ರಿ ಊಟವನ್ನು ವಿತರಿಸಲಾಗುತ್ತದೆ' ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ಆಹಾರ ಮೆನು

ರವೆ ಉಪ್ಪಿಟ್ಟು, ಪೊಂಗಲ್, ಗೋಧಿ ಗಂಜಿ, ರಾಗಿ ಮುದ್ದೆ, ಚಪಾತಿ, ಅನ್ನ–ಸಾಂಬಾರ್, ಪಲ್ಯ, ಸೋಯಾ, ಹಾಲು, ಹಣ್ಣುಗಳು, ಮೊಸರು, ಬಿಸ್ಕತ್ತು ಮತ್ತು ಚಿಕ್ಕಿ



ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ರೋಗಿಗಳಿಗೆ ಊಟ ವಿತರಿಸುವ ಮೂಲಕ 'ಸರ್ಕಾರಿ ಆಸ್ಪತ್ರೆಗಳಲ್ಲಿ ಪೌಷ್ಟಿಕ ಆಹಾರ' ಯೋಜನೆಗೆ ಚಾಲನೆ ನೀಡಿದರು

'ಐದು ವಿಭಾಗಗಳಾಗಿ ವಿಂಗಡಣೆ'

'ಸಾಮಾನ್ಯ ಆಹಾರ ಕ್ರಮದ ಜತೆಗೆ ಚಿಕಿತ್ಸಾ ಆಹಾರ ಕ್ರಮವನ್ನು ಯೋಜನೆಯಡಿ ರೂಪಿಸಲಾಗಿದೆ. ಗರ್ಭಿಣಿಯರ ಹಾಗೂ ಬಾಣಂತಿಯರ ಆಹಾರ ಕ್ರಮ, ಮಕ್ಕಳ ಆಹಾರ ಕ್ರಮ, ಸಾಮಾನ್ಯ ಆಹಾರ ಕ್ರಮ, ಮಧುಮೇಹಿಗಳ ಆಹಾರ ಕ್ರಮ, ಚಿಕಿತ್ಸಾ ಆಹಾರ ಕ್ರಮವೆಂದು ಆಹಾರವನ್ನು ಐದು ಪ್ರಮುಖ ವಿಭಾಗಗಳಾಗಿ ವಿಂಗಡಿಸಿ, ಯೋಜನೆಯಡಿ ಪೌಷ್ಟಿಕ ಆಹಾರ ನೀಡಲಾಗುತ್ತದೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

'ಗರ್ಭಿಣಿಯರಿಗೆ ಗರ್ಭಾವಸ್ಥೆಯ ಆರೋಗ್ಯಕ್ಕೆ ಅಗತ್ಯವಾದ ಕಬ್ಬಿಣದ ಅಂಶ ಮತ್ತು ಫೋಲಿಕ್ ಆಮ್ಲ ಹೆಚ್ಚಿರುವ ಆಹಾರವನ್ನು ನೀಡಲಾಗುತ್ತದೆ. ಬಾಣಂತಿಯರಿಗೆ ಹಾಲು ಉತ್ಪಾದನೆ ಮತ್ತು ಆರೋಗ್ಯಕ್ಕೆ ಸಹಕಾರಿಯಾಗುವ ಆಹಾರವನ್ನು ಒದಗಿಸಲಾಗುತ್ತದೆ. ಇದೇ ರೀತಿ ಅಗತ್ಯತೆಗೆ ಅನುಗುಣವಾಗಿ ಆಹಾರ ನೀಡಲಾಗುತ್ತದೆ. ಸಮರ್ಪಕ ಪೌಷ್ಟಿಕ ಆಹಾರವು ರೋಗಿಗಳು ವೇಗವಾಗಿ ಚೇತರಿಸಿಕೊಳ್ಳಲು ಸಹಾಯ ಮಾಡುತ್ತದೆ' ಎಂದು ಹೇಳಿದರು.

ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಪಶು ವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸಲು ನಿಗದಿಪಡಿಸಿರುವ ಸ್ಥಳವನ್ನು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಸೋಮವಾರ ಪರಿಶೀಲನೆ ನಡೆಸಿದರು.



ಬೈರತಿ ಸುರೇಶ್

ನಂತರ ಮಾತನಾಡಿದ ಅವರು, 'ಕ್ಷೇತ್ರದ ವ್ಯಾಪ್ತಿಯಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸಬೇಕೆಂಬ ಸಾರ್ವಜನಿಕರ ಬಹು ದಿನಗಳ ಬೇಡಿಕೆ ಈಗ ಈಡೇರಲಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆಗೆ ಚರ್ಚಿಸಲಾಗಿತ್ತು. ಆಸ್ಪತ್ರೆ ನಿರ್ಮಿಸಲು ₹ 200 ಕೋಟಿ ಅನುದಾನ ಮಂಜೂರು ಮಾಡಿದ್ದಾರೆ' ಎಂದು ಹೇಳಿದರು.

'ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಶೀಘ್ರದಲ್ಲಿಯೇ ಭೂಮಿಪೂಜೆ ನೆರವೇರಿಸಲಾಗುವುದು. ಯಾವುದೇ ಲೋಪಗಳು ಆಗದಂತೆ ಆಸ್ಪತ್ರೆ ಕಾಮಗಾರಿ ಕೈಗೊಳ್ಳಲಾಗುತ್ತದೆ. ಈ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಚಿಕಿತ್ಸಾ ಯಂತ್ರೋಪಕರಣಗಳು, ಡಯಾಲಿಸಿಸ್, ಹೃದ್ರೋಗ, ಮಹಿಳಾ ಮತ್ತು ಮಕ್ಕಳ ಚಿಕಿತ್ಸೆಗೆ ಪ್ರತ್ಯೇಕ ವ್ಯವಸ್ಥೆ, ತಜ್ಞ ವೈದ್ಯರು ಮತ್ತು ಶುಶ್ರೂಷಕರ ತಂಡ ಸೇರಿದಂತೆ ಹತ್ತು ಹಲವಾರು ಚಿಕಿತ್ಸಾ ಸೌಲಭ್ಯಗಳು ಇರಲಿವೆ' ಎಂದು ತಿಳಿಸಿದರು.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ಚಿಕ್ಕನಾಯಕನಹಳ್ಳಿ: ತಾಲ್ಲೂಕಿನ ಹಂದನಕೆರೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬಾಲಕಿಯೊಬ್ಬಳನ್ನು ಅಪಹರಿಸಿ ಲೈಂಗಿಕ ದೌರ್ಜನ್ಯ ಎಸಲಾಗಿದೆ.

ಪರಿಚಿತ ಯುವಕನೊಬ್ಬ ತಮ್ಮ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಪೋಷಕರು ದೂರಿನಲ್ಲಿ ತಿಳಿಸಿದ್ದಾರೆ. ಯುವಕನ ವಿರುದ್ಧ ಪ್ರಕರಣ ದಾಖಲಾಗಿದೆ.

PUBLIC NOTICE

Publics are hereby informed that my client **M/s DS-Max Properties Pvt Ltd**, having its office at No. 1854, 17th Main, 30th 'B' Cross, HBR Layout, 1st Stage, 5th Block, Bengaluru- 43 have intend to enter into **Absolute Sale Deed** with owner, **Smt Alka Ratan Lath** w/o Sri Ratan Babulal Lath is the absolute owner of residential converted undeveloped vacant land bearing property No:BBMP Khatha No: **208/59**, (earlier Khatha No 196/19), **Block No. 19**, carved out of **Sy.No.59**, in vide; Official Memorandum No.**ALN(NAY)SR:235/2015-16**, dated **02/12/2016**, for residential use, issued by Deputy Commissioner Bangalore District, situated at **Chokkanahalli Village**, Yelahanka Hobli, Bangalore North Taluk, presently with a revenue jurisdiction of Bruhath Bangalore Mahanagara Palike in BBMP Ward No.5, Bengaluru, measuring in total **712.57 Sq. mtrs** or **(118 x 65 = 7,670 Sq. ft)** of E-PID No.**1912313469** and bounded on: **East by:** 30 Feet Road, **West by:** Block No.18 in Sy.No.59, **North by:** 30 Feet Road, **South by:** Block No.33 in Sy.No.59 and referred to as **"schedule property"**.

Any person or Any promoters or Any Authority having any asserting right, title, interest and claims to oppose for Absolute Sale Deed of schedule property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **10** days from the date of this notice, if any objections fails to comply, my client shall take further steps and deemed for entering into Absolute Sale Deed of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

PUBLIC NOTICE

The Public are hereby informed that my clients are intending to purchase the schedule property from its owner M/s S.I.Hospitals Pvt Ltd Represented by its Director Smt.K.S.Indraja W/o.Dr.Suriraju.V, Residing at No.67, Serpentine Road, Kumara Park West, Bangalore.

Any person/s company Financial Institution, Firm etc, having any claim or objection for the proposed purchase or having any right, title or interest in the Schedule Property may contact or should lodge such claim and objection in writing with supporting documents within FIFTEEN DAYS from the date of publication failing which it will be presumed that there are no valid claims charges and encumbrance whatsoever over the Schedule Property and my client would proceed to complete the sale transaction, any claim received Lodged thereafter will not be considered.

SCHEDULE PROPERTY

All that piece and parcel of immovable property bearing No.106 (old No.107/1 & 106), in AECS Layout, formed by Aircraft Employees Co-operative Society Ltd, of Sy No.64/4, 65/1, 2, 6 & 7, situated at Nagashettyhalli Village, BNTQ, presently comes under the limits of BBMP, having New BBMP E-PID No.8494005729 (old PID No.100-6-106),Presently known as Sanjaynagar, Bangalore, Ward No.19-Sanjayanagar, measuring East to West 104 Feet and North to South (48.5 + 59)/2 & (78 + 62)/2, the total area of the site is 6567.2 Sq. Feet. and bounded on East by: Road, West by : Property bearing No.106, North by : Private property and South by : Road along with entire building constructed thereon.

A.M.GAJENDRA, Advocate
No.2, 3rd Cross, 3rd Main, Srinivasanagar, Kathriguppe Main Road,
Bangalore – 560 085. Ph. No.-9845562465
Bangalore Dated: 01.09.2025

'ರೇರಾ ವ್ಯಾಪ್ತಿಯಿಂದ ಬಿಡಿಎ ಹೊರಗಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಶಾಸನಬದ್ಧ ಸಂಸ್ಥೆಯಾಗಿದ್ದು, ರಿಯಲ್ ಎಸ್ಟೇಟ್ ಯೋಜನೆಗಳ ಪ್ರವರ್ತಕವಲ್ಲ. ಹಾಗಾಗಿ ಬಿಡಿಎ ಅನ್ನು ತನ್ನ ಅಧಿಕಾರ ವ್ಯಾಪ್ತಿಯಿಂದ ಹೊರಗಿಡಬೇಕು' ಎಂದು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವನ್ನು (ಕೆ–ರೇರಾ) ಒತ್ತಾಯಿಸಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ತನ್ನ ವಿರುದ್ಧ ರೇರಾದಲ್ಲಿ ಸಲ್ಲಿಸಿರುವ ಅರ್ಜಿಗೆ ಬಿಡಿಎ ಈ ರೀತಿ ಪ್ರತಿಕ್ರಿಯಿಸಿದೆ.

ಬಿಡಿಎ ಕೈಗೆತ್ತಿಕೊಂಡ ಯೋಜನೆಗಳು ವಾಣಿಜ್ಯ ಉದ್ದೇಶದ್ದಲ್ಲ. ಆದ್ದರಿಂದ ಅವುಗಳನ್ನು ರಿಯಲ್ ಎಸ್ಟೇಟ್ ಯೋಜನೆಗಳೆಂದು ಕರೆಯಲು ಆಗುವುದಿಲ್ಲ ಎಂದು ವಾದಿಸಿರುವ ಬಿಡಿಎ, ಇದು ರೇರಾ ಕಾಯ್ದೆಯಲ್ಲಿ ಹೇಳಿರುವಂತೆ 'ಪ್ರವರ್ತಕ'ದ ವ್ಯಾಖ್ಯಾನಕ್ಕೆ ಹೊಂದಿಕೆ ಆಗುವುದಿಲ್ಲ ಎಂದು ತಿಳಿಸಿದೆ.

'ಬಿಡಿಎ ಕಾಯ್ದೆ ಅಡಿ ನಗರ ಯೋಜನೆಗಳನ್ನು ರೂಪಿಸಲಾಗಿದ್ದು, ವಸತಿ ಬಡಾವಣೆಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ಕೈಗೆಟುಕುವ ಬೆಲೆಯಲ್ಲಿ ನಿವೇಶನಗಳನ್ನು ನೀಡಲಾಗುತ್ತದೆ. ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಹೆಚ್ಚಿನ ರಿಯಾಯಿತಿ ದರದಲ್ಲಿ ನಿವೇಶನಗಳನ್ನು ನೀಡುತ್ತದೆ. ಆದರೆ, ಡೆವಲಪರ್‌ಗಳು ಲಾಭದ ಉದ್ದೇಶದಿಂದ ಯೋಜನೆಗಳನ್ನು ಕೈಗೆತ್ತಿಕೊಳ್ಳಲಿದ್ದಾರೆ. ಆದ್ದರಿಂದ, ರೇರಾ ಕಾಯ್ದೆ ನಿಬಂಧನೆಗಳನ್ನು ಪ್ರಾಧಿಕಾರಕ್ಕೆ ಅನ್ವಯಿಸಲು ಸಾಧ್ಯವಿಲ್ಲ' ಎಂದು ಬಿಡಿಎ ವಾದಿಸಿದೆ.

ನಿವೇಶನದಾರರು ಎದುರಿಸುವ ಯಾವುದೇ ಸಮಸ್ಯೆಗಳನ್ನು ಬಿಡಿಎ ಕಾಯ್ದೆಯ ಪ್ರಕಾರ ಮಾತ್ರ ಪರಿಹರಿಸಬೇಕು ಮತ್ತು ಅವರಿಗೆ ರೇರಾ ಕಾಯ್ದೆಯನ್ನು ಜಾರಿಗೊಳಿಸುವ ಹಕ್ಕಿಲ್ಲ ಎಂದು ಬಿಡಿಎ ಹೇಳಿದೆ.

'ತಿರುಮಲದ ಜಾಗ ವಾಪಸ್: ಭರವಸೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಿರುಮಲದಲ್ಲಿ ಕರ್ನಾಟಕಕ್ಕೆ ಹಂಚಿಕೆಯಾಗಿದ್ದ ಭೂಮಿಯನ್ನು ಮರಳಿ ಪಡೆಯಲು ಸಹಾಯ ಮಾಡುವುದಾಗಿ ಆಂಧ್ರಪ್ರದೇಶದ ರಾಜ್ಯಪಾಲ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಅವರು ಭರವಸೆ ನೀಡಿದ್ದಾರೆ' ಎಂದು ಮುಜರಾಯಿ ಸಚಿವ ಆರ್. ರಾಮಲಿಂಗಾ ರೆಡ್ಡಿ ತಿಳಿಸಿದರು.

ಕುಮಾರಕೃಪ ಅತಿಥಿಗೃಹದಲ್ಲಿ ನಜೀರ್ ಅಹಮದ್ ಅವರನ್ನು ಸೋಮವಾರ ಭೇಟಿ ಮಾಡಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ತಿರುಮಲದಲ್ಲಿ ನೀಡಿರುವ ವಸತಿಗೃಹಗಳ ಭೋಗ್ಯದ ಅವಧಿಯನ್ನು 30 ವರ್ಷದಿಂದ 100 ವರ್ಷಕ್ಕೆ ಏರಿಸುವ ಬಗ್ಗೆ, ಮಂತ್ರಾಲಯದಲ್ಲಿರುವ ಜಾಗದ ಕುರಿತಾದ ತಕರಾರು ಮತ್ತು ಶ್ರೀಶೈಲಂನಲ್ಲಿ ಕರ್ನಾಟಕ ಸರ್ಕಾರಕ್ಕೆ ಹಸ್ತಾಂತರಿಸಬೇಕಾದ ಜಾಗದ ಬಗ್ಗೆ ಶೀಘ್ರ ಇತ್ಯರ್ಥಪಡಿಸುವ ವಿಚಾರವಾಗಿ ಅವರ ಜೊತೆ ಚರ್ಚೆ ನಡೆಸಿದ್ದೇನೆ' ಎಂದರು.

'ತಿರುಪತಿಯ ತಿರುಮಲದ ಜಾಗವನ್ನು ರಾಜರು ನೀಡಿದ್ದರು. ಶ್ರೀಶೈಲದಲ್ಲಿ ಕರ್ನಾಟಕಕ್ಕೆ 10 ಎಕರೆ ಹಂಚಿಕೆ ಮಾಡಲಾಗಿತ್ತು. ಈ ಭೂಮಿಯ ಅಭಿವೃದ್ಧಿಗೆ ನಾವು ₹ 85 ಕೋಟಿ ಖರ್ಚು ಮಾಡಿದ್ದೇವೆ. ಈಗ, ಈ ಭೂಮಿಯನ್ನು ಆಂಧ್ರ ಪ್ರದೇಶ ಸರ್ಕಾರ ಮರಳಿ ಪಡೆಯಲು ಯತ್ನಿಸುತ್ತಿದೆ. ಇದು ಸರಿಯಲ್ಲ. ಜೊತೆಗೆ ಮಂತ್ರಾಲಯದಲ್ಲೂ ಜಾಗದ ವಿಷಯ ಇತ್ಯರ್ಥ ಆಗಬೇಕಿದೆ. ಈ ವಿಚಾರದಲ್ಲಿ ಮಧ್ಯಪ್ರವೇಶಿಸಿ, ಆಂಧ್ರ ಸರ್ಕಾರ ತನ್ನ ಪ್ರಸ್ತಾವ ಕೈಬಿಡುವಂತೆ ಒತ್ತಾಯಿಸಬೇಕೆಂದು ರಾಜ್ಯಪಾಲರ ಬಳಿ ವಿನಂತಿಸಲಾಗಿದೆ. ಸಂಬಂಧಿಸಿದ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ಪರಿಹಾರ ನೀಡುವ ಬಗ್ಗೆಯೂ ಭರವಸೆ ನೀಡಲಾಗಿದೆ' ಎಂದರು.

'ಚಾಮುಂಡಿ ಬೆಟ್ಟ ಹಿಂದೂಗಳ ಆಸ್ತಿ ಅಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿದ್ದ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ರೆಡ್ಡಿ, 'ಅಲ್ಲಿನ ಸುಮಾರು 38 ಎಕರೆ ಮುಜರಾಯಿ ಇಲಾಖೆಗೆ ಸೇರಿದ್ದು. ಮಹಾರಾಜರು ನ್ಯಾಯಾಲಯದ ಮೆಟ್ಟಿಲೇರಿದ್ದರು. ವಿಚಾರಣೆ ಮುಂದುವರಿದಿದೆ' ಎಂದರು.

ಬಸ್ ನಿಲ್ದಾಣ ಗುಂಡಿಮಯ!

ದಾಬಸ್‌ಪೇಟೆ: ಮಳೆಯಿಂದ ಹದಗೆಟ್ಟ ರಸ್ತೆಗಳು • ಪ್ರಯಾಣಿಕರಿಗೆ ತೀವ್ರ ತೊಂದರೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಇಲ್ಲಿನ ಸರ್ಕಾರಿ ಬಸ್ ನಿಲ್ದಾಣದ ಆವರಣದಲ್ಲಿ ಗುಂಡಿಗಳು ಬಿದ್ದಿದ್ದು, ವಾಹನಗಳ ಸಂಚಾರ ದುಸ್ತರವಾಗಿದೆ.

ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ರಸ್ತೆಗಳು ಸಂಪೂರ್ಣ ಹದಗೆಟ್ಟಿವೆ. ಇದೇ ರಸ್ತೆಯಲ್ಲಿ ನಿತ್ಯ ನೂರಾರು ಬಸ್‌ಗಳು, ಆಟೊ, ದ್ವಿಚಕ್ರ ವಾಹನಗಳು ಸಂಚರಿಸುತ್ತವೆ.

ಗುಂಡಿ ಬಿದ್ದ ರಸ್ತೆಯಲ್ಲಿ ಸಂಚರಿಸುವುದರಿಂದ ಪ್ರಯಾಣಿಕರು ತೊಂದರೆ ಅನುಭವಿಸುವಂತಾಗಿದೆ. ನಿಲ್ದಾಣದಲ್ಲಿ ವಾಹನಗಳು ನಿಲ್ಲಿಸಲು, ಪ್ರಯಾಣಿಕರು ಬಸ್ ಹತ್ತಲು ಪರದಾಡುವ ಸ್ಥಿತಿ ಇದೆ. ಕೆಲವೊಮ್ಮೆ ಕೆಸರು ನೀರು ಜನರ ಮೇಲೆ ಬೀಳುತ್ತದೆ.

ಮುಖ್ಯಾಂಶಗಳು
- ಅವೈಜ್ಞಾನಿಕವಾಗಿ ನಿರ್ಮಾಣಗೊಂಡ ಬಸ್ ನಿಲ್ದಾಣ: ದೂರು
- ಗುಂಡಿ ಮುಚ್ಚಲು ಆಗ್ರಹ


ದಾಬಸ್‌ಪೇಟೆ ಬಸ್ ನಿಲ್ದಾಣದಲ್ಲಿ ಬಿದ್ದಿರುವ ಗುಂಡಿಗಳು

ವಾರದ ಹಿಂದೆಯಷ್ಟೇ ಬಸ್ ನಿಲ್ದಾಣ ವೀಕ್ಷಣೆಗೆ ಬಂದಿದ್ದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಈ ಭಾಗದಲ್ಲಿ ಹೈಟೆಕ್ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದ್ದರು.

'ಸೋಂಪುರ ಕೈಗಾರಿಕಾ ಪ್ರದೇಶದಲ್ಲಿರುವ ಬಸ್ ನಿಲ್ದಾಣ ಚಿಕ್ಕದಾಗಿದ್ದು, ಅವೈಜ್ಞಾನಿಕವಾಗಿ ನಿರ್ಮಾಣ ಆಗಿದೆ. ಮಳೆ ಬಂದರಂತೂ ಬಸ್ ನಿಲ್ದಾಣದಲ್ಲಿ ಸಮಸ್ಯೆ ತಪ್ಪಿದ್ದಲ್ಲ' ಎಂದು ಪ್ರಯಾಣಿಕ ರವಿಕುಮಾರ್ ಬೇಸರ ವ್ಯಕ್ತಪಡಿಸಿದರು.

'ಹೈಟೆಕ್ ಬಸ್ ನಿಲ್ದಾಣದ ಕಾಮಗಾರಿ ಆರಂಭವಾಗುವವರೆಗೆ ಗುಂಡಿಗಳನ್ನು ಮುಚ್ಚಿ ಅನುಕೂಲ ಮಾಡಿಕೊಡಬೇಕು' ಎನ್ನುತ್ತಾರೆ ಸ್ಥಳೀಯರು.

ಸೀರತ್ ಅಭಿಯಾನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮಾಅತೆ ಇಸ್ಲಾಮಿ ಹಿಂದ್ ಕರ್ನಾಟಕ ಘಟಕವು ಪ್ರವಾದಿ ಮುಹಮ್ಮದ್ ಅವರ ನೆನಪಿನಲ್ಲಿ ಸೆ.3 ರಿಂದ 14ರವರೆಗೆ ರಾಜ್ಯಾದ್ಯಂತ ಸೀರತ್ (ಜೀವನ ಸಂದೇಶ) ಅಭಿಯಾನವನ್ನು ಹಮ್ಮಿಕೊಂಡಿದೆ.

ಸೆ.13ರಂದು ಬೆಂಗಳೂರಿನ ಬಸವ ಸಮಿತಿ ಸಭಾಂಗಣದಲ್ಲಿ ನ್ಯಾಯದ ಸಮಾವೇಶ ನಡೆಯಲಿದೆ ಎಂದು ಜಮಾಅತೆ ಇಸ್ಲಾಮಿ ಹಿಂದ್ ರಾಜ್ಯ ಕಾರ್ಯದರ್ಶಿ ಮಹಮ್ಮದ್ ಕುಂಞ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಕ್ತದಾನ ಶಿಬಿರ, ಆಸ್ಪತ್ರೆ, ವೃದ್ಧಾಶ್ರಮ ಭೇಟಿ, ಸಂವಾದ, ವಿಚಾರ ಗೋಷ್ಠಿ, ಸಾರ್ವಜನಿಕ ಸಭೆಗಳು, ಪ್ರಬಂಧ ಸ್ಪರ್ಧೆ ನಡೆಯಲಿವೆ ಎಂದರು.

ಹೆಚ್ಚಿನ ಭೂಪರಿಹಾರ: ಇನ್ಫೋಸಿಸ್ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೈಸೂರಿನಲ್ಲಿ ಕಂಪನಿಯ ಕ್ಯಾಂಪಸ್ ವಿಸ್ತರಣೆಗಾಗಿ ಭೂಸಂತ್ರಸ್ತರಿಗೆ ನಿಗದಿಪಡಿಸಿದ ಹೆಚ್ಚಿನ ಭೂಪರಿಹಾರ ಪ್ರಶ್ನಿಸಿ ಇನ್ಫೋಸಿಸ್ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಹೈಕೋರ್ಟ್‌ನ ವಿಭಾಗೀಯ ಪೀಠವು 2024ರ ಅಕ್ಟೋಬರ್‌ನಲ್ಲಿ ನೀಡಿದ್ದ ತೀರ್ಪು ಪ್ರಶ್ನಿಸಿ ಕಂಪನಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತ, ಮನಮೋಹನ್ ಅವರ ಪೀಠವು, 'ಹೈಕೋರ್ಟ್ ತೀರ್ಪು ನೀಡಿದ 160 ದಿನಗಳಲ್ಲಿ ಮೇಲ್ಮನವಿ ಸಲ್ಲಿಸಬೇಕಿತ್ತು. ಆದರೆ, ಕಂಪನಿ ಮೇಲ್ಮನವಿ ಸಲ್ಲಿಸುವಾಗ ವಿಳಂಬ ಮಾಡಿದೆ. ಹೀಗಾಗಿ, ಅರ್ಜಿ ವಜಾಗೊಳಿಸಲಾಗಿದೆ' ಎಂದಿತು.

ಇನ್ಫೋಸಿಸ್ 2005ರಲ್ಲಿ ಹೆಬ್ಬಾಳ ಯಾಗಿ 1.05 ಎಕರೆ ಭೂಮಿ ಸ್ವಾಧೀನ ಪಡಿಸಿಕೊಂಡಿತ್ತು. ಎಕರೆಗೆ ₹4.85 ಲಕ್ಷ ಪರಿಹಾರವನ್ನು ವಿಶೇಷ ಭೂಸ್ವಾಧೀನ ಅಧಿಕಾರಿ ನಿಗದಿಪಡಿಸಿದ್ದರು. ಇದನ್ನು ಒಪ್ಪದ ಭೂಮಾಲೀಕರು, ಮೈಸೂರಿನ ಕೋರ್ಟ್ ಮೆಟ್ಟಿಲೇರಿದ್ದರು. ಚದರ ಅಡಿಗೆ ₹220 ಪರಿಹಾರ, ಬಡ್ಡಿ ನೀಡಬೇಕು ಎಂದು ನ್ಯಾಯಾಲಯ 2020ರಲ್ಲಿ ನಿರ್ದೇಶನ ನೀಡಿತ್ತು. ಇದನ್ನು ಪ್ರಶ್ನಿಸಿ ಇನ್ಫೋಸಿಸ್ ಹೈಕೋರ್ಟ್ ಮೆಟ್ಟಿಲೇರಿತ್ತು.

ನಾರ್ವೆ, ಸ್ವೀಡನ್ ಮತ್ತು ಫಿನ್ಲೆಂಡ್‌ಗಳಲ್ಲಿನ ಕುಗ್ರಾಮಗಳಲ್ಲಿ ವಾಸಿಸುತ್ತಿರುವವರಿಗಾಗಿ ನಾರ್ವೆ ಮೂಲದ ಸ್ಟಾರ್ಟ್‌ಅಪ್ ಕಂಪನಿ ಡ್ರೋನ್ ಮೂಲಕ ಫುಡ್ ಡೆಲಿವರಿ ಸರ್ವೀಸ್ ನೀಡಲು ಮುಂದಾಗಿದೆ





ಸರಳ ರಾಸಾಯನಿಕ ತಂತ್ರವೊಂದು ರಾತ್ರಿಯಲ್ಲಿಯೂ ಗಿಡಗಳನ್ನು ರಂಗು ರಂಗಾಗಿಸಲಿದೆ.

ಗಿಡಗಳೇ ಬಲ್ಬುಗಳು!

• ಕೊಳ್ಳೇಗಾಲ ಶರ್ಮ

ಬೆಳಿಗ್ಗೆ ಬಿಸಿಲಿದ್ದಾಗ ಚಾರ್ಜ್ ಆಗಿ, ರಾತ್ರಿ ಕತ್ತಲಾದ ಕೂಡಲೆ ಬೆಳಗುವ ಎಲ್‌ಇಡಿಗಳು ಈಗ ಸಿಗುತ್ತಿವೆ. ಸ್ವಿಚ್ ಒತ್ತಿದರೆ ಬಿಳಿ, ಹಳದಿ ಇಲ್ಲವೇ ನೀಲಿ ಬಣ್ಣದವಾಗಿ ಹೊಳೆಯುವವೂ ಇವೆ. ಈ ಎರಡೂ ಗುಣಗಳೂ ಇರುವ ಗಿಡಗಳು ಇವೆ ಎಂದರೆ ಏನೆನ್ನುತ್ತೀರಿ? ಚೀನಾದ ದಕ್ಷಿಣ ಚೀನಾ ಕೃಷಿ ವಿಶ್ವವಿದ್ಯಾಲಯದ ಜೈವಿಕ ವಸ್ತುಗಳ ಪ್ರಯೋಗಶಾಲೆಯ ವಿಜ್ಞಾನಿ ಶ್ವೈಜೀ ಝೂಂಗ್ ಮತ್ತು ಸಂಗಡಿಗರು ಇಂತಹ ಗಿಡಗಳನ್ನು ರೂಪಿಸಿದ್ದಾರೆ. ಬೆಳಿಗ್ಗೆ ಬಿಸಿಲಿನಲ್ಲಿ ಇಟ್ಟರೆ ಸೂರ್ಯನ ಬೆಳಕಿನ ಶಕ್ತಿಯನ್ನು ಹೀರಿಕೊಳ್ಳುವ ಈ ಗಿಡಗಳು, ರಾತ್ರಿ ಅಥವಾ ಕತ್ತಲಿನಲ್ಲಿ ತುಸು ಮಂದವಾದ ವಿವಿಧ ಬಣ್ಣಗಳ ಬೆಳಕು ಹೊಮ್ಮಿಸುತ್ತಾ ಮಿಂಚುತ್ತವೆಯಂತೆ.

ಓಹೋ. ಈ ಹಿಂದೆ ಜೈವಿಕ ತಂತ್ರಜ್ಞಾನದಿಂದ ಮಿರುಗುವ ಮೈಯ ಮೊಲ, ಮಂಗಗಳನ್ನು ರೂಪಿಸಲಾಗಿತ್ತಲ್ಲ, ಹಾಗೆಯೋ ಎಂದಿರಾ? ಅಲ್ಲವಂತೆ. ಇದು ಅಪ್ಪಟ ರಾಸಾಯನಿಕ ವಿಜ್ಞಾನ. ಸೂರ್ಯನ ಬೆಳಕನ್ನು ಹೀರಿಕೊಂಡು, ಅನಂತರ ಅದೇ ಶಕ್ತಿಯನ್ನೇ ಬೇರೊಂದು ರಂಗಿನ ಬೆಳಕನ್ನಾಗಿ ಚಿಮ್ಮುವ ನ್ಯಾನೊಕಣಗಳ ಮಹಾತ್ಮೆಯಂತೆ. ಝೂಂಗ್ ತಂಡ ಇಂತಹ ನ್ಯಾನೊಕಣಗಳನ್ನು ರೂಪಿಸುವ ತಂತ್ರವನ್ನು ಸಿದ್ಧಪಡಿಸುವುದರ ಜೊತೆಗೇ, ಅವನ್ನು ಗಿಡಗಳಿಗೆ ಚುಚ್ಚಿ, ಪರೀಕ್ಷಿಸಿದೆ. ಈ ಗಿಡಗಳು ಜೈವಿಕ ತಂತ್ರಜ್ಞಾನದಿಂದ ಮಿನುಗುವ ಗಿಡಗಳಿಗಿಂತ ಪ್ರಖರವಾಗಿ ಬೆಳಕನ್ನು ಸೂಸುತ್ತವೆಯಂತೆ.


ಇಂತಹ ಗಿಡಗಳನ್ನು ರೂಪಿಸಬಹುದೆನ್ನುವ ಝೂಂಗ್ ತಂಡದ ತರ್ಕ ಬಹಳ ಸರಳ. ಆಫ್ಟರ್‌ಗ್ಲೋ ಫಾಸ್ಫರ್‌ಗಳು ಎನ್ನುವ ವಸ್ತುಗಳಿವೆ. ಅತ್ಯಲ್ಪ ಪ್ರಮಾಣದಲ್ಲಿ ಡಿಸ್ಪ್ರೋರಿಯಂ ಮತ್ತು ಯುರೋಪಿಯಂ ಲೋಹಗಳನ್ನು ಬೆರೆಸಿದ ಸ್ಟ್ರಾಂಶಿಯಂ ಅಲ್ಯುಮಿನಿಯಂ ಆಕ್ಸೈಡ್‌ಗಳು ಬಿಸಿಲಿನಲ್ಲಿ ಇಟ್ಟಾಗ ಸೂರ್ಯನ ಶಕ್ತಿಯನ್ನು ಹೀರಿಕೊಳ್ಳುತ್ತವೆ. ಅನಂತರ ಸಾಕಷ್ಟು ಸಮಯ ಕಳೆದ ಮೇಲೆ, ಅಲ್ಲಾಡಿದಾಗಲೋ ಬಿಸಿಯಾದಾಗಲೋ ಹೀರಿಕೊಂಡ ಶಕ್ತಿಯನ್ನು ಬೇರೊಂದ ಬಣ್ಣದ ಬೆಳಕಾಗಿ ಹೊಮ್ಮಿಸುತ್ತವೆ; ಸರಳವಾಗಿ ಹೇಳುವುದಾದರೆ ಬೇರೊಂದು ಬಣ್ಣದಿಂದ ಹೊಳೆಯುತ್ತವೆ. ಇವನ್ನು 'ನಿಧಾನಸ್ಫುರಣ ವಸ್ತುಗಳು' ಎನ್ನೋಣ.

ಝೂಂಗ್ ತಂಡ ಇಂತಹ ನಿಧಾನವಾಗಿ ಶಕ್ತಿಯನ್ನು ಸ್ಫುರಿಸುವ ವಸ್ತುಗಳನ್ನು ಅತ್ಯಂತ ಸೂಕ್ಷ್ಮಕಣಗಳ ರೂಪದಲ್ಲಿ ಗಿಡಗಳಿಗೆ ಚುಚ್ಚಿದರೆ, ಗಿಡಗಳೂ ಮಿನುಗಬಹುದೇ ಎಂದು ಕಲ್ಪಿಸಿತು. ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಯಿತು. ನಿಧಾನಸ್ಫುರಣ ವಸ್ತುಗಳು ಈಗಾಗಲೇ ಬಳಕೆಯಲ್ಲಿವೆ. ವೈದ್ಯಕೀಯದಲ್ಲಿ ಎಂಆರ್‌ಐನಂತಹ ತಂತ್ರಗಳಲ್ಲಿ, ಮಿನುಗುವ ಕಾಗದದ ತಯಾರಿಕೆಗೆ ಅಥವಾ ಆಹಾರದ ಪೊಟ್ಟಣಗಳ ಮೇಲೆ ಮುದ್ರಿಸುವ ಶಾಯಿಯಲ್ಲಿ ಬಳಸುವ ಯತ್ನಗಳು ನಡೆದಿವೆ. ಇದೇ ರಾಸಾಯನಿಕವನ್ನು ಗಿಡಗಳಿಗೂ ಚುಚ್ಚಿ ಪರೀಕ್ಷಿಸಿದ್ದರು. ಆದರೆ ಆಗ ಬಳಸಿದ ಹರಳುಗಳ ಗಾತ್ರ ಹಲವು ನೂರು ಮೈಕ್ರೊಮೀಟರ್‌ಗಳಷ್ಟು ಪ್ರಮಾಣದ್ದಾಗಿದ್ದು, ಬಿಸಿಲಿನಲ್ಲಿನ ಶಕ್ತಿಯನ್ನು ಹಿಡಿದಿಡುತ್ತಿರಲಿಲ್ಲ. ಜೊತೆಗೆ ನಿರ್ದಿಷ್ಟ ಬಣ್ಣವನ್ನೂ ಕೊಡುತ್ತಿರಲಿಲ್ಲ. ಝೂಂಗ್ ತಂಡ ಇಂತಹುದೇ ವಸ್ತುಗಳನ್ನು ಇನ್ನೂ ಕಿರಿದಾಗಿಸಿ, ನ್ಯಾನೊಕಣಗಳ ರೂಪದಲ್ಲಿ ಸಸ್ಯಗಳಿಗೆ ಚುಚ್ಚಿದ್ದಾರೆ. ಜೊತೆಗೆ ಸಸ್ಯಗಳ ಅಂಗರಚನೆಯನ್ನೂ ಗಮನದಲ್ಲಿಟ್ಟುಕೊಂಡು ಪ್ರಯೋಗಗಳನ್ನು ನಡೆಸಿದ್ದಾರೆ. ಲೋಳೆಸರದಂತಹ ದಪ್ಪನಾದ, ಲೋಳೆ ಅಥವಾ ನೀರು ತುಂಬಿದ ಎಲೆಗಳಿರುವ ಗಿಡಗಳನ್ನು ಇದಕ್ಕಾಗಿ ಆಯ್ಕೆ ಮಾಡಿಕೊಂಡರು. ಈ ಎಲೆಗಳ ಒಳರಚನೆ ವಿಶಿಷ್ಟ. ಹೊರಗಡೆ ನೀರು ಬಿದ್ದರೂ ತೇವವಾಗದ ಮೇಣದ ಲೇಪ, ಅದರ ಕೆಳಗೆ ಸೂರ್ಯನ ಬೆಳಕನ್ನು ಹೀರುವ ಹಸಿರು ಕಣಗಳಿರುವ ಕೋಶಗಳ ಪದರ. ಇನ್ನೂ ಕೆಳಗೆ ಹಲವಾರು ಜೀವಕೋಶಗಳಷ್ಟು ದಪ್ಪದ 'ಮೀಸೋಫಿಲ್' ಎನ್ನುವ ಪದರ ಇರುತ್ತದೆ. ಅನಂತರ ಮತ್ತೊಂದು ಪದರ ಹಸಿರುಕೋಶಗಳಿರುತ್ತವೆ.

ಲೋಳೆಸರದ ಮೀಸೋಫಿಲ್ ಪದರ ವಿಶಿಷ್ಟ. ಅದರಲ್ಲಿರುವ ಜೀವಕೋಶಗಳ ನಡುವೆ ಸಾಕಷ್ಟು ತೆರಪು ಇರುತ್ತದೆ. ಈ ತೆರಪಿನಲ್ಲಿ ಲೋಳೆ ಅಥವಾ ನೀರು ಇರುತ್ತದೆ. ಜೊತೆಗೆ ಅಲ್ಪ, ಸ್ವಲ್ಪ ಗಾಳಿಯೂ ಇರುತ್ತದೆ. ಜೊತೆಗೆ ಮೀಸೋಫಿಲ್ ಮೇಲಿರುವ ಹೊರ ಪದರ ಬಹಳ ತೆಳುವಾದದ್ದು. ಆದ್ದರಿಂದ ಈ ಗಿಡಗಳೊಳಗೆ ಸಾಕಷ್ಟು ಪ್ರಮಾಣದಲ್ಲಿ ನ್ಯಾನೊಕಣಗಳನ್ನು ತುರುಕಬಹುದು. ಹೊರಪದರ ತೆಳುವಾಗಿರುವುದರಿಂದ ನ್ಯಾನೊಕಣಗಳು ಚಿಮ್ಮಿದ ಬೆಳಕು ಎದ್ದುಕಾಣಬಹುದು ಎನ್ನುವುದು ಈ ತಂಡದ ತರ್ಕ. ಇದಕ್ಕಾಗಿ ಇವರು ಫಾಸ್ಫರುಗಳನ್ನು ರುಬ್ಬಿ ಒಂದರಿಂದ ಹತ್ತು ಮೈಕ್ರೊಮೀಟರು ದಪ್ಪನೆಯ ಹರಳುಗಳನ್ನು ರೂಪಿಸಿದರು. ದಪ್ಪನೆಯ ಹರಳುಗಳು ಬೆಳಕನ್ನು ಹೀರಿಕೊಂಡರೂ, ಬಲು ಬೇಗನೆ ಶಕ್ತಿಗುಂದುವುದನ್ನು ಗಮನಿಸಿದರು. ಅವು ಹೊಮ್ಮಿಸಿದ ಬಣ್ಣಗಳು ಒಂದೇ ತೆರನಾಗಿರುತ್ತಿರಲಿಲ್ಲ. ಇದನ್ನು ನಿವಾರಿಸಲು ಅತಿ ಸಣ್ಣದಾದ ಕಣಗಳನ್ನಷ್ಟೆ ಆಯ್ದು ಅವುಗಳನ್ನು ಫಾಸ್ಫೇಟ್ ಅಯಾನುಗಳ ಜೊತೆಗೆ ಸೇರಿಸಿದರು. ಫಾಸ್ಫೇಟ್ ಅಯಾನು, ಹರಳುಗಳ ಜೊತೆಗೆ ನೀರು ಪ್ರತಿಕ್ರಿಯಿಸದಂತೆ ರಕ್ಷಿಸುತ್ತದೆ. ಹೀಗೆ ಫಾಸ್ಫೇಟನ್ನು ಲೇಪಿಸಿದ, ವಿವಿಧ ಗಾತ್ರದ ನ್ಯಾನೊಕಣಗಳನ್ನು ಪ್ರಯೋಗಗಳಲ್ಲಿ ಬಳಸಿದರು.

ಮುಂದಿನ ಪ್ರಯೋಗಗಳಿಗೆ 'ಎಶೆವೇರಿಯಾ ಮೊಬಿನಾ' ಎನ್ನುವ ಲೋಳೆಸರದಂತಹ ಗಿಡವನ್ನು ಆಯ್ದುಕೊಂಡರು. ಈ ಗಿಡಕ್ಕೆ ಐದು ಮೈಕ್ರಾನಿಗಿಂತಲೂ ಕಡಿಮೆ ಗಾತ್ರದ ಫಾಸ್ಫೇಟು ಕವಚವಿರುವ ಫಾಸ್ಫರು ನ್ಯಾನೊಕಣಗಳನ್ನು ನೀರಿನಲ್ಲಿ ಚದುರಿಸಿ, ಆ ದ್ರವವನ್ನು ಗಿಡಗಳ ಎಲೆಗಳಿಗೆ ಚುಚ್ಚಿದರು. ದೊಡ್ಡ ಎಲೆಗಳಿಗೆ ಹತ್ತಾರು ಕಡೆಯಲ್ಲಿ ಚುಚ್ಚಬೇಕಾಯಿತು ಎನ್ನುತ್ತಾರೆ, ಝೂಂಗ್. ಫಾಸ್ಫರನ್ನು ಚುಚ್ಚಿದ ಗಿಡಗಳನ್ನು ಬಿಸಿಲಿನಲ್ಲಿ ಇಟ್ಟು ಛಾರ್ಜು ಮಾಡಿದರು. ಅನಂತರ ಅವನ್ನು ಕತ್ತಲಿನಲ್ಲಿಟ್ಟು ಊದಾತೀತ ಬೆಳಕನ್ನು ಚೆಲ್ಲಿದರು. ಇದು ಸ್ವಿಚ್ಚಿನಂತೆ ಕೆಲಸ ಮಾಡಿ, ಫಾಸ್ಫರುಗಳಲ್ಲಿ ಅಡಗಿದ್ದ ಶಕ್ತಿಯನ್ನು ಬೆಳಕಾಗಿ ಹೊಮ್ಮಿಸಿತು. ತಿಂಗಳುಗಳ ಕಾಲ ಈ ಮಿನುಗುವ ಶಕ್ತಿ ಉಳಿದಿರುತ್ತದೆ. ಸ್ಟ್ರಾಂಶಿಯಂ ಅಲ್ಯುಮಿನಿಯಂ ಆಕ್ಸೈಡಷ್ಟೆ ಅಲ್ಲದೆ ಇತರೆ ಲೋಹಗಳ ಫಾಸ್ಫಟರುಗಳನ್ನು ಝೂಂಗ್ ತಂಡ ಪರೀಕ್ಷಿಸಿತು. ಹೀಗೆ ಕೆಂಪು, ನೀಲಿ, ಹಳದಿ ಮೊದಲಾದ ಬಣ್ಣಗಳನ್ನು ಸೂಸುವ ಫಾಸ್ಫರುಗಳನ್ನು ಸೂಕ್ಷ್ಮಕಣಗಳಾಗಿ ಚುಚ್ಚಿದಾಗ, ಎಲ್ಲ ಬಣ್ಣಗಳೂ ಮಿನುಗಿತಂತೆ. ಒಂದೇ ಗಿಡದ ಬೇರೆ, ಬೇರೆ ಎಲೆಗಳಿಗೆ ವಿಭಿನ್ನ ಬಣ್ಣಗಳನ್ನು ಚುಚ್ಚಿ ರಂಗು, ರಂಗಿನ ಹಣತೆಯಂತೆ ಮಿನುಗುವ ಗಿಡಗಳನ್ನು ಇವರು ಸೃಷ್ಟಿಸಿದ್ದಾರೆ.

ಹೀಗೆ ಅತಿ ಸರಳವಾದ ತಂತ್ರದಿಂದ ಲೋಳೆಸರದಂತಹ ದಪ್ಪ ಎಲೆಯ ಗಿಡಗಳನ್ನು ರಂಗು, ರಂಗಾಗಿಸಬಹುದು ಎನ್ನುತ್ತಾರೆ ಝೂಂಗ್. ಇದೇ ತಂತ್ರವನ್ನು ಬಳಸಿದರೆ ಬಹುಶಃ ಬಟ್ಟೆಗಳನ್ನೂ, ಸ್ವಲ್ಪ ಮುಂದುವರಿದು ನಮ್ಮ ಹಚ್ಚೆಗಳನ್ನೂ ರಾತ್ರಿ ಮಿನುಗುವಂತೆ ಮಾಡಬಹುದು. ಒಂದೇ ಪ್ರಶ್ನೆ. ಈ ನ್ಯಾನೊಕಣಗಳಿಂದ ಏನಾದರೂ ಅಪಾಯ ಇರಬಹುದೇ? ಗೊತ್ತಿಲ್ಲ. ಈ ಸಂಶೋಧನೆಯ ವಿವರಗಳನ್ನು 'ಮ್ಯಾಟರ್' ಪತ್ರಿಕೆ ಪ್ರಕಟಿಸಿದೆ. ❖



ಎಐಗಳು 'ವಿಜ್ಞಾನಿ'ಗಳಾಗಬಲ್ಲವೆ?

• ಗುಬ್ಬಿಲ್ಯಾಬ್ಸ್

ಕೇಂದ್ರ ಸರ್ಕಾರದ ಪ್ರಮುಖ ತಂತ್ರಜ್ಞಾನ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಐಐಟಿ ದೆಹಲಿ, ಜರ್ಮನಿಯ ಜೆನಾ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಒಂದು ಪ್ರಮುಖ ಸಂಶೋಧನೆಯನ್ನು ನಡೆಸಿ, ಕೃತಕ ಬುದ್ಧಿಮತ್ತೆ (AI) ಮತ್ತು ವಿಜ್ಞಾನದ ನಡುವಿನ ಸಂಬಂಧದ ಬಗ್ಗೆ ಬೆಳಕು ಚೆಲ್ಲಿದೆ. ಈ ಅಧ್ಯಯನದಲ್ಲಿ, ಕೃತಕ ಬುದ್ಧಿಮತ್ತೆಯು ವಿಜ್ಞಾನಕ್ಷೇತ್ರಕ್ಕೆ ಪ್ರವೇಶಿಸಲು ಸಜ್ಜಾಗಿದೆಯೇ, ನಿಜವಾಗಿಯೂ ವಿಜ್ಞಾನಿಯಂತೆ ಯೋಚಿಸಬಲ್ಲದೇ ಎಂಬುದನ್ನು ಪರೀಕ್ಷಿಸಿದ್ದಾರೆ.

ತಂತ್ರಜ್ಞಾನದ ಪ್ರಗತಿಯಿಂದಾಗಿ, ಇಂದು ಕೃತಕ ಬುದ್ಧಿಮತ್ತೆಯು ವೈಜ್ಞಾನಿಕ ಪ್ರಪಂಚವನ್ನು ವೇಗವಾಗಿ ಬದಲಾಯಿಸುತ್ತಿದೆ. ಇದು ಹೊಸ ಆವಿಷ್ಕಾರಗಳಿಗೆ ನಾಂದಿ ಹಾಡಲಿದೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕವಾಗಿ, ಎಐ ತಂತ್ರಜ್ಞಾನಗಳು ವಿಜ್ಞಾನಿಗಳಿಗೆ ಲಕ್ಷಾಂತರ ಸಂಶೋಧನ ಪ್ರಬಂಧಗಳನ್ನು ಓದಿ ಅರ್ಥಮಾಡಿಕೊಳ್ಳಲು, ಪ್ರಯೋಗಗಳನ್ನು ರೂಪಿಸಲು, ಕ್ಲಿಷ್ಟಕರವಾದ ಅಂಕಿ-ಅಂಶಗಳನ್ನು ವಿಶ್ಲೇಷಿಸಲು, ಮತ್ತು ಪ್ರಯೋಗಾಲಯಗಳ ಸಿದ್ಧತೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿವೆ. ಆದರೆ ಈ ಕ್ರಾಂತಿಯು ಸಂಪೂರ್ಣವಾಗಿ ಯಶಸ್ವಿಯಾಗಬೇಕೆಂದರೆ, ಕೃತಕ ಬುದ್ಧಿಮತ್ತೆಯು ನಿಜವಾದ ವಿಜ್ಞಾನಿಯಂತೆ ಯೋಚಿಸಬೇಕು. ಅಂದರೆ, ಅದು ಕೇವಲ ಅಂಕಿ-ಅಂಶಗಳನ್ನು ವಿಶ್ಲೇಷಿಸುವುದು ಮಾತ್ರವಲ್ಲದೆ, ದೃಶ್ಯಮಾಹಿತಿಗಳು, ಅಳತೆ-ಪ್ರಮಾಣಗಳನ್ನು, ಮತ್ತು ಸೈದ್ಧಾಂತಿಕ ಚೌಕಟ್ಟುಗಳನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರಬೇಕು.

ಅದರ ಸಾಮರ್ಥ್ಯಗಳನ್ನು ಅಳೆಯಲು ವಿಜ್ಞಾನಿಗಳು 'ಮ್ಯಾಕ್‌ಬೆಂಚ್' (MaCBench) ಎಂಬ ಹೊಸ ಮಾನದಂಡವನ್ನು ಸಿದ್ಧಪಡಿಸಿದ್ದಾರೆ. 'ಮಲ್ಟಿಮೋಡಲ್ ಲ್ಯಾಂಗ್ವೇಜ್ ಮಾಡೆಲ್ಸ್' ಎಂಬ ಸುಧಾರಿತ ಕೃತಕ ಬುದ್ಧಿಮತ್ತೆಯ ಮಾದರಿಗಳನ್ನು ರಸಾಯನಶಾಸ್ತ್ರ ಮತ್ತು ವಸ್ತುವಿಜ್ಞಾನದ ಸಂದರ್ಭದಲ್ಲಿ ಪರೀಕ್ಷಿಸಲು ಈ ಮಾನದಂಡವನ್ನು ಬಳಸಲಾಗಿದೆ. ಈ ಸಂಶೋಧನೆಯಲ್ಲಿ ಗಮನಕ್ಕೆ ಬಂದ ಮುಖ್ಯ ಅಂಶವೆಂದರೆ, ಕೃತಕ ಬುದ್ಧಿಮತ್ತೆಯು ಕೆಲವು ಮೂಲಭೂತ ಕಾರ್ಯಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದರೂ, ನಿಜವಾದ ವೈಜ್ಞಾನಿಕ ವಿಶ್ಲೇಷಣೆ ಮತ್ತು ತಾರ್ಕಿಕತೆಗೆ ಬಂದಾಗ ಹಿನ್ನಡೆ ಅನುಭವಿಸುತ್ತದೆ.

ಸಂಶೋಧಕರು, ನೈಜ ವೈಜ್ಞಾನಿಕ ಕೆಲಸದ ಹಂತಗಳನ್ನು ಅನುಕರಿಸುವ ರೀತಿಯಲ್ಲಿ ಈ 'ಮ್ಯಾಕ್‌ಬೆಂಚ್' ಅನ್ನು ವಿನ್ಯಾಸಗೊಳಿಸಿದ್ದಾರೆ. ಈ ಮಾನದಂಡವು ಮೂರು ಮುಖ್ಯ ವಿಭಾಗಗಳನ್ನು ಒಳಗೊಂಡಿದೆ: ವೈಜ್ಞಾನಿಕ ಬರಹಗಳಿಂದ ಮಾಹಿತಿಯನ್ನು ಪಡೆಯುವುದು, ಪ್ರಯೋಗಾಲಯದ ಕೆಲಸಗಳನ್ನು ಅರ್ಥಮಾಡಿಕೊಳ್ಳುವುದು, ಮತ್ತು ಪ್ರಯೋಗಗಳ ಫಲಿತಾಂಶಗಳನ್ನು ವಿಶ್ಲೇಷಿಸುವುದು. ಕೃತಕ ಬುದ್ಧಿಮತ್ತೆಯು ಪರೀಕ್ಷೆಗಳ ಸಮಯದಲ್ಲಿ ಅದರ ಸಾಮರ್ಥ್ಯವನ್ನು ಪ್ರದರ್ಶಿಸಿತು. ಉದಾಹರಣೆಗೆ, ಪ್ರಯೋಗಾಲಯದ ಉಪಕರಣಗಳನ್ನು ಗುರುತಿಸುವುದು, ಸರಳ ಮಾಹಿತಿಗಳನ್ನು ಹೊರತೆಗೆಯುವುದು ಮತ್ತು ಕೈಯಿಂದ ರಚಿಸಿದ ಅಣುಗಳ ಚಿತ್ರಗಳಿಗೆ ಅವುಗಳ ಸರಳೀಕೃತ ಪಠ್ಯರೂಪಗಳನ್ನು (SMILES ಸ್ಟ್ರಿಂಗ್ಸ್) ಹೊಂದಿಸುವುದು – ಈ ಎಲ್ಲಾ ಕಾರ್ಯಗಳಲ್ಲಿ ಅದು ಬಹುತೇಕ ಸಂಪೂರ್ಣ ಯಶಸ್ಸನ್ನು ಸಾಧಿಸಿದೆ.

ಆದರೆ, ಕೃತಕ ಬುದ್ಧಿಮತ್ತೆಯು ಕ್ಲಿಷ್ಟಕರ ಸಮಸ್ಯೆಗಳನ್ನು ಎದುರಿಸಿದಾಗ ಅದರ ಸಾಮರ್ಥ್ಯ ಕುಸಿಯಿತು. 'ದೈಶಿಕ ವಿಶ್ಲೇಷಣೆ'(spatial reasoning)ಯಲ್ಲಿ ಅದು ತೊಂದರೆಗಳನ್ನು ಎದುರಿಸಿತು. ಉದಾಹರಣೆಗೆ, ಅಣುವಿನ ವಿವಿಧ ಭಾಗಗಳ ನಡುವಿನ ಸಂಬಂಧಗಳನ್ನು ವಿವರಿಸುವುದು ಅಥವಾ ಒಂದು ವಸ್ತುವಿನ ಆಂತರಿಕ ರಚನೆಯನ್ನು ಗುರುತಿಸುವುದು ಅದರ ಮಿತಿಯನ್ನು ಮೀರಿತು. ಅಲ್ಲದೇ, ಎನ್. ಎಂ. ಆರ್. ಸ್ಪೆಕ್ಟ್ರೋಸ್ಕೋಪಿ (NMR spectroscopy) ಅಥವಾ ಅಣು ಭಾರಮಾಪನದಂತಹ (mass spectrometry) ಜಟಿಲ ಪ್ರಯೋಗಗಳ ಫಲಿತಾಂಶಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಎಐ ಬಹಳ ಕಷ್ಟಪಟ್ಟಿದೆ. ಇದು ಕೆಲವು ಸಂದರ್ಭಗಳಲ್ಲಿ ಅನುದ್ದಿಷ್ಟ (random) ಊಹೆಗಳಿಗಿಂತ ಸ್ವಲ್ಪ ಉತ್ತಮವಾಗಿ ಮಾತ್ರ ಕಾರ್ಯನಿರ್ವಹಿಸಿತು.

ಈ ಅಧ್ಯಯನದಲ್ಲಿ ಎದ್ದುಕಾಣುವ ಮತ್ತೊಂದು ಅಂಶವೆಂದರೆ, ಬಹು ಹಂತದ ತಾರ್ಕಿಕ ಚಿಂತನೆ ಅಗತ್ಯವಿರುವ ಕಾರ್ಯಗಳಲ್ಲಿ ಅದರ ಕಾರ್ಯಕ್ಷಮತೆ ತೀರಾ ಕಳಪೆಯಾಗಿತ್ತು. ಉದಾಹರಣೆಗೆ, ಒಂದು ಎಕ್ಸ್-ರೇ ಡಿಫ್ರಾಕ್ಷನ್ ಮಾದರಿಯಲ್ಲಿರುವ ಕೆಲವು ನಿರ್ದಿಷ್ಟ ಸ್ಥಳಗಳನ್ನು ಗುರುತಿಸಬಲ್ಲದಾಗಿದ್ದರೂ, ಅವುಗಳನ್ನು ಕ್ರಮವಾಗಿ ಜೋಡಿಸುವಲ್ಲಿ ವಿಫಲವಾಯಿತು. ಈ ಸಂಶೋಧನೆಯಿಂದ ಒಂದು ಪ್ರಮುಖ ವಿಷಯ ಹೊರಬಂದಿದೆ: ಇಂದಿನ ಕೃತಕ ಬುದ್ಧಿಮತ್ತೆ ಮಾದರಿಗಳು ನಿಜವಾದ ವೈಜ್ಞಾನಿಕ ತಿಳಿವಳಿಕೆಯನ್ನು ಬೆಳೆಸಿಕೊಳ್ಳುವುದಕ್ಕಿಂತ, ತಮ್ಮ ತರಬೇತಿಯ ದತ್ತಾಂಶದಲ್ಲಿರುವ ನಮೂನೆಗಳನ್ನು (patterns) ಗುರುತಿಸುವಲ್ಲಿ ಹೆಚ್ಚು ಅವಲಂಬಿತವಾಗಿವೆ. ಎಂದರೆ, ಅದು ಕಲಿತ ಮಾಹಿತಿಯ ಆಧಾರದ ಮೇಲೆ ಉತ್ತರಗಳನ್ನು ನೀಡುತ್ತದೆಯೆ ವಿನಾ ನಿಜವಾದ ವೈಜ್ಞಾನಿಕ ವಿಶ್ಲೇಷಣೆಯನ್ನು ನಡೆಸುವುದಿಲ್ಲ.



ಈ ಅಧ್ಯಯನವು ಕೃತಕ ಬುದ್ಧಿಮತ್ತೆ ವಿಫಲವಾಗಿರುವುದನ್ನು ತೋರಿಸುವುದರ ಬದಲಿಗೆ, ಅದು ಎಲ್ಲಿ ಸುಧಾರಣೆಗೊಳ್ಳಬೇಕು ಎಂಬುದನ್ನು ತಿಳಿಸುತ್ತದೆ. ಈ ಅಧ್ಯಯನದಲ್ಲಿ ಗುರುತಿಸಲಾದ ಮಿತಿಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದರಿಂದ, ಭವಿಷ್ಯದಲ್ಲಿ ಹೆಚ್ಚು ಪರಿಣಾಮಕಾರಿ, ವಿಶ್ವಾಸಾರ್ಹ ಮತ್ತು ಬುದ್ಧಿವಂತ ಎಐ -ಆಧಾರಿತ ವೈಜ್ಞಾನಿಕ ಸಹಾಯಕಗಳನ್ನು ಅಭಿವೃದ್ಧಿಪಡಿಸಲು ಒಂದು ಮಾರ್ಗಸೂಚಿ ಲಭ್ಯವಾಗಿದೆ. ಈ ಹೊಸ ಎಐ ಮಾದರಿಗಳು ಕೇವಲ ಹೆಚ್ಚಿನ ದತ್ತಾಂಶವನ್ನು ಆಧರಿಸುವ ಬದಲು, ನಿಜವಾದ ವೈಜ್ಞಾನಿಕ ತಾರ್ಕಿಕತೆ ಮತ್ತು ವಿವಿಧ ಬಗೆಯ ಮಾಹಿತಿಯನ್ನು ಒಗ್ಗೂಡಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಈ ಅಧ್ಯಯನ ತಿಳಿಸುತ್ತದೆ.

ಕೃತಕ ಬುದ್ಧಿಮತ್ತೆಯು ಕೇವಲ ಒಂದು ಸಂಕೀರ್ಣವಾದ ತಂತ್ರಜ್ಞಾನವಾಗಿ ಉಳಿಯದೆ, ನಿಜವಾದ ಜ್ಞಾನಯುತ ಸಹಭಾಗಿತ್ವದ ಸಾಧನವಾಗಿ ಬದಲಾಗುವ ನಿಟ್ಟಿನಲ್ಲಿ ಇದು ಒಂದು ಪ್ರಮುಖ ಹೆಜ್ಜೆಯಾಗಿದೆ. ಈ ಸಂಶೋಧನೆಯು ವಿಜ್ಞಾನ ಮತ್ತು ತಂತ್ರಜ್ಞಾನದ ಭವಿಷ್ಯದ ಬಗ್ಗೆ ಭರವಸೆಯನ್ನು ಮೂಡಿಸಿದ್ದು, ಕೃತಕ ಬುದ್ಧಿಮತ್ತೆಯು ಎಲ್ಲ ವಿಜ್ಞಾನಿಗಳಿಗೆ ಮತ್ತು ಸಂಶೋಧಕರಿಗೆ ಒಂದು ಅಮೂಲ್ಯ ಸಾಧನವಾಗಲಿದೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಜೀವ ಕ್ರಿಯೆಗಳು


31) ಮನುಷ್ಯರ ವಿಸರ್ಜನಾಂಗವ್ಯೂಹದ ಬಗ್ಗೆ ಬರೆಯಿರಿ

ಉತ್ತರ:– (.....ಹಿಂದಿನ ಸಂಚಿಕೆಯಿಂದ)

ಮೂತ್ರಕೋಶಕ್ಕೆ ಸಂಪರ್ಕಿಸುವ ಮೂತ್ರನಾಳ ಎಂಬ ಉದ್ದನೆಯ ನಾಳವನ್ನು ಪ್ರವೇಶಿಸುತ್ತದೆ. ಹಿಗ್ಗಿದ ಮೂತ್ರಕೋಶದ ಒತ್ತಡವು ಮೂತ್ರವನ್ನು ಮೂತ್ರದ್ವಾರದ ಮೂಲಕ ಹೊರಹಾಕಲು ಪ್ರೇರೇಪಿಸುವವರೆಗೂ ಮೂತ್ರವು ಮೂತ್ರಕೋಶದಲ್ಲಿ ಸಂಗ್ರಹವಾಗುತ್ತದೆ. ಮೂತ್ರಕೋಶವು ಸ್ನಾಯುವಿನಿಂದಾದ ಅಂಗವಾಗಿರುವುದರಿಂದ ಇದು ನರವ್ಯೂಹದ ನಿಯಂತ್ರಣಕ್ಕೆ ಒಳಪಟ್ಟಿದೆ. ಇದರ ಪರಿಣಾಮವಾಗಿ ನಾವು ಮೂತ್ರವಿಸರ್ಜಿಸಬೇಕೆಂಬ ಪ್ರಚೋದನೆಯನ್ನು ಸಾಮಾನ್ಯವಾಗಿ ನಿಯಂತ್ರಿಸಬಹುದಾಗಿದೆ.

32) ನೆಫ್ರಾನ್ ರಚನೆಯ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ


ಉತ್ತರ:–



ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಈ ಪಾಠದಿಂದ ನೀಡಲಾದ ಪ್ರಶ್ನೆ

1) ಮಾನವನ ವಿಸರ್ಜನಾಂಗ ವ್ಯೂಹವನ್ನು ತೋರಿಸುವ ಚಿತ್ರವನ್ನು ಬರೆಯಿರಿ ಮತ್ತು ಮೂತ್ರಕೋಶವನ್ನು ಗುರುತಿಸಿ

ಉತ್ತರ:– **(ಮಾರ್ಚ್– 2024)**



2) ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್‌ಗಳು ಮತ್ತು ಕೊಬ್ಬುಗಳು ಸಂಪೂರ್ಣವಾಗಿ ಪಚನಗೊಳ್ಳುವ ಸ್ಥಳ .... (ಸೆಪ್ಟೆಂಬರ್–2020)

ಎ) ಜಠರ ಬಿ) ದೊಡ್ಡಕರಳು
ಸಿ) ಸಣ್ಣ ಕರಳು ಡಿ) ಯಕೃತ್

ಉತ್ತರ:– ಸಿ

3) ನಮ್ಮ ದೇಹದಲ್ಲಿ ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್‌ಗಳು ಮತ್ತು ಕೊಬ್ಬಿನ ಪದಾರ್ಥಗಳು ಸಂಪೂರ್ಣ ಜೀರ್ಣಕ್ರಿಯೆ ನಡೆಯುವ ಭಾಗವನ್ನು ತಿಳಿಸಿ (ಸೆಪ್ಟೆಂಬರ್–2020)

ಉತ್ತರ:– ನಮ್ಮ ದೇಹದ ಸಣ್ಣ ಕರುಳಿನಲ್ಲಿ ಸಂಪೂರ್ಣ ಜೀರ್ಣಕ್ರಿಯೆಯು ನಡೆಯುತ್ತದೆ.

4) ಸಸ್ಯಗಳಲ್ಲಿ ಆಹಾರ ವಸ್ತುಗಳ ಸ್ಥಾನಾಂತರಣ ಕ್ರಿಯೆಯನ್ನು ವಿವರಿಸಿ (ಏಪ್ರಿಲ್– 2019)

ಉತ್ತರ:– ವಿಲೀನಗೊಳ್ಳಬಲ್ಲ ದ್ಯುತಿಸಂಶ್ಲೇಷಣೆಯ ಉತ್ಪನ್ನಗಳ ಸಾಗಾಣಿಕೆಯನ್ನು ವಸ್ತು ಸ್ಥಾನಾಂತರಣ ಎನ್ನುವರು.

ಆಹಾರ ವಸ್ತುಗಳ ಸ್ಥಾನಾಂತರಣಕ್ರಿಯೆಯು ಸಸ್ಯಗಳ ಫ್ಲೋಯಮ್ ಅಂಗಾಂಶದಲ್ಲಿ ಜರುಗುತ್ತದೆ.

ಈ ಕ್ರಿಯೆಯು ಜರಡಿನಾಳ ಮತ್ತು ಪಾರ್ಶ್ವ ಸಂಗಾತಿ ಜೀವಕೋಶಗಳ ಸಹಾಯದಿಂದ ಮೇಲ್ಮುಖ ಹಾಗೂ ಕೆಳಮುಖ ದಿಕ್ಕುಗಳಲ್ಲಿ ನಡೆಯುತ್ತದೆ

ದ್ಯುತಿಸಂಶ್ಲೇಷಣೆಯ ಉತ್ಪನ್ನಗಳು ಎಲೆಗಳಿಂದ ಎಲ್ಲಾ ಭಾಗಗಳಿಗೂ ಸಾಗಾಣಿಕೆಯಾಗುತ್ತದೆ.

5) ಮಾನವನ ಸಣ್ಣ ಕರುಳಿನಲ್ಲಿ ನಡೆಯುವ ಜೀರ್ಣ ಕ್ರಿಯೆಯನ್ನು ವಿವರಿಸಿ (ಏಪ್ರಿಲ್– 2019)

ಉತ್ತರ:– ಮಾನವನ ಸಣ್ಣ ಕರುಳಿನಲ್ಲಿ ನಡೆಯುವ ಜೀರ್ಣಕ್ರಿಯೆ:– ಸಣ್ಣ ಕರಳು ಪ್ರೋಟೀನ್‌ಗಳು, ಕಾರ್ಬೋಹೈಡ್ರೇಟ್‌ಗಳು ಮತ್ತು ಕೊಬ್ಬುಗಳು ಸಂಪೂರ್ಣವಾಗಿ ಪಚನವಾಗುವ ಸ್ಥಳವಾಗಿದೆ.

ಸಣ್ಣ ಕರುಳಿನ ಭಿತ್ತಿಯಲ್ಲಿ ಕಂಡುಬರುವ ಗ್ರಂಥಿಗಳು ಕರುಳಿನ ರಸವನ್ನು ಸ್ರವಿಸುತ್ತದೆ

ಇಲ್ಲಿರುವ ಕಿಣ್ವಗಳು ಪ್ರೋಟೀನ್‌ಅನ್ನು ಅಮೈನೋ ಆಮ್ಲಗಳಾಗಿ ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳನ್ನು ಗ್ಲೋಕೋಸ್ ಆಗಿ ಹಾಗೂ ಕೊಬ್ಬುಗಳನ್ನು ಕೊಬ್ಬಿನ ಆಮ್ಲ ಮತ್ತು ಗ್ಲಿಸರಾಲ್ ಆಗಿ ಪರಿವರ್ತಿಸುತ್ತವೆ.

ಜೀರ್ಣವಾದ ಆಹಾರವನ್ನು ಸಣ್ಣಕರುಳಿನಲ್ಲಿರುವ ವಿಲ್ಲೈಗಳಿಂದ ಹೀರಿಕೆಯಾಗುತ್ತದೆ.

6)ಕ್ಸೈಲಂ ಅಂಗಾಂಶದ ಕಾರ್ಯಗಳನ್ನು ಫ್ಲೋಯಂ ಅಂಗಾಂಶದ ಕಾರ್ಯಗಳೊಂದಿಗೆ ಹೋಲಿಸಿ

ಉತ್ತರ:– (ಜೂನ್ –2023)

ಕ್ಸೈಲಂ ಅಂಗಾಂಶ	ಫ್ಲೋಯಂ ಅಂಗಾಂಶ
ನೀರು ಮತ್ತು ಲವಣಗಳನ್ನು/ ನಿರವಯವ ವಸ್ತುಗಳನ್ನು ಸಾಗಿಸುತ್ತದೆ	ಆಹಾರ/ಸಾವಯವ ವಸ್ತುಗಳನ್ನು ಸಾಗಿಸುತ್ತದೆ.
ವಸ್ತುಗಳ ಹರಿವು ಏಕಮುಖವಾಗಿರುತ್ತದೆ.	ವಸ್ತುಗಳ ಹಲವು ದ್ವಿಮುಖ (ಮೇಲ್ಮುಖ ಮತ್ತು ಕೆಳಮುಖವಾಗಿರುತ್ತದೆ)
ಕ್ಸೈಲಂ ನಳಿಕೆಗಳು ಮತ್ತು ನಾಳಗಳು ಬೇರಿನಿಂದ ಕಾಂಡಕ್ಕೆ ವಸ್ತುಗಳನ್ನು ಸಾಗಿಸುತ್ತದೆ.	ಜರಡಿನಾಳ ಮತ್ತು ಸಂಗಾತಿ ಕೋಶಗಳು ವಸ್ತುಗಳನ್ನು ಎಲೆಗಳಿಂದ ಎಲ್ಲಾ ಭಾಗಗಳಿಗೂ ಸಾಗಿಸುತ್ತದೆ.
ಪೋಷಣ(ಕ್ರಿಯೆ) ಒತ್ತಡದಿಂದ ಕಾರ್ಯನಿರ್ವಹಣೆ	ಅಭಿಸರಣಾ ಒತ್ತಡದಿಂದ ಕಾರ್ಯನಿರ್ವಹಣೆ

7) ದ್ಯುತಿ ಸಂಶ್ಲೇಷಣೆಗೆ ಅಗತ್ಯವಾದ ಅಂಶಗಳು ಯಾವುವು? ಈ ಪ್ರಕ್ರಿಯೆಯಲ್ಲಿ ಜರುಗುವ ಘಟನೆಗಳನ್ನು ತಿಳಿಸಿ. ಈ ಪ್ರಕ್ರಿಯೆಯನ್ನು ಸರಿದೂಗಿಸುವ ರಾಸಾಯನಿಕ ಸಮೀಕರಣದ ಮೂಲಕ ವ್ಯಕ್ತಪಡಿಸಿ (ಜೂನ್ 2022)

ಉತ್ತರ:– ದ್ಯುತಿ ಸಂಶ್ಲೇಷಣೆಗೆ ಅಗತ್ಯವಾದ ಅಂಶಗಳು:– ಕಾರ್ಬನ್ ಡೈ ಆಕ್ಸೈಡ್, ನೀರು, ಖನಿಜಗಳು, ಸೂರ್ಯನ ಬೆಳಕು, ಮತ್ತು ಪತ್ರಹರಿತ್ತು

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

DIFFERENTIABILITY

Use of Chain Rule *(....Contd)*

Cor. $\frac{d}{dx}a^{f(x)} = \{a^{f(x)}.\log_e a\}.\frac{d}{dx}f(x)$
$= \{a^{f(x)}.\log_e a\}.f'(x)$

Cor. $\frac{d}{dx}e^{f(x)} = e^{f(x)}.\frac{d}{dx}f(x) = e^{f(x)}.f'(x)$

Cor. $\frac{d}{dx}\{f(x)\}^n = n\{f(x)\}^{n-1}..\frac{d}{dx}f(x)$
$= n\{f(x)\}^{n-1}.f'(x)$

2. Differentiate the following w. r. t. x:

i) $4e^x$ ii) $5(3^x)$ iii) e^{2x} iv) $\log_3 x$

v) $= \frac{1}{\log_x 4}$ vi) $\log_e x^4$ vii) $\log x^2$

viii) $\sin(\cos x^2)$

Soln :–(i) $\frac{d}{dx}4e^x = 4\frac{d}{dx}e^x = 4e^x$ $\left[\because \frac{d}{dx}e^x = e^x\right]$

(ii) $\frac{d}{dx}5(3^x) = 5\frac{d}{dx}3^x = 5(3^x \log_e 3)$
$\left[\because \frac{d}{dx}a^x = a^x \log_e a\right]$

(iii) $\frac{d}{dx}e^{2x} = \frac{d}{dx}(e^2)^x = (e^2)^x \log_e e^2$
$= e^{2x}(2\log_e e) = e^{2x}(2)(1) = 2e^{2x}$
$\left[\because \frac{d}{dx}a^x = a^x \log_e a \text{ and } \log_e e = 1\right]$

Second Method (by Chain Rule)

$\frac{d}{dx}e^{2x} = e^{2x}\frac{d}{dx}(2x)$
$= (e^{2x})2\frac{d}{dx}x = e^{2x}(2)(1)$
$= 2e^{2x}.$

iv) $\frac{d}{dx}\log_3 x = \frac{1}{x}\log_3 e$
$\left[\because \frac{d}{dx}\log_a x = \frac{1}{x}\log_a e\right]$

v) $\frac{d}{dx}\left(\frac{1}{\log_x 4}\right) = \frac{d}{dx}\log_4 x$
$= \frac{1}{x}\log_4 e$ $\left[\because \frac{1}{\log_b a}\log_a b\right]$

vi) $\frac{d}{dx}\log_e x^4 = \frac{d}{dx}4\log_e x$
$= 4\frac{d}{dx}\log_e x = 4\left(\frac{1}{x}\right) = \frac{4}{x}.$

vii) $\frac{d}{dx}\log x^2 = \frac{d}{dx}2\log x$
$= 2\frac{d}{dx}\log x = 2\left(\frac{1}{x}\right) = \frac{2}{x}$

viii) $\frac{d}{dx}\sin(\cos x^2) = \cos(\cos x^2)\frac{d}{dx}\cos x^2$
$= \cos(\cos x^2)\left\{(-\sin x^2)\frac{d}{dx}x^2\right\}$
$= -\cos(\cos x^2)(\sin x^2)(2x)$

3. Find $\frac{d}{dx}\log\left[e^x\left(\frac{x-2}{x+2}\right)^{3/4}\right].$

Soln :–Let $y = \log e^x\left(\frac{x-2}{x+2}\right)^{3/4}$

$\Rightarrow y = \log e^x + \log\left(\frac{x-2}{x+2}\right)^{3/4}$
$= x\log e + \frac{3}{4}\log\frac{x-2}{x+2}$
$= x(1) + \frac{3}{4}\{\log(x-2) - \log(x+2)\}$
$= x + \frac{3}{4}\log(x-2) - \frac{3}{4}\log(x+2)$

$\therefore \frac{d}{dx}y = \frac{d}{dx}x + \frac{d}{dx}\frac{3}{4}\log(x-2) - \frac{d}{dx}\frac{3}{4}\log(x+2)$
$= 1 + \frac{3}{4}.\frac{1}{x-2}.\frac{d}{dx}(x-2) - \frac{3}{4}.\frac{1}{x+2}.\frac{d}{dx}(x+2)$
$= 1 + \frac{3}{4}.\frac{1}{x-2}.(1-0) - \frac{3}{4}.\frac{1}{x+2}.(1+0)$
$= 1 + \frac{3}{4}\left\{\frac{1}{x-2} - \frac{1}{x+2}\right\}$
$= 1 + \frac{3}{4}\left\{\frac{x+2-x+2}{(x-2)(x+2)}\right\}$
$= 1 + \frac{3}{x^2-4} = \frac{x^2-4+3}{x^2-4} = \frac{x^2-1}{x^2-4}$

4. Differentiate the following functions w.r.t. x: (i) x (sin x) e^x (ii) $\frac{e^x \log x}{x^2}$

Soln :–(i) $\frac{d}{dx}x(\sin x)e^x$
$= (\sin x)e^x\frac{d}{dx}x + xe^x\frac{d}{dx}\sin x$
$+ x\sin x\frac{d}{dx}e^x$
$= (\sin x)e^x(1) + xe^x\cos x$
$+ (x\sin x)e^x$
$= (\sin x + x\cos x + x\sin x)e^x.$

(ii) $\frac{d}{dx}\frac{e^x \log x}{x^2}$ using Quotient Rule, we have

$= \frac{x^2\frac{d}{dx}e^x\log x - e^x\log x\frac{d}{dx}x^2}{x^4}$

$= \frac{x^2\left\{e^x.\frac{1}{x} + (\log x)(e^x)\right\} - (e^x\log x)(2x)}{x^4}$

$= \frac{xe^x\{1 + x\log x\} - 2xe^x\log x}{x^4}$

$= \frac{xe^x\{1 + x\log x - 2\log x\}}{x^4}$

$= \frac{e^x\{1 + x\log x - 2\log x\}}{x^3}$

5. Differentiate $\frac{\sec x}{\operatorname{cosec} x}$

Given that $\frac{\sec x}{\operatorname{cosec} x} = \tan x$

and $\frac{d}{dx}\tan x = \sec^2 x$ **by Quotient Rule.**

(Contd.....)

ನೀಟ್: ಹೆಚ್ಚುವರಿ 400 ವೈದ್ಯಕೀಯ ಸೀಟು ಲಭ್ಯ

ಬೆಂಗಳೂರು: ಕರ್ನಾಟಕಕ್ಕೆ ಹೆಚ್ಚುವರಿ 400 ವೈದ್ಯಕೀಯ ಸೀಟುಗಳು ಲಭ್ಯವಾಗಿದ್ದು, ಎರಡನೇ ಸುತ್ತಿನ ಸೀಟು ಹಂಚಿಕೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪರಿಗಣಿಸಿದೆ.

ನೀಟ್ ಫಲಿತಾಂಶದ ನಂತರ ಪ್ರಕಟಿಸಿದ್ದ ಮೊದಲ ಸುತ್ತಿನ ಸೀಟು ಹಂಚಿಕೆಯಲ್ಲಿ 9,263 ಸೀಟುಗಳು ಲಭ್ಯವಿದ್ದವು. ರಾಜ್ಯದ ಎಂಟು ವೈದ್ಯಕೀಯ ಕಾಲೇಜುಗಳಲ್ಲಿ ತಲಾ 50 ಸೀಟುಗಳ ಹೆಚ್ಚಳಕ್ಕೆ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಅನುಮತಿ ನೀಡಿದ್ದು, ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ ಸೀಟುಗಳ ಸಂಖ್ಯೆ 9,663ಕ್ಕೆ ಏರಿಕೆಯಾಗಿದೆ.

ರಾಜ್ಯ ಸರ್ಕಾರ 15 ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಹೆಚ್ಚುವರಿ ಸೀಟುಗಳಿಗಾಗಿ ಮನವಿ ಮಾಡಿತ್ತು. ಆದರೆ, ಮೂಲಸೌಕರ್ಯ ಸಮಸ್ಯೆಗಳನ್ನು ಪರಿಗಣಿಸಿದ ಎನ್‌ಎಂಸಿ ಬೆಳಗಾವಿ, ಚಿಕ್ಕಬಳ್ಳಾಪುರ, ಕಲಬುರಗಿ, ಹಾಸನ, ಮೈಸೂರು, ರಾಯಚೂರು, ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರಗಳ ಸೀಟು ಹೆಚ್ಚಳ ಮಾಡಲು ಸಮ್ಮತಿಸಿದೆ.

ಟೊಮೆಟೊ ದರ ದಿಢೀರ್ ಕುಸಿತ

ವಾರದ ಹಿಂದೆ ₹750 ಇದ್ದ ಬಾಕ್ಸ್ ₹300ಕ್ಕೆ ಕುಸಿತ • ಕೆ.ಜಿ ಟೊಮೆಟೊ ಬೆಲೆ ₹15–₹20

ಪ್ರಜಾವಾಣಿ ವಾರ್ತೆ

ಕೋಲಾರ: ಮಳೆ, ಮೋಡ ಕವಿದ ವಾತಾವರಣ ಮತ್ತು ರೋಗಬಾಧೆಯಿಂದ ಗುಣಮಟ್ಟ ಕಳೆದು ಕೊಳ್ಳುತ್ತಿರುವ ಟೊಮೆಟೊ ಧಾರಣೆ ಮಾರುಕಟ್ಟೆಯಲ್ಲಿ ದಿಢೀರ್ ಕುಸಿತ ಕಂಡಿದೆ.

ವಾರದ ಹಿಂದೆ ಕೋಲಾರ ಎಪಿಎಂಸಿ ಹರಾಜಿನಲ್ಲಿ ₹750ಕ್ಕೆ ಮಾರಾಟವಾಗಿದ್ದ 15 ಕೆ.ಜಿ ಟೊಮೆಟೊ ಬಾಕ್ಸ್ ಈಗ ₹300ಕ್ಕೆ ಕುಸಿದಿದೆ. ಗುಣಮಟ್ಟದ ಟೊಮೆಟೊ ಬಾಕ್ಸ್‌ಗೆ ಮಾತ್ರ ₹300 ಇದ್ದರೆ, ಇನ್ನುಳಿದ ಟೊಮೆಟೊ ಬಾಕ್ಸ್‌ಗಳು ಕೇವಲ ₹100ಕ್ಕೆ ಮಾರಾಟವಾಗುತ್ತಿವೆ.

ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ ಟೊಮೆಟೊ ಬೆಲೆ ₹15ರಿಂದ ₹20 ಇದೆ. ಹೆಚ್ಚು ಟೊಮೆಟೊ ಬೆಳೆಯುವ ಕೋಲಾರ ಜಿಲ್ಲೆಯಲ್ಲಿ ಸುಗ್ಗಿ ಮುಗಿಯುತ್ತಿದೆ. ಸಾಲು, ಸಾಲು ಹಬ್ಬಗಳಿಂದಾಗಿ ಉತ್ತಮ ಲಾಭದ ನಿರೀಕ್ಷೆಯಲ್ಲಿದ್ದ ಬೆಳೆಗಾರರು ದರ ಕುಸಿತದಿಂದ ನಿರಾಶರಾಗಿದ್ದಾರೆ.

ಮುಖ್ಯಾಂಶಗಳು
- ಬೆಲೆ ಹೆಚ್ಚಳ ನಿರೀಕ್ಷೆಯಲ್ಲಿದ್ದ ರೈತರಿಗೆ ನಿರಾಶೆ
- ಮಾರುಕಟ್ಟೆಗೆ ಟೊಮೆಟೊ ಆವಕದಲ್ಲಿ ಕುಸಿತ
- ಸದ್ಯ 17 ಸಾವಿರ ಕ್ವಿಂಟಲ್ ಟೊಮೆಟೊ ಆವಕ

ಎಪಿಎಂಸಿ ಮಾರುಕಟ್ಟೆಗೆ ಮಂಗಳವಾರ 17 ಸಾವಿರ ಕ್ವಿಂಟಲ್ ಅಂದರೆ 1.25 ಲಕ್ಷ ಬಾಕ್ಸ್ ಟೊಮೆಟೊ ಆವಕವಾಗಿದೆ. ಹಿಂದೆ ಇದೇ ಅವಧಿಯಲ್ಲಿ ದಿನಕ್ಕೆ 30 ಸಾವಿರ ಕ್ವಿಂಟಲ್‌ವರೆಗೆ ಟೊಮೆಟೊ ಮಾರುಕಟ್ಟೆಗೆ ಪೂರೈಕೆ ಆಗುತಿತ್ತು.

'ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಹರಿಯಾಣ, ರಾಜಸ್ಥಾನ ರಾಜ್ಯಗಳಲ್ಲಿ ಟೊಮೆಟೊಗೆ ಬೇಡಿಕೆ ಇದೆ. ಗುಣಮಟ್ಟದ ಟೊಮೆಟೊ ಮಾರುಕಟ್ಟೆಗೆ ಬರುತ್ತಿಲ್ಲ. ಗುಣಮಟ್ಟವಿಲ್ಲದಿದ್ದರೆ ಖರೀದಿ ಮಾಡಲ್ಲ. ಲಾರಿಯಲ್ಲಿ ಒಯ್ಯಲು ಮಾರಾಟವಾಗದ ಟೊಮೆಟೊ ಹಾಳಾಗುತ್ತಿದೆ. ಹೀಗಾಗಿ, ಟೊಮೆಟೊ ಸಾಗಿಸಲು ವರ್ತಕರು ಹಿಂದೇಟು ಹಾಕುತ್ತಿದ್ದಾರೆ' ಎಂದು ಕೋಲಾರ ಎಪಿಎಂಸಿ ಕಾರ್ಯದರ್ಶಿ ಕಿರಣ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಜಿಲ್ಲೆಯಲ್ಲಿ ಟೊಮೆಟೊ ಬೆಳೆಯುವ ಪ್ರದೇಶದ ವಿಸ್ತೀರ್ಣ ತಗ್ಗಿಲ್ಲ. ಹವಾಮಾನ ವೈಪರೀತ್ಯ, ರೋಗಬಾಧೆ ಕಾರಣಗಳಿಂದ ಫಸಲು ಕಡಿಮೆ ಆಗಿದೆ ಎನ್ನುತ್ತಾರೆ ಅವರು.



ಕೋಲಾರ ಎಪಿಎಂಸಿಯಲ್ಲಿ ಹರಾಜಿಗೆ ಇಟ್ಟಿದ್ದ ಟೊಮೆಟೊ

> ಮಳೆ ಕಾರಣ ಟೊಮೆಟೊ ಗುಣಮಟ್ಟಕ್ಕೆ ಹೊಡೆತ ಬಿದ್ದಿದೆ. ಫಸಲೂ ಕಡಿಮೆ ಆಗಿದ್ದು, ದರವಿಲ್ಲ. ಹೀಗಾಗಿ, ಈ ಟೊಮೆಟೊ ಖರೀದಿಸಲು ಮಾರುಕಟ್ಟೆಗೆ, ರೈತರಿಗೆ ನಷ್ಟ ಉಂಟಾಗಿದೆ
> – ಕಿರಣ್, ಕೋಲಾರ ಎಪಿಎಂಸಿ ಕಾರ್ಯದರ್ಶಿ

ಏಷ್ಯಾದ 2ನೇ ದೊಡ್ಡ ಮಾರುಕಟ್ಟೆ

ಕೋಲಾರದ ಎಪಿಎಂಸಿ ಟೊಮೆಟೊ ಮಾರಾಟದಲ್ಲಿ ಏಷ್ಯಾದಲ್ಲೇ ಎರಡನೇ ಅತಿದೊಡ್ಡ ಮಾರುಕಟ್ಟೆ ಎನಿಸಿದೆ. ಚಿತ್ತೂರು ಮತ್ತು ಚಳ್ಳಕೆರೆ ಸೇರಿ ವಿವಿಧೆಡೆಯ ಟೊಮೆಟೊ ಕೂಡಾ ಬರಲಿದೆ. ಇಲ್ಲಿಂದ ಬೆಂಗಳೂರು ಹೊರತುಪಡಿಸಿ 15ರಿಂದ 20 ರಾಜ್ಯಗಳಿಗೆ ಪೂರೈಕೆ ಆಗಲಿದೆ.

2025–26ನೇ ಸಾಲಿನ ಮದ್ಯ ಮಾರಾಟ
₹16 ಸಾವಿರ ಕೋಟಿ ಆದಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಮಾರಾಟದಿಂದ 2025–26ನೇ ಸಾಲಿನಲ್ಲಿ ₹40,000 ಕೋಟಿ ಆದಾಯ ನಿರೀಕ್ಷೆ ಇದ್ದು, ಏಪ್ರಿಲ್‌ನಿಂದ ಆಗಸ್ಟ್ ವೇಳೆಗೆ ₹16,358.76 ಕೋಟಿ ಸಂಗ್ರಹಿಸುವ ಮೂಲಕ ಶೇ 40ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲ ಎರಡು ತ್ರೈಮಾಸಿಕದಲ್ಲಿ ₹16,290 ಕೋಟಿ ಆದಾಯದ ನಿರೀಕ್ಷೆ ಇತ್ತು. ₹16,358 ಕೋಟಿ ಆದಾಯ ಬಂದಿದ್ದು, ನಿರೀಕ್ಷೆಗಿಂತ ₹68.78 ಕೋಟಿ ಹೆಚ್ಚುವರಿ ಸಂಗ್ರಹವಾಗಿದೆ. ಡಿಜಿಟಲ್ ವ್ಯವಸ್ಥೆ ಜಾರಿಗೆ ತಂದಿದ್ದು, 5 ವರ್ಷಗಳಿಗೆ ಒಮ್ಮೆ ಆನ್‌ಲೈನ್ ಮೂಲಕ ಪರವಾನಗಿ ನವೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಬೀಳಲಿದೆ. ಸಿಎಲ್–7 ಪರವಾನಗಿ ನೀಡುವ ಹಂತ ಕಡಿತಗೊಳಿಸಲಾಗಿದೆ ಎಂದರು.

'ತೆರಿಗೆ ಸಂಗ್ರಹ, ಇಲಾಖೆಯ ಕೆಲಸಗಳಲ್ಲಿ ನಿರ್ಲಕ್ಷ್ಯ ತೋರಿದ 'ಎ' ವೃಂದದ 31, 'ಬಿ' ವೃಂದದ 20 ಹಾಗೂ 43 ಅಬಕಾರಿ ಸಬ್‌ಇನ್‌ಸ್ಪೆಕ್ಟರ್‌ಗಳ ಮೇಲೆ ಶಿಸ್ತು ಕ್ರಮಕೈಗೊಳ್ಳಲಾಗಿದೆ. ಆಡಳಿತ ಸುಧಾರಣಾ ಆಯೋಗ ನೀಡಿದ ಶಿಫಾರಸುಗಳನ್ನು ಸಮರ್ಪಕವಾಗಿ ಜಾರಿಗೊಳಿಸಲಾಗುತ್ತಿದೆ. 62 ಶಿಫಾರಸುಗಳಲ್ಲಿ ಶೇ 95 ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರಲು ಆದೇಶ ನೀಡಲಾಗಿದೆ' ಎಂದು ಮಾಹಿತಿ ನೀಡಿದರು.

'ಮಾದಕ ದ್ರವ್ಯ ಪದಾರ್ಥಗಳ ನಿಯಂತ್ರಣದ ಬಗ್ಗೆ ಸಾಕಷ್ಟು ಕ್ರಮವಹಿಸಬೇಕು. ಸಣ್ಣ ಪ್ಯಾಕೇಟ್‌ನಲ್ಲಿ ಸಿಎಚ್ ಪೌಡರ್ ತಂದು, ನೂರಾರು ಲೀಟರ್ ಮದ್ಯ ತಯಾರಿಸುವವರನ್ನು ಪತ್ತೆ ಹಚ್ಚಿ, ಕಠಿಣ ಕ್ರಮ ಕೈಗೊಳ್ಳಬೇಕು. ಎನ್‌ಡಿಪಿಎಸ್ ಕಾಯ್ದೆಯನ್ನು ಪರಿಣಾಮವಾಗಿ ಜಾರಿಗೊಳಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಅಕ್ರಮ ಮಾರಾಟ, ತಯಾರಿಕಾ ಘಟಕಗಳ ಮೇಲೆ ದಾಳಿ ನಡೆಸಿ 93,751 ಲೀಟರ್ ಮದ್ಯ, 13,453 ಲೀಟರ್ ಸೇಂದಿ, 4,257 ಲೀಟರ್ ಕಳ್ಳಬಟ್ಟಿ, 7,503 ಲೀಟರ್ ಬೆಲ್ಲದ ಕೊಳೆ ವಶಕ್ಕೆ ಪಡೆಯಲಾಗಿದೆ ಎಂದರು.

ಎಂಎಸ್‌ಐಎಲ್‌ಗಿಲ್ಲ ಹೊಸ ಪರವಾನಗಿ

ಎಂಎಸ್‌ಐಎಲ್‌ಗೆ ಇನ್ನು ಮುಂದೆ ಮದ್ಯದ ಮಳಿಗೆ ತೆರೆಯಲು ಹೊಸ ಪರವಾನಗಿ ನೀಡುವುದಿಲ್ಲ. ಎಂಎಸ್‌ಐಎಲ್ ನೆರೆದಂತೆ ನಿಷ್ಕ್ರಿಯವಾಗಿರುವ ಪರವಾನಗಿಗಳನ್ನು ಹರಾಜು ಹಾಕಲಾಗುವುದು ಎಂದು ತಿಮ್ಮಾಪುರ ಹೇಳಿದರು. ಕಳೆದ ಐದು ತಿಂಗಳಲ್ಲಿ ಬಿಯರ್ ಮಾರಾಟದಲ್ಲಿ ಕುಸಿತವಾಗಿದೆ. ಐಎಂಎಲ್ ಮಾರಾಟದಲ್ಲಿ ಏರಿಕೆಯಾಗಿದೆ. 285 ಲಕ್ಷ ಲೀಟರ್ ಐಎಂಎಲ್ ಮಾರಾಟವಾಗಿದೆ. 164 ಲಕ್ಷ ಲೀಟರ್ ಬಿಯರ್ ಮಾರಾಟವಾಗಿದೆ. ಕಳೆದ ಸಾಲಿಗಿಂತ 43 ಲಕ್ಷ ಲೀಟರ್ ಬಿಯರ್ ಕಡಿಮೆ, 4 ಲಕ್ಷ ಲೀಟರ್ ಹೆಚ್ಚು ಐಎಂಎಲ್ ಮಾರಾಟವಾಗಿದೆ. ಪ್ರೀಮಿಯಂ ಮದ್ಯ ಮಾರಾಟ ದರ ಕುರಿತು ಹೆಚ್ಚಿದ್ದು, ದರ ಪರಿಷ್ಕರಣೆ ಕುರಿತು ಚಿಂತನೆ ನಡೆಸಲಾಗುವುದು ಎಂದರು.



ತಿಮ್ಮಾಪುರ

ಚಿನ್ನ ಕಳ್ಳಸಾಗಣೆ ಪ್ರಕರಣ: ₹277 ಕೋಟಿ ದಂಡ

ಒಂದನೇ ಪುಟದಿಂದ...

ಚಿನ್ನಕಳ್ಳಸಾಗಣೆಯಲ್ಲಿ ಭಾಗಿಯಾದ ಆರೋಪದಲ್ಲಿ ಉದ್ಯಮಿ ತರುಣ್ ಕೊಂಡರಾಜು, ಕಳ್ಳಸಾಗಣೆಯ ಚಿನ್ನ ಮಾರಾಟ ಮಾಡಿದ ಮತ್ತು ಹವಾಲಾ ಮೂಲಕ ಹಣ ಕಳುಹಿಸಿದ ಆರೋಪದಲ್ಲಿ ಆಭರಣ ವ್ಯಾಪಾರಿ ಸಾಹಿಲ್ ಸಖಾರಿಯಾ ಜೈನ್ ಮತ್ತು ಭರತ್ ಕುಮಾರ್ ಜೈನ್ ಅವರನ್ನು ಡಿಆರ್‌ಐ ಬಂಧಿಸಿತ್ತು. ಇವರೆಲ್ಲ ನಗರದ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿದ್ದಾರೆ.

ಡಿಆರ್‌ಐ ಮುಂಬೈ ವಿಭಾಗದ ಅಧಿಕಾರಿಗಳು ಮಂಗಳವಾರ ಕೇಂದ್ರ ಕಾರಾಗೃಹಕ್ಕೆ ತೆರಳಿ, ನಾಲ್ವರು ಅಪರಾಧಿಗಳಿಗೂ ನೋಟಿಸ್ ನೀಡಿದ್ದಾರೆ. ಜತೆಗೆ ಅವರ ವಿರುದ್ಧದ ಆರೋಪಗಳು ಮತ್ತು ಅವುಗಳಿಗೆ ಸಂಬಂಧಿಸಿದ ದಾಖಲೆಗಳನ್ನೂ ನೋಟಿಸ್‌ನೊಂದಿಗೆ ನೀಡಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.

ಅಂಕಿ ಅಂಶಗಳು

250 ಆರೋಪಿಗಳಿಗೆ ನೀಡಲಾಗಿರುವ ನೋಟಿಸ್‌ನ ಪುಟಗಳ ಸಂಖ್ಯೆ

2,500 ನೋಟಿಸ್ ಜತೆಗೆ ನೀಡಲಾಗಿರುವ ದಾಖಲೆ ಪತ್ರಗಳ ಪುಟಗಳ ಸಂಖ್ಯೆ

'2024ರ ನವೆಂಬರ್‌ನಿಂದ 2025ರ ಫೆಬ್ರುವರಿ ನಡುವೆ ರನ್ಯಾ ನಾಲ್ಕು ಬಾರಿ ಚಿನ್ನ ಕಳ್ಳಸಾಗಣೆ ಮಾಡಿದ್ದು, ಒಟ್ಟು 49.6 ಕೆ.ಜಿ.ಯಷ್ಟು ಚಿನ್ನವನ್ನು ದುಬೈನಿಂದ ಬೆಂಗಳೂರಿಗೆ ತಂದಿದ್ದರು. ಅಷ್ಟೂ ಚಿನ್ನವನ್ನು ಸಾಹಿಲ್ ₹40.07 ಕೋಟಿಗೆ ಮಾರಾಟ ಮಾಡಿ, ಅದರಲ್ಲಿ ₹38.35 ಕೋಟಿಯನ್ನು ಹವಾಲಾ ಮೂಲಕ ದುಬೈಗೆ ಕಳುಹಿಸಿದ್ದ. ಚಿನ್ನದ ಮಾರುಕಟ್ಟೆ ಮೌಲ್ಯ, ಆಮದು ತೆರಿಗೆಯನ್ನು ಒಳಗೊಂಡು ದಂಡ ನಿರ್ಧರಿಸಲಾಗಿದೆ' ಎಂದು ಡಿಆರ್‌ಐ ಮೂಲಗಳು ಮಾಹಿತಿ ನೀಡಿವೆ.

'ಕಳ್ಳಸಾಗಣೆಯ ಚಿನ್ನವನ್ನು ವಸೂಲಿ ಮಾಡಬೇಕಿದ್ದು, ಅದು ಲಭ್ಯವಿಲ್ಲದೇ ಇದ್ದರೆ ಆರೋಪಿಗಳಿಂದ ಅದರ ಮೊತ್ತವನ್ನು ವಸೂಲಿ ಮಾಡಬಹುದಾಗಿದೆ. ಇಲ್ಲಿ ಪೂರ್ಣ ಪ್ರಮಾಣದ ಚಿನ್ನ ಲಭ್ಯವಿರದ ಕಾರಣಕ್ಕೆ, ದಂಡ ಪಾವತಿಸುವಂತೆ ನೋಟಿಸ್ ನೀಡಲಾಗಿದೆ. ಆರೋಪಿಗಳು ದಂಡ ಪಾವತಿಸಿದರೂ ಅವರ ವಿರುದ್ಧದ ಅಪರಾಧ ಪ್ರಕರಣಗಳು ಮುಂದುವರಿಯಲಿವೆ' ಎಂದು ಮೂಲಗಳು ವಿವರಿಸಿವೆ.

ಕಾಳಿಂಗ: ವರದಿಗೆ ಸೂಚನೆ

ಬೆಂಗಳೂರು: ಶಿವಮೊಗ್ಗ ಜಿಲ್ಲೆ ಆಗುಂಬೆಯಲ್ಲಿ 'ಆಗುಂಬೆ ಮಳೆಕಾಡು ಸಂಶೋಧನಾ ಕೇಂದ್ರ'ದ ಚಟುವಟಿಕೆಗಳ ಕುರಿತು ಬಂದಿರುವ ದೂರುಗಳ ಹಿನ್ನೆಲೆಯಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ನೇತೃತ್ವದ ತಂಡದಿಂದ ಪರಿಶೀಲನೆ ನಡೆಸಿ, 10 ದಿನಗಳ ಒಳಗೆ ವರದಿ ಸಲ್ಲಿಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಸೂಚನೆ ನೀಡಿದ್ದಾರೆ.

ಅರಣ್ಯ ಇಲಾಖೆಯ ಅನುಮತಿ ಇಲ್ಲದೇ ಅರಣ್ಯ ಭೂಮಿ ಒತ್ತುವರಿ ಹಾಗೂ ಕಟ್ಟಡ ನಿರ್ಮಾಣ, ವನ್ಯಜೀವಿ ಅಭಯಾರಣ್ಯ ವ್ಯಾಪ್ತಿಯಲ್ಲಿ ಪರಿಸರ ಸೂಕ್ಷ್ಮ ಪ್ರದೇಶದ ಖರೀದಿ, ಕಾಳಿಂಗ ಸರ್ಪಗಳ ಆವಾಸ ಸ್ಥಾನದಲ್ಲಿ ನಡೆಯುತ್ತಿರುವ ವಾಣಿಜ್ಯ ಚಟುವಟಿಕೆಗಳು, ಅರಣ್ಯ ಮತ್ತು ವನ್ಯಜೀವಿಗಳ ಕಾಯ್ದೆಗಳ ನೇರ ಉಲ್ಲಂಘನೆ ಆಗುತ್ತಿರುವ ಆರೋಪಗಳ ಬಗ್ಗೆ ಪರಿಶೀಲನೆ ನಡೆಸಿ ನಿರ್ಲಕ್ಷ್ಯ ವಹಿಸಿರುವ ಅಧಿಕಾರಿಗಳು ಹಾಗೂ ತಪ್ಪಿತಸ್ಥರ ವಿರುದ್ಧ ಕೈಗೊಳ್ಳಬಹುದಾದ ಕ್ರಮದ ಶಿಫಾರಸಿನೊಂದಿಗೆ ವರದಿ ಸಲ್ಲಿಸಲು ಖಂಡ್ರೆ ಸೂಚಿಸಿದ್ದಾರೆ.

ಶಿವಮೊಗ್ಗದ ಜನ ಸಂಗ್ರಾಮ ಪರಿಷತ್ತಿನ ಜಿಲ್ಲಾಧ್ಯಕ್ಷ ಅಖಿಲೇಶ್ ಚಿಪ್ಪಳಿ, ಪತ್ರಕರ್ತ ಉದಯಸಾಗರ್, ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಅರಣ್ಯ ಸಚಿವರಿಗೆ ಇ–ಮೇಲ್ ಮೂಲಕ ದೂರು ಸಲ್ಲಿಸಿದ್ದರು.

36,868 ಉಪನ್ಯಾಸಕರಿಗೆ ಹಣ ಜಮೆ: ಪರೀಕ್ಷಾ ಮಂಡಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು 2024–25ನೇ ಸಾಲಿನ ಮೂರು ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಿದ್ದ 39,776 ಉಪನ್ಯಾಸಕರಲ್ಲಿ 36,868 ಮೌಲ್ಯ-ಮಾಪಕರಿಗೆ ಗೌರವ ಸಂಭಾವನೆ ಪಾವತಿಸಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಹೇಳಿದೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಮಂಡಳಿ ಜಂಟಿ ನಿರ್ದೇಶಕರು, ಇದೇ ಪ್ರಥಮ ಬಾರಿಗೆ ನೇರ ನಗದು ಪಾವತಿ ವ್ಯವಸ್ಥೆ ಮೂಲಕ (ಡಿಬಿಟಿ) ಜಮೆ ಮಾಡಲಾಗಿದೆ. ತಾಂತ್ರಿಕ ಕಾರಣಗಳಿಂದ 2,908 ಉಪನ್ಯಾಸಕರಿಗೆ ಹಣ ಜಮೆಯಾಗಿಲ್ಲ. ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಗೆ ಜೋಡಣೆ ಮಾಡದ ಕಾರಣ 957 ಮಂದಿಯ ಸಂಭಾವನೆ ಡಿಬಿಟಿಯಲ್ಲಿ ತಿರಸ್ಕೃತವಾಗಿವೆ. 980 ಉಪನ್ಯಾಸಕರು ಆಧಾರ್ ಸಂಖ್ಯೆಯನ್ನು ಪಾವತಿಗಾಗಿ ಜೋಡಿಸಿಲ್ಲ. 971 ಮಂದಿಯಪಾವತಿ ಪ್ರಕ್ರಿಯೆ ಹಂತದಲ್ಲಿದೆ. ಬಾಕಿ ಇರುವವರಿಗೆ ಮಾಹಿತಿ ನೀಡಿ, ಕ್ರಮವಹಿಸಲಾಗಿದೆ ಎಂದಿದ್ದಾರೆ.

2023–24ನೇ ಸಾಲಿನ ಬಾಕಿ ಮೊತ್ತ ₹5.53 ಕೋಟಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಯಾ ಜಿಲ್ಲಾ ಉಪ ನಿರ್ದೇಶಕರಿಗೆ ಬಿಡುಗಡೆ ಮಾಡಿ ತ್ವರಿತವಾಗಿ ಪಾವತಿಸುವಂತೆ ಸೂಚಿಸಲಾಗಿದೆ.

ದ್ವಿತೀಯ ಪಿಯು ಪರೀಕ್ಷೆಗಾಗಿ ಪ್ರತಿ ವಿದ್ಯಾರ್ಥಿಯಿಂದ ಸಂಗ್ರಹಿಸುವ ₹400 ಶುಲ್ಕವನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರು ನೇರವಾಗಿ ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡುತ್ತಾರೆ. ಪರೀಕ್ಷಾ ವೆಚ್ಚವನ್ನು ಆಯಾ ವರ್ಷದ ಬೇಡಿಕೆಗೆ ಅನುಗುಣವಾಗಿ ಸರ್ಕಾರ ಬಿಡುಗಡೆ ಮಾಡುತ್ತದೆ. ಪರೀಕ್ಷಾ ಶುಲ್ಕ ಪರಿಷ್ಕರಣೆಗಾಗಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದ್ದು, ಸರ್ಕಾರದ ಆದೇಶದಂತೆ ಕ್ರಮವಹಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಬಂಧಿಸಿ ಕರೆದೊಯ್ಯುವಾಗ ತಪ್ಪಿಸಿಕೊಂಡ ಶಾಸಕ

ಪಟಿಯಾಲ (ಪಿಟಿಐ): ಪಂಜಾಬ್‌ನ ಎಎಪಿ ಶಾಸಕ ಹರ್ಮೀತ್ ಸಿಂಗ್ ಪಠಾನ್‌ಮಾಜ್ರಾ ಅವರನ್ನು ಅತ್ಯಾಚಾರ ಆರೋಪದಲ್ಲಿ ಬಂಧಿಸಿ ಕರೆದೊಯ್ಯುವಾಗ ಬೆಂಬಲಿಗರು ಗಲಾಟೆ ಎಬ್ಬಿಸಿದ್ದರಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಹರಿಯಾಣದ ಕರ್ನಾಲ್ ಜಿಲ್ಲೆಯ ಡಾಬ್ರಿ ಗ್ರಾಮದಲ್ಲಿದ್ದ ಹರ್ಮೀತ್ ಅವರನ್ನು ಬಂಧಿಸಲು ಪೊಲೀಸ್ ತಂಡ ತೆರಳಿತ್ತು. ಈ ವೇಳೆ ಅವರ ಬೆಂಗಲಿಗರು ಕಲ್ಲು ತೂರಾಟ ಮತ್ತು ಗುಂಡಿನ ದಾಳಿ ನಡೆಸಿದ್ದಾರೆ.

'ಹರ್ಮೀತ್ ಅವರ ಮನೆಯ ಮೇಲೆ ದಾಳಿ ನಡೆಸಿ, ಅವರನ್ನು ಬಂಧಿಸಲಾಯಿತು. ಆದರೆ ಗ್ರಾಮಸ್ಥರ ಗುಂಪು ಮತ್ತು ಕೆಲವು ಕಿಡಿಗೇಡಿಗಳು ಪೊಲೀಸ್ ತಂಡದ ಮೇಲೆ ಕಲ್ಲು ತೂರಾಟ ನಡೆಸಿ ಗುಂಡು ಹಾರಿಸಿದ್ದಾರೆ' ಎಂದು ಪಟಿಯಾಲ ಸಿಐಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚಟಕೆ ಸುದ್ದಿ

ಶಾಸಕ ವೀರೇಂದ್ರ ನಿವಾಸದಲ್ಲಿ ಇ.ಡಿ ಪರಿಶೀಲನೆ



ಶಾಸಕ ಕೆ.ಸಿ.ವೀರೇಂದ್ರ ನಿವಾಸದಲ್ಲಿ ಇ.ಡಿ. ಅಧಿಕಾರಿಗಳು ಶೋಧ ನಡೆಸುವ ವೇಳೆ ಬಂದೋಬಸ್ತ್ ಕಲ್ಪಿಸಲಾಗಿತ್ತು

ಚಳ್ಳಕೆರೆ (ಚಿತ್ರದುರ್ಗ ಜಿಲ್ಲೆ): ಹಣ ಅಕ್ರಮ ವರ್ಗಾವಣೆ ಆರೋಪದಡಿ ಬಂಧನಕ್ಕೆ ಒಳಗಾಗಿರುವ ಶಾಸಕ, ಕಾಂಗ್ರೆಸ್‌ನ ಕೆ.ಸಿ.ವೀರೇಂದ್ರ (ಪಪ್ಪಿ) ಅವರ ಚಳ್ಳಕೆರೆಯ ನಿವಾಸದ ಮೇಲೆ ಇ.ಡಿ ಅಧಿಕಾರಿಗಳು ಮಂಗಳವಾರ ಮತ್ತೆ ದಾಳಿ ನಡೆಸಿ ಪರಿಶೀಲನೆ ನಡೆಸಿದರು.

ವೀರೇಂದ್ರ ಅವರು ಶ್ರೀಲಂಕಾ, ನೇಪಾಳ ಮತ್ತು ಜಾರ್ಜಿಯಾಗಳಲ್ಲಿ ಹೊಂದಿರುವ ವ್ಯವಹಾರದ ದಾಖಲೆಗಳಿಗಾಗಿ ಹುಡುಕಾಟ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಈ ವೇಳೆ ನಾಲ್ಕು ಕಾರು ಜಪ್ತಿ ಮಾಡಿದರು. ನಂತರ ನಗರದ ಬ್ಯಾಂಕ್‌ಗಳಲ್ಲಿ ಇರುವ ಶಾಸಕರ ಖಾತೆಗಳ ಪರಿಶೀಲಿಸಿದರು. ಈ ವೇಳೆ ಭದ್ರತೆಗೆ ಅರೆ ಸೇನಾಪಡೆ ಸಿಬ್ಬಂದಿ ನಿಯೋಜಿಸಲಾಗಿತ್ತು.

ಬಾಲ್ಯವಿವಾಹ: ಐದು ಪ್ರಕರಣಕ್ಕೆ ತಡೆ: ಎಚ್ಚರಿಕೆ

ಚಾಮರಾಜನಗರ: ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ನಾಲ್ವರು ಹಾಗೂ ಹನೂರು ತಾಲ್ಲೂಕಿನ ಒಬ್ಬ ಬಾಲಕಿಯ ಮದುವೆ ಸಿದ್ಧತೆಯನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ತಡೆದು ಪೋಷಕರಿಗೆ ಕಾನೂನು ಕ್ರಮದ ಎಚ್ಚರಿಕೆ ನೀಡಿದ್ದಾರೆ.

ಸಹಾಯವಾಣಿಗೆ ಬಂದ ದೂರು ಆಧರಿಸಿ ಪರಿಶೀಲಿಸಲಾಯಿತು. ಬಾಲಕಿಯರಿಗೆ 18 ವರ್ಷ ಆಗುವವರೆಗೂ ಮದುವೆ ಮಾಡುವುದಿಲ್ಲ ಎಂದು ಪೋಷಕರಿಂದ ಮುಚ್ಚಳಿಕೆ ಬರೆಸಿ ಕೊಳ್ಳಲಾಗಿದೆ' ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಂಜುಳಾ ಮಾಹಿತಿ ನೀಡಿದರು.

ಹನೂರು ತಾಲ್ಲೂಕಿನ ಗ್ರಾಮದಲ್ಲಿ ನಡೆಯಬೇಕಿದ್ದ ಬಾಲ್ಯವಿವಾಹವನ್ನೂ ತಡೆದಿದ್ದಾರೆ.

ದಲಿತ ಮುಖ್ಯಮಂತ್ರಿ ಛಲವಾದಿ ಮಹಾಸಭಾ ಅಭಿಯಾನ

ಹೊಸಪೇಟೆ (ವಿಜಯನಗರ): 'ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಆಗುವುದಿದ್ದರೆ ಆ ಸ್ಥಾನಕ್ಕೆ ದಲಿತರನ್ನೇ ಪರಿಗಣಿಸಬೇಕು' ಎಂದು ದಲಿತ ಛಲವಾದಿ ಮಹಾಸಭಾ (ಡಿಸಿಎಂಎಸ್) ಒತ್ತಾಯಿಸಿದ್ದು, ಎರಡು ತಿಂಗಳ ಜಾಗೃತಿ ಅಭಿಯಾನ ಆರಂಭಿಸಿದೆ.

ಮಂಗಳವಾರ ಸುದ್ದಿಗಾರರಿಗೆ ಈ ಮಾಹಿತಿ ನೀಡಿದ ಮಹಾಸಭಾದ ಅಧ್ಯಕ್ಷ ಎಚ್.ಕೆ. ಬಸವರಾಜ್, 'ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ದಾವಣಗೆರೆ ಅಥವಾ ಚಿತ್ರದುರ್ಗದಲ್ಲಿ ದಲಿತ ಸಮುದಾಯದವರ ಸಮಾವೇಶ ನಡೆಸುತ್ತೇವೆ' ಎಂದು ಅವರು ತಿಳಿಸಿದರು.

'ಸಿ.ಎಂ ಸ್ಥಾನಕ್ಕಾಗಿ ಧ್ವನಿ ಎತ್ತದಿದ್ದರೆ, ಬೇಡಿಕೆ ಕಡೆಗಣಿಸುವ ಸಾಧ್ಯತೆ ಇದೆ. ಬೇಡಿಕೆ ಈಡೇರಿಸದಿದ್ದರೆ, ಕಾಂಗ್ರೆಸ್‌ಗೆ ಸೂಕ್ತ ಸಮಯದಲ್ಲಿ ಬುದ್ಧಿ ಕಲಿಸುತ್ತೇವೆ' ಎಂದರು.

ಬಿಜೆಪಿ ಹೋರಾಟ ಯಾರ ಪರ?

ಸೌಜನ್ಯಾ ಪರವೊ, ಧರ್ಮಾಧಿಕಾರಿ ಪರವೊ– ಮುಖ್ಯಮಂತ್ರಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಸಿ.ಎಂ ಮಾತು
- ಸೌಜನ್ಯಾ ಪ್ರಕರಣದಲ್ಲಿ ವೀರೇಂದ್ರ ಹೆಗ್ಗಡೆಯವರ ಮೇಲೆ ಆರೋಪವಿದೆ
- ಹೆಗ್ಗಡೆಯವರೇ ತನಿಖೆಯನ್ನು ಸ್ವಾಗತಿಸಿದ್ದಾರೆ
- ನಮ್ಮ ಪೊಲೀಸರ ಮೇಲೆ ನಂಬಿಕೆ ಇಲ್ಲವೇ?



ಮೈಸೂರು: 'ಬಿಜೆಪಿಯವರು ಒಂದೆಡೆ ವೀರೇಂದ್ರ ಹೆಗ್ಗಡೆಯವರ ಪರ ಇರುವುದಾಗಿ ಹೇಳುತ್ತಾರೆ.. ಮತ್ತೊಂದೆಡೆ, ಸೌಜನ್ಯಾ ಪರ ಎನ್ನುತ್ತಾರೆ. ನಿಜವಾಗಿಯೂ ಅವರು ಯಾರ ಪರ ಇದ್ದಾರೆ?' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

'ಸೌಜನ್ಯಾ ಪ್ರಕರಣವನ್ನು ಸಿಬಿಐ–ಎನ್‌ಐಎಗೆ ಹಸ್ತಾಂತರ ಮಾಡಬೇಕೆಂಬ ಬಿಜೆಪಿ ಒತ್ತಾಯ' ಕುರಿತು ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಸಿಬಿಐ ಕೇಂದ್ರ ಸರ್ಕಾರದ ಅಧೀನದಲ್ಲಿದೆ. ಪ್ರಕರಣದ ತನಿಖೆ ಮಾಡಿ ವರದಿ ಕೊಟ್ಟಿದೆ. ಈಗ ಸುಪ್ರೀಂ ಕೋರ್ಟ್‌ಗೆ ಹೋಗಿ ಎನ್ನುತ್ತಿದ್ದಾರೆ. ಸೌಜನ್ಯಾ ಪ್ರಕರಣದಲ್ಲಿ ವೀರೇಂದ್ರ ಹೆಗ್ಗಡೆಯವರ ಮೇಲೇ ಆರೋಪವಿದೆ. ಹಾಗಾದರೆ ಬಿಜೆಪಿ ಯಾರ ಪರ ಇದೆ?' ಎಂದರು.

'ಪ್ರಕರಣದ ತನಿಖೆಯನ್ನು ಎಸ್‌ಐಟಿ ನಡೆಸುತ್ತಿದ್ದು, ವೀರೇಂದ್ರ ಹೆಗ್ಗಡೆಯವರೇ ತಮ್ಮ ವಿರುದ್ಧದ ತನಿಖೆಯನ್ನು ಸ್ವಾಗತಿಸಿದ್ದಾರೆ. ಬಿಜೆಪಿ ಈಗ ಎನ್‌ಐಎ ಎನ್ನುತ್ತಿದೆ. ಹಾಗಾದರೆ ಇವರಿಗೆ ನಮ್ಮ ಪೊಲೀಸರ ಮೇಲೆ ನಂಬಿಕೆ ಇಲ್ಲವೇ' ಎಂದು ಪ್ರಶ್ನಿಸಿದರು.

ದುಡ್ಡು ಎಲ್ಲಿಂದ ಬರುತ್ತದೆ?: 'ಧರ್ಮಸ್ಥಳದ ವಿರುದ್ಧ ಹೋರಾಟಕ್ಕೆ ಹೊರದೇಶಗಳಿಂದ ಹಣ ಬಂದಿದೆ' ಎಂಬ ಬಿಜೆಪಿ ಆರೋಪದ ಕುರಿತು ಪ್ರತಿಕ್ರಿಯಿಸಿ, 'ಬಿಜೆಪಿಯವರಿಗೆ ಹಣ ಬಂದಿದೆ. ಅಷ್ಟೆಲ್ಲ ಮಾಡಬೇಕಾದರೆ ಅವರಿಗೆ ಎಲ್ಲಿಂದ ದುಡ್ಡು ಬರುತ್ತದೆ?' ಎಂದರು.

'ಸೌಜನ್ಯಾ ಪ್ರಕರಣದ ಮರು ತನಿಖೆ ಅಗತ್ಯವಿದ್ದರೆ ನ್ಯಾಯಾಲಯಕ್ಕೆ ಹೋಗಲಿ. ನಾನು ಅದರ ತೀರ್ಪು ನೋಡಿಲ್ಲ. ಈ ಬಗ್ಗೆ ಸೌಜನ್ಯಾ ತಾಯಿ ತೀರ್ಮಾನಿಸಬೇಕು' ಎಂದರು.

'ಬಾನು ಮುಷ್ತಾಕ್ ದಸರಾ ಉದ್ಘಾಟಿಸುವುದನ್ನು ವಿರೋಧಿಸುವವರು, ಹಿಂದೆ ಮೈಸೂರು ಮಹಾರಾಜರು ಮಿರ್ಜಾ ಇಸ್ಮಾಯಿಲ್‌ರಂತಹ ದಿವಾನರನ್ನು ಆನೆ ಮೇಲೆ ಕೂರಿಸಿಕೊಂಡು ಮೆರವಣಿಗೆ ಮಾಡುವಾಗ ಎಲ್ಲಿ ಹೋಗಿದ್ದರು' ಎಂದು ಪ್ರಶ್ನಿಸಿದರು.

'ಬಾನು ಮುಷ್ತಾಕ್ ಮುಸ್ಲಿಂ ಮಹಿಳೆ. ಕುಂಕುಮ ಹಚ್ಚಿಕೊಳ್ಳುವುದು ಅವರ ಧರ್ಮದಲ್ಲಿಲ್ಲ. ದಸರಾವನ್ನು ನಾಡ ಹಬ್ಬ ಎಂದು ಆಚರಿಸುತ್ತೇವೆ. ಉದ್ಘಾಟನೆಗೆ ಬೇರೆ ಧರ್ಮದವರನ್ನು ಆಹ್ವಾನಿಸಿದರೆ ಕುಂಕುಮ ಧರಿಸಿ ಬನ್ನಿ, ಹಿಂದೂಗಳಾಗಿ ಎನ್ನುವುದು ತರವಲ್ಲ' ಎಂದರು.

ಎನ್‌ಐಎ ತನಿಖೆಗೆ ಆಗ್ರಹ– ಬಿಜೆಪಿ ಉದ್ದೇಶವೇನು ?



ಪರಮೇಶ್ವರ.ಜಿ

ಬೆಂಗಳೂರು: 'ಧರ್ಮಸ್ಥಳದಲ್ಲಿ ನೂರಾರು ಶವ ಹೂತಿಟ್ಟ ಆರೋಪದ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಏಜೆನ್ಸಿಗೆ (ಎನ್‌ಐಎ) ನೀಡುವ ಪ್ರಶ್ನೆಯೇ ಇಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಪ್ರಕರಣದ ಕುರಿತಂತೆ ಈಗಾಗಲೇ ಎಸ್‌ಐಟಿ ತನಿಖೆ ನಡೆಸುತ್ತಿದೆ. ಈ ಹಂತದಲ್ಲಿ ಪ್ರಕರಣವನ್ನು ಎನ್‌ಐಎಗೆ ನೀಡುವ ಯೋಚನೆ ಮಾಡಿಲ್ಲ. ಅವರು ತನಿಖೆ ಮಾಡಲೇಬೇಕು ಎಂದಾದರೆ ಅವರದ್ದೇ ಆಯಾಮದಲ್ಲಿ ಮಾಡಲಿ. ನಮ್ಮ ಅಭ್ಯಂತರ ಇಲ್ಲ' ಎಂದರು.

'ಧರ್ಮಸ್ಥಳ ಪ್ರಕರಣವನ್ನು ಬೇರೆ ದಿಕ್ಕಿಗೆ ಕೊಂಡೊಯ್ಯುವ ಪ್ರಯತ್ನ ನಡೆದಿದೆ. ಎಸ್‌ಐಟಿ ತನಿಖೆ ಮುಗಿಯುವ ಮೊದಲು ಯಾವುದೇ ಸಂಸ್ಥೆಗೆ ಪ್ರಕರಣ ನೀಡುವುದಿಲ್ಲ. ಬಿಜೆಪಿಯವರ ಉದ್ದೇಶ ಏನು ಎಂಬುದು ನಮಗೆ ಸ್ಪಷ್ಟವಾಗಿಲ್ಲ. ತನಿಖೆಗೆ ಅಡ್ಡಿ ಮಾಡುವ ಪ್ರಯತ್ನ ಇರಬಹುದು' ಎಂದು ಆರೋಪಿಸಿದರು.

'ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಅವರು ಕೇವಲ ಧರ್ಮಸ್ಥಳದ ವಿಷಯಕ್ಕಷ್ಟೇ ಅಲ್ಲ, ಬೇರೆ ವಿಚಾರಗಳ ಬಗ್ಗೆಯೂ ಚರ್ಚೆ ಹಾಗೂ ಮಾಹಿತಿ ನೀಡಲು ಬರುತ್ತಾರೆ. ಬೇರೆಯವರು ಏನು ಮಾತನಾಡಿದ್ದಾರೆ ಎಂಬುದಕ್ಕೆ ನಾನು ಉತ್ತರ ಹೇಳಲಾರೆ. ಎಸ್‌ಐಟಿ ತನಿಖೆ ನಡೆಯುತ್ತಿದೆ, ಅಲ್ಲಿಂದ ವರದಿ ಬರಬೇಕಿದೆ' ಎಂದರು.

ಯೂಟ್ಯೂಬ್ ಚಾನೆಲ್‌ಗಳ ವಿರುದ್ಧ ಎಸ್‌ಐಟಿಗೆ ದೂರು

ಮಂಗಳೂರು: 'ಧರ್ಮಸ್ಥಳ ಬೆಳವಣಿಗೆಗೆ ಸಂಬಂಧಿಸಿ ಸಾಕ್ಷಿ ದೂರುದಾರನಿಗೆ ಕೋರ್ಟ್ ಸಾಕ್ಷಿ ಸಂರಕ್ಷಣಾ ಕಾಯ್ದೆಯಡಿ ರಕ್ಷಣೆ ನೀಡಿರುವ ಹಂತದಲ್ಲಿ, ಆತನ ಸಂದರ್ಶನ ನಡೆಸಿರುವ ಯೂಟ್ಯೂಬ್ ಚಾನೆಲ್‌ಗಳ ವಿರುದ್ಧ ತನಿಖೆ ನಡೆಸಬೇಕು' ಎಂದು ಹೋರಾಟಗಾರ ಪ್ರಶಾಂತ್ ಸಂಬರಗಿ ವಿಶೇಷ ತನಿಖಾ ದಳಕ್ಕೆ (ಎಸ್‌ಐಟಿ) ದೂರು ಸಲ್ಲಿಸಿದ್ದಾರೆ.

ಮಂಗಳವಾರ ದೂರು ಸಲ್ಲಿಸಿದ ನಂತರ ಮಾತನಾಡಿದ ಅವರು, 'ಯೂಟ್ಯೂಬ್ ಚಾನೆಲ್‌ಗಳು ಯಾವುದೇ ಸ್ವಯಂ ಸೆನ್ಸಾರ್ ವ್ಯವಸ್ಥೆ ಇಲ್ಲದೆ, ಸುದ್ದಿ ಪ್ರಕಟಿಸಿವೆ' ಎಂದರು.

'ಸಾಕ್ಷಿ ಸಂರಕ್ಷಣಾ ಕಾಯ್ದೆಯಡಿ ಸಾಕ್ಷಿ ದೂರುದಾರನ ಗುರುತು ಗೋಪ್ಯವಾಗಿ ಇಡುವಂತೆ ಕೋರ್ಟ್ ಆದೇಶವಿದೆ. ಅದನ್ನು ಉಲ್ಲಂಘಿಸಲಾಗಿದೆ. ದೂರು ದಾಖಲು ಅಥವಾ ಸಾಕ್ಷಿ ದೂರುದಾರನ ಆರೋಪಿಯಾಗಿ ಮಾಡಿದ ನಂತರ... ಹೀಗೆ ಯಾವ ವೇಳೆ ಸಂದರ್ಶನ ಮಾಡಿದ್ದರೂ ಅದು ಅಪರಾಧವಾಗುತ್ತದೆ' ಎಂದು ಪ್ರತಿಪಾದಿಸಿದರು.

'ಯೂಟ್ಯೂಬರ್‌ಗಳಿಗೆ ಹಣ ಸಂದಾಯವಾಗಿದ್ದರೆ, ಅದರ ಬಗ್ಗೆಯೂ ತನಿಖೆ ನಡೆಸಬೇಕು ಎಂದು ಕೋರಿದ್ದೇನೆ. ದೂರಿಗೆ ಪ್ರತಿಯಾಗಿ ಹಿಂಬರಹ ನೀಡಿದ್ದಾರೆ' ಎಂದು ಹೇಳಿದರು.

ಮಟ್ಟೆಣ್ಣವರ ವಿರುದ್ಧ ಮತ್ತೊಂದು ಪ್ರಕರಣ

ಮಂಗಳೂರು: ಅಶ್ಲೀಲವಾಗಿ ಮಾತನಾಡಿದ ವಿಡಿಯೊ ತುಣುಕನ್ನು ನ್ಯೂಸ್ ಚಾನೆಲ್‌ವೊಂದರಲ್ಲಿ ಹರಿಬಿಟ್ಟ ಆರೋಪದ ಮೇರೆಗೆ ಸೌಜನ್ಯಾ ಪರ ಹೋರಾಟಗಾರ ಗಿರೀಶ ಮಟ್ಟೆಣ್ಣವರ ವಿರುದ್ಧ ಬೆಳ್ತಂಗಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಉಜಿರೆಯಲ್ಲಿ ನಾನು ನನ್ನ ಮೊಬೈಲ್‌ನಲ್ಲಿ ಸಾಮಾಜಿಕ ಜಾಲತಾಣ ವೀಕ್ಷಿಸುತ್ತಿದ್ದೆ. ಗಿರೀಶ ಮಟ್ಟೆಣ್ಣವರ ಎಂಬಾತ ಸಾರ್ವಜನಿಕರಿಗೆ ಕಿರಿಕಿರಿಯುಂಟಾಗುವ ರೀತಿಯಲ್ಲಿ ಅಶ್ಲೀಲವಾಗಿ ಮಾತನಾಡಿ, ವಿಡಿಯೊ ತುಣುಕನ್ನು ನ್ಯೂಜ್ ಚಾನೆಲ್‌ನಲ್ಲಿ ಹರಿಬಿಟ್ಟಿದ್ದಾನೆ' ಎಂದು ರಾಜೇಂದ್ರ ದಾಸ್ ಡಿ. ಧರ್ಮಸ್ಥಳ ಎಂಬವರು ದೂರು ನೀಡಿದ್ದಾರೆ. ಬಿಎನ್‌ಎಸ್ ಕಲಂ 296 ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ಯುಕೆಪಿ: ನಿಲುವು ಸ್ಪಷ್ಟಪಡಿಸಲಿ'

ಬಾಗಲಕೋಟೆ: 'ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ಕುರಿತು ಬೆಂಗಳೂರಿನಲ್ಲಿ ಬುಧವಾರ ನಡೆಯುವ ಸರ್ಕಾರ ಸ್ಪಷ್ಟ ತೀರ್ಮಾನ ಕೈಗೊಳ್ಳಬೇಕು' ಎಂದು ಬಾಗಲಕೋಟೆ ರೈತರ ಹಕ್ಕುಗಳ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ರವಿ ಕುಮಟಗಿ ಆಗ್ರಹಿಸಿದರು.

'ಯೋಜನೆ ಆರಂಭ ಆದಂದಿನಿಂದ ಅಧಿಕಾರದಲ್ಲಿದ್ದ ಎಲ್ಲ ಪಕ್ಷಗಳ ಸರ್ಕಾರಗಳೂ ನಿರ್ಲಕ್ಷ್ಯ ವಹಿಸಿವೆ. ಯೋಜನೆ ಅಪೂರ್ಣವಾಗಿದೆ. ವೆಚ್ಚ ಹೆಚ್ಚುತ್ತಿದೆ. ಸಂತ್ರಸ್ತರಿಗೆ ಸೂಕ್ತ ಪರಿಹಾರ, ಪುನರ್ವಸತಿ ಸಿಕ್ಕಿಲ್ಲ' ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಸಂತ್ರಸ್ತರಿಗೆ ಭೂಮಿ ಪರಿಹಾರ ಕೊಡಲು ₹ 2 ಲಕ್ಷ ಕೋಟಿ ಕೊಡಲಾಗದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದು ಸೂಕ್ತವಲ್ಲ. ಸಂತ್ರಸ್ತರಿಗೆ ಸೂಕ್ತ ಪರಿಹಾರ, ಪುನರ್ವಸತಿ ಕಲ್ಪಿಸುವುದು ಸರ್ಕಾರದ ಕೆಲಸವಲ್ಲವೇ' ಎಂದು ಪ್ರಶ್ನಿಸಿದರು.

ವಕೀಲ ಡಿ.ಬಿ. ಪೂಜಾರಿ ಮಾತನಾಡಿ, 'ಪರಿಹಾರ ನೀಡುವ ಸಂಬಂಧ ಶಿವಕುಮಾರ್ ಅವರ ಹೇಳಿಕೆ ಖಂಡಿಸಿ, ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲಾಗುವುದು. ವಕೀಲರ ಸಂಘದಿಂದ ಪ್ರತಿಭಟನೆ ನಡೆಸಲಾಗುವುದು' ಎಂದರು.

ಇಸ್ರೊ ರೊಬೊಟಿಕ್ಸ್ ಸ್ಪರ್ಧೆ: ಐಐಐಟಿಗೆ ತೃತೀಯ ಸ್ಥಾನ



ಧಾರವಾಡ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಯು.ಆರ್. ರಾವ್ ಉಪಗ್ರಹ ಕೇಂದ್ರವು ನಡೆಸಿದ 'ಇಸ್ರೊ ರೊಬೊಟಿಕ್ಸ್ ಚಾಲೆಂಜ್' ಸ್ಪರ್ಧೆಯಲ್ಲಿ ಇಲ್ಲಿನ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ) ತಂಡ 3ನೇ ಬಹುಮಾನ ಪಡೆದಿದೆ.

'ಫ್ಲೈ ಮಿ ಆನ್ ಮಾರ್ಸ್' ವಿಷಯ ಕುರಿತ ಸ್ಪರ್ಧೆಯಲ್ಲಿ ವಿವಿಧ ಐಐಟಿ, ಎನ್‌ಐಟಿ, ಎಂಜಿನಿಯರಿಂಗ್ ವಿದ್ಯಾಲಯ, ತಾಂತ್ರಿಕ ವಿಶ್ವವಿದ್ಯಾಲಯಗಳ 510ಕ್ಕೂ ಅಧಿಕ ತಂಡಗಳು ಪಾಲ್ಗೊಂಡಿದ್ದವು. ತೃತೀಯ ಸ್ಥಾನ ಗಳಿಸಿದ ಸಂಸ್ಥೆಯ ತಂಡವು ₹ 5 ಲಕ್ಷ ಬಹುಮಾನ ಪಡೆದಿದೆ' ಎಂದು ಐಐಐಟಿ ನಿರ್ದೇಶಕ ಎಸ್.ಆರ್.ಮಹದೇವ ಪ್ರಸನ್ನ ತಿಳಿಸಿದರು.

'ಮಂಗಳಯಾನಕ್ಕೆ ಇಸ್ರೊ ಉದ್ದೇಶಿಸಿದೆ. ಮಂಗಳ ಗ್ರಹದಲ್ಲಿ ಗುರುತ್ವಾಕರ್ಷಣೆ ಮತ್ತು ಜಿಪಿಎಸ್ ಸೌಲಭ್ಯ ಇಲ್ಲ. ಆ ಗ್ರಹದಲ್ಲಿ ಡ್ರೋನ್ ಹಾರಾಟ ಮತ್ತು ಕೆಳಗಿಳಿಯುವ ವಿಷಯ ಆಧರಿಸಿ ತಂಡವು ಡ್ರೋನ್ ವಿನ್ಯಾಸಗೊಳಿಸಿತ್ತು' ಎಂದು ತಿಳಿಸಿದರು.

'ಸೌರವ್ ಸುರೇಶ್ ಕರ್ಕಿ ನೇತೃತ್ವದ ತಂಡದಲ್ಲಿ ಅಮಿತ್ ಮ್ಯಾಥ್ಯೂ, ರಂಜಿತ್ ಬಾಬು, ಕೃಷ್ಣ ಸಾಯಿ ಗೊಲ್ಲಮುಡಿ, ಅರ್ನವ್ ಅಮಿತ್ ಅಂಗರ್ಕರ್, ಪುರೋಹಿತ್ ಗೌರವ್ ಘನಶ್ಯಾಮ್ ಮತ್ತು ಲೋಹಿತ್ ಬಿ. ಇದ್ದರು. ಪ್ರಾಧ್ಯಾಪಕ ಮಲ್ಲಿಕಾರ್ಜುನ ಕಂಡೆ ಮಾರ್ಗದರ್ಶನ ನೀಡಿದರು' ಎಂದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.02	14,397	14,171
ಹಾರಂಗಿ	2,859	2858.37	5,396	5,333
ಕಬಿನಿ	2,284.00	2,283.94	10,993	11,317
ಹೇಮಾವತಿ	2,922	2,921.80	8,070	7,460
ಲಿಂಗನಮಕ್ಕಿ	1,819	1,817.50	14,415	14,293
ಸೂಪಾ (ಮೀ)	564	559.60	13,245.93	4,000.27
ಮಾಣಿ	595	594.04	3,017	-
ತುಂಗಭದ್ರಾ	1,633	1,625.60	50,044	45,410
ಮಲಪ್ರಭಾ	2,079.5	2,079.35	5,714	4,094
ಘಟಪ್ರಭಾ	2175	2,174.81	8,647	7,680
ಭದ್ರಾ *	186	184.1	8,219	9,411
ಆಲಮಟ್ಟಿ (ಮೀ)	519.6	519.54	68,340	70,365
ನಾರಾಯಣಪುರ (ಮೀ)	492.25	492.06	54,000	46,530

* ನೆಲಮಟ್ಟದಿಂದ

'ಬುದ್ಧಿ ಹೇಳಿ ಎಂದರೆ ದಂಡ ಹಾಕಿ ತಲೆ ಬೋಳಿಸಿದರು'

ಪ್ರಜಾವಾಣಿ ವಾರ್ತೆ

ಮಳವಳ್ಳಿ: 'ಮದ್ಯಪಾನ ವಿಚಾರದಲ್ಲಿ ಪತಿಗೆ ಬುದ್ಧಿವಾದ ಹೇಳಿ' ಎಂದು ಕೋರಿದ್ದ ಮಹಿಳೆ ಹಾಗೂ ಆಕೆ ಪತಿಗೆ ತಲಾ ₹ 5 ಸಾವಿರ ದಂಡ ವಿಧಿಸಿ, ತಲೆ ಬೋಳಿಸಿದ ಆರೋಪದ ಮೇರೆಗೆ ತಾಲ್ಲೂಕಿನ ದ್ಯಾವಪಟ್ಟಣ ಗ್ರಾಮದ ಐವರು ಮುಖಂಡರ ವಿರುದ್ಧ ಪ್ರಕರಣ ದಾಖಲಾಗಿದೆ.

ಬೆಳಕವಾಡಿ ಠಾಣೆಯಲ್ಲಿ ಸೋಮವಾರ ಪ್ರಕರಣ ದಾಖಲಾಗಿದೆ. ದಂಪತಿ ನಡುವೆ ಆ. 17ರಂದು ಕಲಹ ನಡೆದಿತ್ತು. ಅದನ್ನು ಮುಖಂಡರ ಗಮನಕ್ಕೆ ತಂದ ಮಹಿಳೆಯು ಪತಿಗೆ ಬುದ್ಧಿವಾದ ಹೇಳಿಸಿದ್ದರು.

'ಯಾರದೋ ಮಾತು ಕೇಳಿ ನಿನಗೆ ಚಪ್ಪಲಿಯಲ್ಲಿ ಹೊಡೆದಿದ್ದಾನೆ. ಇಬ್ಬರೂ ದಂಡ ಕಟ್ಟಿ, ತಲೆ ಬೋಳಿಸಿಕೊಳ್ಳಿ ಎಂದು ಮುಖಂಡರಾದ ನಾಗಣ್ಣ, ಮಹದೇವ, ಕುಮಾರ, ಸೋಮಣ್ಣ, ಮಲ್ಲಯ್ಯ ಗ್ರಾಮದ ನ್ಯಾಯದ ಕಟ್ಟೆಯಲ್ಲಿ ತಿಳಿಸಿದ್ದರು' ಎಂದು ಮಹಿಳೆ ಆರೋಪಿಸಿದ್ದಾರೆ.

'ಒತ್ತಡ ಹಾಕಿ ಇಬ್ಬರ ತಲೆ ಕೂದಲು ತೆಗೆಸಿದರು. ಗ್ರಾಮದಲ್ಲಿ ಓಡಾಡಲಾಗದೇ ತೊಂದರೆ ಅನುಭವಿಸುತ್ತಿದ್ದೇನೆ. ಪತಿಗೆ ಬುದ್ಧಿ ಹೇಳಲಿ ಎಂದು ಕೋರಿದರೆ ನಮಗೆ ಅಪಮಾನ ಮಾಡಿದ್ದಾರೆ. ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಮಹಿಳೆ ದೂರಿನಲ್ಲಿ ಕೋರಿದ್ದಾರೆ.

ಸಾಮೂಹಿಕ ಭಜನೆ

ಪ್ರಜಾವಾಣಿ ಚಿತ್ರ:



ವಿಜಯಪುರದ ಜೋರಾಪುರ ಪೇಠದ ಶಂಕರಲಿಂಗ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದ್ದ ಸಂಕಲ್ಪ ಸಿದ್ಧಿ ಗಣಪತಿ ವಿಸರ್ಜನೆ ನಿಮಿತ್ತ ಮಂಗಳವಾರ ನಡೆದ ಮೆರವಣಿಗೆಯಲ್ಲಿ ಯುವತಿಯರು ನೃತ್ಯ ಪ್ರದರ್ಶಿಸಿದರು

'ವಿರೋಧ ಹೆಚ್ಚಿದಷ್ಟು ಸಾವರ್ಕರ್ ಜನಪ್ರಿಯ'

ಪ್ರಜಾವಾಣಿ ವಾರ್ತೆ

ಮೈಸೂರು: 'ಸಿದ್ದರಾಮಯ್ಯ ಅಂತಹವರ ವಿರೋಧದಿಂದಾಗಿ ಸಾವರ್ಕರ್ ಹೆಚ್ಚು ಜನಪ್ರಿಯರಾಗುತ್ತಿದ್ದಾರೆ. ವಿರೋಧ ಹೆಚ್ಚಿದಷ್ಟೂ ದೇಶಭಕ್ತಿ ಪ್ರಖರವಾಗುತ್ತದೆ' ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿದರು.

ಸಾವರ್ಕರ್ ಪ್ರತಿಷ್ಠಾನ ಮೈಸೂರು ಸಂಘಟನೆಯು ಕಲಾಮಂದಿರದಲ್ಲಿ ಮಂಗಳವಾರ ಸಂಜೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಸಾವರ್ಕರ್ ಕಲ್ಪನೆಯ ಭಾರತೀಯ ಸೇನೆ ಮತ್ತು ಆಪರೇಷನ್ ಸಿಂಧೂರ್' ಕುರಿತು ಅವರು ಮಾತನಾಡಿದರು.

'ಕಾಂಗ್ರೆಸ್ ತನಗೆ ಅನುಕೂಲಕರವಲ್ಲದ ಸತ್ಯದ ವಿರುದ್ಧ ಅಪಪ್ರಚಾರ ಮಾಡುತ್ತಲೇ ಇದೆ. ಸ್ವಾತಂತ್ರ್ಯ ಗಳಿಸುವಲ್ಲಿ ಅಸಹಕಾರ ಆಂದೋಲನದ ಬಹುದೊಡ್ಡ ಪಾತ್ರವಿರುವುದು ನಿಜ. ಕಾಂಗ್ರೆಸ್ ಹೋರಾಟವೂ ನಿಜ. ಅಂದು ಇದ್ದದ್ದೇ ಒಂದು ಪಕ್ಷ. ಅದನ್ನು ನಾವು ಅಲ್ಲಗಳೆಯುತ್ತಿಲ್ಲ' ಎಂದು ಅವರು ಹೇಳಿದರು.

'ಆದರೆ ಆಜಾದ್, ಭಗತ್ ಸಿಂಗ್, ಮದನ್‌ಲಾಲ್ ಅಂಥವರ ಪ್ರಾಣಾರ್ಪಣೆಗೆ ಬೆಲೆ ಕೊಡದಿದ್ದಾಗ ಸಂಕಟವಾಗುತ್ತದೆ. ಸತ್ಯ ಹೇಳಲೇಬೇಕಾಗುತ್ತದೆ. ನೇತಾಜಿ ಹಾಗೂ ಸಾವರ್ಕರ್ ಬಗ್ಗೆ ಸ್ವಾತಂತ್ರ್ಯೋತ್ತರ ಕಾಂಗ್ರೆಸ್ ನಾಯಕರು ಅಪಪ್ರಚಾರ ಮಾಡುತ್ತಲೇ ಬಂದಿದ್ದಾರೆ. ಪಠ್ಯಪುಸ್ತಕದಲ್ಲಿ ಸ್ವಾತಂತ್ರ್ಯ ಹೋರಾಟದ ಇತಿಹಾಸಕ್ಕಿಂತ ಅತಿ ದೊಡ್ಡ ಸುಳ್ಳು ಇಲ್ಲ' ಎಂದು ಟೀಕಿಸಿದರು.

'ದೇಶದ ತೀವ್ರ ರಾಷ್ಟ್ರೀಯವಾದಿಗಳಲ್ಲಿ ಅಂಬೇಡ್ಕರ್ ಒಬ್ಬರು. ದೇಶದ ಸೈನ್ಯದಲ್ಲಿ ಹೆಚ್ಚು ಮುಸಲ್ಮಾನರಿರುವುದರ ಬಗ್ಗೆ 1940 ರಲ್ಲೇ ಆಕ್ಷೇಪಿಸಿದ್ದರು. ಹಿಂದೂಗಳು ಹೆಚ್ಚು ಸೈನ್ಯ ಸೇರುವಂತೆ ಮಾಡಿದ್ದು ಸಾವರ್ಕರ್. ದೇಶ ಸುಭದ್ರತೆಗೆ ಸೇನೆ ಬಲವಾಗಿರಬೇಕು ಎಂಬುದು ಅವರ ಆಶಯವಾಗಿತ್ತು. ಅದನ್ನು ಪ್ರಧಾನಿ ಮೋದಿ ಕಾರ್ಯಗತಗೊಳಿಸಿದ್ದರಿಂದ ಆಪರೇಷನ್ ಸಿಂಧೂರ ಯಶಸ್ವಿಯಾಯಿತು' ಎಂದು ಪ್ರತಿಪಾದಿಸಿದರು.

'ಸಿಡಿಎಸ್ ನೇಮಕ ಸೇರಿ, 11 ವರ್ಷದಲ್ಲಿ ಭಾರತೀಯ ಸೇನೆಯಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಿದೆ. ಸೇನಾ ಮುಖ್ಯಸ್ಥರಿಗೆ ನಿರ್ಣಯ ಕೈಗೊಳ್ಳುವ ಅಧಿಕಾರ ಸಿಕ್ಕಿದೆ. ಸ್ವದೇಶಿ ತಂತ್ರಜ್ಞಾನದ ಬಳಕೆ ಹೆಚ್ಚುತ್ತಿದೆ' ಎಂದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷೆ ಎಸ್. ಯಶಸ್ವಿನಿ ಅಧ್ಯಕ್ಷತೆ ವಹಿಸಿದ್ದರು. ಆದಿತ್ಯ ಅಧಿಕಾರಿ ಆಸ್ಪತ್ರೆ ವೈದ್ಯ ಚಂದ್ರಶೇಖರ್ ಪಾಲ್ಗೊಂಡರು.

'ಕಾಂಗ್ರೆಸ್ ನಾಯಿ ಹೋರಾಟ ಮಾಡಿತ್ತೆ?'

'ಬಿಜೆಪಿ ನಾಯಿ ಕೂಡಾ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿರಲಿಲ್ಲ ಎನ್ನುವ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಮನೆಯ ಯಾವ ನಾಯಿ ಹೋರಾಡಿತ್ತು ಎಂದು ಬಹಿರಂಗಪಡಿಸಲಿ' ಎಂದು ಬಿ.ಎಲ್. ಸಂತೋಷ್ ಸವಾಲು ಹಾಕಿದರು.

'ಸಂಘ ಶುರುವಾಗಿದ್ದು 1951ರಲ್ಲಿ. ಬಿಜೆಪಿ ಹುಟ್ಟಿದ್ದೇ 1980ರ ದಶಕದಲ್ಲಿ. ನಾವೆಲ್ಲಿ ಹೋರಾಡಲು ಸಾಧ್ಯ? ಆದರೆ ಹೆಗಡೇವಾರ್ ಅಂತಹವರು ಹೋರಾಟದ ಹಾದಿಯಿಂದಲೇ ಬಂದವರು' ಎಂದರು.

'ರಾಜ್ಯ ಸರ್ಕಾರದಲ್ಲಿ ಮೂವರು ಬಚ್ಚಲುಬಾಯಿ ಮಂತ್ರಿಗಳಿದ್ದಾರೆ. ದೇಶದಲ್ಲಿ ಎಲ್ಲಿ ಹೋದರೂ ಇಂದಿರಾ- ರಾಜೀವ್ ಹೆಸರಿದೆ. ಆದರೆ ಬೆಂಗಳೂರಿನಲ್ಲಿ ಒಂದು ಫ್ಲೈ ಓವರ್ ಗೆ ಸಾವರ್ಕರ್ ಹೆಸರು ಇಡಲು ವಿರೋಧವೇಕೆ' ಎಂದು ಪ್ರಶ್ನಿಸಿದರು.



ದೇಶದಲ್ಲಿ ಈಚೆಗೆ ಪ್ರತಿಯೊಂದಕ್ಕೂ ಜಾತಿ– ಸಾಕ್ಷಿ ಕೇಳುವ ಬ್ರಿಗೇಡ್ ಹೆಚ್ಚಾಗಿದೆ. ನಗರ ನಕ್ಸಲರ ಕಾಟ ಹೆಚ್ಚಾಗಿದೆ. ನಾಚಿಕೆಗೇಡಿನ ಶಕ್ತಿಗಳು ನಮ್ಮಲ್ಲಿವೆ

ಬಿ.ಎಲ್. ಸಂತೋಷ್ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ

ಭೋವಿ ನಿಗಮಕ್ಕೆ ರವಿಕುಮಾರ್ ರಾಜೀನಾಮೆ?

ಒಂದನೇ ಪುಟದಿಂದ...

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರವಿಕುಮಾರ್ ಅವರು ಭೋವಿ ಸಮುದಾಯವನ್ನು ಪ್ರತಿನಿಧಿಸುತ್ತಿದ್ದು, ಸಮುದಾಯದ ಜನರ ಅಭಿವೃದ್ಧಿಗೆ ಇರುವ ಯೋಜನೆಗಳನ್ನು ಹಂಚಿಕೆ ಮಾಡಲು ಲಂಚಕ್ಕಾಗಿ ಬೇಡಿಕೆ ಇಡುತ್ತಿದ್ದಾರೆ. ಜವಾಬ್ದಾರಿಯುತ ಹುದ್ದೆಯಲ್ಲಿರುವ ಇವರು ಫಲಾನುಭವಿಗಳಿಂದ ಲಂಚ ಪಡೆದುಕೊಳ್ಳುತ್ತಿರುವುದು ಖಂಡನೀಯ' ಎಂದು ಹೇಳಿದ್ದರು.

'ರವಿಕುಮಾರ್ ಅವರು ನಿಗಮದಲ್ಲಿರುವ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡುವುದನ್ನು ಬಿಟ್ಟು, ಮಧ್ಯವರ್ತಿಗಳ ಮೂಲಕ ಹಣ ನೀಡುವಂತೆ ಫಲಾನುಭವಿಗಳಿಗೆ ಪೀಡಿಸುತ್ತಿದ್ದಾರೆ. ಈ ಬಗ್ಗೆ ಅವರು ಮಾತನಾಡಿರುವ ವಿಡಿಯೊ ಹಾಗೂ ಆಡಿಯೊಗಳು ನನ್ನ ಬಳಿ ಇವೆ. ಕೂಡಲೇ ರವಿಕುಮಾರ್ ಅವರನ್ನು ನಿಗಮದ ಅಧ್ಯಕ್ಷ ಸ್ಥಾನದಿಂದ ವಜಾ ಮಾಡಬೇಕು. ಅವರ ವಿರುದ್ಧ ತನಿಖೆ ನಡೆಸಿ, ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದರು. ಇದರ ಬೆನ್ನಲ್ಲೇ ಸಾಮಾಜಿಕ ಜಾಲತಾಣದಲ್ಲಿ ಈ ಕುರಿತ ವಿಡಿಯೊ ಮತ್ತು ಆಡಿಯೊ ಹರಿದಾಡಿದವು.

ಪವಿತ್ರಾಗೌಡ ಜಾಮೀನು ಅರ್ಜಿ ವಜಾ

ಬಳ್ಳಾರಿಗೆ ದರ್ಶನ್ ಸ್ಥಳಾಂತರಕ್ಕೆ ಅರ್ಜಿ: ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ



ಪವಿತ್ರಾಗೌಡ



ದರ್ಶನ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಮೊದಲನೇ ಆರೋಪಿ ಪವಿತ್ರಾಗೌಡ ಅವರು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ 57ನೇ ಸೆಷನ್ಸ್ ನ್ಯಾಯಾಲಯವು ಅರ್ಜಿಯನ್ನು ವಜಾಗೊಳಿಸಿ ಮಂಗಳವಾರ ಆದೇಶಿಸಿದೆ.

'ಸಿಂಗಲ್ ಪೇರೆಂಟ್ ಆಗಿರುವುದರಿಂದ ಪುತ್ರಿ ಆರೈಕೆ ಮಾಡಬೇಕಿದೆ' ಎಂಬ ಕಾರಣ ನೀಡಿ ಪವಿತ್ರಾ ಅವರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಧೀಶರು, ಪವಿತ್ರಾ ಅವರು ನೀಡಿದ್ದ ಯಾವುದೇ ಕಾರಣಗಳನ್ನು ಪರಿಗಣಿಸದೆ ಅರ್ಜಿಯನ್ನು ವಜಾಗೊಳಿಸಿದ್ದಾರೆ.

ಕೊಲೆ ಪ್ರಕರಣದಲ್ಲಿ ನಟ ದರ್ಶನ್, ಪವಿತ್ರಾ ಸೇರಿ 7 ಆರೋಪಿಗಳಿಗೆ ಹೈಕೋರ್ಟ್ ನೀಡಿದ್ದ ಷರತ್ತುಬದ್ಧ ಜಾಮೀನನ್ನು ಸುಪ್ರೀಂ ಕೋರ್ಟ್ ಆಗಸ್ಟ್ 14ರಂದು ರದ್ದುಪಡಿಸಿತ್ತು. ಬಳಿಕ, ಏಳು ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಠಾಣೆಯ ಪೊಲೀಸರು ಬಂಧಿಸಿದ್ದರು. ನ್ಯಾಯಾಲಯವು ಆರೋಪಿಗಳಿಗೆ ನ್ಯಾಯಾಂಗ ಬಂಧನ ವಿಧಿಸಿತ್ತು.

ಮತ್ತೊಂದೆಡೆ ದರ್ಶನ್ ಅವರನ್ನು ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸುವ ಸಂಬಂಧ ಸಲ್ಲಿಸಿದ್ದ ಅರ್ಜಿಯ ವಿಚಾರಣೆ 64ನೇ ಸೆಷನ್ಸ್ ನ್ಯಾಯಾಲಯದಲ್ಲಿ ನಡೆಯಿತು.

ದರ್ಶನ್ ಪರ ವಕೀಲರು ಅರ್ಜಿಗೆ ಆಕ್ಷೇಪ ವ್ಯಕ್ತಪಡಿಸಿದರು. ಬಳಿಕ ಅರ್ಜಿಯ ವಿಚಾರಣೆಯನ್ನು ಬುಧವಾರಕ್ಕೆ ನ್ಯಾಯಾಲಯವು ಮುಂದೂಡಿತು.

ಈ ಪ್ರಕರಣದಲ್ಲಿ 272 ಸಾಕ್ಷಿಗಳು ಇದ್ದಾರೆ. ಸುಪ್ರೀಂ ಕೋರ್ಟ್ ಸಹ ತ್ವರಿತ ವಿಚಾರಣೆಗೆ ಸೂಚಿಸಿದೆ. ವಿಡಿಯೊ ಕಾನ್ಫರೆನ್ಸ್ ನಲ್ಲಿ ವಿಚಾರಣೆಗೆ ಹಾಜರಾಗುವುದು ಸೂಕ್ತ ಅಲ್ಲ. ದರ್ಶನ್ ಅವರನ್ನು ಬಳ್ಳಾರಿಗೆ ಸ್ಥಳಾಂತರ ಮಾಡಲು ಯಾವುದೇ ಕಾರಣ ಇಲ್ಲ. ಬಳ್ಳಾರಿ ಜೈಲಿಗೆ ಸ್ಥಳಾಂತರ ಮಾಡುವುದು ಬೇಡ ಎಂದು ದರ್ಶನ್ ಪರ ವಕೀಲರು ನ್ಯಾಯಾಧೀಶರಲ್ಲಿ ಮನವಿ ಮಾಡಿದರು.

ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ: ಮಹಿಳೆ ಸಾವು

ಕೊಪ್ಪಳ: ಯಲಬುರ್ಗಾ ತಾಲ್ಲೂಕಿನ ಹಿರೇವಂಕಲಕುಂಟಾ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಂಗಳವಾರ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಒಳಗಾದ ಮಹಿಳೆ ಮೃತಪಟ್ಟಿದ್ದಾರೆ. ಸಾವಿಗೆ ವೈದ್ಯರ ನಿರ್ಲಕ್ಷ್ಯ ಕಾರಣ ಎಂದು ಕುಟುಂಬದವರು ಆರೋಪಿಸಿದ್ದಾರೆ.

ಚಿಕಿತ್ಸೆಗಾಗಿ ಮಲ್ಲಮ್ಮ ಕಲ್ಲೂರ್ (23) ದಾಖಲಾಗಿದ್ದರು. ಮಂಗಳವಾರ ಶಸ್ತ್ರಚಿಕಿತ್ಸೆ ವೇಳೆ ಅವರ ಸ್ಥಿತಿ ಗಂಭೀರವಾಗಿದೆ. ಕೂಡಲೇ ವೈದ್ಯ ಡಾ.ಈಶ್ವರ ಸವಡಿ ಅವರು ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದ್ದಾರೆ. ಮಾರ್ಗಮಧ್ಯದಲ್ಲಿ ಕೊನೆಯುಸಿರೆಳೆದಿದ್ದಾರೆ.

ಮೃತರಿಗೆ ಎರಡೂವರೆ ವರ್ಷ, ಐದು ತಿಂಗಳ ಮಗು ಇದೆ. ಅರಿವಳಿಕೆ ಮದ್ದು ನೀಡದೇ ವೈದ್ಯರು ಚಿಕಿತ್ಸೆ ಮಾಡಿದ್ದೆ ಸಾವಿಗೆ ಕಾರಣ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಜಿಲ್ಲಾ ಆಸ್ಪತ್ರೆಗೆ ಬಂದ ಡಿಎಚ್‌ಒ ಡಾ.ಲಿಂಗರಾಜು ಮತ್ತು ಶಸ್ತ್ರಚಿಕಿತ್ಸೆ ಮಾಡಿದ ಡಾ.ಈಶ್ವರ ಸವಡಿ ಅವರನ್ನು ಕುಟುಂಬಸ್ಥರು ತರಾಟೆಗೆ ತೆಗೆದುಕೊಂಡರು.

'ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಡಿಎಚ್‌ಒ ಡಾ.ಲಿಂಗರಾಜು ಪ್ರತಿಕ್ರಿಯಿಸಿದ್ದಾರೆ.

ಜಯದೇವ ಸಂಸ್ಥೆ ವಿಶ್ಲೇಷಣೆಯಿಂದ ದೃಢ • 'ನಿಮ್ಮ ಹೃದಯ ನಮ್ಮ ಕಾಳಜಿ' ಕಾರ್ಯಕ್ರಮಕ್ಕೆ ಚಾಲನೆ

ಯುವಜನರಲ್ಲಿ ಹೃದಯಾಘಾತ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಜನರಲ್ಲಿ ಹೃದಯಾಘಾತ ಪ್ರಕರಣಗಳು ಹೆಚ್ಚಳವಾಗುತ್ತಿರುವುದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವಿಶ್ಲೇಷಣೆಯಿಂದ ದೃಢಪಟ್ಟಿದ್ದು, ಹೃದಯಾಘಾತ ಸಂಬಂಧ ಸಂಸ್ಥೆಯ ಬೆಂಗಳೂರು ಕೇಂದ್ರಕ್ಕೆ ಪ್ರತಿನಿತ್ಯ ಭೇಟಿ ನೀಡುವ ಸರಾಸರಿ 30 ಮಂದಿಯಲ್ಲಿ ಶೇ 25 ರಷ್ಟು ಮಂದಿ 45 ವರ್ಷದೊಳಗಿನವರಾಗಿದ್ದಾರೆ.

ಚಿಕ್ಕ ವಯಸ್ಸಿನಲ್ಲಿ ಸಂಭವಿಸುತ್ತಿರುವ ಹೃದಯಾಘಾತ ಪ್ರಕರಣಗಳ ಅಧ್ಯಯನಕ್ಕೆ ಸಂಸ್ಥೆಯು ಅಕಾಲಿಕ ಪರಿಧಮನಿ ಕಾಯಿಲೆ ಯೋಜನೆ, ಜಾಗೃತಿಗೆ 'ನಿಮ್ಮ ಹೃದಯ ನಮ್ಮ ಕಾಳಜಿ' ಕಾರ್ಯಕ್ರಮ ರೂಪಿಸಿದೆ. ಈ ಕಾರ್ಯಕ್ರಮಕ್ಕೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಇಲ್ಲಿ ಮಂಗಳವಾರ ಚಾಲನೆ ನೀಡಿದರು. ಈ ಕಾರ್ಯಕ್ರಮದಡಿ ಹೃದಯಕ್ಕೆ ಸಂಬಂಧಿಸಿದ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸಲಾಗುತ್ತಿದ್ದು, ಹೃದಯಾಘಾತಕ್ಕೆ ಕಾರಣವಾಗುವ ಅಪಾಯಕಾರಿ ಅಂಶಗಳು, ಆರಂಭಿಕ ಹಂತದಲ್ಲಿಯೇ ಸಮಸ್ಯೆ ಪತ್ತೆ ಹಾಗೂ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿಸಲಾಗುತ್ತದೆ.

ವೈದ್ಯರು ರೋಗಿಗಳ ಜತೆಗೆ ಉತ್ತಮವಾಗಿ ಸಂವಹನ ನಡೆಸಬೇಕು. ಸ್ಪರ್ಶಿಸಿ ವಿಚಾರಿಸಿದರೆ ಕಾಯಿಲೆ ಅರ್ಧದಷ್ಟು ವಾಸಿಯಾದ ಭಾವನೆ ಅನಾರೋಗ್ಯ ಪೀಡಿತ ವ್ಯಕ್ತಿಯಲ್ಲಿ ಮೂಡುತ್ತದೆ

ಬಿ.ಎಸ್. ಪಾಟೀಲ
ಲೋಕಾಯುಕ್ತ ನ್ಯಾಯಮೂರ್ತಿ

ಈ ಯೋಜನೆಯಡಿ ಅಧ್ಯಯನಕ್ಕೆ ಹೃದಯ ಸಂಬಂಧಿ ಸಮಸ್ಯೆ ಹೊಂದಿರುವ 40 ವರ್ಷದೊಳಗಿನ 5 ಸಾವಿರಕ್ಕೂ ಅಧಿಕ ಮಂದಿ ನೋಂದಾಯಿಸಿದ್ದಾರೆ. ಇವರಲ್ಲಿ ಹೃದಯ ಸಂಬಂಧಿ ಸಮಸ್ಯೆ ಕಾಣಿಸಿಕೊಂಡಿರುವುದಕ್ಕೆ ಸಹಕಾರಿಯಾದ ಅಪಾಯಕಾರಿ ಅಂಶಗಳನ್ನು ಗುರುತಿಸಲಾಗಿದೆ. ಅರ್ಧಕ್ಕೂ ಅಧಿಕ ಮಂದಿ ಧೂಮಪಾನಿಗಳಾಗಿದ್ದಾರೆ. ಅಧಿಕ ರಕ್ತದೊತ್ತಡ, ಮಧುಮೇಹ ಸೇರಿ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿರುವುದು ವೈದ್ಯಕೀಯ ಪರೀಕ್ಷೆಗಳಿಂದ ದೃಢಪಟ್ಟಿದೆ.



ರೋಗಿಗಳ ಸಹಾಯಕರಿಗೆ ನಿರ್ಮಿಸಿದ್ದ ವಸತಿ ನಿಲಯವನ್ನು ಬಿ.ಎಸ್. ಪಾಟೀಲ ಉದ್ಘಾಟಿಸಿದರು. ಡಾ.ಕೆ.ಎಸ್. ರವೀಂದ್ರನಾಥ್ ಉಪಸ್ಥಿತರಿದ್ದರು

'ಧೂಮಪಾನ, ತಂಬಾಕು ಉತ್ಪನ್ನ ಸೇವನೆ, ಅತಿಯಾದ ಮದ್ಯಪಾನ, ವ್ಯಾಯಾಮ ಇಲ್ಲದ ಜೀವನ, ಪಾಶ್ಚಾತ್ಯ ಆಹಾರ ಪದ್ಧತಿ, ಸಿಹಿ ಪಾನೀಯಗಳ ಸೇವನೆ, ಜೀವನಶೈಲಿ ಬದಲಾವಣೆ ಸೇರಿ ವಿವಿಧ ಕಾರಣಗಳಿಂದ ಹೃದಯಾಘಾತ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಸಮಸ್ಯೆ ಎದುರಿಸುತ್ತಿರುವ ಯುವಜನರ ಸಂಖ್ಯೆಯೂ ಹೆಚ್ಚುತ್ತಿದೆ. ಇದು ಕೂಡ ಹೃದಯಾಘಾತದ ಅಪಾಯವನ್ನು ತಂದೊಡ್ಡುತ್ತಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಕೆ. ಎಸ್. ರವೀಂದ್ರನಾಥ್ ಹೇಳಿದರು.

'ಮಾನಸಿಕ, ಸಾಮಾಜಿಕ ಒತ್ತಡ, ವಾಯುಮಾಲಿನ್ಯ ಸೇರಿ ವಿವಿಧ ಅಂಶಗಳು ಸಹ ಹೃದಯಾಘಾತಕ್ಕೆ ಕಾರಣವಾಗುತ್ತಿದೆ. ಅಪಾಯಕಾರಿ ಅಂಶಗಳನ್ನು ಗುರುತಿಸಿ, ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು. ಜನಸಾಮಾನ್ಯರಲ್ಲಿ ಈ ಬಗ್ಗೆ ಅರಿವು ಮೂಡಿಸಲು ಸಾಮಾಜಿಕ ಜಾಲತಾಣದಲ್ಲಿ ವಿಡಿಯೊಗಳನ್ನು ಬಿತ್ತರಿಸಲಾಗುತ್ತಿದೆ' ಎಂದರು.

ರೋಗಿಗಳ ಸಹಾಯಕರಿಗೆ ನಿರ್ಮಿಸಿದ್ದ ವಸತಿ ನಿಲಯವನ್ನು ಇದೇ ವೇಳೆ ಉದ್ಘಾಟಿಸಲಾಯಿತು. ಈ ವಸತಿ ನಿಲಯ ನಿರ್ಮಾಣಕ್ಕೆ ದೇಣಿಗೆ ನೀಡಿದ್ದ ಎನ್.ಕೆ. ಕಂಪ್ಯೂಟರ್ಸ್ ಕಂಪನಿಯ ಮಾಲೀಕರ ಪೋಷಕರಾದ ಕಣ್ಣಿಗಿ ಮತ್ತು ನಾರಾಯಣಸ್ವಾಮಿ ಅವರನ್ನು ಗೌರವಿಸಲಾಯಿತು.

ಹೃದಯ ಸಮಸ್ಯೆಗೆ ಅಪಾಯಕಾರಿ ಅಂಶಗಳು

ಅಪಾಯಕಾರಿ ಅಂಶ	ಪ್ರಮಾಣ (ಶೇ)
ಧೂಮಪಾನ	55
ಅಧಿಕ ರಕ್ತದೊತ್ತಡ	14
ಮಧುಮೇಹ	11
ಕೊಲೆಸ್ಟ್ರಾಲ್ (ಕೊಬ್ಬಿನಾಂಶ)	23
ಕೌಟುಂಬಿಕ ಇತಿಹಾಸ	16
ಅಪಾಯಕಾರಿ ಅಂಶಗಳು ಇಲ್ಲದಿರುವಿಕೆ	20

ಚಿಟಿಕೆ ಸುದ್ದಿ

ವಾಹನ ಡಿಕ್ಕಿ; ಕರಡಿ ಸಾವು

ಕೂಡ್ಲಿಗಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಅಮಲಾಪುರ ಬಳಿ ರಾಷ್ಟ್ರೀಯ ಹೆದ್ದಾರಿ-50ರಲ್ಲಿ ಮಂಗಳವಾರ ವಾಹನ ಡಿಕ್ಕಿ ಹೊಡೆದು ಐದು ವರ್ಷದ ಗಂಡು ಕರಡಿ ಮೃತಪಪಟ್ಟಿದೆ.

'ಜರಿಮಲೆ ಕಾಡಿನತ್ತ ಸಾಗಲು ಹೆದ್ದಾರಿ ದಾಟುವಾಗ ಅಪಘಾತ ವಾಗಿದೆ. ನಿಯಮದಂತೆ ಕಳೇಬರ ಸುಡಲಾಗಿದೆ' ಎಂದು ವಲಯ ಅರಣ್ಯಾಧಿಕಾರಿ ಸಂದೀಪ್ ನಾಯಕ ತಿಳಿಸಿದ್ದಾರೆ.

2 ಮಸೂದೆಗಳಿಗೆ ರಾಜ್ಯಪಾಲರ ಅಂಕಿತ

ಬೆಂಗಳೂರು: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸೋರಿಕೆ ತಡೆಗಟ್ಟಲು ರಾಜ್ಯ ಸರ್ಕಾರ ತಿದ್ದುಪಡಿ ತಂದಿದ್ದ 'ಕರ್ನಾಟಕ ಸರಕು ಸೇವೆಗಳ ಮಸೂದೆ- 2025' ಹಾಗೂ ₹3,351.96 ಕೋಟಿ ಮೊದಲ ಪೂರಕ ಅಂದಾಜು ಒಳಗೊಂಡ 'ಕರ್ನಾಟಕ ಧನ ವಿನಿಯೋಗ ಮಸೂದೆ–2025'ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದು, ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

'ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್' ಅನ್ನು ಕೆಲವರು ಅಕ್ರಮವಾಗಿ ಪಡೆದುಕೊಳ್ಳುತ್ತಿದ್ದಾರೆ. ತಂಬಾಕು–ಅಡಿಕೆ ಆಧಾರಿತ ಪದಾರ್ಥಗಳಲ್ಲಿ (ಗುಟ್ಕಾ, ಪಾನ್ ಮಸಾಲಾ) ತೆರಿಗೆ ಸೋರಿಕೆ ಆಗುತ್ತಿದ್ದು, ಯಾವ ರೀತಿ ದುರುಪಯೋಗ ಮಾಡುತ್ತಿದ್ದಾರೆ ಎಂಬುದನ್ನು ಹುಡುಕಿ ಅದನ್ನು ತಡೆಗಟ್ಟಲು 'ಕರ್ನಾಟಕ ಸರಕು ಸೇವೆಗಳ ಕಾಯ್ದೆ' ನೆರವಾಗಲಿದೆ.

ಒಳ ಮೀಸಲಾತಿ: ಇಂದು ಪ್ರತಿಭಟನೆ

ಬೆಂಗಳೂರು: ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಬರುವ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಶೇಕಡ 1ರಷ್ಟು ಒಳ ಮೀಸಲಾತಿ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸೆಪ್ಟೆಂಬರ್ 3ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟ ತಿಳಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಸಂಚಾಲಕರಾದ ಕೆ. ವೀರೇಶ್, ಶೇಷಪ್ಪ, ಬಿ.ಎಚ್. ಮಂಜುನಾಥ್, ಲೋಹಿತಾಕ್ಷ, 'ನಾಗಮೋಹನದಾಸ್ ಆಯೋಗವು ಪರಿಶಿಷ್ಟ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯ ದತ್ತಾಂಶ ಗಳನ್ನು ಸಂಗ್ರಹಿಸಿ, ವೈಜ್ಞಾನಿಕವಾಗಿ ಒಳ ಮೀಸಲಾತಿ ಹಂಚಿಕೆ ಮಾಡಿತ್ತು' ಎಂದು ಹೇಳಿದರು.

'ಜಾತಿವಾರು ಸಮೀಕ್ಷೆ: ತರಾತುರಿ ಬೇಡ'

ಹಿಂದುಳಿದ ವರ್ಗಗಳ ಆಯೋಗಕ್ಕೆ ಬಿಜೆಪಿ ನಿಯೋಗದ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ-ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು 15 ದಿನಗಳ ಅಲ್ಪಾವಧಿಯಲ್ಲಿ, ತರಾತುರಿಯಲ್ಲಿ ಮಾಡುವ ಹಟವನ್ನು ರಾಜ್ಯ ಸರ್ಕಾರ ಬಿಡಬೇಕು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್ ಕುಮಾರ್ ನೇತೃತ್ವದ ಬಿಜೆಪಿ ನಾಯಕರ ನಿಯೋಗ ಒತ್ತಾಯಿಸಿತು.

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯ್ಕ್ ಅವರನ್ನು ಸುನಿಲ್ ಕುಮಾರ್ ನೇತೃತ್ವದಲ್ಲಿ ರಾಜ್ಯ ಬಿಜೆಪಿ ನಾಯಕರ ನಿಯೋಗವು ಮಂಗಳವಾರ ಭೇಟಿ ಮಾಡಿ ಮನವಿ ಸಲ್ಲಿಸಿತು.

'15 ದಿನಗಳಲ್ಲಿ ಸಮೀಕ್ಷೆಯನ್ನು ನಡೆಸಲು ಸಾಧ್ಯವಿಲ್ಲ. ಹೆಚ್ಚು ಸಮಯ ತೆಗೆದುಕೊಂಡು ಕರಾರುವಾಕ್ಕಾಗಿ ದತ್ತಾಂಶ ಸಂಗ್ರಹಿಸಬೇಕು. ಸಮೀಕ್ಷೆಯನ್ನು ಅತ್ಯಂತ ವ್ಯವಸ್ಥಿತವಾಗಿ ನಡೆಸಬೇಕು. ಯಾವುದೇ ಗೊಂದಲ ಮತ್ತು ಸಮಸ್ಯೆಗಳಿಗೆ ಅವಕಾಶ ಇರದಂತೆ ಎಚ್ಚರವಹಿಸಬೇಕು' ಎಂದು ನಿಯೋಗವು ಕೋರಿದೆ.

ಭೇಟಿಯ ನಂತರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಸುನಿಲ್ ಕುಮಾರ್, 'ಆಯೋಗವು ಹೊರಡಿಸಿರುವ 1,400 ಜಾತಿಗಳ ಪಟ್ಟಿಯಲ್ಲಿ ಕುರುಬ ಕ್ರಿಶ್ಚಿಯನ್, ಮಡಿವಾಳ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್ ಎಂದು ಹೊಸ ಜಾತಿಗಳನ್ನು ಸೇರಿಸಿದೆ. ಹಿಂದೂ ಜಾತಿಗಳ ಹೆಸರಿನ ಮುಂದೆ ಮುಸ್ಲಿಂ ಎಂದು ಸೇರಿಸಿ, ಹೊಸದಾಗಿ 107 ಜಾತಿಗಳನ್ನು ಸೃಷ್ಟಿಸಲಾಗಿದೆ. ಇದನ್ನು ತೆಗೆದುಹಾಕಬೇಕು ಎಂದು ಒತ್ತಾಯಿಸಿದ್ದೇವೆ' ಎಂದರು.

'ಈ ಜಾತಿಪಟ್ಟಿ ಮತ್ತು ಸಮೀಕ್ಷೆ ಮೂಲಕ ರಾಜ್ಯದ ಜನರಲ್ಲಿ ಒಡಕು ಮೂಡಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಹಿಂದಿನ ಆಯೋಗದ ಅಧ್ಯಕ್ಷರು ನೀಡಿದ್ದ ವರದಿಗಳನ್ನು ಕಸದಬುಟ್ಟಿಗೆ ಎಸೆಯಲಾಗಿದೆ. ಇದರಿಂದ ನೂರಾರು ಕೋಟಿ ವ್ಯರ್ಥವಾಗಿದೆ. ಈಗ ನಡೆಸುವ ಸಮೀಕ್ಷೆಗೂ ಇದೇ ಗತಿ ಬರಬಾರದು' ಎಂದರು.

ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಎಚ್.ಪಾಟೀಲ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ವಿಧಾನ ಪರಿಷತ್ ಸದಸ್ಯ ಎಸ್.ಕೇಶವಪ್ರಸಾದ್ ನಿಯೋಗದಲ್ಲಿ ಇದ್ದರು.


ಮಧುಸೂದನ್ ಆರ್.ನಾಯ್ಕ್ ಅವರಿಗೆ ಬಿಜೆಪಿ ನಿಯೋಗವು ಮನವಿ ಪತ್ರವನ್ನು ಸಲ್ಲಿಸಿತು

ಗೊಂದಲ ನಿವಾರಣೆಗೆ ಆಗ್ರಹ

ಈ ಸಮೀಕ್ಷೆಯ ಬಗ್ಗೆ ಸಾರ್ವಜನಿಕರಲ್ಲಿ ಹಲವು ಗೊಂದಲಗಳಿವೆ. ಅವುಗಳನ್ನು ಬಗೆಹರಿಸಿ ಎಂದು ಬಿಜೆಪಿ ನಿಯೋಗವು ಆಯೋಗವನ್ನು ಒತ್ತಾಯಿಸಿದೆ. ಬಿಜೆಪಿ ಪಟ್ಟಿ ಮಾಡಿರುವ ಕೆಲ ಗೊಂದಲಗಳು ಈ ಮುಂದಿನಂತಿವೆ

- ಒಳಮೀಸಲಾತಿಗಾಗಿ ನಡೆಸಿದ ಸಮೀಕ್ಷೆಯ ದತ್ತಾಂಶಗಳನ್ನು ಈ ಸಮೀಕ್ಷೆಯಲ್ಲಿ ಬಳಸಿ ಕೊಳ್ಳಲಾಗುತ್ತದೆಯೇ ಅಥವಾ ಮತ್ತೆ ಆ ಮನೆಗಳನ್ನೂ ಮತ್ತೆ ಸಮೀಕ್ಷೆಗೆ ಒಳಪಡಿಸಲಾಗುತ್ತದೆಯೇ?
- ಒಂದೇ ಮನೆಯಲ್ಲಿ 20ಕ್ಕೂ ಹೆಚ್ಚು ಜನರಿದ್ದರೆ, ಅಂತಹ ಮನೆಗ ಸಮೀಕ್ಷೆ ಹೇಗೆ ಮಾಡುತ್ತೀರಿ?
- ಸಾರ್ವಜನಿಕರು ಕೊಡುವ ಮಾಹಿತಿಯನ್ನು ಹೇಗೆ ಖಚಿತಪಡಿಸಿಕೊಳ್ಳುತ್ತೀರಿ?
- ಸಮೀಕ್ಷೆಯ ಭಾಗವಾಗಿ ವಿದ್ಯುತ್ ಮೀಟರ್ ಅನ್ನು ಹೇಗೆ ಟ್ಯಾಗ್ ಮಾಡುತ್ತೀರಿ? ಅದರಿಂದ ಸಮೀಕ್ಷೆಗೆ ಆಗುವ ಉಪಯೋಗವೇನು?

ಒಳಮೀಸಲಾತಿ ವರದಿ ಯಥಾವತ್ ಜಾರಿಗೆ ತನ್ನಿ: ಸಂಸದ ಕಾರಜೋಳ

ಪ್ರಜಾವಾಣಿ ವಾರ್ತೆ

> ಸರ್ಕಾರವು ₹150 ಕೋಟಿ ವ್ಯರ್ಥ ಮಾಡಿದ್ದಲ್ಲದೆ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಅವರಿಗೂ ಅವಮಾನ ಮಾಡಿದೆ
> **ಗೋವಿಂದ ಕಾರಜೋಳ,** ಬಿಜೆಪಿ ಸಂಸದ

ಬೆಂಗಳೂರು: ಒಳಮೀಸಲಾತಿ ಸಂಬಂಧ ಜೆ.ಸಿ.ಮಾಧುಸ್ವಾಮಿ ಸಮಿತಿಯ ವರದಿ ಅಥವಾ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಆಯೋಗದ ವರದಿಯ ಶಿಫಾರಸುಗಳನ್ನು ರಾಜ್ಯ ಸರ್ಕಾರವು ಯಥಾವತ್ತಾಗಿ ಅನುಷ್ಠಾನಕ್ಕೆ ತರಬೇಕು ಎಂದು ಬಿಜೆಪಿ ಸಂಸದ ಗೋವಿಂದ ಕಾರಜೋಳ ಮಂಗಳವಾರ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಳಮೀಸಲಾತಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶಕ್ಕೆ ಅನುಗುಣವಾಗಿಯೇ ನಾಗಮೋಹನದಾಸ್ ಆಯೋಗವು ಶಿಫಾರಸು ಮಾಡಿತ್ತು. ಆದರೆ ಅದನ್ನು ಕಡೆಗಣಿಸಿದ ಸರ್ಕಾರವು, ತನ್ನಿಚ್ಛೆಯಂತೆ ಒಳಮೀಸಲಾತಿಯನ್ನು ಘೋಷಿಸಿದೆ. ಇದು ಸಾಮಾಜಿಕ ನ್ಯಾಯದ ತೀರ್ಮಾನವಲ್ಲ. ಬದಲಿಗೆ ರಾಜಕೀಯ ತೀರ್ಮಾನ' ಎಂದು ಆರೋಪಿಸಿದರು.

'ಜೆ.ಸಿ.ಮಾಧುಸ್ವಾಮಿ ಸಮಿತಿಯ ವರದಿಯಲ್ಲಿ ಮಾಡಲಾಗಿದ್ದ ಒಳಮೀಸಲಾತಿ ಶಿಫಾರಸು ನ್ಯಾಯೋಚಿತವಾಗಿತ್ತು. ರಾಜ್ಯ ಸರ್ಕಾರವು ಈ ಎರಡು ವರದಿಗಳಲ್ಲಿ ಯಾವುದಾದರೂ ಒಂದನ್ನು ಯಥಾವತ್ತಾಗಿ ಅನುಷ್ಠಾನಕ್ಕೆ ತರಬೇಕು' ಎಂದು ಒತ್ತಾಯಿಸಿದರು.

ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ, 'ನಾಗಮೋಹನದಾಸ್ ಆಯೋಗದ ವರದಿ ಸಿದ್ಧಪಡಿಸಲು ₹150 ಕೋಟಿ ವೆಚ್ಚ ಮಾಡಲಾಗಿದೆ. ಅದನ್ನು ಅನುಷ್ಠಾನಕ್ಕೆ ತಂದರೆ, ಮಾದಿಗರ 35 ವರ್ಷಗಳ ಹೋರಾಟಕ್ಕೆ ಫಲ ಸಿಗುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಸರ್ಕಾರದ ನಡೆಯಿಂದ ಮಾದಿಗರು ಮತ್ತೆ ಹೋರಾಟಕ್ಕೆ ಇಳಿಯಬೇಕಾದ ಸ್ಥಿತಿಬಂದಿದೆ. ಈ ತಪ್ಪನ್ನು ಸರಿಪಡಿಸದೇ ಇದ್ದರೆ, ಮಾದಿಗರು ಮತ್ತೆ ಹೋರಾಟಕ್ಕೆ ಇಳಿಯಲಿದ್ದಾರೆ' ಎಂದು ಎಚ್ಚರಿಕೆ ನೀಡಿದರು.

'ಮೇತ್ರಿ' ಸಮಸ್ಯೆಗೆ ಶೀಘ್ರ ಪರಿಹಾರ ಒದಗಿಸಲು ಬದ್ಧ: ಸಚಿವ ಮುನಿಯಪ್ಪ

ಪ್ರಜಾವಾಣಿ ವಾರ್ತೆ


ಮುನಿಯಪ್ಪ

ಬೆಂಗಳೂರು: 'ಮಾದಿಗ ಸಮುದಾಯದವರಾಗಿದ್ದರೂ, ದಾಖಲೆಗಳಲ್ಲಿ ತಪ್ಪಾಗಿ 'ಮೇತ್ರಿ' ಎಂದು ಸೇರಿಸಿದ ಕಾರಣಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಸರ್ಕಾರ ಬದ್ಧವಾಗಿದೆ' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿರುವ ಮೇತ್ರಿ ಸಮುದಾಯದ ಜನರು ತಮ್ಮ ಸಮಸ್ಯೆಯ ಕುರಿತು ಮನವಿ ಸಲ್ಲಿಸಿದ್ದಾರೆ. ಈ ಜನರು 1980ರ ನಂತರ ತಪ್ಪಾಗಿ 'ಮೇತ್ರಿ' ಹೆಸರಿನಲ್ಲಿ ಜಾತಿ ಪ್ರಮಾಣಪತ್ರ ಪಡೆಯುತ್ತಿರುವುದರಿಂದ ಶಿಕ್ಷಣ ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿಯಿಂದ ವಂಚಿತರಾಗಿದ್ದಾರೆ' ಎಂದರು.

'ಒಳ ಮೀಸಲಾತಿ ಕಲ್ಪಿಸಲು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗ ನಡೆಸಿದ ಸಮೀಕ್ಷೆಯಲ್ಲಿಯೇ ಮಾದಿಗ ಸಮುದಾಯಕ್ಕೆ 'ಮೇತ್ರಿ' ಸೇರಿದೆ ಎಂದು ನಮೂದಿಸಲಾಗಿದೆ. ಆದರೂ ಅಧಿಕಾರಿಗಳು ಪ್ರಮಾಣಪತ್ರ ನೀಡಲು ನಿರಾಕರಿಸುತ್ತಿದ್ದಾರೆ. ಈ ವಿಚಾರವನ್ನು ಮುಖ್ಯಮಂತ್ರಿ ಮತ್ತು ಸಮಾಜ ಕಲ್ಯಾಣ ಸಚಿವರ ಗಮನ ತರುತ್ತೇನೆ. ಅಲ್ಲದೆ, ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿ ತಕ್ಷಣವೇ ಪ್ರಮಾಣಪತ್ರ ನೀಡಲು ಕ್ರಮ ಕೈಗೊಳ್ಳಲಾಗುವುದು' ಎಂದರು.

'ಪರಿಶಿಷ್ಟ ಜಾತಿಯ 101 ಜಾತಿಗಳಲ್ಲಿ ಯಾರಿಗಾದರೂ ಅನ್ಯಾಯ ಆಗಿದ್ದರೆ, ಸರ್ಕಾರ ಪರಿಶೀಲಿಸಿ ನ್ಯಾಯ ನೀಡಲಿದೆ. ಅಲೆಮಾರಿ ಸಮಾಜಕ್ಕೂ ಪ್ರತ್ಯೇಕ ಮೀಸಲಾತಿ ನೀಡುವ ಬಗ್ಗೆಯೂ ಚಿಂತನೆ ನಡೆದಿದೆ' ಎಂದರು.

ಹಳಿಯಾಳದ ಕಾಂಗ್ರೆಸ್ ಪಕ್ಷದ ಮುಖಂಡ ಗುರುನಾಥ ದಾನಪ್ಪ ಸೇರಿದಂತೆ ಕೆಲವು ಮುಖಂಡರ ಜೊತೆ ಸಚಿವರು ಚರ್ಚೆ ನಡೆಸಿದರು. ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕ ನಾಗೇಶ್, ಶಿವಪ್ಪ, ಪುರುಷೋತ್ತಮ ಇದ್ದರು.

ಕರ್ನಾಟಕ ರತ್ನ

ಪ್ರಜಾವಾಣಿ ಚಿತ್ರ


ನಟ ವಿಷ್ಣುವರ್ಧನ್ ಅವರಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಎಂದು ನಟಿಯರಾದ ಮಾಳವಿಕ ಅವಿನಾಶ್, ಜಯಮಾಲ ಮತ್ತು ಶೃತಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು

ಜಿಎಸ್‌ಟಿ: ಲಾಭ ಜನರಿಗೆ ಸಿಗಲಿ

ಪ್ರಜಾವಾಣಿ ವಾರ್ತೆ



> ರಾಜ್ಯಗಳ ಆದಾಯದಲ್ಲಿ ಕೊರತೆ ಉಂಟಾಗಿ ಸರ್ಕಾರ ನಡೆಸಲು ಕೇಂದ್ರದ ಕಡೆ ಕೈಚಾಚುವಂತಾದರೆ, ರಾಜ್ಯಗಳ ಸ್ವಾಯತ್ತತೆ ಎಂಬ ಪದವೇ ಅರ್ಥ ಕಳೆದುಕೊಳ್ಳಲಿದೆ
> **ಕೃಷ್ಣ ಬೈರೇಗೌಡ,** ಕಂದಾಯ ಸಚಿವ

ಬೆಂಗಳೂರು: 'ಕೇಂದ್ರ ಸರ್ಕಾರ ಮುಂದಿಟ್ಟಿರುವ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ದರ ಸರಳೀಕರಣ ವ್ಯವಸ್ಥೆಯನ್ನು ನಾವು (ರಾಜ್ಯ ಸರ್ಕಾರ) ಸ್ವಾಗತಿಸುತ್ತೇವೆ. ಆದರೆ, ಈ ವ್ಯವಸ್ಥೆ ರಾಜ್ಯಗಳ ತೆರಿಗೆ ಆದಾಯವನ್ನು ರಕ್ಷಿಸುವಂತಿರಬೇಕು. ಸರಳೀಕರಣದ ಲಾಭ ಸಂಪೂರ್ಣವಾಗಿ ಜನರಿಗೆ ಸಿಗಬೇಕೇ ಹೊರತು ಕಂಪನಿಗಳಿಗೆ ಅಲ್ಲ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಂಗಳವಾರ ಹೇಳಿದರು.

'ಜಿಎಸ್‌ಟಿ ಜಾರಿ ಬಳಿಕ ರಾಜ್ಯದ ಆದಾಯದಲ್ಲಿ ವಾರ್ಷಿಕ ಸರಾಸರಿ ₹70 ಸಾವಿರ ಕೋಟಿ ಖೋತಾ ಆಗುತ್ತಿದೆ. ಇದೀಗ ಸರಳೀಕರಣ ಪ್ರಸ್ತಾವನೆಯಿಂದ ಹೆಚ್ಚುವರಿ ₹15 ಸಾವಿರ ಕೋಟಿ ಖೋತಾ ಆಗಲಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಜಿಎಸ್‌ಟಿ ಜಾರಿಗೊಂಡ ನಂತರ ಕೇಂದ್ರದ ತೆರಿಗೆಯಲ್ಲಿ ಕರ್ನಾಟಕದ ಪಾಲು 2016-17ರಿಂದ 2024-25ಕ್ಕೆ ಹೋಲಿಸಿದರೆ ವಾರ್ಷಿಕ ₹21,977 ಕೋಟಿ ಕಡಿತವಾಗಿದೆ. ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಕರ್ನಾಟಕಕ್ಕೆ ಬರುವ ಅನುದಾನ ವಾರ್ಷಿಕ ₹18,870 ಕೋಟಿ ಕಡಿತಗೊಂಡಿದೆ' ಎಂದರು.

'ಪ್ರಸ್ತಾವಿತ ಜಿಎಸ್‌ಟಿ ದರ ಸರಳೀಕರಣದಿಂದ ರಾಜ್ಯ ಸರ್ಕಾರಗಳಿಗೆ ಯಾವ ಪ್ರಮಾಣದಲ್ಲಿ ಆದಾಯ ಖೋತಾ ಆಗಬಹುದು ಎಂಬ ಅಂದಾಜಿನ ಕುರಿತು ಕೇಂದ್ರ ಸರ್ಕಾರ ಈವರೆಗೂ ಮಾಹಿತಿ ನೀಡಿಲ್ಲ. ಕೆಲವು ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ₹2.50 ಲಕ್ಷ ಕೋಟಿವರೆಗೆ ನಷ್ಟ ಉಂಟಾಗುವ ಸಾಧ್ಯತೆ ಇದೆ ಎಂದು ಅಂದಾಜಿಸಿವೆ' ಎಂದ ಅವರು, 'ಹೊಸ ವ್ಯವಸ್ಥೆ ಜಾರಿಯಾಗಿ ರಾಜ್ಯಗಳ ಆದಾಯ ಹಾಗೂ ಜಿಎಸ್‌ಟಿ ಸ್ಥಿರಗೊಳ್ಳುವ ವರೆಗೆ ಜಿಎಸ್‌ಟಿ ಕೌನ್ಸಿಲ್ ಪರಿಹಾರ ನೀಡಬೇಕು' ಎಂದು ಆಗ್ರಹಿಸಿದರು.

ಆಸ್ಪತ್ರೆಯಿಂದ ಮಂಚದ ಮೇಲೆಯೇ ಶವ ಹೊತ್ತೊಯ್ದರು

ಗರಿಯಾಬಂದ್ (ಪಿಟಿಐ): ಆಸ್ಪತ್ರೆಯವರು ವಾಹನ ನೀಡಲು ನಿರಾಕರಿಸಿದ್ದರಿಂದ ಮೃತದೇಹವನ್ನು ಮಂಚದ ಮೇಲೆಯೇ ಹೊತ್ತೊಯ್ದಿರುವ ಘಟನೆ ಛತ್ತೀಸಗಢದ ಗರಿಯಾಬಂದ್ ಜಿಲ್ಲೆಯಲ್ಲಿ ನಡೆದಿದೆ.

ಇಲ್ಲಿಯ ಅಮ್ಲಿಪಡರ್‌ನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಚ್ಛಾಬಾಯಿ ಪಟೇಲ್ (60) ಸೋಮವಾರ ಮೃತಪಟ್ಟಿದ್ದಾರೆ. ಶವ ಸಾಗಿಸಲು ಕುಟುಂಬಸ್ಥರು ಮನವಿ ಮಾಡಿದರೂ, ಆಸ್ಪತ್ರೆಯವರು ನಿರಾಕರಿಸಿದ್ದಾರೆ ಎನ್ನಲಾಗಿದೆ. ಹೀಗಾಗಿ ಮೃತದೇಹ ಇರಿಸಿದ್ದ ಆಸ್ಪತ್ರೆಯ ಮಂಚವನ್ನೇ 2.5 ಕಿ.ಮೀ. ದೂರ ಹೆಗಲ ಮೇಲೆ ಹೊತ್ತು ಕುಟುಂಬಸ್ಥರು ಸಾಗಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

'ಘಟನೆ ಬಗ್ಗೆ ಜಿಲ್ಲಾ ಆರೋಗ್ಯ ಅಧಿಕಾರಿಯೊಂದಿಗೆ ಮಾತನಾಡಿದ್ದೇನೆ. 26 ಕಿ.ಮೀ ದೂರದಿಂದ ವಾಹನ ಬರಲಿದೆ ಎಂದು ಆಸ್ಪತ್ರೆಯವರು ತಿಳಿಸಿದ್ದರು. ಅದಕ್ಕೆ ಕಾಯದೇ ಕುಟುಂಬಸ್ಥರು ಶವವನ್ನು ಹೊತ್ತೊಯ್ದಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಇಂಥ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಲು ನಿರ್ದೇಶಿಸಲಾಗಿದೆ' ಎಂದು ಜಿಲ್ಲಾಧಿಕಾರಿ ಭಗವಾನ್ ಸಿಂಗ್ ಪ್ರತಿಕ್ರಿಯಿಸಿದ್ದಾರೆ.

ಕಾಣೆಯಾಗಿದ್ದ ಪತಿ ರೀಲ್ಸ್‌ನಲ್ಲಿ ಪತ್ತೆ: ಬಂಧನ

ಹರ್ದೋಯಿ (ಪಿಟಿಐ): ಎಂಟು ವರ್ಷಗಳ ಹಿಂದೆ ಕಾಣೆಯಾಗಿದ್ದ ಪತಿಯನ್ನು ಉತ್ತರ ಪ್ರದೇಶದ ಮಹಿಳೆಯೊಬ್ಬರು ಇನ್‌ಸ್ಟಾಗ್ರಾಂನ ರೀಲ್ಸ್‌ನಲ್ಲಿ ಪತ್ತೆ ಮಾಡಿದ್ದಾರೆ. ತನ್ನನ್ನು ತ್ಯಜಿಸಿ ಬೇರೆ ಮಹಿಳೆಯನ್ನು ಮದುವೆಯಾಗಿದ್ದಾರೆ ಎಂದು ಮಹಿಳೆ ಆರೋಪಿಸಿ, ಆತನ ವಿರುದ್ಧ ವಂಚನೆ ಪ್ರಕರಣ ದಾಖಲಿಸಿದ್ದಾರೆ.

'ಆರೋಪಿ ಜಿತೇಂದ್ರ, ಗರ್ಭಿಣಿ ಹೆಂಡತಿ ಶೀಲು ಅವರನ್ನು 2018ರಲ್ಲಿ ಬಿಟ್ಟು ಹೋಗಿ, ಪಂಜಾಬ್‌ನ ಲುಧಿಯಾನದಲ್ಲಿ ವಾಸವಿದ್ದರು. ಶೀಲು ಇನ್‌ಸ್ಟಾಗ್ರಾಂನ ವಿಡಿಯೊವೊಂದರಲ್ಲಿ ಜಿತೇಂದ್ರ ಅವರನ್ನು ನೋಡಿ, ಪೊಲೀಸರಿಗೆ ತಿಳಿಸಿದರು. ಬಳಿಕ ತನಿಖೆ ನಡೆಸಿದ ಪೊಲೀಸರು, ಜಿತೇಂದ್ರ ಅವರ ಗುರುತು ಮತ್ತು ವಾಸಸ್ಥಳವನ್ನು ಪತ್ತೆ ಮಾಡಿ ಬಂಧಿಸಿದ್ದಾರೆ. ಆರೋಪಿಯನ್ನು ವಿಚಾರಣೆಗೆ ಒಳಪಡಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿ ಸಂತೋಷ್ ಕುಮಾರ್ ಮಂಗಳವಾರ ತಿಳಿಸಿದ್ದಾರೆ.

2018ರಲ್ಲಿ ಜಿತೇಂದ್ರ ಅವರ ತಂದೆ ತಮ್ಮ ಮಗ ನಾಪತ್ತೆಯಾಗಿದ್ದಾನೆ ಎಂದು ದೂರು ದಾಖಲಿಸಿದ್ದರು ಮತ್ತು ಇದಕ್ಕೆ ಶೀಲು ಕುಟುಂಬವೇ ಕಾರಣ ಎಂದು ಆರೋಪಿಸಿದ್ದರು.

ಎಬಿಸಿ ಅಧ್ಯಕ್ಷರಾಗಿ ಕರುಣೇಶ್ ಬಜಾಜ್

ಪ್ರಜಾವಾಣಿ ವಾರ್ತೆ


ಕರುಣೇಶ್ ಬಜಾಜ್

ಬೆಂಗಳೂರು: ಆಡಿಟ್ ಬ್ಯೂರೊ ಆಫ್ ಸರ್ಕ್ಯುಲೇಷನ್ (ಎಬಿಸಿ) ಸಂಸ್ಥೆಯ 2025–26ನೇ ಸಾಲಿನ ಅಧ್ಯಕ್ಷರಾಗಿ ಐಟಿಸಿ ಲಿಮಿಟೆಡ್‌ನ ಮಾರುಕಟ್ಟೆ ಮತ್ತು ರಫ್ತು ವಿಭಾಗದ ಉಪಾಧ್ಯಕ್ಷರಾಗಿರುವ ಕರುಣೇಶ್ ಬಜಾಜ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

25ಕ್ಕಿಂತಲೂ ಅಧಿಕ ವರ್ಷಗಳಿಂದ ಐಟಿಸಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರುಣೇಶ್ ಅವರು ಮಾರುಕಟ್ಟೆ ವಿಭಾಗದ ಪ್ರಧಾನ ವ್ಯವಸ್ಥಾಪಕ, ವಿವಿಧ ವಿಭಾಗಗಳ ಮುಖ್ಯಸ್ಥ ಸೇರಿದಂತೆ ಹಲವು ಹಿರಿಯ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಅದಕ್ಕೂ ಮೊದಲು ಭಾರತಿ ರಿಟೇಲ್ ಲಿಮಿಟೆಡ್‌ನ ಮುಖ್ಯಸ್ಥರಾಗಿಯೂ ಕಾರ್ಯನಿರ್ವಹಿಸಿದ್ದರು.

ಬೆನೆಟ್, ಕೋಲ್‌ಮನ್ ಆ್ಯಂಡ್ ಕಂಪನಿ ಲಿಮಿಟೆಡ್‌ನ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಮುದ್ರಣ ವಿಭಾಗ) ಮೋಹಿತ್ ಜೈನ್ ಅವರು ಉಪಾಧ್ಯಕ್ಷರಾಗಿ ಮತ್ತು ಆದಿಲ್ ಕಾಸದ್ ಅವರು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಜಾಹಿರಾತು ಪ್ರತಿನಿಧಿಗಳು: ಕರುಣೇಶ್ ಬಜಾಜ್ -ಅಧ್ಯಕ್ಷ, ಅನಿರುದ್ಧ ಹಲ್‌ಧರ್ (ಟಿವಿಎಸ್ ಮೋಟರ್ ಕಂಪನಿ ಲಿಮಿಟೆಡ್), ಪಾರ್ಥೋ ಬ್ಯಾನರ್ಜಿ (ಮಾರುತಿ ಸುಜುಕಿ ಇಂಡಿಯಾ ಲಿ.)

ಮುದ್ರಣ ಪ್ರತಿನಿಧಿಗಳು: ಮೋಹಿತ್ ಜೈನ್ (ಅಧ್ಯಕ್ಷ), ಧ್ರುವ ಮುಖರ್ಜಿ (ಎಬಿಪಿ ಪ್ರೈ.ಲಿ)– ಗೌರವ ಕಾರ್ಯದರ್ಶಿ, ರಿಯಾದ್ ಮ್ಯಾಥ್ಯು (ಮಲಯಾಳ ಮನೋರಮಾ ಕಂ. ಲಿ.), ಗಿರೀಶ್ ಅಗರ್‌ವಾಲ್ (ಡಿ.ಬಿ ಕಾರ್ಪ್ ಲಿ.), ಶೈಲೇಶ್ ಗುಪ್ತಾ (ಜಾಗರಣ್ ಪ್ರಕಾಶನ್ ಲಿ.), ಕರಣ್ ದಾರ್ಡ್ (ಲೋಕಮತ್ ಮೀಡಿಯಾ ಪ್ರೈ.ಲಿ), ಪ್ರತಾಪ್ ಪವಾರ್ (ಸಕಾಳ್ ಪೇಪರ್ಸ್), ಆದಿಮೂಲಂ (ದಿನಮಲರ್)

ಜಾಹೀರಾತು ಸಂಸ್ಥೆಗಳ ಪ್ರತಿನಿಧಿಗಳು: ವಿಕ್ರಂ ಸಖುಜಾ (ಮ್ಯಾಡಿಸನ್ ಕಮ್ಯುನಿಕೇಶನ್ಸ್ ಪ್ರೈ.ಲಿ)– ಗೌರವ ಖಜಾಂಚಿ, ಶ್ರೀನಿವಾಸನ್ ಕೆ.ಸ್ವಾಮಿ (ಆರ್‌ಕೆ ಸ್ವಾಮಿ ಬಿಬಿಡಿಒ ಪ್ರೈ.ಲಿ), ಪ್ರಶಾಂತ್ ಕುಮಾರ್ (ಗ್ರೂಪ್ ಎಮ್ ಮೀಡಿಯ ಇಂಡಿಯಾ ಪ್ರೈ.ಲಿ.), ವೈಶಾಲಿ ವರ್ಮ (ಇನಿಷಿಯೇಟಿವ್ ಮೀಡಿಯ ಇಂಡಿಯಾ ಪ್ರೈ.ಲಿ.), ಸೇಜಲ್ ಶಾ (ಪಬ್ಲಿಸಿಸ್ ಮೀಡಿಯ ಇಂಡಿಯಾ ಗ್ರೂಪ್)

ಕಳ್ಳತನ ಆರೋಪ: ಮಹಿಳೆಗೆ ಚಪ್ಪಲಿ ಹಾರ ಹಾಕಿ ಮೆರವಣಿಗೆ

ಗಿರಿಡೀಹ್ (ಜಾರ್ಖಂಡ್) (ಪಿಟಿಐ): ಆಭರಣ ಕಳ್ಳತನದ ಆರೋಪದಲ್ಲಿ ಮಧ್ಯವಯಸ್ಕ ಮಹಿಳೆ ಮೇಲೆ ಹಲ್ಲೆ ನಡೆಸಿ, ಅವರ ತಲೆಕೂದಲು ಕತ್ತರಿಸಿ, ಚಪ್ಪಲಿ ಹಾರ ಹಾಕಿ ಗ್ರಾಮದಲ್ಲಿ ಮೆರವಣಿಗೆ ಮಾಡಿರುವ ಘಟನೆ ಜಾರ್ಖಂಡ್‌ನ ಗಿರಿಡೀಹ್ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸರು ಮಂಗಳವಾರ ಹೇಳಿದ್ದಾರೆ.

ಘಟನೆಯು ಭಾನುವಾರ ಸಂಜೆ ಪಿಪರಾಡೀಹ್ ಗ್ರಾಮದ ದುಮ್ರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಮುಖ ಆರೋಪಿ ನಾಗೇಶ್ವರ ಯಾದವ್ ಮತ್ತು ಅವರ ಕುಟುಂಬದ ಸದಸ್ಯರು, ಮಹಿಳೆಯು ಆಭರಣ ಕಳ್ಳತನ ಮಾಡಿದ್ದಾರೆ ಎಂದು ಆರೋಪಿಸಿ, ಕೃತ್ಯ ಎಸಗಿದ್ದಾರೆ.

ರಾಜಣ್ಣ ಅವರ ಪುತ್ರ, ವಿಧಾನಪರಿಷತ್ ಸದಸ್ಯ ಆರ್. ರಾಜೇಂದ್ರ ವಾಗ್ದಾಳಿ

'ಸಿ.ಎಂ ಸ್ಥಾನಕ್ಕಾಗಿ ಬಿಜೆಪಿಗೆ ಹೋಗಬಹುದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಮಾಡುತ್ತೇವೆ ಅಂದರೆ, ಇವರೆಲ್ಲ ಬಿಜೆಪಿಗೆ ಹೋಗಬಹುದು. ಇದೇ ಕೆ.ಎನ್. ರಾಜಣ್ಣ ಅವರು ಹೇಳಿದ್ದ ಸೆಪ್ಟೆಂಬರ್ ಕ್ರಾಂತಿ' ಎಂದು ರಾಜಣ್ಣ ಅವರ ಪುತ್ರ, ವಿಧಾನಪರಿಷತ್ ಸದಸ್ಯ ಆರ್. ರಾಜೇಂದ್ರ ವಾಗ್ದಾಳಿ ನಡೆಸಿದರು.

ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ನೀಡಿದ ಹೇಳಿಕೆಗೆ ತಿರುಗೇಟು ನೀಡಿದ ರಾಜೇಂದ್ರ, 'ಸೆಪ್ಟೆಂಬರ್ ಕ್ರಾಂತಿ ಬಾಲಕೃಷ್ಣ ಅವರಿಂದಲೇ ಆರಂಭ ಆಗಲಿದೆ' ಎಂದರು.

'ಸಿದ್ದರಾಮಯ್ಯ ಅವರ ಪರವಾಗಿ ಇದ್ದೇವೆ ಎಂಬ ಕಾರಣಕ್ಕಾಗಿ ನಮಗೆ ಅನ್ಯಾಯ ಆಗಿದೆ. ನಾವು ಇನ್ನು 10 ವರ್ಷ ಬಿಟ್ಟರೂ ಸಿದ್ದರಾಮಯ್ಯನವರ ಪರವೇ ಇರುತ್ತೇವೆ. ಬೇರೆ ಯಾರನ್ನೊ ತೋರಿಸಿ ನಾವು ಮತ ಪಡೆಯುವುದು ಅಷ್ಟರಲ್ಲೇ ಇದೆ' ಎಂದು ವಾಗ್ದಾಳಿ ನಡೆಸಿದರು.

'ಸಂಚು, ಪಿತೂರಿಯಿಂದ ರಾಜಣ್ಣ ಅವರ ರಾಜೀನಾಮೆ ಪಡೆದಿದ್ದಾರೆ. ಭ್ರಷ್ಟಾಚಾರ ಮಾಡಿ ಸಚಿವ ಸ್ಥಾನ ಬಿಟ್ಟಿಲ್ವಲ್ಲ? ರಾಜಣ್ಣ ಯಾವತ್ತೂ ಪಕ್ಷದ ವಿರುದ್ಧ ಮಾತನಾಡಿಲ್ವಲ್ಲ?' ಎಂದರು.

'ಡಿ.ಕೆ. ಶಿವಕುಮಾರ್ ಜೊತೆಗೆ ಕೆಲವರು ಕಾಲು ಹೊರಗಡೆ ಇಟ್ಟಿದ್ದಾರೆ ಎಂಬುದು ನಿಜವೇ' ಎಂಬ ಪ್ರಶ್ನೆಗೆ, 'ಹೌದು' ಎಂದ ರಾಜೇಂದ್ರ, 'ನಾವು ಸಿದ್ದರಾಮಯ್ಯ ಪರ ಇದ್ದೇವೆ ಎಂದೇ ಇಷ್ಟೆಲ್ಲ ಮಾಡಿದ್ದಾರೆ. ನಮಗೆ ಆಗಿರುವ ಅನ್ಯಾಯದ ಪ್ರಕಾರ ಮತ್ತೆ ಸಚಿವ ಸ್ಥಾನ ಕೊಡಬೇಕು. ಪರಿಶಿಷ್ಟ ವರ್ಗಕ್ಕೆ ಸೇರಿದ 15 ಶಾಸಕರಿದ್ದಾರೆ. ಹೀಗಾಗಿ, ವಾಲ್ಮೀಕಿ ಸಮುದಾಯಕ್ಕೆ ಸಚಿವ ಸ್ಥಾನ ಕೊಡಬೇಕು' ಎಂದು ಆಗ್ರಹಿಸಿದರು.

'ವಿಧಾನಸಭೆಯಲ್ಲಿ ರಾಜಣ್ಣ ಆರ್‌ಎಸ್‌ಎಸ್ ಗೀತೆ ಹಾಡಲಿಲ್ಲ. ಬಾಲ್ಯದಿಂದ ಚಡ್ಡಿ ಹಾಕಿಕೊಂಡು ಶಾಖೆಗೆ ಹೋಗಲಿಲ್ಲ' ಎಂದು ಹೇಳುವ ಮೂಲಕ ಡಿ.ಕೆ. ಶಿವಕುಮಾರ್ ವಿರುದ್ಧ ಪರೋಕ್ಷವಾಗಿ ರಾಜೇಂದ್ರ ವಾಗ್ದಾಳಿ ನಡೆಸಿದರು. 'ಸೆಪ್ಟೆಂಬರ್‌ನಲ್ಲಿ ಇವರ (ಬಾಲಕೃಷ್ಣ) ಬ್ರೈನ್ ಮ್ಯಾಪ್ ಮಾಡಿ. ಆಗ ಯಾರ್‍ಯಾರು ಯಾರ್‍ಯಾರ ಸಂಪರ್ಕದಲ್ಲಿದ್ದಾರೆಂದು ಗೊತ್ತಾಗಲಿದೆ' ಎಂದೂ ಕಿಡಿಕಾರಿದರು.

ಬಿಜೆಪಿ ಸೇರಲು ರಾಜಣ್ಣ ಅರ್ಜಿ


ಬಾಲಕೃಷ್ಣ

ರಾಮನಗರ: 'ಸಂಪುಟದಿಂದ ವಜಾಗೊಂಡ ಕೆ.ಎನ್. ರಾಜಣ್ಣ ಅವರು ಬಿಜೆಪಿ ಸೇರಲು ಅರ್ಜಿ ಹಾಕಿದ್ದಾರೆ. ಒಂದು ಕಾಲು ಈಗಾಗಲೇ ಬಿಜೆಪಿಯಲ್ಲಿದೆ. ನೂರಕ್ಕೆ ನೂರರಷ್ಟು ಅವರು ಬಿಜೆಪಿ ಸೇರುತ್ತಾರೆ' ಎಂದು ಕಾಂಗ್ರೆಸ್ ಶಾಸಕ ಎಚ್.ಸಿ. ಬಾಲಕೃಷ್ಣ ಸುಳಿವು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೇರೆ ಪಕ್ಷಕ್ಕೆ ಹೋಗುವ ಮುನ್ನ ಕಾಂಗ್ರೆಸ್ ಮೇಲೆ ಗೂಬೆ ಕೂರಿಸುತ್ತಿದ್ದಾರೆ. ಈಗಾಗಲೇ ಅವರು ಬಿಜೆಪಿ ಕೇಂದ್ರ ಮತ್ತು ರಾಜ್ಯ ನಾಯಕರ ಸಂಪರ್ಕದಲ್ಲಿದ್ದಾರೆ' ಎಂದರು.

'ರಾಜಣ್ಣ ಅವರ ಬ್ರೈನ್ ಮ್ಯಾಪಿಂಗ್ ಮಾಡಿದ್ರೆ ಯಾರ ಸಂಪರ್ಕದಲ್ಲಿದ್ದಾರೆ ಎಂದು ಗೊತ್ತಾಗುತ್ತದೆ. ಒಂದು ವೇಳೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇಲ್ಲದಿದ್ದಿದ್ದರೆ ಇಷ್ಟೊತ್ತಿಗಾಗಲೇ ಅವರು ಬಿಜೆಪಿಯಲ್ಲಿ ಇರುತ್ತಿದ್ದರು' ಎಂದು ಹೇಳಿದರು.

'ಹೈಕಮಾಂಡ್ ವಿರುದ್ಧ ಮಾತನಾಡಿದ್ದಕ್ಕೆ ಅವರು ಸಚಿವ ಸ್ಥಾನ ಕಳೆದುಕೊಂಡಿದ್ದಾರೆಯೇ ಹೊರತು, ಅದರ ಹಿಂದೆ ಯಾರ ಕೈವಾಡ, ಷಡ್ಯಂತ್ರ ಇಲ್ಲ. ತಮ್ಮ ಮಾತಿನಿಂದಲೇ ಕೆಟ್ಟರು. ಮಾತುಗಳು 'ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು' ಎಂಬಂತಿದ್ದವು' ಎಂದರು. 'ದೆಹಲಿಯಲ್ಲಿ ಸಮಾವೇಶ ಮಾಡಲು ಹೊರಟಿದ್ದಾರೆ. ಅದೇನು ಮಾಡುತ್ತಾರೊ ಮಾಡಲಿ. ಇಷ್ಟಕ್ಕೂ ರಾಜಣ್ಣ ಅವರನ್ನು ಸ್ವಾಗತ ಮಾಡುತ್ತಿರುವುದು ಬಿಜೆಪಿ ನಾಯಕರೇ' ಎಂದರು.

'ಸಕಾರಣವಿಲ್ಲದೆ ಡಿಎನ್‌ಎ ಪರೀಕ್ಷೆ ಸಲ್ಲ'

ಒಂದನೇ ಪುಟದಿಂದ...

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ.ವಿಜಯಕೃಷ್ಣ ಭಟ್ ಅವರ ವಾದವನ್ನು ಪುರಸ್ಕರಿಸಿರುವ ನ್ಯಾಯಪೀಠ, 'ಸಂವಿಧಾನದಲ್ಲಿ ನಿಗದಿಪಡಿಸಿದಂತೆ ಪರೀಕ್ಷೆ, ಗೋಪ್ಯತೆಯ ಹಕ್ಕು ಮತ್ತು ಘನತೆಯ ನಡುವೆ ಹೆಣೆದುಕೊಂಡಿರುವ ಸೂಕ್ಷ್ಮ ಸಮತೋಲನವನ್ನು ನಾವು ಸದಾ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಭಾರತೀಯ ಸಾಕ್ಷ್ಯ ಕಾಯ್ದೆ-1872ರ ಕಲಂ 112ರಲ್ಲಿ ನಿಗದಿಪಡಿಸಿದ ಷರತ್ತುಗಳನ್ನು ಪೂರೈಸದ ಹೊರತು ನ್ಯಾಯಾಲಯಗಳು ಡಿಎನ್‌ಎ ಪರೀಕ್ಷೆಗೆ ಅನುಮತಿ ನೀಡಬಾರದು' ಎಂದು ಸ್ಪಷ್ಟಪಡಿಸಿದೆ.

ಪ್ರಕರಣವೇನು?: ಮೊದಲ ಹೆಂಡತಿಯ ಇಬ್ಬರು ವಯಸ್ಕ ಗಂಡು ಮಕ್ಕಳು ಹಾಗೂ ಎರಡನೇ ಹೆಂಡತಿಯ ವಯಸ್ಕ ಮಗನ ಮಧ್ಯೆ ಆಸ್ತಿ ಪಾಲುದಾರಿಕೆಗೆ ಸಂಬಂಧಿಸಿದಂತೆ 2016ರಿಂದ ಚನ್ನರಾಯಪಟ್ಟಣದ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ಕೋರ್ಟ್‌ನಲ್ಲಿ ಅಸಲು ದಾವೆಯ ವ್ಯಾಜ್ಯ ಮುಂದುವರಿದಿತ್ತು. ವ್ಯಾಜ್ಯದ ಸಮಯದಲ್ಲಿ ಅರ್ಜಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಅವರ ಪಿತೃತ್ವದ ಬಗ್ಗೆ ಪ್ರಶ್ನೆಗಳನ್ನು ಎತ್ತಲಾಗಿತ್ತು.

'ರಿಟ್ ಅರ್ಜಿದಾರರು, ನಮ್ಮ ತಂದೆಗೆ ಜನಿಸಿದ ಮಗನಲ್ಲ. ನಮ್ಮ ತಂದೆಗೆ ಆದಾಗಲೇ ವಾಸೆಕ್ಟಮಿ (ನಸ್ಬಂದಿ) ಆಪರೇಷನ್ ಆಗಿತ್ತು. ಅವರಿಗೆ ಮಕ್ಕಳಾಗುವ ಸಾಧ್ಯತೆಯೇ ಇರಲಿಲ್ಲ. ಹೀಗಾಗಿ, ಇವರ ಪಿತೃತ್ವದ ಸತ್ಯಾಸತ್ಯತೆ ಅರಿಯಲು ಡಿಎನ್‌ಎ ಪರೀಕ್ಷೆ ನಡೆಸಲು ಆದೇಶಿಸಬೇಕು' ಎಂದು ಮೊದಲ ಹೆಂಡತಿಯ ಇಬ್ಬರು ಮಕ್ಕಳು (ಅಸಲು ದಾವೆಯ ವಾದಿಗಳು) ಕೋರಿದ್ದರು.

ಈ ತಕರಾರನ್ನು ಮಾನ್ಯ ಮಾಡಿದ್ದ ಸಿವಿಲ್ ನ್ಯಾಯಾಧೀಶರು, ಸಿವಿಲ್ ಪ್ರಕ್ರಿಯಾ ಸಂಹಿತೆ–1908ರ ನಿಯಮ 26, ನಿಯಮ 10 ಎ ಅಡಿಯಲ್ಲಿ ಡಿಎನ್‌ಎ ಪರೀಕ್ಷೆಗೆ ಸಮ್ಮತಿ ನೀಡಿ 2025ರ ಏಪ್ರಿಲ್ 5ರಂದು ಆದೇಶಿಸಿದ್ದರು.

ಇದನ್ನು ಪ್ರಶ್ನಿಸಿದ್ದ 39 ವರ್ಷದ ಅರ್ಜಿದಾರರು, 'ವಿಚಾರಣಾ ನ್ಯಾಯಾಲಯ ಡಿಎನ್‌ಎ ಪರೀಕ್ಷೆಗೆ ಅನುಮತಿ ನೀಡಿರುವುದನ್ನು ರದ್ದುಪಡಿಸಬೇಕು' ಎಂದು ಕೋರಿದ್ದರು. ಈ ಮನವಿಯನ್ನು ಮನ್ನಿಸಿರುವ ನ್ಯಾಯಪೀಠ, 'ಒಂದು ವೇಳೆ ಡಿಎನ್‌ಎ ಪರೀಕ್ಷೆ ನಡೆಸಿ ಏನಾದರೂ ವರದಿ ಸಿದ್ಧಪಡಿಸಿದ್ದರೆ ಅಂತಹ ವರದಿ ಅಮಾನ್ಯವಾಗಿರುತ್ತದೆ' ಎಂದು ಸ್ಪಷ್ಟಪಡಿಸಿದೆ.

ಕಲಂ 112ರ ಘನತೆಗೆ ಧಕ್ಕೆಯಾಗಬಾರದು...

ಒಂದನೇ ಪುಟದಿಂದ...

'ಕಲಂ 112 ಸಾಮಾನ್ಯ ಸಂದರ್ಭಗಳಲ್ಲಿ ಮಹಿಳೆಯ ಘನತೆ ಏನು ಎತ್ತ ಎಂಬುದರ ಸೂಕ್ಷ್ಮ ಸಿದ್ಧಾಂತವನ್ನು ಒಳಗೊಂಡಿದೆ. ಮಗುವಿನ ತಂದೆ ತಾನೇ ಎಂಬುದು ಗೊತ್ತಿದ್ದರೂ ಕೆಲವೊಮ್ಮೆ ಪುರುಷ ನಿರಾಧಾರ ಆರೋಪ ಹೊರಿಸಿಬಿಡುತ್ತಾನೆ. ಮಹಿಳೆಯ ವ್ಯಕ್ತಿತ್ವವನ್ನು ನಾಶ ಮಾಡಿಬಿಡುತ್ತಾನೆ. ಈ ಹುಮ್ಮಸ್ಸಿನಲ್ಲಿ ರಕ್ತ–ಡಿಎನ್‌ಎ ಪರೀಕ್ಷೆಗೆ ಕೋರುತ್ತಾನೆ. ಆಗ ಮಹಿಳೆಯ ಘನತೆಗೆ ವಿನಾಕಾರಣ ಪೆಟ್ಟು ಬಿದ್ದಂತಾಗುತ್ತದೆ' ಎಂದು ನ್ಯಾಯಪೀಠ ಹೇಳಿದೆ.

ಡಿಎನ್‌ಎ ಪರೀಕ್ಷೆ ಎಂದರೇನು?: ಡಿ ಆಕ್ಸಿ ರೈಬೋ ನ್ಯೂಕ್ಲಿಕ್ ಆಮ್ಲವು (ಡಿಎನ್‌ಎ) ಮೂಲಭೂತವಾಗಿ ಆನುವಂಶಿಕ ಸಂಕೇತವಾಗಿದೆ. ಇದು ಇಬ್ಬರೂ ಪೋಷಕರಿಂದ ಅವರ ಮಕ್ಕಳಿಗೆ ಗುಣಲಕ್ಷಣಗಳನ್ನು ಹೊತ್ತೊಯ್ಯುತ್ತದೆ. ಪ್ರತಿಯೊಬ್ಬರಲ್ಲೂ ಇದು ವಿಶಿಷ್ಟವಾದ ಸಂಕೇತವನ್ನು ಹೊಂದಿರುತ್ತದೆ. ಯಾವುದೇ ಆನುವಂಶಿಕ ಅಸ್ವಸ್ಥತೆಗಳ ಮೌಲ್ಯಮಾಪನಕ್ಕೆ ಅಥವಾ ಕಾನೂನು ಉದ್ದೇಶಗಳ ದೃಢೀಕರಣಕ್ಕಾಗಿ ಪಿತೃತ್ವವನ್ನು ಸಾಬೀತುಪಡಿಸುವ ಸಂದರ್ಭದಲ್ಲಿ ಈ ಪರೀಕ್ಷೆ ಕೈಗೊಳ್ಳಲಾಗುತ್ತದೆ.

ನರೇಂದ್ರ ಮೋದಿ ಅವರ ತಾಯಿಯನ್ನು ನಿಂದಿಸಲಾಗಿದೆ ಎನ್ನುವ ವಿವಾದಕ್ಕೆ ಪ್ರತಿಕ್ರಿಯೆ

'ಬಿಹಾರದ ಜನ ಕ್ಷಮಿಸಲಾರರು'



> ಆರ್‌ಜೆಡಿಯನ್ನು ಸೋಲಿಸಿದ್ದೇ ಮಹಿಳೆಯರು. ಲಾಲೂ ಪ್ರಸಾದ್ ಅವರ ಪಕ್ಷವು ಚುನಾವಣೆಯಲ್ಲಿ ಆ ಮಹಿಳೆಯರ ವಿರುದ್ಧ ಸೇಡು ತೀರಿಸಿಕೊಳ್ಳಲು ಹೊರಟಿದೆ
> **ನರೇಂದ್ರ ಮೋದಿ,** ಪ್ರಧಾನಿ

ಪಟ್ನಾ (ಪಿಟಿಐ): 'ಕಾಂಗ್ರೆಸ್‌ನ 'ಮತದಾರರ ಅಧಿಕಾರ ಯಾತ್ರೆ'ಯ ವೇಳೆ ನನ್ನ ತಾಯಿಯನ್ನು ನಿಂದಿಸಿರುವುದು ನನಗೆ ತೀವ್ರ ನೋವು ತರಿಸಿದೆ. ಆರ್‌ಜೆಡಿ ಮತ್ತು ಕಾಂಗ್ರೆಸ್ ಅನ್ನು ನಾನು ಕ್ಷಮಿಸಬಹುದು. ಆದರೆ, ಬಿಹಾರದ ಜನರು ಕ್ಷಮಿಸುವುದಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು.

'ಭಾರತಮಾತೆಯನ್ನೇ ನಿಂದಿಸುವವರಿಗೆ ನನ್ನ ತಾಯಿಯನ್ನು ನಿಂದಿಸುವುದು ಏನೂ ಅಲ್ಲ. ಭಾರತಮಾತೆಯನ್ನು ನಿಂದಿಸುವವರಿಗೆ ಶಿಕ್ಷೆಯಾಗಬೇಕು' ಎಂದರು. ದರ್ಭಂಗಾದಲ್ಲಿ ನಡೆದ ಯಾತ್ರೆಯ ವೇದಿಕೆ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರನ್ನು ನಿಂದಿಸಲಾಗಿದೆ ಎಂದು ವಿವಾದ ಎದ್ದಿತ್ತು. ಈ ಬಗ್ಗೆ ಇದೇ ಮೊದಲ ಬಾರಿಗೆ ಪ್ರಧಾನಿ ಮೋದಿ ಅವರು ಪ್ರತಿಕ್ರಿಯಿಸಿದರು.

'ರಾಜಕೀಯಕ್ಕೂ ನನ್ನ ತಾಯಿಗೂ ಏನೂ ಸಂಬಂಧವಿಲ್ಲ. ಆಕೆಯ ತಪ್ಪೇನು; ಆಕೆಯನ್ನು ಯಾಕಾಗಿ ನಿಂದಿಸಲಾಯಿತು. ಮಹಿಳೆಯರು ಅಶಕ್ತರು ಎನ್ನುವ ಮನಃಸ್ಥಿತಿ ಇರುವವರೇ ತಾಯಿಯಂದಿರನ್ನು ನಿಂದಿಸುತ್ತಾರೆ. ನಾನು ನನ್ನ ತಾಯಿಯ ಮಗ. ನಾನು ನಿಮ್ಮೊಂದಿಗೆ ನನ್ನ ನೋವನ್ನು ಹಂಚಿಕೊಳ್ಳುತ್ತಿದ್ದೇನೆ' ಎಂದು ಹೇಳಿ ಗದ್ಗದಿತರಾದರು.

'ನನಗೆ ಜೀವ ನೀಡಿದ ತಾಯಿ, ತಾಯಿನೆಲಕ್ಕಾಗಿ ಸೇವೆ ಮಾಡಲು ಹೇಳಿದ್ದಾರೆ. ನಾನು ಇದನ್ನೇ ಮಾಡುತ್ತಿದ್ದೇನೆ. ನನ್ನ ತಾಯಿ ಆಕೆಗಾಗಿ ಎಂದಿಗೂ ಒಂದು ಸೀರೆಯನ್ನೂ ಖರೀದಿಸಿದವಳಲ್ಲ. ನಮಗಾಗಿ ಹಣವನ್ನು ಕೂಡಿಡುತ್ತಿದ್ದಳು. ಇದು ಸೀತಾ ಮಾತೆಯ ಭೂಮಿ. ಈ ಭೂಮಿ ಯಾವತ್ತಿಗೂ ಮಹಿಳೆಯರಿಗೆ ಗೌರವ ನೀಡುತ್ತಲೇ ಬಂದಿದೆ. ನನ್ನ ತಾಯಿಯ ನಿಂದನೆ ನಿರೀಕ್ಷಿಸಿರಲಿಲ್ಲ. ನನ್ನ ತಾಯಿಯನ್ನು ನಿಂದಿಸಿದ್ದು ಕೋಟಿ ಕೋಟಿ ಸಹೋದರಿಯರನ್ನು, ಹೆಣ್ಣುಮಕ್ಕಳನ್ನು ನಿಂದಿಸಿದಂತಾಗಿದೆ' ಎಂದರು.

'ನಾವು ಒಬ್ಬ ತಾಯಿಯ ಅವಮಾನವನ್ನು ಸಹಿಸುವುದಿಲ್ಲ. ಆರ್‌ಜೆಡಿಯ ದೌರ್ಜನ್ಯ ಮತ್ತು ಕಾಂಗ್ರೆಸ್‌ನ ದಾಳಿಯನ್ನು ನಾವು ಸಹಿಸುವುದಿಲ್ಲ' ಎಂಬ ಮಾತುಗಳು ರಾಜ್ಯದಲ್ಲಿ ರಿಂಗಣಿಸಬೇಕು' ಎಂದರು.

ಸಹಕಾರಿ ಸಂಘ ಉದ್ಘಾಟನೆ


ರಾಜ್ಯದಲ್ಲಿರುವ ಮಹಿಳಾ ಸ್ವ ಸಹಾಯ ಸಂಘಗಳಿಂದ ಕಡಿಮೆ ಬಡ್ಡಿದರದಲ್ಲಿ ಸಾಲ ಪಡೆದುಕೊಳ್ಳಲು ಅನುಕೂಲ ಕಲ್ಪಿಸಲು 'ಬಿಹಾರ ರಾಜ್ಯ ಜೀವಿಕಾ ನಿಧಿ ಸಾಖ್ ಸಹಕಾರಿ ಸಂಘ ಲಿಮಿಟೆಡ್' ಎನ್ನುವ ಸಹಕಾರಿ ಸಂಘವನ್ನು ವಿಡಿಯೊ ಕಾನ್ಫರೆನ್ಸ್ ನವದೆಹಲಿಯಿಂದಲೇ ಪ್ರಧಾನಿ ಮೋದಿ ಅವರು ಉದ್ಘಾಟಿಸಿದರು. ಈ ಸಂಘದ ಬ್ಯಾಂಕ್ ಖಾತೆಗೆ ₹105 ಕೋಟಿ ಹಣವನ್ನೂ ವರ್ಗಾಯಿಸಿದರು.

'ಜೀವಿಕಾ ಯೋಜನೆ (ಬಡತನ ನಿರ್ಮೂಲನೆಯಾಗಿ ಬಿಹಾರ ಸರ್ಕಾರದ ಯೋಜನೆ) ಕ್ಲಸ್ಟರ್ ಮಟ್ಟದ ಎಲ್ಲ ಸದಸ್ಯರೂ ಈ ಸಂಘದ ಸದಸ್ಯರಾಗುತ್ತಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರವು ಈ ಸಂಘಕ್ಕೆ ಹಣ ವರ್ಗಾಯಿಸುತ್ತವೆ' ಎಂದು ಮೋದಿ ತಿಳಿಸಿದರು.

'ಚಿಪ್: ದೊಡ್ಡ ಬದಲಾವಣೆ ಕಾಲ ದೂರವಿಲ್ಲ'

'ಭಾರತದಲ್ಲಿ ತಯಾರಿಸಿದ ಸಣ್ಣದಾದ ಚಿಪ್, ಜಗತ್ತಿನಲ್ಲಿ ಬಹುದೊಡ್ಡ ಬದಲಾವಣೆಯನ್ನು ತರುವ ಕಾಲ ದೂರವಿಲ್ಲ' ಎಂದು ಪ್ರಧಾನಿ ಮೋದಿ ಹೇಳಿದರು. 'ಸೆಮಿಕಾನ್ ಇಂಡಿಯಾ–2025' ಸಮಾವೇಶವನ್ನು ಉದ್ಘಾಟಿಸಿ ಪ್ರಧಾನಿ ಮೋದಿ ಮಾತನಾಡಿದರು. 18 ಬಿಲಿಯನ್ ಡಾಲರ್‌ನಷ್ಟು (ಸುಮಾರು ₹1.58 ಲಕ್ಷ ಕೋಟಿ) ಮೊತ್ತದ 10 ಸೆಮಿಕಂಡಕ್ಟರ್ ಯೋಜನೆಗಳು ದೇಶಕ್ಕೆ ಬರುವ ಕಾಲ ಸನ್ನಿಹಿತವಾಗಿದೆ. ಭಾರತವು ಸೆಮಿಕಂಡಕ್ಟರ್ ಮಿಷನ್‌ನ ಮುಂದಿನ ಹಂತವನ್ನು ಪ್ರವೇಶಿಸಿದರೆ, ನಮ್ಮ ಚಿಪ್ ಮಾರುಕಟ್ಟೆಯು 1 ಟ್ರಿಲಿಯನ್ ಡಾಲರ್‌ನಷ್ಟಾಗಲಿದೆ (ಸುಮಾರು ₹88 ಲಕ್ಷ ಕೋಟಿ)' ಎಂದು ಹೇಳಿದರು.

ಪ್ರಜಾವಾಣಿ ಬುಧವಾರ • ಸೆಪ್ಟೆಂಬರ್ 3, 2025
ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಹೆಂಗಸರು ಗಂಡಸರೊಂದಿಗೆ ಗುಂಪು ಕಟ್ಟಿ ನಿಂತಾಗಲೇ ದೇಶದ ಕಲ್ಯಾಣ ಸಾಧ್ಯ. ಕೇವಲ ಗಂಡಸರ ಗುಂಪು ಮರಳಿನ ರಾಶಿಯಂತೆ ನಿರರ್ಥಕ.

–ಶರತ್ ಚಂದ್ರ ಚಟರ್ಜಿ

ಸಂಪಾದಕೀಯ

ಜಿಎಸ್‌ಟಿ ಪದ್ಧತಿಯಲ್ಲಿ ಬದಲಾವಣೆ ರಾಜ್ಯಗಳಿಗೆ ಅನ್ಯಾಯ ಆಗದಿರಲಿ

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪದ್ಧತಿಯು 2017ರಲ್ಲಿ ಜಾರಿಗೊಂಡಾಗ, ದೇಶದಲ್ಲಿ ಏಕರೂಪದ ತೆರಿಗೆ ವ್ಯವಸ್ಥೆಯ ಭರವಸೆಯನ್ನು ಕೇಂದ್ರ ಸರ್ಕಾರ ನೀಡಿತ್ತು. ಆದರೆ, ಜಿಎಸ್‌ಟಿ ಜಾರಿಯಿಂದಾಗಿ ರಾಜ್ಯಗಳು ತೆರಿಗೆ ಸಂಗ್ರಹದಲ್ಲಿನ ತಮ್ಮ ಪಾಲು ಪಡೆಯಲು ಕೇಂದ್ರವನ್ನು ಅವಲಂಬಿಸುವಂತಾಯಿತು. ರಾಜ್ಯಗಳ ಆದಾಯದಲ್ಲಿನ ಸಂಭಾವ್ಯ ನಷ್ಟ ತಪ್ಪಿಸಲಿಕ್ಕಾಗಿ ಕೇಂದ್ರ ಸರ್ಕಾರ ಪರಿಚಯಿಸಿದ್ದ ವಿಶೇಷ ಪರಿಹಾರ ಯೋಜನೆಯು 2022ರ ಜೂನ್‌ನಲ್ಲಿ ಕೊನೆಗೊಂಡಿತ್ತು. ಬಳಿಕ ಇದನ್ನು 2026ರ ಮಾರ್ಚ್ ಅಂತ್ಯದವರೆಗೆ ವಿಸ್ತರಿಸಲಾಗಿದೆ. ಈಗ ಜಿಎಸ್‌ಟಿ ತೆರಿಗೆ ಹಂತಗಳನ್ನು ಕೇಂದ್ರ ಸರ್ಕಾರ ಪರಿಷ್ಕರಿಸುತ್ತಿದ್ದು, ಶೇ 5 ಮತ್ತು ಶೇ 18ರ ಎರಡು ಹಂತಗಳಲ್ಲಿ ಸರಕುಗಳನ್ನು ಗುರ್ತಿಸಲು ಉದ್ದೇಶಿಸಿದೆ. ಈ ಪರಿಷ್ಕಾರದಿಂದ ದೊಡ್ಡ ಪ್ರಮಾಣದ ನಷ್ಟ ಉಂಟಾಗುತ್ತದೆನ್ನುವ ಆತಂಕವನ್ನು ರಾಜ್ಯಗಳು ವ್ಯಕ್ತಪಡಿಸಿವೆ. ಈ ಆತಂಕದ ಕಾರಣದಿಂದಾಗಿಯೇ, ರಾಜ್ಯಗಳ ಹಣಕಾಸಿನ ಹಿತಾಸಕ್ತಿ ರಕ್ಷಣೆಗಾಗಿ ಐದು ವರ್ಷಗಳ ವಿಶೇಷ ಪರಿಹಾರ ಯೋಜನೆಯನ್ನು ಹೊಸತಾಗಿ ರೂಪಿಸಬೇಕೆಂದು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ. ವರಮಾನ ನಷ್ಟವಾಗುತ್ತದೆನ್ನುವ ರಾಜ್ಯಗಳ ಆತಂಕ ನಿರಾಧಾರವಾದುದೇನೂ ಅಲ್ಲ. ಕೋವಿಡ್ ಸೋಂಕು ತೀವ್ರವಾಗಿದ್ದ ಸಮಯದಲ್ಲಿ ರಾಜ್ಯಗಳ ಜಿಎಸ್‌ಟಿ ಪಾಲನ್ನು ವರ್ಗಾಯಿಸಲು ಕೇಂದ್ರ ಸರ್ಕಾರ ವಿಳಂಬ ಮಾಡಿದುದರಿಂದ ಹಲವು ರಾಜ್ಯಗಳು ತೀವ್ರ ಸಂಕಷ್ಟಕ್ಕೊಳಗಾದವು ಹಾಗೂ ಹೆಚ್ಚಿನ ಸಾಲವನ್ನು ಪಡೆಯಬೇಕಾದ ಅನಿವಾರ್ಯತೆಗೆ ಸಿಲುಕಿದವು.



ಜಿಎಸ್‌ಟಿ ತೆರಿಗೆ ಹಂತಗಳ ಪರಿಷ್ಕಾರದಿಂದ ರಾಜ್ಯಗಳ ಹಿತಾಸಕ್ತಿಗೆ ಧಕ್ಕೆಯಾಗದಂತೆ ಕೇಂದ್ರ ಸರ್ಕಾರ ಎಚ್ಚರ ವಹಿಸಬೇಕು ಹಾಗೂ ಸಮತೋಲನವುಳ್ಳ ತೆರಿಗೆ ನೀತಿ ರೂಪಿಸಬೇಕು.

ಕರ್ನಾಟಕದಲ್ಲಿನ ಆರ್ಥಿಕ ಬಿಕ್ಕಟ್ಟಿಗೆ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಕಾರ್ಯಕ್ರಮಗಳು ಕಾರಣವೇ ಹೊರತು, ಜಿಎಸ್‌ಟಿ ಪದ್ಧತಿಯಲ್ಲ ಎಂದು ಬಿಜೆಪಿ ಹೇಳುತ್ತಿದೆ. ಭಾರತದ ಮಹಾಲೇಖಪಾಲರ (ಸಿಎಜಿ) ವರದಿ ಕೂಡ ಕಲ್ಯಾಣ ಕಾರ್ಯಕ್ರಮಗಳು ರಾಜ್ಯದ ಆರ್ಥಿಕತೆಗೆ ಹೊರೆಯಾಗಿ ಪರಿಣಮಿಸಿವೆ ಎಂದಿದೆ. ಇದಕ್ಕೆ ಪ್ರತಿಯಾಗಿ, ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿನ ನಿರ್ಣಯಗಳನ್ನು ಪ್ರಸಕ್ತ ಹಣಕಾಸಿನ ಬಿಕ್ಕಟ್ಟಿಗೆ ಕಾಂಗ್ರೆಸ್ ಗುರಿಯಾಗಿಸುತ್ತಿದೆ. ಆಯವ್ಯಯದಲ್ಲಿ ಅವಕಾಶ ಕಲ್ಪಿಸದೆ ₹2.7 ಲಕ್ಷ ಕೋಟಿ ಮೊತ್ತದ ಯೋಜನೆಗಳನ್ನು ಹಿಂದಿನ ಸರ್ಕಾರ ಜಾರಿಗೊಳಿಸಿತ್ತು ಹಾಗೂ ₹35 ಸಾವಿರ ಕೋಟಿ ಮೊತ್ತದ ಕಾಮಗಾರಿಗಳ ಬಿಲ್‌ಗಳನ್ನು ಬಾಕಿಯುಳಿಸಿತ್ತು; ಆ ಹೊರೆ ನಮ್ಮ ಸರ್ಕಾರದ ಮೇಲೆ ಬಿದ್ದಿದೆ ಎಂದು ಕಾಂಗ್ರೆಸ್ ಹೇಳಿದೆ. ಗ್ಯಾರಂಟಿ ಯೋಜನೆಗಳು ಜನಸಾಮಾನ್ಯರ ಕೊಳ್ಳುವ ಶಕ್ತಿ ಹೆಚ್ಚಿಸಿವೆ; ಜಿಎಸ್‌ಟಿ ಸಂಗ್ರಹ ಉತ್ತಮಗೊಳ್ಳಲು ಕಾರಣವಾಗಿವೆ ಎಂದೂ ಸಿದ್ದರಾಮಯ್ಯ ಸರ್ಕಾರ ಹೇಳಿಕೊಂಡಿದೆ. ತಲಾ ಆದಾಯದಲ್ಲಿ ಕರ್ನಾಟಕ ದೇಶದಲ್ಲೇ ಮುಂಚೂಣಿಯಲ್ಲಿರುವುದಕ್ಕೆ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳೂ ಕಾರಣವಾಗಿವೆ ಎನ್ನಲಾಗಿದೆ. ಜಿಎಸ್‌ಟಿ ವ್ಯವಸ್ಥೆಯಲ್ಲಿನ ತೆರಿಗೆ ಹಂತಗಳನ್ನು ಕಡಿಮೆ ಮಾಡುವುದರಿಂದ ಮುಂದಿನ ಐದು ವರ್ಷಗಳ ಅವಧಿಯಲ್ಲಿ ₹90 ಸಾವಿರ ಕೋಟಿ ನಷ್ಟ ಆಗಬಹುದೆಂದು ರಾಜ್ಯ ಸರ್ಕಾರ ಅಂದಾಜಿಸಿದೆ. 15ನೇ ಹಣಕಾಸು ಆಯೋಗವು ಕರ್ನಾಟಕಕ್ಕೆ ₹5,495 ಕೋಟಿ ವಿಶೇಷ ಅನುದಾನ ನೀಡಲು ಶಿಫಾರಸು ಮಾಡಿತ್ತು. ಇದನ್ನು ಕೇಂದ್ರ ಸರ್ಕಾರ ಪುರಸ್ಕರಿಸಿಲ್ಲ. ದೇಶದ ಜಿಡಿಪಿಗೆ ಶೇ 8.7ರಷ್ಟು ಕೊಡುಗೆ ನೀಡುವ ರಾಜ್ಯಕ್ಕೆ ಆಗಿರುವ ಅನ್ಯಾಯ ಸ್ಪಷ್ಟವಾಗಿ ಗೋಚರಿಸುವಂತಿದೆ. ಜಿಎಸ್‌ಟಿಯ ಪರಿಷ್ಕೃತ ತೆರಿಗೆ ಹಂತ ಜಾರಿಗೆ ಬಂದರೆ ರಾಜ್ಯಕ್ಕೆ ವಾರ್ಷಿಕ ಕನಿಷ್ಠ ₹15 ಸಾವಿರ ವರಮಾನ ಖೋತಾ ಆಗಲಿದ್ದು, ಅದನ್ನು ಕೇಂದ್ರ ತುಂಬಿ ಕೊಡಬೇಕು ಎಂಬುದು ರಾಜ್ಯದ ಬೇಡಿಕೆಯಾಗಿದೆ.

ರಾಜ್ಯಗಳ ಹಿತಾಸಕ್ತಿ ರಕ್ಷಣೆಗಾಗಿ ಕೇಂದ್ರ ಸರ್ಕಾರ ಸಮತೋಲಿತ ತೆರಿಗೆ ನೀತಿಯನ್ನು ರೂಪಿಸುವುದು ಅಗತ್ಯ. ರಾಷ್ಟ್ರದ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುವ ರಾಜ್ಯಗಳು ಶಿಕ್ಷೆ ಅನುಭವಿಸುವಂತೆ ಕೇಂದ್ರದ ನೀತಿ ಇರಬಾರದು. ಸಾಮಾಜಿಕ ನ್ಯಾಯ ಮಹತ್ವದ್ದಾಗಿದ್ದು, ಬಡ ರಾಜ್ಯಗಳನ್ನು ಬೆಂಬಲಿಸುವುದೂ ಅಗತ್ಯವಾಗಿದೆ. ಆದರೆ, ಈ ಬೆಂಬಲ, ಕಠಿಣ ಶ್ರಮ ಹಾಗೂ ಉತ್ತಮ ನಿರ್ವಹಣೆಯ ರಾಜ್ಯಗಳಿಗೆ ದಂಡ ವಿಧಿಸುವಂತೆ ಇರಬಾರದು. ತೆರಿಗೆ ಸಂಗ್ರಹದಲ್ಲಿ ಉತ್ತಮ ನಿರ್ವಹಣೆ ತೋರದ ರಾಜ್ಯಗಳಿಗೂ ಉತ್ತರದಾಯಿತ್ವ ಇರುವುದು ಅಪೇಕ್ಷಣೀಯ ಹಾಗೂ ಆ ರಾಜ್ಯಗಳು ನಿರಂತರವಾಗಿ ಇತರ ರಾಜ್ಯಗಳನ್ನು ಅವಲಂಬಿಸುವಂತೆ ಆಗಬಾರದು. ರಾಜ್ಯದ ಸಂಸದರು, ಮುಖ್ಯವಾಗಿ ಬಿಜೆಪಿ ಸಂಸದರು, ಜಿಎಸ್‌ಟಿ ಸಂಗ್ರಹದಲ್ಲಿನ ನ್ಯಾಯಬದ್ಧ ಪಾಲು ಕರ್ನಾಟಕಕ್ಕೆ ದೊರಕುವಂತೆ ಮಾಡಲು ಧ್ವನಿ ಎತ್ತಬೇಕಾಗಿದೆ; ಜಿಎಸ್‌ಟಿ ತೆರಿಗೆ ಹಂತಗಳ ಪರಿಷ್ಕರಣೆಯಿಂದ ರಾಜ್ಯಕ್ಕೆ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕಾಗಿದೆ. ಆರ್ಥಿಕ ಒಕ್ಕೂಟ ವ್ಯವಸ್ಥೆಯನ್ನು ರಕ್ಷಿಸುವುದು ರಾಜ್ಯವೊಂದರ ಹಕ್ಕೊತ್ತಾಯ ಮಾತ್ರವಲ್ಲ; ಅದು, ಕೇಂದ್ರ ಸರ್ಕಾರ ನಿರ್ವಹಿಸಲೇಬೇಕಾದ ಸಾಂವಿಧಾನಾತ್ಮಕ ಕರ್ತವ್ಯವೂ ಆಗಿದೆ.

ಚೂಟಿ

ಪ್ರಶ್ನೆಯ ಆಯ್ಕೆ



ನಮ್ಮ ಸಿದ್ದರಾಮಯ್ಯನವರು ರಾಷ್ಟ್ರಪತಿ ಮುರ್ಮು ಅವರಿಗೆ 'ನಿಮಗೆ ಕನ್ನಡ ಗೊತ್ತೇ' ಎಂದು ಸಾರ್ವಜನಿಕ ಸಮಾರಂಭದಲ್ಲಿ ಪ್ರಶ್ನೆ ಮಾಡಿದ್ದಾರೆ. ಮುರ್ಮು ಅವರು ಘನತೆಯಿಂದ ತಣ್ಣಗೆ ಅದೇ ವೇದಿಕೆಯಲ್ಲಿ ಉತ್ತರಿಸಿದ್ದಾರೆ. ಇದೇ ಪ್ರಶ್ನೆಯನ್ನು ಸಿದ್ದರಾಮಯ್ಯನವರು ಸೋನಿಯಾ ಗಾಂಧಿ ಮತ್ತವರ ಮಕ್ಕಳಿಗೆ ಎಂದಾದರೂ ಕೇಳಿದ್ದಾರೆಯೇ?

ಜಿ.ಟಿ. ನರೇಂದ್ರ, ವಕೀಲ, 'ಫೇಸ್‌ಬುಕ್'ನಿಂದ

ಕಿಡಿನುಡಿ



ನನ್ನ ತಾಯಿಯನ್ನು ಅವಮಾನಿಸುವುದು, ಭಾರತ ಮಾತೆ ಹಾಗೂ ದೇಶದ ಹೆಣ್ಣುಮಕ್ಕಳನ್ನು ನಿಂದಿಸಿದಂತೆ. ಅವರಿಗೆ ಶಿಕ್ಷೆಯಾಗಬೇಕು. ನನ್ನ ತಾಯಿ ಎಂದಿಗೂ ರಾಜಕೀಯಕ್ಕೆ ಬಂದವರಲ್ಲ. ಹೀಗಿದ್ದಾಗ ಅವರ ತಪ್ಪೇನಿದೆ, ಅವರನ್ನೇಕೆ ನಿಂದಿಸಬೇಕು?

ನರೇಂದ್ರ ಮೋದಿ, ಪ್ರಧಾನಿ

25 ವರ್ಷಗಳ ಹಿಂದೆ

ಭಾನುವಾರ, 3-9-2000

• ಗಂಗಾಧರ ಮೂರ್ತಿ ಕೊಲೆ ಮೂವರಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು, ಸೆಪ್ಟೆಂಬರ್ 2– ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ವಕೀಲ ಹಾಗೂ ಪತ್ರಕರ್ತ ಕಂಚನಹಳ್ಳಿ ಗಂಗಾಧರ ಮೂರ್ತಿ ಕೊಲೆ ಪ್ರಕರಣದ ಮೊದಲ ಮೂವರು ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಮಜ್ಜಿಗೆ ಅವರು, ಇಂದು ಈ ಬಗ್ಗೆ ಆದೇಶ ನೀಡಿದ್ದಾರೆ. ಆರೋಪಿಗಳಾದ ಲೋಕೇಶ್ (31), ಸತೀಶ್ (28) ಹಾಗೂ ಸ್ವಾಮಿ (25) ಅವರು ಕೊಲೆ ಹಾಗೂ ಸಂಚಿನ ಪ್ರಕರಣದಲ್ಲಿ ಭಾಗಿಯಾಗಿರುವುದು ಸಾಬೀತಾಗಿರುವುದಾಗಿ ನ್ಯಾಯಾಧೀಶರು ತೀರ್ಪಿನಲ್ಲಿ ತಿಳಿಸಿದ್ದಾರೆ.

• ಶೀಘ್ರ ಇತ್ಯರ್ಥಕ್ಕೆ ರಾಜ್ಯದ ಮನವಿ

ಬೆಂಗಳೂರು, ಸೆಪ್ಟೆಂಬರ್ 2– ಮೈಸೂರಿನ ಕಾರಾಗೃಹದಲ್ಲಿರುವ ವೀರಪ್ಪನ್‌ನ ಸಹಚರರ ಬಿಡುಗಡೆ ವಿರೋಧಿಸಿ ಸಲ್ಲಿಸಲಾಗಿರುವ ವಿಶೇಷ ಮನವಿಯನ್ನು ಶೀಘ್ರ ಇತ್ಯರ್ಥಗೊಳಿಸಬೇಕು ಎಂದು ರಾಜ್ಯ ಸರ್ಕಾರ, ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಲಿದೆ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಲ್ಲಿ ತಿಳಿಸಿದರು.

ವೀರಪ್ಪನ್‌ನಿಂದ ಹತ್ಯೆಯಾದ ಸಬ್‌ಇನ್‌ಸ್ಪೆಕ್ಟರ್ ಶಕೀಲ್ ಅಹ್ಮದ್ ಅವರ ತಂದೆ ಅಬ್ದುಲ್ ಕರೀಂ ಸಲ್ಲಿಸಿರುವ ಈ ಅರ್ಜಿಯ ಮೇಲೆ ಸುಪ್ರೀಂ ಕೋರ್ಟ್ ನಿನ್ನೆ ಟಾಡಾ ಕೈದಿಗಳ ಬಿಡುಗಡೆಗೆ ಅನಿರ್ದಿಷ್ಟ ತಡೆ ನೀಡಿರುವ ಹಿನ್ನೆಲೆಯಲ್ಲಿ ಅವರು ಈ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

75 ವರ್ಷಗಳ ಹಿಂದೆ

ಭಾನುವಾರ, 3-9-1950

• ಹೊಸ ಇನ್‌ಲ್ಯಾಂಡ್ ಪತ್ರ ಬಿಡುಗಡೆ

ನವದೆಹಲಿ, ಸೆಪ್ಟೆಂಬರ್ 2– ಅ. 2ರಿಂದ ಎರಡು ಹೊಸ ಇನ್‌ಲ್ಯಾಂಡ್ ಪತ್ರಗಳನ್ನು ಪರಿಚಯಿಸಲಾಗುವುದು. ಇವುಗಳ ಬೆಲೆ ಒಂದರಿಂದ ಒಂದೂವರೆ ಆಣೆ ಇರಲಿದೆ ಎಂದು ಅಂಚೆ ಇಲಾಖೆಯ ಪ್ರಕಟಣೆ ತಿಳಿಸಿದೆ.

ದಾರಿ ಯಾವುದಯ್ಯ ಟ್ರಂಪ್ ಸುಂಕಕ್ಕೆ?



ವಿಶ್ಲೇಷಣೆ

ವೇಣುಗೋಪಾಲ್ ಟಿ.ಎಸ್.

ಶ್ವೇತಭವನದ ವಾಣಿಜ್ಯ ಸಲಹೆಗಾರ ಪೀಟರ್ ನವಾರೋ ದೃಷ್ಟಿಯಲ್ಲಿ ಉಕ್ರೇನ್ ಸಂಘರ್ಷ 'ಮೋದಿಯವರ ಯುದ್ಧ'. ಅವರ ಪ್ರಕಾರ ಜಗತ್ತಿನಲ್ಲೇ ಅತಿಹೆಚ್ಚು ಸುಂಕ ಹಾಕುವ ದೇಶ ಭಾರತ–ಸುಂಕದ ಮಹಾರಾಜ. ಅಮೆರಿಕದ ಸರಕುಗಳ ಮೇಲೆ ಸುಂಕ ಹೇರಿ, ಅವು ಭಾರತಕ್ಕೆ ಬಾರದಂತೆ ತಡೆಯುತ್ತಿದೆ. ಇದರಿಂದ ಅಮೆರಿಕದ ಬಳಕೆದಾರರು, ವಾಣಿಜ್ಯೋದ್ಯಮಿಗಳು, ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಜನ ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ಅಮೆರಿಕದ ತೆರಿಗೆದಾರರು ಮೋದಿಯವರ ಯುದ್ಧಕ್ಕೆ ಹಣ ತೆರುತ್ತಿದ್ದಾರೆ. ಆದರೆ, ಭಾರತ ಅಮೆರಿಕದಲ್ಲಿ ತನ್ನ ಸರಕುಗಳನ್ನು ಮಾರಿಕೊಂಡು ಡಾಲರ್ ಸಂಪಾದಿಸಿಕೊಳ್ಳುತ್ತಿದೆ. ಆ ದುಡ್ಡಿನಿಂದ ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾತೈಲವನ್ನು ಕೊಂಡು, ಶುದ್ಧೀಕರಿಸಿ, ಜಗತ್ತಿನಾದ್ಯಂತ ಮಾರಿ, ಲಾಭ ಮಾಡಿಕೊಳ್ಳುತ್ತಿದೆ. ಭಾರತದ ಕೆಲವು ಲಾಭಕೋರರು ಹೇರಳ ಲಾಭ ಮಾಡಿಕೊಳ್ಳುತ್ತಿದ್ದಾರೆ. ಭಾರತದ ಅಕ್ರಮ ವ್ಯಾಪಾರದ ಹಣ ಪುಟಿನ್ ಯುದ್ಧ ನಿಧಿಗೆ ಸೇರಿಕೊಳ್ಳುತ್ತಿದೆ. ಲಕ್ಷಾಂತರ ಉಕ್ರೇನ್ ನಾಗರಿಕರು ಸಾಯುತ್ತಿದ್ದಾರೆ.

ಯುದ್ಧಪೂರ್ವದಲ್ಲಿ ಭಾರತ ಶೇ 1ರಷ್ಟು ತೈಲವನ್ನು ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿತ್ತು. ಈಗ ಶೇ 35ರಷ್ಟು ಆಮದು ಮಾಡಿಕೊಳ್ಳುತ್ತಿದೆ. ಇಷ್ಟೊಂದು ಆಮದು ಅವಶ್ಯಕತೆಗಾಗಿಯಲ್ಲ, ಮತ್ತೆ ಲಾಭಕ್ಕೆ ಮಾರಿಕೊಳ್ಳುವುದಕ್ಕೆ. ಭಾರತದ ಅಕ್ರಮ ವ್ಯಾಪಾರದಿಂದಾಗಿ ಅಮೆರಿಕ 50 ಶತಕೋಟಿ ಡಾಲರ್ ವಾಣಿಜ್ಯ ಕೊರತೆ ಅನುಭವಿಸುತ್ತಿದೆ. ಭಾರತದ ಚದುರಂಗದಾಟವನ್ನು ಟ್ರಂಪ್ ಚೆನ್ನಾಗಿ ಅರ್ಥೈಸಿಕೊಂಡಿದ್ದಾರೆ. ಭಾರತದ ಮೇಲೆ ಶೇ 50ರಷ್ಟು ಸುಂಕ ಹಾಕಿದ್ದಾರೆ. ಭಾರತದ ಸುಂಕಕ್ಕೆ ಪ್ರತಿಯಾಗಿ ಶೇ 25ರಷ್ಟು ಸುಂಕ ಮತ್ತು ರಷ್ಯಾದಿಂದ ತೈಲ ಆಮದಿಗಾಗಿ ಶೇ 25ರಷ್ಟು ದಂಡ. ಇದರಿಂದ ಭಾರತ ಪಾಠ ಕಲಿಯಬೇಕು. ಅಮೆರಿಕ ತನ್ನನ್ನು ಕಾರ್ಯತಾಂತ್ರಿಕ ಪಾಲುದಾರನಾಗಿ ಭಾವಿಸಬೇಕೆಂದು ಭಾರತ ಬಯಸಿದರೆ, ಅದಕ್ಕನುಗುಣವಾಗಿ ನಡೆದುಕೊಳ್ಳಬೇಕು. ಇದು ಸ್ಥೂಲವಾಗಿ ನವಾರೋ ಅವರ ವಾದ.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ 'ಎಕನಾಮಿಕ್ ಟೈಮ್ಸ್'ಗೆ ನೀಡಿದ ಸಂದರ್ಶನದಲ್ಲಿ ಇದಕ್ಕೆ ಪ್ರತಿಕ್ರಿಯಿಸಿದ್ದಾರೆ. ರಷ್ಯಾದಿಂದ ತೈಲವನ್ನು ಆಮದು ಮಾಡಿಕೊಳ್ಳುತ್ತಿರುವ ತಪ್ಪಿಗಾಗಿ ಭಾರತದ ಮೇಲೆ ಸುಂಕ ಹಾಕಲಾಗಿದೆ ಎಂಬ ವಾದದಲ್ಲಿ ಸಂದಿಗ್ಧತೆ ಇದೆ. ಚೀನಾ ನಮಗಿಂತ ಹೆಚ್ಚು ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಯುರೋಪ್ ನಮಗಿಂತ ಹೆಚ್ಚು ಇಂಧನವನ್ನು ಆಮದು ಮಾಡಿಕೊಳ್ಳುತ್ತಿದೆ. ಅವರಿಗೆ ಈ ತರ್ಕವನ್ನು ಅನ್ವಯಿಸುತ್ತಿಲ್ಲ. ಭಾರತಕ್ಕಷ್ಟೇ ಅನ್ವಯಿಸಲಾಗುತ್ತಿದೆ. ಪುಟಿನ್ ಬೊಕ್ಕಸಕ್ಕೆ ಭಾರತ ಹಣ ತುಂಬುತ್ತಿದೆ ಎಂದು ದೂಷಿಸಲಾಗುತ್ತಿದೆ. ಆದರೆ, ಯುರೋಪ್ ಭಾರತಕ್ಕಿಂತ ಹೆಚ್ಚು ರಷ್ಯಾ ಜೊತೆ ವ್ಯಾಪಾರ ಮಾಡುತ್ತಿದೆ. ಅವರನ್ನು ಯಾಕೆ ದೂಷಿಸುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ.

ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುತ್ತಿರುವುದಕ್ಕೆ ಈವರೆಗೂ ಅಮೆರಿಕ ಭಾರತವನ್ನು ಆಕ್ಷೇಪಿಸಿರಲಿಲ್ಲ. ಬೈಡೆನ್ ಕಾಲದಲ್ಲೂ ಯಾವುದೇ ವಿರೋಧವಿರಲಿಲ್ಲ. ಆಗಿನ ಚಿಂತನೆಯೇ ಬೇರೆಯಿತ್ತು. 2022ರಲ್ಲಿ ಉಕ್ರೇನ್ ಯುದ್ಧದಿಂದ ತೈಲದ ಬೆಲೆ ವಿಪರೀತ ಆಗುತ್ತದೆನ್ನುವ ಆತಂಕವಿತ್ತು. ರಷ್ಯಾದಿಂದ ಭಾರತ ತೈಲ ಕೊಳ್ಳುವುದರಿಂದ ಜಾಗತಿಕವಾಗಿ ತೈಲದ ಬೆಲೆ ಕಡಿಮೆಯಾಗುತ್ತದೆಂದು ಅಮೆರಿಕದವರೇ ವಾದಿಸುತ್ತಿದ್ದರು. ಹಾಗಾಗಿ, ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವುದರಲ್ಲಿ ನಮ್ಮ ಹಿತಾಸಕ್ತಿಯ ಜೊತೆಗೆ ಜಾಗತಿಕ ಹಿತಾಸಕ್ತಿಯೂ ಇದೆ. ನಮ್ಮ ದೇಶದ ಆಸಕ್ತಿಗೆ ಅನುಗುಣವಾಗಿ ನಿರ್ಧರಿಸುವ ಸ್ವಾತಂತ್ರ್ಯ ನಮಗಿರಬೇಕು. ಅದೇ ನಿಜವಾದ ಸ್ಟ್ರಾಟೆಜಿಕ್ ಸ್ವಾಯತ್ತತೆ ಎನ್ನುತ್ತಾರೆ ಜೈಶಂಕರ್.

ಜೈಶಂಕರ್ ಹೇಳುವಂತೆ, ತೈಲದ ವಿಷಯದಲ್ಲಿ ಅಮೆರಿಕದ ನಿಲುವು ಸಮಸ್ಯಾತ್ಮಕವಾಗಿದೆ. ಅಮೆರಿಕದ ಉದ್ದೇಶ ರಷ್ಯಾಕ್ಕೆ ತೈಲದಿಂದ ಬರುವ ಆದಾಯವನ್ನು ಕಡಿಮೆ ಮಾಡುವುದಾಗಿದ್ದರೆ, ರಷ್ಯಾದ ತೈಲ ವ್ಯಾಪಾರವನ್ನು ನಿಷೇಧಿಸಬಹುದಿತ್ತು. ಇರಾನ್ ಹಾಗೂ ವೆನಿಜುವೆಲಾ ವಿಷಯದಲ್ಲಿ ಹಾಗೆ ಮಾಡಿತ್ತು. ಅದು ಸುಲಭ ಹಾಗೂ ನೇರ ಕ್ರಮವಾಗಿತ್ತು. ಆದರೆ, ರಷ್ಯಾದ ವಿಷಯದಲ್ಲಿ ಹಾಗೆ ಮಾಡದೆ, ಭಾರತದ ಮೇಲೆ ಸುಂಕ ಹಾಕಿದೆ. ಉಕ್ರೇನ್ ಮೇಲೆ ರಷ್ಯಾ ದಾಳಿ ಮಾಡಿದಾಗ ರಷ್ಯಾದ ಮೇಲೆ ಕಠಿಣ ದಿಗ್ಬಂಧನ ಹೇರುತ್ತೇವೆಂದು ಬೆದರಿಸಿತ್ತು. ಆಗ ತೈಲದ ಬೆಲೆ ಬ್ಯಾರೆಲ್‌ಗೆ 100 ಡಾಲರ್ ಆಗಿತ್ತು. ರಷ್ಯಾದ ತೈಲವನ್ನು ನಿಷೇಧಿಸಿದ್ದರೆ ಬೆಲೆ ಇನ್ನೂ ಏರಿಬಿಡುತ್ತಿತ್ತು. ಅದನ್ನು ತಪ್ಪಿಸಲು ರಷ್ಯಾದ ತೈಲಕ್ಕೆ ಬೆಲೆ ಮಿತಿ ಹಾಕಲಾಯಿತು. ಬ್ಯಾರೆಲ್‌ಗೆ 60 ಡಾಲರಿಗಿಂತ ಕಡಿಮೆ ಬೆಲೆಗೆ ಕೊಳ್ಳುವುದಕ್ಕೆ ಅವಕಾಶ ನೀಡಲಾಯಿತು. ಅದು ಮಾರುಕಟ್ಟೆ ಬೆಲೆಗಿಂತ ತುಂಬಾ ಕಡಿಮೆಯಾಗಿದ್ದರಿಂದ ರಷ್ಯಾದ ಆದಾಯ ಕಡಿಮೆಯಾಯಿತು. ಭಾರತ ನಿರ್ಧಾರಿತ ಬೆಲೆಯೊಳಗೆ ತೈಲ ಖರೀದಿಸುತ್ತಿದೆ. ಯಾವುದೇ ನಿಯಮವನ್ನು ಉಲ್ಲಂಘಿಸಿಲ್ಲ. ಚೀನಾ, ಯುರೋಪ್, ಮುಂತಾದ ದೇಶಗಳೂ ರಷ್ಯಾದಿಂದ ತೈಲವನ್ನು ಖರೀದಿಸುತ್ತಿವೆ.

> ರಷ್ಯಾದಿಂದ ಭಾರತ ಕಚ್ಚಾತೈಲ ಖರೀದಿಸುವುದು ಅಮೆರಿಕದ ಕಣ್ಣಿಗೆ ಅಪರಾಧದಂತೆ ಕಂಡಿದೆ. ಹೆಚ್ಚಿನ ಸುಂಕ ವಿಧಿಸಿ ಕೋಪ ವ್ಯಕ್ತಪಡಿಸಿದೆ. ಈ ಪ್ರತಿಕೂಲ ಪರಿಸ್ಥಿತಿಯನ್ನು ಭಾರತ ಸವಾಲಾಗಿ ಸ್ವೀಕರಿಸಬೇಕು. ರಫ್ತನ್ನು ಹೆಚ್ಚು ಮಾಡುವುದಕ್ಕೆ ಒತ್ತು ಕೊಡದೆ, ದೇಶದ ಮಾರುಕಟ್ಟೆಯ ವಿಸ್ತರಣೆಗೆ ಆದ್ಯತೆ ನೀಡಬೇಕು.

ಭಾರತದಿಂದ ಅಮೆರಿಕ ಏನನ್ನು ನಿರೀಕ್ಷಿಸುತ್ತಿದೆ ಅನ್ನುವುದು ಸ್ಪಷ್ಟವಿಲ್ಲ. ತೈಲದ ಆಮದನ್ನು ಭಾರತ ನಿಲ್ಲಿಸಿಬಿಟ್ಟರೆ, ತೈಲದ ಬೆಲೆ ಹೆಚ್ಚಾಗುತ್ತದೆ. ಇದರ ಪರಿಣಾಮ ಜಾಗತಿಕ ಆರ್ಥಿಕತೆ ಮೇಲೂ ಆಗುತ್ತದೆ. ನಿರ್ಬಂಧ ಭಾರತಕ್ಕಷ್ಟೇ ಸೀಮಿತವಾಗಿರುವುದರಿಂದ ಉಳಿದ ದೇಶಗಳು ರಷ್ಯಾದಿಂದ ಕೊಳ್ಳುವುದನ್ನು ಮುಂದುವರಿಸುತ್ತವೆ. ರಷ್ಯಾದ ವರಮಾನ ನಿಲ್ಲಲ್ಲ. ಇದು ಖಂಡಿತಾ ಪರಿಣಾಮಕಾರಿ ಕ್ರಮವಲ್ಲ.

ಭಾರತದ ಮೇಲಿನ ಸುಂಕದ ಉದ್ದೇಶ ಬೇರೆ ಇರಬಹುದೆ? ಬಹುಶಃ ಅಮೆರಿಕದ ಕೃಷಿ ಹಾಗೂ ಹೈನು ಉತ್ಪನ್ನಗಳಿಗೆ ಭಾರತದ ಮಾರುಕಟ್ಟೆಯನ್ನು ತೆರೆಯುವಂತೆ ಮಾಡುವ ಉದ್ದೇಶವಿರಬಹುದು. ಅಮೆರಿಕದ ರೈತರೊಂದಿಗೆ ನಮ್ಮ ರೈತರಿಗೆ ಸ್ಪರ್ಧಿಸುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ರೈತರಿಗೆ ವಿಪರೀತ ಸಬ್ಸಿಡಿ ನೀಡುತ್ತಾರೆ. ಸರ್ಕಾರ ಭಾರತದ ರೈತರ ಹಿತಾಸಕ್ತಿಯನ್ನು ತ್ಯಾಗ ಮಾಡಲಾಗದು. ಹಾಗಾದರೆ ಭಾರತ ಏನು ಮಾಡಬಹುದು?

ಜಗತ್ತು ಇಂದು ಆರ್ಥಿಕ ಬಿಕ್ಕಟ್ಟಿನಲ್ಲಿದೆ. ಅಮೆರಿಕದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದಕ್ಕೆ ಟ್ರಂಪ್ ಪ್ರಯತ್ನಿಸುತ್ತಿದ್ದಾರೆ. ತಮ್ಮ ಅಜೆಂಡಾಗೆ ಬೇರೆಯವರನ್ನು ಒಪ್ಪಿಸುವುದಕ್ಕೆ ಸುಂಕವನ್ನು ಅಸ್ತ್ರ ಮಾಡಿಕೊಂಡಿದ್ದಾರೆ. ಅಮೆರಿಕ ಜಗತ್ತಿನಲ್ಲೇ ಆರ್ಥಿಕವಾಗಿ ದೊಡ್ಡ ದೇಶ. ಅತಿದೊಡ್ಡ ಮಾರುಕಟ್ಟೆ. ಅದರೊಂದಿಗೆ ಸಂಘರ್ಷ ಸಾಧ್ಯವಿಲ್ಲ. ಬಹುತೇಕ ದೇಶಗಳು ಒತ್ತಡಕ್ಕೆ ಮಣಿದಿವೆ. ಚೀನಾ ಮಾತ್ರ ಅಮೆರಿಕದ ದಾದಾಗಿರಿಗೆ ಸವಾಲೊಡ್ಡಿ ನಿಂತಿದೆ. ತಂತ್ರಜ್ಞಾನ, ವ್ಯಾಪಾರ ಎಲ್ಲದರಲ್ಲೂ ಅಮೆರಿಕದ ಸಮಕ್ಕೆ ಚೀನಾ ನಿಲ್ಲಬಲ್ಲದು. ಅಮೆರಿಕಕ್ಕೆ ಅನಿವಾರ್ಯವಾದ ಹಲವು ಸರಕುಗಳು ಅದರ ನಿಯಂತ್ರಣದಲ್ಲಿವೆ. ಆದರೆ ನಾವು ಅಮೆರಿಕಕ್ಕೆ ಅನಿವಾರ್ಯವಲ್ಲ. ಒಟ್ಟಾರೆಯಾಗಿ ನೋಡಿದಾಗ ಟ್ರಂಪ್ ಸುಂಕ ಹೆಚ್ಚಿಲ್ಲದಿರಬಹುದು. ಆದರೆ, ಜವಳಿ, ರತ್ನ ಮತ್ತು ಆಭರಣಗಳು, ಸೀಗಡಿ ಇತ್ಯಾದಿ ಕೆಲವು ಕ್ಷೇತ್ರಗಳಿಗೆ ತುಂಬಾ ತೊಂದರೆಯಾಗುತ್ತದೆ. ಸರ್ಕಾರದ ನೆರವು ಈ ಕ್ಷೇತ್ರಗಳಿಗೆ ಅವಶ್ಯಕ.

ಅಮೆರಿಕದೊಂದಿಗೆ ನಮ್ಮ ಒಟ್ಟಾರೆ ವ್ಯಾಪಾರ ಇರುವುದು ಕೇವಲ ಶೇ 11ರಷ್ಟು ಮಾತ್ರ. ಉಳಿದ ಶೇ 89ರಷ್ಟು ವ್ಯಾಪಾರ ಅಮೆರಿಕದ ಆಚೆಗೆ ನಡೆಯುತ್ತದೆ. ಉಳಿದ ದೇಶಗಳ ಜೊತೆ ವ್ಯಾಪಾರವನ್ನು ಹೆಚ್ಚಿಸಿಕೊಳ್ಳಬಹುದು. ಆದರೆ, ಅಲ್ಲೂ ಸ್ಪರ್ಧೆ ಇರುತ್ತದೆ. ಎಲ್ಲಾ ದೇಶಗಳೂ ಅದೇ ಮಾರುಕಟ್ಟೆಯಲ್ಲಿ ಸ್ಪರ್ಧಿಸುತ್ತಿರುತ್ತವೆ. ಇದು, ರಫ್ತನ್ನೇ ನೆಚ್ಚಿಕೊಂಡರೆ ಆಗುವ ಸಮಸ್ಯೆ. ನಾವು ಹೆಚ್ಚು ಸ್ಪರ್ಧಾತ್ಮಕವಾಗಬೇಕು. ಸರಕಿನ ವ್ಯಾಪಾರಕ್ಕೆ ಸೀಮಿತಗೊಳಿಸಿಕೊಳ್ಳದೆ, ನಮಗೆ ಹೆಚ್ಚು ಸಾಮರ್ಥ್ಯವಿರುವ ಸೇವಾಕ್ಷೇತ್ರವನ್ನು ವಿಸ್ತರಿಸಿಕೊಳ್ಳಬೇಕು. ಕೆಲವಾದರೂ ಬಹುರಾಷ್ಟ್ರೀಯ ಒಪ್ಪಂದಗಳ ಜೊತೆಗೆ ಸೇರಿಕೊಳ್ಳಬೇಕು. ಇಂಗ್ಲೆಂಡ್, ಯುರೋಪ್, ಚೀನಾ ಇತ್ಯಾದಿ ದೇಶಗಳ ಜೊತೆಗೆ ದ್ವಿಪಕ್ಷೀಯ ಒಪ್ಪಂದಗಳನ್ನೂ ಮಾಡಿಕೊಳ್ಳಬೇಕು.

ದೊಡ್ಡ ರಾಷ್ಟ್ರಗಳು ತಮ್ಮ ಹಿತಾಸಕ್ತಿಗಳನ್ನು, ಪ್ರಾಬಲ್ಯವನ್ನು ಕಾಪಾಡಿಕೊಳ್ಳುವುದಕ್ಕೆ ವ್ಯಾಪಾರ ಹಾಗೂ ಆರ್ಥಿಕ ನಿರ್ಬಂಧಗಳನ್ನೆಲ್ಲಾ ಅಸ್ತ್ರಗಳನ್ನಾಗಿ ಮಾಡಿಕೊಳ್ಳುತ್ತವೆ. ಅವು ಯಾವುದೇ ನೀತಿಗೂ ನಿಷ್ಠರಾಗಿರುವುದಿಲ್ಲ. ಮುಕ್ತ ವ್ಯಾಪಾರ ನೀತಿಯಿಂದ ಲಾಭವಿದ್ದಾಗ ಸುಂಕದ ವಿರುದ್ಧ ಮಾತನಾಡಿದ್ದರು; ಸುಂಕವನ್ನು ತಗ್ಗಿಸುವುದಕ್ಕೆ ಬಹುರಾಷ್ಟ್ರೀಯ ಒಪ್ಪಂದ ಮಾಡಿಕೊಳ್ಳುವಂತೆ ನಮ್ಮನ್ನು ಒತ್ತಾಯಿಸಿದ್ದರು. ಈಗ ವ್ಯಾಪಾರದ ಕೊರತೆಯನ್ನು ತಗ್ಗಿಸಿಕೊಳ್ಳಬೇಕಾಗಿದೆ. ಸುಂಕಕ್ಕೆ ಶರಣಾಗಿದ್ದಾರೆ. ಬಹುರಾಷ್ಟ್ರೀಯ ಒಪ್ಪಂದಗಳನ್ನು ಉಲ್ಲಂಘಿಸುತ್ತಿದ್ದಾರೆ. ಪರಿಸ್ಥಿತಿಗೆ ತಕ್ಕಂತೆ ನಿಲುವನ್ನು ಬದಲಿಸುತ್ತಿರುತ್ತಾರೆ.

ಭಾರತ ಅಲಿಪ್ತ ರಾಷ್ಟ್ರಗಳ ಚಳವಳಿಯ ಮುಂಚೂಣಿಯಲ್ಲಿದ್ದ ಪ್ರಬಲ ರಾಷ್ಟ್ರವಾಗಿತ್ತು. ಸ್ಟ್ರಾಟೆಜಿಕ್ ಸ್ವಾಯತ್ತತೆಯ ಚಾಂಪಿಯನ್ ಅನಿಸಿಕೊಂಡಿತ್ತು. ಯಾವುದೇ ಪ್ರಬಲ ರಾಷ್ಟ್ರಕ್ಕೂ ಅಧೀನವಾಗದೆ, ಎಲ್ಲಾ ದೇಶಗಳ ನಡುವೆ ಸಮತೋಲನವನ್ನು ಕಾಪಾಡಿಕೊಂಡಿತ್ತು. ಇಂದು ಆ ಪರಂಪರೆಯನ್ನು ಹಾಗೂ ಅದಕ್ಕೆ ಪೂರಕವಾದ ಸ್ವಾವಲಂಬನೆಯ ಆರ್ಥಿಕತೆಯನ್ನು ಯೋಜಿಸಬೇಕಾಗಿದೆ. ಸ್ವಾವಲಂಬನೆ, ಅದರಲ್ಲೂ ವಿಶೇಷವಾಗಿ ಆಹಾರದ ಸ್ವಾವಲಂಬನೆಯನ್ನು ಬಿಟ್ಟುಕೊಡುವುದು ಸೂಕ್ತವಲ್ಲ. ತೈಲವನ್ನು ಬಿಟ್ಟರೆ ಉಳಿದೆಲ್ಲಾ ವಸ್ತುಗಳನ್ನು ನಮ್ಮಲ್ಲೇ ತಯಾರಿಸಿಕೊಳ್ಳಬಹುದು.

ರಫ್ತನ್ನೇ ನೆಚ್ಚಿಕೊಳ್ಳದೆ ದೇಶದ ಮಾರುಕಟ್ಟೆಯನ್ನು ವಿಸ್ತರಿಸುವುದು ನಮ್ಮ ಆದ್ಯತೆಯಾಗಬೇಕು. ಅದಕ್ಕೆ ಜನರ ಕೊಳ್ಳುವ ಶಕ್ತಿ ಹೆಚ್ಚಬೇಕು. ಶಿಕ್ಷಣ, ಉದ್ಯೋಗಾವಕಾಶ, ಆರೋಗ್ಯ, ಇತ್ಯಾದಿ ಜನಕಲ್ಯಾಣ ಕಾರ್ಯಕ್ರಮಗಳನ್ನು ಹೆಚ್ಚು ರೂಪಿಸುವುದಕ್ಕೆ ಗಮನಕೊಡಬೇಕು. ಕೃಷಿ ಹಾಗೂ ಸಣ್ಣ ಉದ್ದಿಮೆಗಳ ಬೆಳವಣಿಗೆ ನಮ್ಮ ಆದ್ಯತೆಯ ವಿಷಯವಾಗಬೇಕು. ಇದಕ್ಕೆ ಬೇಕಾದ ಹಣವನ್ನು ಕ್ರೋಡೀಕರಿಸುವುದಕ್ಕೆ ಸಂಪತ್ತಿನ ಮೇಲಿನ ತೆರಿಗೆಯೂ ಸೇರಿದಂತೆ ಹಲವು ಕ್ರಮಗಳ ಬಗ್ಗೆ ಯೋಚಿಸಬೇಕು.



ವಾಚಕರ ವಾಣಿ

ಟಿಳಕವಾಡಿ ಗಣೇಶೋತ್ಸವದ ಮಾದರಿ

ಬೆಳಗಾವಿ ನಗರದ ಟಿಳಕವಾಡಿ ಆರ್.ಪಿ.ಡಿ ಕ್ರಾಸ್‌ನಲ್ಲಿ ಸಾರ್ವಜನಿಕ ಗಣೇಶೋತ್ಸವ ಮಂಡಳಿಯವರು ಕಳೆದ 13 ವರ್ಷಗಳಿಂದ ಫೈಬರ್‌ನಿಂದ ತಯಾರಿಸಿದ 13 ಅಡಿ ಎತ್ತರದ ಗಣೇಶನ ಮೂರ್ತಿ ಪ್ರತಿಷ್ಠಾಪಿಸಿ, 11 ದಿನ ಪೂಜಿಸುತ್ತಾರೆ. ಕೊನೆಯ ದಿನ ಮೂರ್ತಿಯನ್ನು ವಿಸರ್ಜಿಸುವುದಿಲ್ಲ. ಬೃಹತ್ ಮೆರವಣಿಗೆ ಮಾಡುವುದಿಲ್ಲ. ಪಟಾಕಿ–ಸಿಡಿಮದ್ದು ಸಿಡಿಸುವುದಿಲ್ಲ. ಅಬ್ಬರದ ಡಿಜೆ ಬಳಸುವುದಿಲ್ಲ. ಪರಿಸರಸ್ನೇಹಿಯಾಗಿ ಹಬ್ಬ ಆಚರಿಸುತ್ತಾರೆ. ಫೈಬರ್ ಗಣೇಶನ ಮುಂದೆ ಪೂಜೆಗೆಂದು ಮಣ್ಣಿನಲ್ಲಿ ಮಾಡಿದ ಚಿಕ್ಕದಾದ ಮೂರ್ತಿ ಇಡುತ್ತಾರೆ. ಅದನ್ನಷ್ಟೇ ಸಮೀಪದ ಬಾವಿಯಲ್ಲಿ ವಿಸರ್ಜಿಸುತ್ತಾರೆ. ಮಂಡಳಿಯ ಈ ಸರಳ ಆಚರಣೆ ಎಲ್ಲರಿಗೂ ಮಾದರಿಯಾಗಲಿ.

ನೇರಲಗುಡ್ಡ ಶಿವಕುಮಾರ್, ಶಿರಾ

ಬದಲಾಗಬೇಕಿದೆ ಸಮಾಜದ ದೃಷ್ಟಿಕೋನ

'ಹೆಣ್ಣಿಗೆ ಜೀವವಿದೆ; ಹೃದಯವೂ ಇದೆ' ಲೇಖನವು (ಲೇ: ಸದಾಶಿವ ಸೊರಟೂರು ಪ್ರ.ವಾ., ಸೆಪ್ಟೆಂಬರ್ 2) ಹೆಣ್ಣಿನ ವಾಸ್ತವ ಪರಿಸ್ಥಿತಿ ಕುರಿತು ಬೆಳಕು ಚೆಲ್ಲಿದೆ. ದಿನಬೆಳಗಾದರೆ ಅಲ್ಲೊಂದು ಕೊಲೆ, ಇಲ್ಲೊಂದು ಅತ್ಯಾಚಾರ, ವರದಕ್ಷಿಣೆ ಕಿರುಕುಳ, ಬಾಲ್ಯವಿವಾಹ, ಹೀಗೆ ಹೆಣ್ಣನ್ನು ಸಮಾಜ ನಡೆಸಿಕೊಳ್ಳುತ್ತಿರುವ ರೀತಿ ನೋಡಿದಾಗ ಇಲ್ಲಿ ತಪ್ಪು ಯಾರದು ಎಂಬ ಪ್ರಶ್ನೆ ಉದ್ಭವಿಸುತ್ತದೆ. ನಮ್ಮೊಳಗೆ ಹೆಣ್ಣನ್ನು ನೋಡುವ ಮನಃಸ್ಥಿತಿ ಬದಲಾಗಬೇಕಿದೆ. ಹೆಣ್ಣನ್ನು ಕೇವಲ ಕಾಮದ ದೃಷ್ಟಿಯಿಂದ ನೋಡುವ ಸಮಾಜದ ದೃಷ್ಟಿ ಬದಲಾಗಬೇಕಿದೆ. ಅವಳು ಕೂಡ ಸ್ವತಂತ್ರಳು ಎಂಬ ಭಾವನೆ ಮೂಡಬೇಕಿದೆ.

ಅಂಬಿಕಾ ಬಿ.ಟಿ., ಹಾಸನ

ಮೂರು ಮಕ್ಕಳ ಶಿಕ್ಷಣ ವೆಚ್ಚ ಯಾರದು?

'ಹಿಂದೂಗಳು ಮೂರು ಮಕ್ಕಳನ್ನು ಮಾಡಿಕೊಳ್ಳಬೇಕು' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ. ಹಿಂದೆ ನಮ್ಮ ತಂದೆ–ತಾಯಿಗೆ ನಾವೆಲ್ಲ ಏಳೆಂಟು ಮಕ್ಕಳಲ್ಲಿ ಒಬ್ಬರಾಗಿ ಹುಟ್ಟಿದ್ದೆವು. ಆಗೆಲ್ಲಾ ಮನೆಯಲ್ಲೇ ಹೆರಿಗೆಯಾಗುತ್ತಿತ್ತು. ಈಗ ಆ ಕಾಲವಿದೆಯೇ? ಈಗಿನ ವೈದ್ಯಕೀಯ ವೆಚ್ಚ ಗಗನಕ್ಕೇರಿದೆ. ಬೆಂಗಳೂರಿನಂತಹ ಮಹಾನಗರಗಳಲ್ಲಿ ಚಿಣ್ಣರ ಪೂರ್ವ ಪ್ರಾಥಮಿಕ ಶಿಕ್ಷಣದ ವಾರ್ಷಿಕ ವೆಚ್ಚ ಸುಮಾರು ₹2 ಲಕ್ಷವಿದೆ. ಮೂರು ಮಕ್ಕಳನ್ನು ಹೆತ್ತರೆ ಅವರ ಶಿಕ್ಷಣದ ವೆಚ್ಚ ಭರಿಸುವವರು ಯಾರು?

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಸರ್ವಾಧಿಕಾರದ ಗುಪ್ತ ಪಾತಳಿ

ಒಕ್ಕೂಟ ರಚನೆಯಲ್ಲಿ ಛಿದ್ರತೆ ಕಾಣುವ, ಏಕಾತ್ಮಕ ಸರ್ಕಾರವನ್ನು ಪ್ರತಿಪಾದಿಸುವ, ಸಂವಿಧಾನವನ್ನು ಪುನಃ ಬರೆಯೋಣ ಎಂಬ ಗುರೂಜಿ ಗೋಲ್ವಾಲ್ಕರ್ ಅವರ ಮಾತುಗಳು ಎಷ್ಟು ಅಪ್ರಜಾಸತ್ತಾತ್ಮಕ, ವಿಕೇಂದ್ರೀಕರಣ ಹಾಗೂ ಬಹುಸಂಸ್ಕೃತಿ ವಿರೋಧಿ, ಸರ್ವಾಧಿಕಾರಕ್ಕೆ ಮಣೆ ಹಾಕುವಂಥವು ಎಂಬ ಒಳಮರ್ಮವನ್ನು ಜನಸಾಮಾನ್ಯರು ಅರಿಯಬೇಕಿದೆ. 'ರಾಜ್ಯಗಳ ಕಾಲಿಗೆ ತೆರಿಗೆಯ ಗುಂಡು' ಲೇಖನದಲ್ಲಿ (ಪ್ರ.ವಾ., ಸೆಪ್ಟೆಂಬರ್ 1) ದೇವನೂರ ಮಹಾದೇವ ಅವರು, ಈ ಬಗ್ಗೆ ಸೂಕ್ಷ್ಮವಾಗಿ ವಿಶದಪಡಿಸಿದ್ದಾರೆ. 'ನಮ್ಮ ದೇಶದ ಸಂವಿಧಾನದ ಒಕ್ಕೂಟ ಸ್ವರೂಪದ ಎಲ್ಲ ಮಾತುಗಳನ್ನು ಆಳವಾಗಿ ಹೂತು ಹಾಕಬೇಕಿದೆ', 'ರಾಜ್ಯಗಳ ಅಸ್ತಿತ್ವವನ್ನೇ ಅಳಿಸಿ ಹಾಕಬೇಕು' ಎಂಬ ಗುರೂಜಿಯವರ ಮಾತುಗಳ ಆಳದಲ್ಲಿ ಸರ್ವಾಧಿಕಾರದ ಗುಪ್ತ ಪಾತಳಿ ಕಾಣಿಸುತ್ತದೆ.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ವಿಶಾಲ ಮನೋಭಾವ ಪ್ರದರ್ಶಿಸಲಿ

'ಎಜುಕೇಟ್ ಗರ್ಲ್ಸ್' ಮುಕುಟಕ್ಕೆ ಮ್ಯಾಗ್ಸೆಸೆ ಪ್ರಶಸ್ತಿಯ ಗರಿ ಸೇರ್ಪಡೆಯಾಗಿದೆ. ಸಂಸ್ಥೆಯ ಸಂಸ್ಥಾಪಕಿ ಸಫೀನಾ ಹುಸೇನ್ ಅವರು, ಶಿಕ್ಷಣದ ಮೂಲಕ ಒಂದು ಕೋಟಿ ಬಾಲಕಿಯರ ಸಬಲೀಕರಣದ ಗುರಿ ಹೊಂದಿರುವುದಾಗಿ ಹೇಳಿದ್ದಾರೆ. ಈ ಬಾರಿಯ ದಸರಾ ಉದ್ಘಾಟನೆ ಮಾಡಲಿರುವ ಸಾಹಿತಿ ಬಾನು ಮುಷ್ತಾಕ್ ಕುರಿತಂತೆ ಅನಗತ್ಯವಾಗಿ ಧಾರ್ಮಿಕ ವಿವಾದ ಸೃಷ್ಟಿಸಲಾಗಿದೆ. ವಿವಾದಕ್ಕೆ ಕಾರಣರಾದವರು ಸಫೀನಾ ಅವರ ಸಾಧನೆಯನ್ನು ನೋಡಿಯಾದರೂ ವಿಶಾಲ ಮನೋಭಾವ ಬೆಳೆಸಿಕೊಳ್ಳಲಿ.

ಆಶಾ ಅಪ್ರಮೇಯ, ದಾವಣಗೆರೆ

ಕನ್ನಡ ಬೋಧನೆಯ ಅವಧಿಗೂ ಕುತ್ತು

ಪದವಿ ಶಿಕ್ಷಣದಲ್ಲಿ ಎನ್‌ಇಪಿ ಕೈಬಿಟ್ಟಿರುವ ರಾಜ್ಯ ಸರ್ಕಾರ, ಎಸ್‌ಇಪಿ ಅಳವಡಿಸಿಕೊಂಡಿದೆ. ಅದರಂತೆ ಕನ್ನಡ ಭಾಷಾಪತ್ಯಕ್ಕೆ ನಾಲ್ಕು ಗಂಟೆ, ಐಚ್ಛಿಕ ಕನ್ನಡ ವಿಷಯಕ್ಕೆ ಆರು ಗಂಟೆ ಬೋಧನಾ ಅವಧಿ ನಿಗದಿಪಡಿಸಲಾಗಿತ್ತು. ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕರ ವೇದಿಕೆ ಹಾಗೂ ಬರಗೂರು ರಾಮಚಂದ್ರಪ್ಪನವರು, ಕನ್ನಡ ಬೋಧನಾ ಅವಧಿಗೆ ಸಂಬಂಧಿಸಿದ ಬೇರೆ ಬೇರೆ ವಿಶ್ವವಿದ್ಯಾಲಯಗಳ ಕ್ರೆಡಿಟ್‌ಗೆ ಅನ್ವಯ ಮಾಡಿಕೊಂಡು ಅವಧಿಯನ್ನು ಕಡಿತಗೊಳಿಸದೆ ಈ ಹಿಂದಿನಂತೆಯೇ ಏಕರೂಪತೆ ಪಾಲಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಇದರಿಂದ ಕನ್ನಡ ವಿಷಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿತ್ತು. ಈಗ ಕಾಲೇಜು ಶಿಕ್ಷಣ ಇಲಾಖೆಯು, ಸರ್ಕಾರಿ ಪದವಿ ಕಾಲೇಜುಗಳಿಂದ ಪ್ರಸಕ್ತ ವರ್ಷದ ಕೆಲಸದ ಅವಧಿ ಕೇಳಿದೆ. ಕೆಲವು ಕಾಲೇಜುಗಳು ಇವೆರಡರಲ್ಲೂ ಒಂದೊಂದು ಗಂಟೆಯ ಬೋಧನಾ ಅವಧಿ ಕಡಿತಗೊಳಿಸಿ ಇಲಾಖೆಗೆ ವರದಿ ಸಲ್ಲಿಸಿವೆ. ಇದಕ್ಕೆ ಕೆಲವು ವಿಶ್ವವಿದ್ಯಾಲಯಗಳು ತಮ್ಮದೇ ನಿಯಮಾವಳಿಯಲ್ಲಿ ಕ್ರೆಡಿಟ್ ಅನ್ನು ವ್ಯತ್ಯಾಸ ಮಾಡಿಕೊಂಡಿರುವುದೇ ಈ ಗೊಂದಲಕ್ಕೆ ಕಾರಣ. ಹಿಂದಿನ ಆದೇಶವು ಉಲ್ಲಂಘನೆಯಾಗದಂತೆ ಕನ್ನಡ ಬೋಧನಾವಧಿಯನ್ನು ಸರಿಪಡಿಸಬೇಕಿದೆ.

ಸಂಪತ್ ಬೆಟ್ಟಗೆರೆ, ಮೂಡಿಗೆರೆ

ಚುರುಮುರಿ



ಬೆಟ್ಟ ಜಗ್ಗಾಟ

• ಮಣ್ಣೆ ರಾಜು

ಗೆಳೆಯ ಗೋಪಾಲಿ ಫೋನ್ ಮಾಡಿ, 'ಈ ಬಾರಿ ದಸರಾಗೆ ಮೈಸೂರಿಗೆ ಬಂದಾಗ ಲಾಡ್ಜ್‌ನಲ್ಲಿ ಉಳಿಯಬೇಡಿ, ನಮ್ಮ ಮನೆಗೇ ಬರಬೇಕು' ಎಂದು ತಾಕೀತು ಮಾಡಿದ.

'ಬರ್ತೀವಿ, ಹೋದ ವರ್ಷ ಜನಜಂಗುಳಿಗೆ ಹೆದರಿ ಲಾಡ್ಜ್‌ನಲ್ಲೇ ಕುಳಿತು ಟಿ.ವಿ.ಯಲ್ಲಿ ಜಂಬೂಸವಾರಿ ನೋಡಿದ್ವಿ, ಮೈಸೂರಿಗೆ ಹೋದ್ರೂ ನೇರವಾಗಿ ಉತ್ಸವ ನೋಡಲಾಗಲಿಲ್ಲ' ಅಂದ ಶಂಕ್ರಿ.

'ನಮ್ಮ ಮನೆ ಮುಂದೆಯೇ ಜಂಬೂಸವಾರಿ ಸಾಗುತ್ತದೆ, ಟೆರೇಸ್ ಮೇಲೆ ನಿಂತು ಕಣ್ತುಂಬಿಕೊಳ್ಳಬಹುದು'.

'ಖಂಡಿತಾ ನಿಮ್ಮ ಮನೆಗೆ ಬರುತ್ತೇವೆ' ಸುಮಿ ಸಂಭ್ರಮದಿಂದ ಹೇಳಿದಳು.

'ಚಾಮುಂಡಿ ಬೆಟ್ಟ ಯಾರಿಗೆ ಸೇರಬೇಕು ಎಂಬ ವಿವಾದ ಇತ್ಯರ್ಥವಾಯ್ತೆ?'

'ಆಗೋದಿಲ್ಲ, ದಸರಾ ಮುಗಿದರೂ ಬೆಟ್ಟದ ಜಗ್ಗಾಟ ಮುಗಿಯುವಂತೆ ಕಾಣ್ತಿಲ್ಲ. ಧರ್ಮಸ್ಥಳದ ಕಾವು ಕಮ್ಮಿಯಾದ್ಮೇಲೆ ರಾಜಕಾರಣಿಗಳು ಚಾಮುಂಡಿ ಬೆಟ್ಟ ಯಾತ್ರೆ ಆರಂಭಿಸಬಹುದು' ಅಂದ ಗೋಪಾಲಿ.

'ಹೌದೌದು. ಸರ್ಕಾರ ಚಾಮುಂಡಿ ಬೆಟ್ಟಕ್ಕೆ ರಕ್ಷಣೆ ಒದಗಿಸಬೇಕಾಗುತ್ತೆ'.

'ಬೇಕಾಗಿಲ್ಲ, ಆಂಜನೇಯ ಸಂಜೀವಿನಿ ಪರ್ವತ ಹೊತ್ತುಕೊಂಡು ಹೋದಂತೆ ಚಾಮುಂಡಿ ಬೆಟ್ಟವನ್ನು ಹೊತ್ತುಕೊಂಡು ಹೋಗುವವರು ಯಾರೂ ಇಲ್ಲ!'

'ಚಾಮುಂಡಿ ಬೆಟ್ಟ ತಮಗೆ ಸೇರಿದ್ದು ಎಂದು ರಾಜಕಾರಣಿಗಳು 'ಬೆಟ್ಟ ಅಪ್ಪಿಕೊ' ಚಳವಳಿ ಮಾಡ್ತಾರೇನೋ?'

'ಏನೇನು ಮಾಡ್ತಾರೋ ನೋಡೋಣ. ಚಾಮುಂಡಿ ಬೆಟ್ಟ ಯಾರಿಗೆ ಸೇರಿದ್ದು ಎಂಬುದು ಇತ್ಯರ್ಥವಾದರೆ ಸಾಕು'.

'ಇತ್ಯರ್ಥ ಮಾಡಲೇಬೇಕು'.

'ಹೇಗೆ ಸಾಧ್ಯ?'

'ಏನಿಲ್ಲ, ದಸರಾ ಸ್ಪೆಷಲ್ ಅಂತ ಬೆಟ್ಟ ಜಗ್ಗಾಟ ಸ್ಪರ್ಧೆ ಏರ್ಪಡಿಸೋದು! ಬೆಟ್ಟಕ್ಕೆ ಹಗ್ಗ ಕಟ್ಟಿ ಒಂದು ಕಡೆ ಆ ಪಕ್ಷದವರು, ಇನ್ನೊಂದು ಕಡೆ ಈ ಪಕ್ಷದವರು ಎಳೆದಾಡಲಿ. ಬೆಟ್ಟ ಯಾರ ಕಡೆಗೆ ಜರುಗುತ್ತದೋ ಅವರಿಗೆ ಚಾಮುಂಡಿ ಬೆಟ್ಟ ಸೇರುತ್ತದೆ ಎಂದು ಘೋಷಿಸಿದರಾಯ್ತು...' ಎಂದು ನಕ್ಕು ಶಂಕ್ರಿ ಫೋನ್ ಕಟ್ ಮಾಡಿದ.

ಸಂಗತ

ಸ್ವಚ್ಛ ಮನಸುಗಳಿಂದ ಸ್ವಚ್ಛ ವ್ಯವಸ್ಥೆ

ಪಠ್ಯಕ್ಕಷ್ಟೇ ಸೀಮಿತಗೊಳ್ಳುವುದಾದರೆ, ಮಕ್ಕಳು ಶಾಲೆಗೆ ಹೋಗುವುದರಲ್ಲಿ ಅರ್ಥವಿಲ್ಲ. ಸ್ವಚ್ಛತಾ ಚಟುವಟಿಕೆಗಳಲ್ಲಿ ತೊಡಗುವುದು ಕಲಿಕೆಯ ಭಾಗವೇ ಆಗಿದೆ.

• ಗಿರಿಜಾಶಂಕರ್ ಜಿ.ಎಸ್. ಇಡೇಹಳ್ಳಿ

ಶಿಕ್ಷಣ ಎಂದರೆ ಕೇವಲ ಪಠ್ಯಪುಸ್ತಕವಲ್ಲ ಅಥವಾ ಪಠ್ಯಪುಸ್ತಕವನ್ನು ಆಧರಿಸಿದ ಅಂಕ ಗಳಿಕೆಯ ಮೌಲ್ಯಮಾಪನವಲ್ಲ ಎನ್ನುವ ಮಾತುಗಳನ್ನು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮತ್ತೆ ಮತ್ತೆ ಆಡುತ್ತಿರುತ್ತೇವೆ. ಹೀಗೆ ಹೇಳುತ್ತಲೇ, ಶಿಕ್ಷಣವೆಂದರೆ ಕೇವಲ ಪುಸ್ತಕಗಳಿಂದ ಪಡೆದದ್ದು ಎನ್ನುವಂಥ ವ್ಯವಸ್ಥೆಯನ್ನೂ ರೂಪಿಸಿದ್ದೇವೆ. ಶಾಲೆಗಳಲ್ಲಿ ಮಕ್ಕಳು ಸ್ವಚ್ಛತಾ ಚಟುವಟಿಕೆಗಳಲ್ಲಿ ತೊಡಗಿರುವ ಸುದ್ದಿಗಳನ್ನು ಅತಿಯಾಗಿ ಬಿಂಬಿಸಿ, ಮಕ್ಕಳು ಸ್ವಚ್ಛತೆಯ ಕೆಲಸಗಳನ್ನು ಮಾಡುವುದೇ ತಪ್ಪು ಎನ್ನುವ ವಾತಾವರಣ ನಿರ್ಮಿಸುತ್ತಿದ್ದೇವೆ.

ಶಿಕ್ಷಣವೆಂದರೆ ಕೇವಲ ಪುಸ್ತಕದ ಬದನೆಕಾಯಿ ಅಲ್ಲ; ಪಠ್ಯದೊಂದಿಗೆ ಕಲಿಯುವ ಹಲವಾರು ಚಟುವಟಿಕೆಗಳು, ಕೆಲಸಗಳು ಕೂಡ ಶಿಕ್ಷಣದ ಪ್ರಮುಖ ಅಂಶಗಳೇ ಆಗಿರುತ್ತವೆ ಎಂದು ಶಿಕ್ಷಕರು ತರಗತಿಗಳಲ್ಲಿ ಮಕ್ಕಳಿಗೆ ಹೇಳುವುದಿದೆ. ಕಲಿಕೆಯೊಂದಿಗೆ ಕಲಿಯುವ ಎಲ್ಲಾ ಕೆಲಸ ಕಾರ್ಯಗಳೂ ಶಿಕ್ಷಣದ ಬುನಾದಿ ಸಾಮರ್ಥ್ಯಗಳೇ ಆಗಿವೆ. ಇದರ ಹಿನ್ನೆಲೆಯಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ 'ವೃತ್ತಿಶಿಕ್ಷಣ' ಎನ್ನುವುದಿದೆ. ಇದರ ಮೂಲಕ ಮಕ್ಕಳಿಗೆ ಸ್ವಚ್ಛತೆ, ಶಾಲಾ ಪರಿಸರ, ಶಾಲಾ ಕೈದೋಟದ ಮೂಲಕ ನಮ್ಮ ಕೃಷಿ ಸಂಸ್ಕೃತಿಯ ಮಹತ್ವ ಹೇಳುತ್ತಾ ಬರಲಾಗಿದೆ. ವೃತ್ತಿ ಶಿಕ್ಷಕರ ಮೂಲಕ ಮಕ್ಕಳು ಸ್ವಯಂ ಸ್ವಚ್ಛತಾ ಕಾರ್ಯಗಳಲ್ಲಿ ಭಾಗವಹಿಸಿ, ಒಂದಿಷ್ಟು ಶಿಸ್ತಿನ ಪಾಠ ಕಲಿಯಬಹುದಾದ ಸಾಧ್ಯತೆ ಮೊದಲಿನಿಂದಲೂ ಇದೆ.

ಹಿಂದೆಲ್ಲಾ ವಸತಿ ಶಿಕ್ಷಣವಿರುವ ಶಾಲೆಗಳಲ್ಲಿ ಮಕ್ಕಳೇ ಕೈದೋಟ ಮಾಡಿ ತರಕಾರಿ, ಸೊಪ್ಪು ಬೆಳೆಯುವ ಮೂಲಕ ತಮ್ಮ ದಿನನಿತ್ಯದ ಅಡುಗೆಗೆ ಒಂದಿಷ್ಟು ನೆರವಾಗುತ್ತಿದ್ದರು. ಶಾಲೆಯಲ್ಲಿ ತಾವು ಬಳಸುವ ಶೌಚಾಲಯಗಳನ್ನು ತಾವೇ ಸ್ವಚ್ಛಗೊಳಿಸುವ ಸ್ವಚ್ಛ ಮನಸ್ಸುಗಳೂ ಇದ್ದವು. ಶಾಲಾ ಕೊಠಡಿಗಳಲ್ಲಿನ ಕಸವನ್ನು ಮಕ್ಕಳೇ ಸರದಿ ಪ್ರಕಾರ ಗುಡಿಸುತ್ತಿದ್ದರು. ಶಾಲಾ ಆವರಣವನ್ನು ಸ್ವಚ್ಛಗೊಳಿಸುತ್ತಿದ್ದರು. ಆದರೆ, ಈಗ ಮಕ್ಕಳು ಶಾಲೆಯಲ್ಲಿ ಪುಸ್ತಕ ಬಿಟ್ಟರೆ ಏನನ್ನೂ ಮುಟ್ಟುವಂತಿಲ್ಲ ಎನ್ನುವ ನಕಾರಾತ್ಮಕವಾದ ಧೋರಣೆ ಬಲಗೊಳ್ಳುತ್ತಿದೆ. ಇಂಥ ಮನೋಭಾವ ರೂಪುಗೊಳ್ಳುವಲ್ಲಿ ಮಾಧ್ಯಮಗಳ ಪಾತ್ರವೂ ಇದೆ. ಇದು ಎಷ್ಟರಮಟ್ಟಿಗೆ ಸರಿ ಎಂದು ಪ್ರಜ್ಞಾವಂತರು ಯೋಚಿಸಬೇಕಾಗಿದೆ.

ಬಹಳಷ್ಟು ಪೋಷಕರೂ ತಮ್ಮ ಮಕ್ಕಳ ಬಗ್ಗೆ ಅತಿಯಾದ ಪ್ರೀತಿಯ ಕಾರಣದಿಂದ 'ಓದುವುದಷ್ಟೇ ಮುಖ್ಯ'ವೆಂದು ಭಾವಿಸಿದ್ದಾರೆ. ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಶಾಲಾ ಪರಿಸರವನ್ನು ಸ್ವಚ್ಛವಾಗಿಸಲು ಪೊರಕೆ ಕೊಟ್ಟರೆ ಅದನ್ನು ಪ್ರಶ್ನೆ ಮಾಡುವಂಥ ಪೋಷಕರಿದ್ದಾರೆ. 'ನಾವೇ ಮನೆಯಲ್ಲಿ ನನ್ನ ಮಗ/ಮಗಳಿಂದ ಒಂದು ಕೆಲಸವನ್ನೂ ಮಾಡಿಸುವುದಿಲ್ಲ. ನೀವು ಶಾಲೆಯಲ್ಲಿ ಸ್ವಚ್ಛತಾ ಕಾರ್ಯ ಮಾಡಿಸಬಹುದೇ?' ಎಂದು ಗಡುಸು ಧ್ವನಿಯಲ್ಲಿ ಪ್ರಶ್ನಿಸಿದ ಉದಾಹರಣೆಗಳೂ ಇವೆ. ಇಂತಹ ಪೋಷಕರಿಗೆ, ಅವರ ಮಕ್ಕಳು ಪ್ರೌಢರಾದರೂ ಮನೆಯಲ್ಲಿ ತಾವೇ ಕಸ ಹೊಡೆಯುವ ಕೆಲಸ ಕಾಯಂ ಆಯಿತಲ್ಲ ಎಂದು ಕೊರಗುವ ಸ್ಥಿತಿ ಬಾರದೇ ಇರದು.



ಕಣ್ಣುಗಳಿದ್ದರೆ ಸಾಲದು, ನೋಡುವುದನ್ನು ಕಲಿಯಬೇಕು. ಕಿವಿಗಳಿದ್ದರೆ ಸಾಲದು, ಕೇಳುವುದನ್ನು ಕಲಿಯಬೇಕು ಎನ್ನುವ ಮಾತಿದೆ. ಅಂದರೆ, ಬದುಕಿನಲ್ಲಿ ಶಿಕ್ಷಣವೆಂದರೆ ಓದುವುದು ಹಾಗೂ ಬರೆಯುವುದು ಅಷ್ಟೇ ಅಲ್ಲ. ಬದುಕಿಗೆ ದಾರಿ ತೋರಬಲ್ಲ ಎಲ್ಲಾ ಕೆಲಸ ಕಾರ್ಯಗಳು, ಚಟುವಟಿಕೆಗಳು ಸಹ ಶಿಕ್ಷಣದ ಬಹುಮುಖ್ಯವಾದ ಅಂಶಗಳು ಎನ್ನುವ ವಿವೇಚನೆ ನಮ್ಮೆಲ್ಲರಿಗೂ ಬೇಕು.

ಸ್ವಚ್ಛತಾ ಕಾರ್ಯ ಹೀನಾಯವಲ್ಲ ಎನ್ನುವುದನ್ನು ಪೋಷಕರೂ ವಿದ್ಯಾರ್ಥಿಗಳೂ ಅರಿತುಕೊಳ್ಳಬೇಕಾಗಿದೆ. ಶಾಲೆಯಲ್ಲಿ ಸ್ವಚ್ಛತಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಮನೋವಿಕಾಸ ಹಾಗೂ ಸ್ವಾವಲಂಬನೆಯ ಕಲಿಕೆ ಆಗಿರುವಂತೆಯೇ, ತರತಮ ಭಾವಗಳಿಂದ ಎಳೆಯರನ್ನು ಪಾರು ಮಾಡುವ ಮಾರ್ಗವೂ ಆಗಿದೆ.

'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ' ಎನ್ನುವಂತೆ ಮಕ್ಕಳಿಗೆ ಮನೆಯಲ್ಲಿ, ಶಾಲೆಯಲ್ಲಿ ಒಂದಿಷ್ಟು ಸ್ವಚ್ಛತಾ ಪಾಠವನ್ನು ಕಲಿಸದೆ ಹೋದರೆ, ಮುಂದೆ ವ್ಯಥೆಪಡುವವರು ಯಾರು? ಸ್ವಚ್ಛತೆಯಂತಹ ಸೂಕ್ಷ್ಮ ವಿಚಾರಗಳನ್ನು ಸಕಾರಾತ್ಮಕವಾಗಿ ನೋಡುವುದಕ್ಕಿಂತ ನಕಾರಾತ್ಮಕವಾಗಿ ನೋಡುವುದು ಹೆಚ್ಚಾಗಿದೆ. ಇಂತಹ ವಿಷಯಗಳಲ್ಲಿ ಸಂವೇದನಾಶೀಲತೆ ಹೆಚ್ಚಬೇಕಾಗಿದೆ.

ಸ್ವಚ್ಛತಾ ಚಟುವಟಿಕೆಗೆ ಸಂಬಂಧಿಸಿದಂತೆ ಶಿಕ್ಷಕರ ಹೊಣೆಗಾರಿಕೆ ಮುಖ್ಯವಾದುದು. ಶಾಲೆಯಲ್ಲಿ ಶೌಚ ಗುಂಡಿಯನ್ನು ಮಕ್ಕಳಿಂದ ಸ್ವಚ್ಛಗೊಳಿಸುವುದನ್ನು ಯಾರೂ ಒಪ್ಪುವುದು ಸಾಧ್ಯವಿಲ್ಲ. ಮಕ್ಕಳಿಂದ ಯಾವ ಕೆಲಸವನ್ನು ಮಾಡಿಸಬೇಕು, ಯಾವುದನ್ನು ಮಾಡಿಸಬಾರದು ಎನ್ನುವ ವಿವೇಕ ಶಿಕ್ಷಕರಿಗೆ ಇರಬೇಕು. ಮಕ್ಕಳನ್ನು ಅಮಾನವೀಯವಾಗಿ ನಡೆಸಿಕೊಳ್ಳುವ ಶಿಕ್ಷಕರ ಧೋರಣೆ ಬದಲಾಗಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಯಾವುದೋ ಒಂದು ಘಟನೆಯನ್ನು ಆಧರಿಸಿ, ಮಕ್ಕಳು ಯಾವುದೇ ಸ್ವಚ್ಛತಾ ಕಾರ್ಯ ಮಾಡಬಾರದು ಎನ್ನುವ ಸಂಕುಚಿತ ಭಾವನೆ ಸಲ್ಲದು.

ಕಲಿಕೆಗೆ ಪೂರಕವಾಗಿ ಶಾಲೆಯಲ್ಲಿ ಕೈಗೊಳ್ಳುವ ಕೆಲಸ ಕಾರ್ಯಗಳನ್ನು 'ನಮ್ಮ ಮನೆಯ ಕಾರ್ಯಗಳು' ಎನ್ನುವ ಮುಕ್ತ ಮನೋಭಾವದಿಂದ ನೋಡಬೇಕಾಗಿದೆ. ಹಾಗೆ ನೋಡುವುದು ಸಾಧ್ಯವಾದರೆ, ಶಿಕ್ಷಣದ ಬಹುಮುಖ್ಯವಾದ ಉದ್ದೇಶ ಈಡೇರಿದಂತೆ. ಸ್ವಚ್ಛ ಮನಸ್ಸುಗಳ ಜೊತೆಗೆ ಸ್ವಚ್ಛ ವ್ಯವಸ್ಥೆಯನ್ನು ರೂಪಿಸುವುದು ಸದ್ಯದ ತುರ್ತು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಆಧುನಿಕ ಯುದ್ಧರಂಗದಲ್ಲಿ ಡ್ರೋನ್‌ಗಳು, ಕ್ಷಿಪಣಿಗಳು, ಯುದ್ಧವಿಮಾನಗಳು ಹೆಚ್ಚು ಬಳಕೆಯಾಗುತ್ತಿವೆ. ಇವುಗಳ ದಾಳಿಯನ್ನು ತಡೆಯಲು ಯಾವುದೇ ದೇಶ ಸುವ್ಯವಸ್ಥಿತ ವಾಯು ರಕ್ಷಣಾ ವ್ಯವಸ್ಥೆ ಹೊಂದುವುದು ಮುಖ್ಯ. ಭಾರತ ಮತ್ತು ಪಾಕಿಸ್ತಾನ ನಡುವಿನ ಇತ್ತೀಚಿನ ಸೇನಾ ಸಂಘರ್ಷದಲ್ಲಿ ಇದರ ಪ್ರಾಮುಖ್ಯ ಜಗಜ್ಜಾಹೀರಾಗಿದೆ. ಪಾಕಿಸ್ತಾನದ ಎಲ್ಲ ವಾಯು ದಾಳಿಗಳನ್ನು ದೇಶದ ವಾಯು ರಕ್ಷಣಾ ವ್ಯವಸ್ಥೆ ಸಮರ್ಥವಾಗಿ ತಡೆಯಿತು; ಭಾರತದ ವಾಯುದಾಳಿಯನ್ನು ತಡೆಯಲು ಪಾಕ್ ವಾಯು ರಕ್ಷಣಾ ವ್ಯವಸ್ಥೆ ವಿಫಲವಾಗಿತ್ತು. ದೇಶದ ವಾಯು ರಕ್ಷಣಾ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸಲು ಮುಂದಡಿ ಇಟ್ಟಿರುವ ಭಾರತ, ಸಂಪೂರ್ಣವಾಗಿ ದೇಶೀಯ ತಂತ್ರಜ್ಞಾನದಲ್ಲಿ ಅಭಿವೃದ್ಧಿ ಪಡಿಸಿದ ಸಮಗ್ರ ವಾಯು ರಕ್ಷಣಾ ವ್ಯವಸ್ಥೆಯ ಪರೀಕ್ಷೆಯನ್ನು ಇತ್ತೀಚೆಗೆ ಯಶಸ್ವಿಯಾಗಿ ನಡೆಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯದ ದಿನ ಘೋಷಿಸಿರುವ 'ಸುದರ್ಶನ ಚಕ್ರ' ವಾಯು ರಕ್ಷಣಾ ವ್ಯವಸ್ಥೆಯ ಅಭಿವೃದ್ಧಿಗೆ ಈ ಪರೀಕ್ಷೆ ಮುನ್ನುಡಿ ಬರೆದಿದೆ

ಸಮಗ್ರ ವಾಯು ರಕ್ಷಣಾ ವ್ಯವಸ್ಥೆ
ಭಾರತದ ಮಹತ್ವದ ಹೆಜ್ಜೆ

ಪ್ರಜಾವಾಣಿ ವಾರ್ತೆ

ಪಹಲ್ಗಾಮ್ ಭಯೋತ್ಪಾದಕರ ದಾಳಿಗೆ ಪ್ರತೀಕಾರವಾಗಿ ಈ ವರ್ಷದ ಮೇ 7ರಂದು ಭಾರತೀಯ ಸೇನೆಯು ಪಾಕಿಸ್ತಾನದ ಉಗ್ರರ ನೆಲೆಗಳನ್ನು ಗುರಿಯಾಗಿಸಿಕೊಂಡು ನಡೆಸಿದ್ದ 'ಆಪರೇಷನ್ ಸಿಂಧೂರ'ದ ನಂತರ ಪಾಕಿಸ್ತಾನವು ಭಾರತದ ಮೇಲೆ ನಡೆಸಿದ್ದ ಕ್ಷಿಪಣಿ, ಡ್ರೋನ್‌ಗಳ ದಾಳಿಯ ಸದ್ದಡಗಿಸಿದ್ದು ನಮ್ಮ ಸಮಗ್ರ ವಾಯು ರಕ್ಷಣಾ ವ್ಯವಸ್ಥೆ (ಇಂಟಗ್ರೇಟೆಡ್ ಏರ್ ಡಿಫೆನ್ಸ್ ಸಿಸ್ಟಮ್–ಐಎಡಿಡಬ್ಲ್ಯುಎಸ್). ಸ್ವದೇಶಿ ನಿರ್ಮಿತ ಆಕಾಶ್ ಕ್ಷಿಪಣಿ ವ್ಯವಸ್ಥೆ, ರಷ್ಯಾ ನಿರ್ಮಿತ ಎಸ್–400 ಕ್ಷಿಪಣಿ ವ್ಯವಸ್ಥೆ, ಇದರೊಂದಿಗೆ ದೇಶೀಯ ಆಕಾಶ್‌ತೀರ ಕಮಾಂಡ್ ಮತ್ತು ನಿಯಂತ್ರಣ ವ್ಯವಸ್ಥೆ ಹಾಗೂ ಸಮಗ್ರ ವಾಯು ಕಮಾಂಡ್ ಮತ್ತು ನಿಯಂತ್ರಣ ವ್ಯವಸ್ಥೆಯು ಪಾಕಿಸ್ತಾನದ ದಾಳಿಯ ವಿರುದ್ಧ ರಕ್ಷಾ ಕವಚದಂತೆ ಕಾರ್ಯನಿರ್ವಹಿಸಿದ್ದವು.

ವಾಯು ರಕ್ಷಣಾ ವ್ಯವಸ್ಥೆಯಲ್ಲಿ ಜಗತ್ತಿಗೆ ಭಾರತದ ಸಾಮರ್ಥ್ಯವನ್ನು ತೋರಿಸಿದ್ದ ಈ ಕಾರ್ಯಾಚರಣೆ ಮುಕ್ತಾಯ ಕಂಡ ಎರಡೂವರೆ ತಿಂಗಳ ಬಳಿಕ, ಆಗಸ್ಟ್ 23ರಂದು ಭಾರತವು ಒಡಿಶಾ ಕರಾವಳಿಯಲ್ಲಿ ನಡೆಸಿದ ಬಹು ಹಂತಗಳ ಸಮಗ್ರ ವಾಯು ರಕ್ಷಣಾ ವ್ಯವಸ್ಥೆಯ ಪ್ರಯೋಗಾರ್ಥ ಪರೀಕ್ಷೆ ಮೊದಲ ಯತ್ನದಲ್ಲೇ ಯಶಸ್ವಿಯಾಗಿದೆ. ಡಿಆರ್‌ಡಿಒ ಮತ್ತು ಅದರ ಎರಡು ಅಂಗಸಂಸ್ಥೆಗಳು ಈ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿವೆ. ಸಂಪೂರ್ಣ ಸ್ವದೇಶಿ ಸಮಗ್ರ ವಾಯು ರಕ್ಷಣಾ ವ್ಯವಸ್ಥೆ ಎಂಬುದು ಇದರ ಹೆಗ್ಗಳಿಕೆ.

ಮೂರು ಹಂತಗಳ ರಕ್ಷಣಾ ಕವಚವನ್ನು ಹೊಂದಿರುವ ಈ ವ್ಯವಸ್ಥೆಯು ನೆಲದಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪ್ರ ಪ್ರತಿಕ್ರಿಯೆಯ ಕ್ಷಿಪಣಿಗಳ ವ್ಯವಸ್ಥೆ (ಕ್ವಿಕ್ ರಿಯಾಕ್ಷನ್ ಸರ್ಫೇಸ್ ಟು ಏರ್ ಮಿಸೈಲ್ಸ್–ಕ್ಯುಆರ್‌ಎಸ್‌ಎಎಂ), ಅತ್ಯಾಧುನಿಕ ಅತಿ ಕಡಿಮೆ ವ್ಯಾಪ್ತಿಯ ವಾಯು ರಕ್ಷಣಾ ವ್ಯವಸ್ಥೆ (ಅಡ್ವಾನ್ಸ್ಡ್ ವೆರಿ ಶಾರ್ಟ್ ರೇಂಜ್ ಏರ್ ಡಿಫೆನ್ಸ್ ವ್ಯವಸ್ಥೆ–ವಿಎಸ್‌ಎಚ್‌ಒಆರ್‌ಎಡಿಎಸ್) ಕ್ಷಿಪಣಿಗಳು ಮತ್ತು ಲೇಸರ್ ನಿರ್ದೇಶಿತ ಪ್ರಖರ ಶಕ್ತಿಯ ಅಸ್ತ್ರ (ಡೈರೆಕ್ಟೆಡ್ ಎನರ್ಜಿ ವೆಪನ್–ಡಿಇಡಬ್ಲ್ಯು) ವ್ಯವಸ್ಥೆಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕ್ಯುಆರ್‌ಎಸ್‌ಎಎಂ ವ್ಯವಸ್ಥೆಯನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯ (ಡಿಆರ್‌ಡಿಎಲ್) ಅಭಿವೃದ್ಧಿಪಡಿಸಿದ್ದರೆ, ವಿಎಸ್‌ಎಚ್‌ಒಆರ್‌ಎಡಿಎಸ್ ಅನ್ನು ಹೈದರಾಬಾದ್‌ನಲ್ಲಿರುವ ಇಮಾರತ್ ಸಂಶೋಧನಾ ಕೇಂದ್ರ (ಆರ್‌ಸಿಐ) ಮತ್ತು ಡಿಇಡಬ್ಲ್ಯು ವ್ಯವಸ್ಥೆಯನ್ನು ಹೈದರಾಬಾದ್‌ನಲ್ಲಿರುವ ಪ್ರಖರ ಶಕ್ತಿ (ಹೈ ಎನರ್ಜಿ) ವ್ಯವಸ್ಥೆಗಳು ಮತ್ತು ವಿಜ್ಞಾನಗಳ ಕೇಂದ್ರ (ಸಿಎಚ್‌ಇಎಸ್‌ಎಸ್) ಅಭಿವೃದ್ಧಿ ಪಡಿಸಿವೆ.

ಆ.23ರಂದು ನಡೆಸಿದ ಪರೀಕ್ಷೆಯಲ್ಲಿ ಈ ವಾಯುರಕ್ಷಣಾ ವ್ಯವಸ್ಥೆಯು ಎರಡು ಮಾನವ ರಹಿತ ವೈಮಾನಿಕ ವಾಹನ (ಯುಎವಿ) ಮತ್ತು ಒಂದು ಡ್ರೋನ್ ಅನ್ನು ಏಕಕಾಲಕ್ಕೆ ಹೊಡೆದುರುಳಿಸಿತ್ತು. ನಿಗದಿಪಡಿಸಲಾಗಿದ್ದ ಗುರಿಗಳು ಭಿನ್ನ ಭಿನ್ನ ಎತ್ತರ ಮತ್ತು ದೂರದಲ್ಲಿ ಹಾರಾಡುತ್ತಿದ್ದವು. ಮೂರೂ ವ್ಯವಸ್ಥೆಗಳು ಒಟ್ಟಾಗಿ ಕಾರ್ಯಾಚರಣೆ ಆರಂಭಿಸಿ, ನಿಖರ ಗುರಿ ಇಟ್ಟು ಡ್ರೋನ್ ಮತ್ತು ಯುಎವಿಗಳನ್ನು ಧ್ವಂಸ ಮಾಡಿದ್ದವು.

ಕೆಳ ಮಟ್ಟದಲ್ಲಿ ಹಾರಾಡುವ ಡ್ರೋನ್‌ಗಳಿಂದ ಹಿಡಿದು, ಎತ್ತರದಲ್ಲಿ ಹಾರಾಡುವ ಕ್ಷಿಪಣಿ ಮತ್ತು ಯುದ್ಧವಿಮಾನಗಳ ದಾಳಿಗಳ ವಿರುದ್ಧ ಈ ವ್ಯವಸ್ಥೆ ರಕ್ಷಾ ಕವಚವಾಗಿ ಕೆಲಸ ಮಾಡುತ್ತದೆ ಎಂದು ಡಿಆರ್‌ಡಿಒ ವಿಜ್ಞಾನಿಗಳು ಹೇಳಿದ್ದಾರೆ.



ಕ್ಯುಆರ್‌ಎಸ್‌ಎಎಂ

- ಇದು ಕಡಿಮೆ ವ್ಯಾಪ್ತಿಯ ಮತ್ತು ನೆಲದಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆ. ಸಂಚರಿಸುತ್ತಿರುವ ಶಸ್ತ್ರಸಜ್ಜಿತ ಸೇನಾ ತುಕಡಿಗಳನ್ನು ವಾಯುದಾಳಿಯಿಂದ ರಕ್ಷಿಸುವುದಕ್ಕಾಗಿ ಇದನ್ನು ರೂಪಿಸಲಾಗಿದೆ
- ಇದನ್ನು ವಾಹನಗಳಲ್ಲಿ ಅಳವಡಿಸಬಹುದಾಗಿದೆ. ಸಂಚರಿಸುತ್ತಿರುವಾಗಲೇ ವಾಯು ದಾಳಿಯಿಂದ ರಕ್ಷಣೆ ನೀಡುವ ಸಾಮರ್ಥ್ಯ ಇದಕ್ಕಿದೆ. 2022ರಲ್ಲೇ ಡಿಆರ್‌ಡಿಒ ಈ ವ್ಯವಸ್ಥೆಯನ್ನು ಯಶಸ್ವಿಯಾಗಿ ಪರೀಕ್ಷೆಗೆ ಒಳಪಡಿಸಿತ್ತು
- ಸಂಪೂರ್ಣ ಸ್ವಯಂಚಾಲಿತ ಕಮಾಂಡ್ ಮತ್ತು ನಿಯಂತ್ರಣ ವ್ಯವಸ್ಥೆ, ಎರಡು ರೇಡಾರ್‌ಗಳು ಮತ್ತು ಒಂದು ಉಡಾವಣಾ ಸಲಕರಣೆಯನ್ನು ಹೊಂದಿದೆ
- 3 ಕಿ.ಮೀನಿಂದ 30 ಕಿ.ಮೀ ದೂರ ಮತ್ತು 10 ಕಿ.ಮೀನಷ್ಟು ಎತ್ತರದಲ್ಲಿರುವ ಶತ್ರುಗಳ ಯುದ್ಧವಿಮಾನ, ಹೆಲಿಕಾಪ್ಟರ್, ಡ್ರೋನ್ ಕ್ಷಿಪಣಿಗಳನ್ನು ಹೊಡೆದು ಉರುಳಿಸಬಲ್ಲದು



ವಿಎಸ್‌ಎಚ್‌ಒಆರ್‌ಎಡಿಎಸ್

ಈ ವರ್ಷದ ಫೆಬ್ರುವರಿ 1ರಂದು ಡಿಆರ್‌ಡಿಒ ಈ ವ್ಯವಸ್ಥೆಯ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿತ್ತು. ಅತ್ಯಂತ ಕಡಿಮೆ ಎತ್ತರದಲ್ಲಿರುವ ಗುರಿಯನ್ನು ಇದು ಧ್ವಂಸ ಮಾಡಬಲ್ಲದು. ಇದು ಮನುಷ್ಯನೇ ಹೊತ್ತೊಯ್ಯಬಹುದಾದ ರಕ್ಷಣಾ ವ್ಯವಸ್ಥೆ. ಅಂದರೆ, ಒಬ್ಬ ಸೈನಿಕ ಈ ವ್ಯವಸ್ಥೆಯನ್ನು ನಿಯಂತ್ರಿಸಬಹುದು. ಕ್ಷಿಪಣಿ ಉಡಾವಣಾ ಸಲಕರಣೆಯನ್ನು ಹಿಡಿದುಕೊಂಡು ಗುರಿಯತ್ತ ದಾಳಿ ಮಾಡಬಹುದು. ಹಗುರವಾದ ಈ ವ್ಯವಸ್ಥೆಯನ್ನು ಎಲ್ಲಿ ಬೇಕಾದರೂ ನಿಯೋಜಿಸಬಹುದು. ಭೂಸೇನೆ, ವಾಯು ಪಡೆ ಮತ್ತು ನೌಕಾ ಪಡೆಗಳಿಗೂ ಹೊಂದುವಂತಿರುವುದು ಇದರ ಬಹುದೊಡ್ಡ ಅನುಕೂಲ. 600 ಮೀಟರ್‌ನಿಂದ ಆರು ಕಿ.ಮೀ ದೂರದಲ್ಲಿರುವ ಗುರಿಯನ್ನು ನಿಖರ ದಾಳಿಯ ಮೂಲಕ ನಾಶಪಡಿಸಬಲ್ಲದು.

ಲೇಸರ್ ಆಧಾರಿತ ಡಿಇಡಬ್ಲ್ಯು

ಇದು ಶತ್ರುಗಳ ವಿಮಾನ, ಡ್ರೋನ್, ಕ್ಷಿಪಣಿಯನ್ನು ಲೇಸರ್ ಕಿರಣಗಳ ಮೂಲಕ ನಾಶ ಮಾಡುವ ಅಸ್ತ್ರ. ಈ ವರ್ಷದ ಏಪ್ರಿಲ್‌ನಲ್ಲಿ ಡಿಆರ್‌ಡಿಒ ಈ ವ್ಯವಸ್ಥೆಯ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿತ್ತು. 30 ಕಿಲೋವಾಟ್ ಲೇಸರ್ ಆಧಾರಿತ ಅಸ್ತ್ರ ಬಳಸಿ ಸಣ್ಣ ವಿಮಾನವನ್ನು ನಾಶ ಮಾಡಲಾಗಿತ್ತು. ಗರಿಷ್ಠ 3.5 ಕಿ.ಮೀ ದೂರದಲ್ಲಿರುವ ಗುರಿಗಳನ್ನು ಧ್ವಂಸ ಮಾಡಬಲ್ಲ ಸಾಮರ್ಥ್ಯ ಇದರದ್ದು. ಲೇಸರ್ ಆಧಾರಿತ ಶಸ್ತ್ರಾಸ್ತ್ರ ವ್ಯವಸ್ಥೆಯನ್ನು ಭವಿಷ್ಯದ ಅಸ್ತ್ರಗಳು ಎಂದು ಬಣ್ಣಿಸಲಾಗುತ್ತಿದ್ದು, ಭಾರತವು ಈ ವ್ಯವಸ್ಥೆಯನ್ನು ಯಶಸ್ವಿಯಾಗಿ ಅಳವಡಿಸಿಕೊಳ್ಳುವ ಮೂಲಕ ಅಮೆರಿಕ, ಚೀನಾ, ರಷ್ಯಾ ಸಾಲಿಗೆ ಸೇರಿದೆ.





ಸಮಗ್ರ ವಾಯು ರಕ್ಷಣಾ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತದೆ?

- ಈ ವ್ಯವಸ್ಥೆಯು ರೇಡಾರ್, ನಿಯಂತ್ರಣ ಕೇಂದ್ರಗಳು, ಶಸ್ತ್ರಾಸ್ತ್ರ, ಯುದ್ಧವಿಮಾನಗಳು ಮತ್ತು ನೆಲ ಆಧಾರಿತ ಕ್ಷಿಪಣಿಗಳನ್ನೊಳಗೊಂಡ ಸಮನ್ವಯ ಜಾಲವನ್ನು ಬಳಸಿಕೊಂಡು ಶತ್ರುಗಳು ವಾಯು ಬೆದರಿಕೆಯನ್ನು (ಕ್ಷಿಪಣಿ, ಡ್ರೋನ್, ಯುದ್ಧವಿಮಾನ) ಪತ್ತೆಹಚ್ಚಿ, ಅದರ ಮೇಲೆ ನಿಗಾ ಇಟ್ಟು ಅದನ್ನು ಧ್ವಂಸ ಮಾಡುತ್ತದೆ
- ರೇಡಾರ್‌ಗಳು ಶತ್ರುಗಳ ಬೆದರಿಕೆಯನ್ನು ಪತ್ತೆ ಹಚ್ಚಿ, ಅವುಗಳ ಮೇಲೆ ನಿಗಾ ಇಡುತ್ತಾ, ಅವುಗಳ ವೇಗ, ಎತ್ತರ, ಪಥಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ನೀಡುತ್ತವೆ. ಎಲೆಕ್ಟ್ರೋ ಆಪ್ಟಿಕಲ್ ಸೆನ್ಸರ್‌ಗಳು ಕೂಡ ಇದಕ್ಕೆ ನೆರವಾಗುತ್ತವೆ
- ಐಎಡಿಡಬ್ಲ್ಯುಎಸ್‌ನ ಹೃದಯ ಭಾಗವಾಗಿರುವ ಕೇಂದ್ರೀಕೃತ ನಿಯಂತ್ರಣಾ ವ್ಯವಸ್ಥೆಯು (ಸಿ2ಸಿ2) ವಿವಿಧ ರೇಡಾರ್‌ಗಳು ಮತ್ತು ಎಲೆಕ್ಟ್ರೊ–ಆಪ್ಟಿಕಲ್ ಸೆನ್ಸರ್‌ಗಳ ದತ್ತಾಂಶವನ್ನು ಬೆಸೆಯುವ ಮೂಲಕ ನಿರ್ದಿಷ್ಟ ವಾಯುಪ್ರದೇಶದ ಆ ಕ್ಷಣದ ಚಿತ್ರಣ ನೀಡುತ್ತದೆ. ಈ ವ್ಯವಸ್ಥೆಯು ವಿಮಾನದ ಪಥ, ವೇಗ, ಎತ್ತರ, ರೇಡಾರ್ ದತ್ತಾಂಶದ ಆಧಾರದಲ್ಲಿ ಅಪಾಯದ ವಿಶ್ಲೇಷಣೆ ಮಾಡುವುದಲ್ಲದೇ ಅದನ್ನು ಎದುರಿಸಲು ಸೂಕ್ತ ರಕ್ಷಣಾ ವ್ಯವಸ್ಥೆಯನ್ನು ನಿಗದಿಪಡಿಸುತ್ತದೆ.
- ಗುರಿಯನ್ನು ನಿಗದಿಪಡಿಸಿದ ನಂತರ ಅವುಗಳನ್ನು ತಡೆಯಲು/ಹೊಡೆದುರುಳಿಸಲು ನಿಗದಿಪಡಿಸಲಾಗಿರುವ ಬಹು ಹಂತಗಳ ಪ್ರತಿದಾಳಿ ಅಸ್ತ್ರಗಳನ್ನು ಕಾರ್ಯಾಚರಣೆಗೆ ಇಳಿಸಲಾಗುತ್ತದೆ

ಐಎಡಿಡಬ್ಲ್ಯುಎಸ್ ಏಕೆ ಮುಖ್ಯ?


- ರಷ್ಯಾ–ಉಕ್ರೇನ್ ಯುದ್ಧ, ಇಸ್ರೇಲ್–ಹಮಾಸ್ ಸಂಘರ್ಷದಲ್ಲಿ ಕ್ಷಿಪಣಿಗಳು, ಡ್ರೋನ್‌ಗಳದ್ದೇ ಮುಖ್ಯ ಪಾತ್ರ. ಇತ್ತೀಚೆಗೆ ಭಾರತ ಪಾಕಿಸ್ತಾನದ ಮೇಲೆ ನಡೆಸಿದ 'ಆಪರೇಷನ್ ಸಿಂಧೂರ'ದಲ್ಲಿಯೂ ವೈಮಾನಿಕ ದಾಳಿಯದ್ದೇ ಗಣನೀಯ ಪಾಲು. ಶತ್ರುಗಳ ವೈಮಾನಿಕ ದಾಳಿಯಿಂದ ದೇಶವನ್ನು ರಕ್ಷಿಸುವುದರ ದೃಷ್ಟಿಯಿಂದ ಐಎಡಿಡಬ್ಲ್ಯುಎಸ್‌ಗೆ ಪ್ರಾಮುಖ್ಯವಿದೆ
- ಐದಾರು ದಶಕಗಳ ಹಿಂದೆ ವಿಮಾನಗಳ ಮೂಲಕ ನೆಲದ ಮೇಲಿನ ಭೂಪ್ರದೇಶ–ದೃಶ್ಯಗಳನ್ನು ಕೇಂದ್ರೀಕರಿಸಿ ದಾಳಿಗಳನ್ನು ನಡೆಸಲಾಗುತ್ತಿತ್ತು. ಆದರೆ, ಇಂದು ಅತ್ಯಾಧುನಿಕ ಯುದ್ಧವಿಮಾನಗಳು ಬಂದಿವೆ. ಅತ್ಯಾಧುನಿಕವಾದ ರೇಡಾರ್‌ಗಳು, ಡ್ರೋನ್‌ಗಳಂತಹ ಆಧುನಿಕ ಅಸ್ತ್ರಗಳಿವೆ. ಇವುಗಳು ಎಲ್ಲ ರೀತಿಯ ಹವಾಮಾನಗಳಿಗೂ ಹೊಂದಿಕೊಂಡು ಕಾರ್ಯನಿರ್ವಹಿಸಬಲ್ಲವು
- ಆಧುನಿಕ ಯುದ್ಧರಂಗದಲ್ಲಿ ನಗರ ಪ್ರದೇಶಗಳೂ ಸೇರಿದಂತೆ ಯಾವ ಪ್ರದೇಶವೂ ವಾಯು ದಾಳಿಯ ಅಪಾಯದಿಂದ ಮುಕ್ತವಾಗಿಲ್ಲ. ಯುದ್ಧವಿಮಾನಗಳು ಆಧುನಿಕ ಸಂವಹನ ಸಾಧನಗಳನ್ನೂ ಹೊಂದಿವೆ. ಊಹೆಯನ್ನೂ ಮಾಡಲಾಗದ ರೀತಿಯಲ್ಲಿ, ಯಾವುದೇ ದಿಕ್ಕಿನಿಂದ ಶತ್ರು ಮೇಲೆರಗಬಹುದು. ಇಂಥ ಸ್ಥಿತಿಯಲ್ಲಿ ದೇಶದ ರಕ್ಷಣೆಗೆ ಐಎಡಿಡಬ್ಲ್ಯುಎಸ್‌ನಂಥ ರಕ್ಷಣಾ ವ್ಯವಸ್ಥೆ ಅತ್ಯಗತ್ಯ

ಆಧಾರ: ಪಿಟಿಐ, ಡಿಆರ್‌ಡಿಒ ವೆಬ್‌ಸೈಟ್, ಬಿಜಿನೆಲ್–ಇಂಡಿಯಾ.ಇನ್, ನ್ಯೂಸ್‌ಡ್ರೋನ್ಸ್.ಇನ್

ರಾಷ್ಟ್ರೀಯ

ವಿಪತ್ತು: ಜಲವಿದ್ಯುತ್ ಯೋಜನೆಗಳಿಗೆ ಅಪಾಯ

• ಜುಲ್ಫೀಕರ್ ಮಜೀದ್



ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿನ ಮಹತ್ವಾಕಾಂಕ್ಷೆಯ ಜಲವಿದ್ಯುತ್ ಯೋಜನೆಗಳ ವಿಸ್ತರಣೆಗೆ ಪ್ರಕೃತಿ ವಿಕೋಪಗಳು ಬೆದರಿಕೆಯಾಗಿ ಪರಿಣಮಿಸಿವೆ. ನೀರ್ಗಲ್ಲು ಸರೋವರಗಳಲ್ಲಿ ಏಕಾಏಕಿ ಪ್ರವಾಹ ಉಂಟಾಗುವ (ಗ್ಲೇಸಿಯರ್ ಲೇಕ್ ಔಟ್‌ಬರ್ಸ್ಟ್ ಫ್ಲಡ್ಸ್–ಜಿಎಲ್‌ಒಎಫ್) ವಿದ್ಯಮಾನಗಳು ಮೂಲಸೌಕರ್ಯ ಮತ್ತು ಸಾವಿರಾರು ಕೋಟಿ ಮೊತ್ತದ ಹೂಡಿಕೆಗಳನ್ನು ಅಪಾಯಕ್ಕೆ ಸಿಲುಕಿಸಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರವು ಕಿಶನ್‌ಗಂಗಾ (330 ಮೆ.ವಾ.), ನಿಮೂ ಬಾಜ್ಗೊ (140 ಮೆ.ವಾ.), ಸಲಾಲ್ (690 ಮೆ.ವಾ.) ಮತ್ತು ಉರಿ (1,200 ಮೆ.ವಾ.) ಸೇರಿದಂತೆ ಹಲವಾರು ಪ್ರಮುಖ ಜಲ ವಿದ್ಯುತ್ ಯೋಜನೆಗಳನ್ನು ಹೊಂದಿದೆ. ಚಿನಾಬ್ ನದಿಯಲ್ಲಿ ಪಾಕಲ್ ದೂಲ್ (1,000 ಮೆ.ವಾ.), ಕಿರೂ (624 ಮೆ.ವಾ.), ಕ್ವಾರ್ (540 ಮೆ.ವಾ.) ಮತ್ತು ರೇಟ್ಲೆ (850 ಮೆ.ವಾ.) ಜಲವಿದ್ಯುತ್ ಯೋಜನೆಗಳು ಅಭಿವೃದ್ಧಿ ಹಂತದಲ್ಲಿವೆ.

ಕಿಶ್ತವಾಡಕ್ಕೆ ಸಂಬಂಧಿಸಿದ 2024–25ರ ಸಾಲಿನ ಜಿಎಲ್‌ಒಎಫ್ ನಿರ್ವಹಣೆ ವರದಿಯು ಚಿನಾಬ್ ಕಣಿವೆಯಲ್ಲಿನ ಯೋಜನೆಗಳಿಗೆ ಎಚ್ಚರಿಕೆಯ ಗಂಟೆಯಾಗಿ ಪರಿಣಮಿಸಿದೆ. ಚಿನಾಬ್ ವ್ಯಾಲಿ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್‌ನ ನಾಲ್ಕು ಯೋಜನೆಗಳಾದ ಪಾಕಲ್ ದೂಲ್, ಕಿರೂ, ಕ್ವಾರ್ ಮತ್ತು ಡಾಂಗ್‌ಡುರು–ಅಪಾಯಕ್ಕೆ ಒಳಗಾಗುವ ಹೆಚ್ಚಿನ ಸಾಧ್ಯತೆಯಿದೆ ಎಂದು ಗುರುತಿಸಲಾಗಿದೆ.

'ನೀರಿನ ಮಟ್ಟ ಏರಿದರೆ ಅಥವಾ ಅಣೆಕಟ್ಟೆಯಲ್ಲಿ ಬಿರುಕು ಉಂಟಾಗುವ ಸಾಧ್ಯತೆ ಹೆಚ್ಚಾದರೆ ಜಲವಿದ್ಯುತ್ ಯೋಜನೆಯ ಮೂಲಸೌಕರ್ಯಕ್ಕೆ ಅಪಾಯವಾಗುವುದರ ಜೊತೆಗೆ ಅವುಗಳ ಕಾರ್ಯನಿರ್ವಹಣೆಗೆ ಅಡ್ಡಿಯಾಗಬಹುದು' ಎಂದು ವರದಿ ಹೇಳುತ್ತದೆ.

ಪ್ಯಾಡರ್, ಮಚೈಲ್, ದಚ್ಚನ್, ಮರ್ವಾ ಮತ್ತು ವಾರ್ವಾನ್ ಪ್ರದೇಶಗಳು ಹೆಚ್ಚಿನ ಅಪಾಯದಲ್ಲಿವೆ ಎಂದು ವರದಿ ತಿಳಿಸಿದೆ. ಈ ಪ್ರದೇಶಗಳ ಸನಿಹದಲ್ಲಿರುವ ನೀರ್ಗಲ್ಲು ಸರೋವರಗಳು ಜನವಾಸ ಪ್ರದೇಶ ಮತ್ತು ಜಲವಿದ್ಯುತ್ ಯೋಜನೆಗಳು ಇರುವ ತಾಣಗಳಿಗಿಂತ ಎತ್ತರದಲ್ಲಿರುವುದೇ ಇದಕ್ಕೆ ಕಾರಣ.

ಪಾಕಲ್ ದೂಲ್, ಕಿರೂ, ಕ್ವಾರ್ ಯೋಜನೆಗಳಿಗೆ ಬಿಡುಗಡೆ ಮಾಡಿರುವ ಮೊತ್ತ ಈಗಾಗಲೇ ₹22,535 ಕೋಟಿ ದಾಟಿದೆ. ಹಠಾತ್ ಪ್ರವಾಹದಿಂದ ಪ್ರಾಣಹಾನಿಯ ಜತೆಗೆ ಭಾರಿ ಆರ್ಥಿಕ ನಷ್ಟಕ್ಕೂ ಕಾರಣವಾಗಬಹುದು.

ಹಲವು ವಿಪತ್ತುಗಳಿಗೆ ಸಾಕ್ಷಿ

ಈಚೆಗಿನ ವರ್ಷಗಳಲ್ಲಿ ಹಿಮಾಲಯವು 'ಜಿಎಲ್‌ಒಎಫ್'ಗೆ ಸಂಬಂಧಿತ ಹಲವು ವಿಪತ್ತುಗಳಿಗೆ ಸಾಕ್ಷಿಯಾಗಿದೆ. 2021ರ ಫೆಬ್ರುವರಿಯಲ್ಲಿ ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ ಹಿಮನದಿ ಸ್ಫೋಟದಿಂದ ಉಂಟಾದ ಹಠಾತ್ ಪ್ರವಾಹದಿಂದ 200ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದರು. ಎರಡು ಜಲವಿದ್ಯುತ್ ಯೋಜನೆಗಳು ನಾಶವಾಗಿದ್ದವು.

ಈ ದುರಂತವು ಪರಿಸರ ಸೂಕ್ಷ್ಮ ವಲಯಗಳಲ್ಲಿ ಜಲವಿದ್ಯುತ್ ಯೋಜನೆಗಳನ್ನು ಆರಂಭಿಸುವುದಕ್ಕೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿತ್ತು.

ಪಾನ್ಸರೆ ಹತ್ಯೆ: 'ಮಹಾ' ಸರ್ಕಾರ ಪ್ರತಿಕ್ರಿಯೆ ಕೇಳಿದ 'ಸುಪ್ರೀಂ'

ನವದೆಹಲಿ (ಪಿಟಿಐ): ವಿಚಾರವಾದಿ ಗೋವಿಂದ ಪಾನ್ಸರೆ ಹತ್ಯೆ ಪ್ರಕರಣದ ತನಿಖೆ ಕುರಿತು ಮೇಲ್ವಿಚಾರಣೆ ಅಗತ್ಯ ಇಲ್ಲ ಎಂಬ ಬಾಂಬೆ ಹೈಕೋರ್ಟ್ ಆದೇಶದ ವಿರುದ್ಧ ಸಲ್ಲಿಕೆಯಾಗಿರುವ ಅರ್ಜಿಗೆ ಸಂಬಂಧಿಸಿ ಪ್ರತಿಕ್ರಿಯೆ ನೀಡುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ಬಾಂಬೆ ಹೈಕೋರ್ಟ್ ಆದೇಶ ಪ್ರಶ್ನಿಸಿ, ಪಾನ್ಸರೆ ಅವರ ಪುತ್ರಿ ಹಾಗೂ ಸೊಸೆ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಎಂ.ಎಂ.ಸುಂದ್ರೇಶ್ ಹಾಗೂ ಎನ್.ಕೋಟೀಶ್ವರ ಸಿಂಗ್ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿ, ಮಹಾರಾಷ್ಟ್ರ ಸರ್ಕಾರಕ್ಕೆ ನೋಟಿಸ್ ನೀಡಿ ಸೆಪ್ಟೆಂಬರ್ 1ರಂದು ಆದೇಶಿಸಿದೆ.

ಸಿಪಿಐ ನಾಯಕ ಹಾಗೂ ಲೇಖಕರಾಗಿದ್ದ ಪಾನ್ಸರೆ ಅವರು, ಪತ್ನಿ ಉಮಾ ಅವರೊಂದಿಗೆ ಕೊಲ್ಹಾಪುರದಲ್ಲಿ 2015ರ ಫೆಬ್ರುವರಿ 16ರಂದು ಬೆಳಿಗ್ಗೆ ವಾಯುವಿಹಾರಕ್ಕೆ ತೆರಳಿದ್ದಾಗ, ದಂಪತಿ ಮೇಲೆ ಗುಂಡಿನ ದಾಳಿ ನಡೆಸಲಾಗಿತ್ತು. ಪಾನ್ಸರೆ ಅವರು ಫೆಬ್ರುವರಿ 20ರಂದು ಮೃತಪಟ್ಟರೆ, ಪತ್ನಿ ಪ್ರಾಣಾಪಾಯದಿಂದ ಪಾರಾಗಿದ್ದರು.

2016ರಿಂದ ಹೈಕೋರ್ಟ್, ತನಿಖೆಯ ಮೇಲ್ವಿಚಾರಣೆ ನಡೆಸುತ್ತಿತ್ತು. ಆರಂಭದಲ್ಲಿ ಎಸ್‌ಐಟಿ ನಡೆಸುತ್ತಿದ್ದ ತನಿಖೆಯನ್ನು 2022ರ ಆಗಸ್ಟ್ 3ರಂದು ಮಹಾರಾಷ್ಟ್ರದ ಭಯೋತ್ಪಾದನೆ ನಿಗ್ರಹ ದಳಕ್ಕೆ (ಎಟಿಎಸ್) ವಹಿಸಲಾಗಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಾಂಗ್ರೆಸ್ ಮುಖಂಡ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮಾತನಾಡುತ್ತಿರುವ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 25 ಸೆಕೆಂಡುಗಳ ಈ ತುಣುಕಿನಲ್ಲಿ ರಾಹುಲ್ ಗಾಂಧಿ ಅವರು 'ಸಂವಿಧಾನವನ್ನು ರಚಿಸಿದವರು ಯಾರು? ಗಾಂಧೀಜಿಯವರು ತಮ್ಮ ಜೀವನವನ್ನೇ ಮುಡುಪಾಗಿಟ್ಟು ಸಂವಿಧಾನ ರಚಿಸಿದರು' ಎಂದು ಹೇಳುತ್ತಿರುವುದು ಕೇಳಿಸುತ್ತದೆ. ಈ ಹೇಳಿಕೆಗಾಗಿ ಅವರನ್ನು ಹಲವರು ಟೀಕಿಸುತ್ತಲೂ ಇದ್ದಾರೆ. ಆದರೆ, ಇದು ಸುಳ್ಳು. ಹೇಳಿಕೆ ಪೂರ್ಣ ನಿಜವಲ್ಲ.



ವಿಡಿಯೊ ತುಣುಕನ್ನು ಹಲವು ಕೀ ಫ್ರೇಮ್‌ಗಳಾಗಿ ವಿಂಗಡಿಸಿ, ಕೆಲವನ್ನು ರಿವರ್ಸ್ ಇಮೇಜ್ ವಿಧಾನದಲ್ಲಿ ಹಾಕಿ ಹುಡುಕಿದಾಗ, ರಾಹುಲ್ ಗಾಂಧಿ ಅವರ ಅಧಿಕೃತ ಯುಟ್ಯೂಬ್ ಚಾನೆಲ್‌ನಲ್ಲಿ ಆಗಸ್ಟ್ 21ರಂದು ಪೋಸ್ಟ್ ಮಾಡಲಾದ ವಿಡಿಯೊ ಸಿಕ್ಕಿತು. 22.25 ನಿಮಿಷಗಳ ಈ ವಿಡಿಯೊವು ಬಿಹಾರದ ಮುಂಗೇರ್‌ನಲ್ಲಿ ನಡೆದ 'ಮತದಾರರ ಅಧಿಕಾರ ಯಾತ್ರೆ'ಯಲ್ಲಿ ಮಾಡಿದ ಭಾಷಣದ್ದಾಗಿದೆ. ವಿಡಿಯೊದಲ್ಲಿ ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್ ಅವರು ಕೂಡ ಇರುವುದು ಕಾಣಿಸುತ್ತದೆ. ಆ ವಿಡಿಯೊದ 19.59 ನಿಮಿಷದ ನಂತರದ ತುಣುಕು ಸಾಮಾಜಿಕ ಜಾಲಜಾಣದಲ್ಲಿ ಹರಿದಾಡುತ್ತಿದೆ.

ವಿಡಿಯೊದಲ್ಲಿ ರಾಹುಲ್ ಅವರು, 'ಸಂವಿಧಾನವನ್ನು ರಚಿಸಿದವರು ಯಾರು? ಅಂಬೇಡ್ಕರ್ ಅವರು ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟು, ಸಂವಿಧಾನವನ್ನು ರಚಿಸಿದರು. ಗಾಂಧೀಜಿಯವರು ತಮ್ಮ ಜೀವನವನ್ನೇ ನೀಡಿ ಸಂವಿಧಾನ ರಚಿಸಿದರು. ಮತ ಕಳವು ಪ್ರಕರಣವು ಸಂವಿಧಾನದ ಮೇಲಿನ ದಾಳಿ, ನಿಮ್ಮನ್ನು ಸುರಕ್ಷಿತವಾಗಿ ಇಟ್ಟಿರುವ ಈ ಸಂವಿಧಾನದ ಬಗ್ಗೆ ಪ್ರತಿಯೊಬ್ಬರೂ ತಿಳಿದಿರಬೇಕು. ಇದು ನಿಮ್ಮ ಧ್ವನಿ. ಅದನ್ನು ಮೋದಿ ಮತ್ತು ಅದಾನಿ ಹತ್ತಿಕ್ಕಲು ಯತ್ನಿಸುತ್ತಿದ್ದಾರೆ...' ಎಂದು ಹೇಳುವುದು ಕೇಳಿಸುತ್ತದೆ. ಆದರೆ, ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗಿರುವ ವಿಡಿಯೊದಲ್ಲಿ ಅಂಬೇಡ್ಕರ್ ಅವರ ಹೆಸರು ಕೇಳುವುದಿಲ್ಲ. ಕೇವಲ ಗಾಂಧೀಜಿಯವರ ಹೆಸರು ಕೇಳುವಂತೆ ಎಡಿಟ್ ಮಾಡಲಾಗಿದೆ. ಮೂಲ ವಿಡಿಯೊದಲ್ಲಿ ರಾಹುಲ್ ಗಾಂಧಿ ಅವರು ಮೊದಲು ಅಂಬೇಡ್ಕರ್ ಅವರ ಹೆಸರು ಹೇಳಿ, ನಂತರ ಗಾಂಧೀಜಿಯವರ ಹೆಸರು ಪ್ರಸ್ತಾಪಿಸಿದ್ದಾರೆ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಹಾಜರಾತಿಯ ಸುಖ



ನುಡಿ ಬೆಳಗು

ವಾಸುದೇವ ನಾಡಿಗ್

ಎಲ್ಲರೂ ಸುಖದ ಶಿಕಾರಿಯಲ್ಲಿ ಮುಳುಗಿರುವಾಗ ಕಷ್ಟ ಬೇಕು ಎಂದು ಹೇಳುವವಳು ಕುಂತಿ. ಸುಖ ಎಂದರೆ ಏನೆಂದು ಗೊತ್ತಿರದ ಕುಂತಿಯನ್ನು ಕಷ್ಟ ಬೆನ್ನತ್ತಿ ಬೇಟೆ ಆಡಿತ್ತು. ವಿವಾಹ ಪೂರ್ವದ ಮಂತ್ರದ ಫಲ ಕಂದ ಕರ್ಣನನ್ನು ಗಂಗೆಯಲ್ಲಿ ತೇಲಿ ಬಿಟ್ಟರೂ ಮನದಾಳದಲ್ಲಿ ಕಾಡುವ ಕಲಕುವ ಜೀವ ಕರ್ಣ. ಮಕ್ಕಳು ಬೆಂಕಿಯಿಂದ ಬೀದಿಗೆ ಬಿದ್ದರೂ ಕುಂತಿ ಕನಲಲಿಲ್ಲ. ಧೈರ್ಯ ತುಂಬಿದಳು. ಸೊಸೆ ದ್ರೌಪದಿ ಮೇಲಾದ ಅನಾಚಾರದ ಪರಿಣಾಮವನ್ನು ದೈವದ ತಲೆಮೇಲೆ ಹಾಕಿ ಕೂತಳು. ಮತ್ತೆ ಮತ್ತೆ ಆವರಿಸುವ ಕಷ್ಟಗಳು ದೈವ ಮತ್ತು ಸಜ್ಜನಿಕೆಯನ್ನು ಗಟ್ಟಿಗೊಳಿಸುತ್ತವೆ ಎಂಬ ನಂಬಿಕೆ.

ಇದಕ್ಕೂ ಆಚೆಗೆ ಕಷ್ಟಗಳಿರದ ಬದುಕು ತನ್ನ ಅರ್ಥ ಮತ್ತು ಮೌಲ್ಯವನ್ನು ಪಡೆಯಲಾರದು ಕೂಡ. ಕಷ್ಟಗಳು ಬಾಳಿಗೆ ಅನೇಕ ರೂಪಗಳನ್ನು ಹಚ್ಚಬಲ್ಲದು. ಸುಖಕ್ಕೆ ಒಂದೇ ಮಗ್ಗುಲು. ಕಷ್ಟಕ್ಕೆ ಅಸಂಖ್ಯಾತ ಹೊರಳು. ಆದರೆ ಎಲ್ಲವನ್ನೂ ಕಾಯುವ ಭರವಸೆ ಇದೆಯಲ್ಲ ಅದು ಕೃಷ್ಣನ ಹಾಜರಾತಿ ತರಹ. ಆಗಾಗ ಬಂದು ಸಾಂತ್ವನ ಹೇಳಿ ಹೋಗುತ್ತಿರುತ್ತದೆ. ಕೃಷ್ಣನೇ ಕುಂತಿಯ ಭರವಸೆ.

ಎಲ್ಲರ ಬಾಳಿನಲ್ಲಿ ಇಂಥದ್ದೊಂದು ವ್ಯಕ್ತಿ ರೂಪದ ಭರವಸೆಯೊಂದು ಹಾಜರಾತಿ ಹಾಕುತ್ತಲೇ ಇರುತ್ತದೆ. ಪರಿಹಾರವೂ ತಕ್ಕ ಮಟ್ಟಿಗೆ ಸಿಗಲೂ ಬಲ್ಲದು.

ವಾಸ್ತವದ ಬದುಕೂ ಹಾಗೇ ಅಲ್ಲವೆ? 'ತೆರೆದಿದೆ ಮನೆ ಓ ಬಾ ಅತಿಥಿ' ಎಂಬ ಆಶೋತ್ತರದ ಬೆಳಕಿಗೆ ಹಾತೊರೆದು ಹಾಡುತ್ತಲೇ ಇರುತ್ತೇವೆ. ಎಷ್ಟೋ ಸಂದರ್ಭಗಳಲ್ಲಿ ಕೆಲವು ಸಂಬಂಧಗಳು ಯಾವುದೇ ಭೌತಿಕ ರೂಪದ ಸಹಾಯವನ್ನು ಮಾಡದೇ ಇದ್ದರೂ ಅವರ ಉಪಸ್ಥಿತಿಯೇ ಬಲವನ್ನು ತಂದು ಕೊಡುತ್ತದೆ. ಆದರೆ, ಇಂತಹ ಸಂಬಂಧಗಳು ದುರ್ಲಭವಾಗಬಾರದು ಅಷ್ಟೇ. ಗಂಗೆಯಲ್ಲಿ ತೇಲಿಹೋದ ಮಗು ಬದುಕುವ ಖಚಿತತೆ ಏನಿತ್ತು? ಆದರೆ, ಅದಕ್ಕೂ ಅಪ್ಪ ಅಮ್ಮ ಆಶ್ರಯ ದೊರೆತು ಅಂಗಾಧಿಪತಿ ಕರ್ಣ ಆದ ಕತೆಯೂ ಇಂತಹ ಭರವಸೆಯ ಪ್ರಯಾಣವೇ ಅಲ್ಲವೆ?

ಮೊಸಳೆಯ ಕ್ರೂರ ಬಾಯಿಗೆ ಈಡಾದ ಆನೆಯೊಂದು ಕಾಣದ ಕೈಯ ಅಭಯದ ಮೂಲಕ ಮತ್ತೆ ಬದುಕಿದ್ದು ಹೀಗೆ. ಕಷ್ಟ ಬರಲಿ ಎಂಬ ಮಾತು ನೆನಪಾದಾಗಲೆಲ್ಲ ಕಾಪಾಡುವ ಇಂತಹ ಶಕ್ತಿಗಳಿಗೆ ಹೊಸ ಅರ್ಥ ಬರುತ್ತದೆ. ಬಾಳು ಬೇರೆ ಬೇರೆ ಸಾಹಸದ ಕತೆಗಳಿಂದ ಮೈದುಂಬಿಕೊಳ್ಳುತ್ತದೆ. ಮಹಾಭಾರತದಲ್ಲಿ ಕುಂತಿ ಮತ್ತು ದ್ರೌಪದಿಯ ಎದುರು ಆಗಾಗ ಕೃಷ್ಣ ಬಂದು ನಿಂತಾಗಲೆಲ್ಲ ಅವರ ಮೂಲಕ ಹೊರಡುವ ಮಾತು, 'ನಿನ್ನ ಕಂಡಾಗಲೆಲ್ಲ ನಮ್ಮ ಕಷ್ಟಗಳು ಮರೆಯಾಗುತ್ತವೆ ಮತ್ತು ಕಷ್ಟಗಳು ಬಂದಾಗಲೆಲ್ಲ ನಿನ್ನ ನೆನಪಾಗುತ್ತದೆ'. ಇಂತಹ ಹಾಜರಾತಿಗಳು ಅದೆಷ್ಟು ಬಲ ತಂದುಕೊಡುತ್ತವೆ ನೋಡಿ. ❖

ಗುಂಡಣ್ಣ



ಪದಬಂಧ 6153


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಬಂದೂಕು ಪಿಸ್ತೂಲುಗಳಲ್ಲಿರುವ ಮದ್ದು ತುಂಬಿದ ಕೊಳವೆ (4)
3. ಕರ ಮೊದಲಿಟ್ಟಾಗ ಕಾಣಿಸಿದ ಉಗುರು (4)
5. ಮರದ ಹತ್ತಿರವಿದ್ದಾಗ ನೆನಪಿಗೆ ಬಾರದಿರುವುದು (3)
8. ಲಿಖಿತ ಮೂಲಕ ಮಾಡಿಕೊಳ್ಳುವ ಅರಿಕೆ (3)
10. ಕುದುರೆಯನ್ನೇರುವ ಬಳೆ (3)
11. ಅನುಕಂಪವುಳ್ಳ ಸಾವು! (5)
12. ಅಪರೂಪವಾದುದು ಇದು (3)
13. ಗಿರೀಶ್‌ಕಾರ್ನಾಡ್‌ರವರು ರಚಿಸಿದ ಮೊದಲ ನಾಟಕ (3)
15. ಕಡೆಯಲ್ಲಿ ಹಿಡಿದಿರುವ ಚಿಪ್ಪು! (3)
17. ಲಲಿತ ಕಲೆಗಳನ್ನು ಬಲ್ಲವನು (4)
18. ದಮಯಂತಿ ಪತಿಯ ರುಚಿಕಟ್ಟಾದ ಅಡುಗೆ! (4)

ಮೇಲಿಂದ ಕೆಳಕ್ಕೆ

1. ಕವಿಯು ಕಾವ್ಯ ರಚಿಸುವಾಗ ಇಟ್ಟುಕೊಳ್ಳುವ ಹೆಸರು (4)
2. ಸುಗಮವಾಗಿ ಕಿತ್ತಿರುವ ಹೂವು (2)
3. ಕವಲಾಗಿರುವ ಮರದ ಕೋಲು (2)
4. ಇದು ಕನ್ನಡಿಗನ ಹೆಲ್ಮೆಟ್! (4)
6. ಸಂಘ ಸಂಸ್ಥೆಗಳಿಗೆ ಅರವತ್ತು ವರ್ಷವಾದಾಗ ಆಚರಿಸುವ ಉತ್ಸವ (7)
7. ಈ ಪರಿಯಾಗಿ ನಡೆದ ಮದುವೆ (4)
9. ನಡುವೆ ದಳವನ್ನಿಟ್ಟು ಸೀಳುವಿಕೆ! (4)
12. ಆಸ್ಥಾನಗಳಲ್ಲಿ ನಗಿಸಲೆಂದು ಇರುವವನು (4)
14. ಎಳ್ಳು ನೀರು ಬಿಡುವಿಕೆ (4)
15. ಕಲಾವಿದನು ತೆರೆದ ಬಾಗಿಲು (2)
16. ನಡತೆ ಚಿಕ್ಕದಾಗಿ ಉಲ್ಟಾ ಆಗಿದೆ (2)



6152ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಾರದರ್ಶಕ 3.ಗುಟುಕು 5.ರಸಕವಳ 7.ಸಫಲ 8.ನಿರಪರಾಧಿ 10.ಉಪೇಕ್ಷೆ 11.ಹೊಸಜೀವನ 14.ಮಜೂರಿ 15.ಹೆರಿಗೆಮನೆ

ಮೇಲಿಂದ ಕೆಳಕ್ಕೆ: 1.ಪಾಮರ 2.ದಶಕ 4.ಕುಟಿಲ 6.ವಕ್ತಾರ 7.ಸಮಾಧಿ 8.ನಿರೀಕ್ಷೆ 9.ರಾಯಸ 10.ಉತ್ತಮ 12.ಜೇರಿಗೆ 13.ನಮೂನೆ

ಸುಡೊಕು 6537

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	8			7			4	6
		4	6		8			9
7				1		8		
					4	6	7	
6		1	7		2			4
								1
				6		5		
	3	6	2		5			7
8		5		4			6	

6536 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

03 ಸೆಪ್ಟೆಂಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಏಕಾದಶಿ ಗಂ. 28-22 **ನಕ್ಷತ್ರ:** ಪೂರ್ವಾಷಾಢ ಗಂ. 23-09 **ಯೋಗ:** ಆಯುಷ್ಮಾನ್ ಗಂ. 16-17 ಸಿಂಹ ಮಾಸದ 17 ನೇ ದಿನ. **ಮಳೆ ನಕ್ಷತ್ರ :** ಹುಬ್ಬಾ 1 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 01-30 , **ಸೂರ್ಯೋದಯ :** 06-23 **ಸೂರ್ಯಾಸ್ತ :** 06-37 **ಮುಸ್ಲಿಂ ದಿನಾಂಕ :** 10 ರಬಿಉಲ್ಲಾವಲ್ , **ದಿನ ವಿಶೇಷ :** ಕೈಲ್ ಮುಹೂರ್ತ (ಕೊಡಗು), ಪಾರ್ಶ್ವ ಪರಿವರ್ತನಿ ಏಕಾದಶಿ, **ಅದೃಷ್ಟ ಸಂಖ್ಯೆ :** 2, 9

ಮೇಷ: ಉದ್ಯೋಗ ಕ್ಷೇತ್ರದಲ್ಲಿ ಪರಿಚಯವಾಗಿ ಕುಟುಂಬ ಸದಸ್ಯರಂತೆ ಆಗಿ ಹೋದ ವ್ಯಕ್ತಿಗಳೊಂದಿಗೆ ಕಳೆದ ಸಮಯ ಸಂತೋಷವನ್ನುಂಟು ಮಾಡುವುದು. ರುದ್ರಾರಾಧನೆ ಶುಭ ಫಲ ನೀಡುವುದು.

ವೃಷಭ: ಕಾರ್ಯಕ್ಷೇತ್ರದಲ್ಲಿ ಶಕ್ತಿಯುತ ಅಧಿಕಾರ ಸ್ಥಾಪಿಸಲು ಅನುಕೂಲಕರ ಸಮಯ ನಿರ್ಮಾಣವಾಗಲಿದೆ. ಕೆಲಸದಲ್ಲಿನ ಅಡೆತಡೆಗಳು ನಿವಾರಣೆಯಾಗಿ ಸಮಯ ಉಳಿತಾಯವಾಗಲಿದೆ.

ಮಿಥುನ: ಪತ್ರಿಕಾ ವರದಿಗಾರರಿಂದ ತಪ್ಪುಗಳು ಸಂಭವಿಸುವ ಲಕ್ಷಣಗಳಿವೆ. ವಿಷಯವನ್ನು ಪರಾಮರ್ಶಿಸಿ ಸ್ಪಷ್ಟಪಡಿಸಿಕೊಂಡು ಪ್ರಕಟಿಸುವಲ್ಲಿ ಗಮನವಹಿಸಿ. ಮಾನಸಿಕವಾಗಿ ಉದ್ವೇಗ ಕಂಡುಬಂದೀತು.

ಕರ್ಕಾಟಕ: ಇನ್ನೊಬ್ಬರಿಗೆ ಮೋಸ ಮಾಡುವ ಮನಸ್ಥಿತಿಯನ್ನು ದೂರ ಮಾಡಿಕೊಳ್ಳಿ. ತಂದೆ ತಾಯಿ ಜತೆಗೆ ಕಿರು ತಿರುಗಾಟವನ್ನು ಕೈಗೊಳ್ಳ ಬೇಕಾದ ಅನಿವಾರ್ಯ ಎದುರಾಗಬಹುದು. ಧನಲಾಭದಿಂದ ಹರ್ಷವಾಗುವುದು.

ಸಿಂಹ: ಪಿತ್ತದೋಷದಿಂದ ನಾನಾರೀತಿಯ ಕಾಯಿಲೆಗೆ ಒಳಗಾದವರು ಆಯುರ್ವೇದದ ಮೊರೆಹೋಗಿ. ರಾಜಕೀಯ ವರ್ಗದವರು ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ. ಈ ದಿನ ಲಾಭದಾಯಕ.

ಕನ್ಯಾ: ಎಲ್ಲಾ ವಿಷಯಗಳಲ್ಲಿಯೂ ಪ್ರಗತಿ ಕಾಣುವಿರಿ. ಯಾವುದೇ ಕೆಲಸಗಳಿಗೂ ಅಳುಕುವ ಪ್ರಮೇಯ ಇರುವುದಿಲ್ಲ. ಹಿರಿಯರ ಆಶೀರ್ವಾದ ಪಡೆಯುವಿರಿ. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಮುಂದುವರಿಯಲಿದೆ.

ತುಲಾ: ಕಾರ್ಯದೊತ್ತಡ ಜತೆಯಲ್ಲಿಯೂ ಮನೆಯ ವಿಚಾರಗಳತ್ತ ಗಮನಹರಿಸಿ. ಕಚೇರಿಯಲ್ಲಿ ಬೇಸರ ತರುವಂಥ ಘಟನೆಗಳು ನಡೆದರೂ ಧೃತಿಗೆಡದೆ ಸಮಾಧಾನದಿಂದಿರಿ.

ವೃಶ್ಚಿಕ: ಪ್ರಯತ್ನಿಸಿದ ಕಾರ್ಯಗಳು ಆಪ್ತರ ಸಕಾಲಿಕ ನೆರವಿನಿಂದ ಕೈಗೂಡುವುದು. ನೂತನ ವಸ್ತುಗಳ ಖರೀದಿಗೆ ಸಮಯವಲ್ಲ. ಮೂಕಾಂಬಿಕೆಯನ್ನು ಧ್ಯಾನಿಸಿ ಅಭೀಷ್ಟ ನೆರವೇರುವುದು.


ಧನು: ಬುದ್ಧಿ ಬಲದಿಂದ ವಿವಿಧ ಕಾರ್ಯಗಳು ಫಲಿತಗೊಂಡು, ಅನಿರೀಕ್ಷಿತ ವೆಂಬಂತೆ ಉತ್ತಮ ಅಭಿವೃದ್ಧಿ ನಿಮ್ಮದಾಗಲಿದೆ. ರೈತರಿಗೆ ವಿಪರೀತ ಕೆಲಸಗಳಿಂದ ದೇಹಾಲಸ್ಯ ತೋರಿ ವಿಶ್ರಾಂತಿ ಬಯಸುವಿರಿ.

ಮಕರ: ಕ್ರೀಡಾಪಟುಗಳು ಛಲ ಬಿಡದೆ ಪರಿಶ್ರಮ ವಹಿಸಿದ್ದಕ್ಕಾಗಿ ಉತ್ತಮ ಅವಕಾಶಗಳೊಂದಿಗೆ ಉತ್ತಮ ಮಾರ್ಗದರ್ಶಕರು ದೊರೆತು ಜಯದ ಪಥದಲ್ಲಿ ನಡೆಯುವಿರಿ. ನ್ಯಾಯಾಲಯದ ವಿಚಾರಣೆಗಳಲ್ಲಿ ಜಯ.

ಕುಂಭ: ಸ್ನೇಹಿತನ ವಿಷಯದಲ್ಲಿ ಆಸಕ್ತಿಯನ್ನು ವಹಿಸುವುದು ಸರಿಯಲ್ಲ. ಜವಾಬ್ದಾರಿಯಲ್ಲಿನ ಸ್ಪಷ್ಟ ವಿಷಯವೊಂದು ಮನವರಿಕೆಯಾಗುವುದು. ಆದಾಯ ಸ್ಥಿರವಾಗಿ ಇರುವುದು. ಹಣಕಾಸಿನ ಕೊರತೆ ಇರುವುದಿಲ್ಲ.

ಮೀನ: ಯಾರ ಪರ ವಹಿಸದಿದ್ದರೂ ವಿಚಾರವನ್ನು ತಿಳಿಯದೆ ಮುಂದುವರಿಯಬೇಡಿ. ಜನತಾ ನಿರ್ಧಾರವನ್ನು ಅರಿಯದೆ ರಾಜಕೀಯ ನಾಯಕರು ಇಟ್ಟ ತಪ್ಪು ಹೆಜ್ಜೆಯು ನಿಂದನೆಗೊಳಗಾಗುವ ಸಾಧ್ಯತೆಗಳಿವೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,625
ಇಂದಿನ ಅಂತ್ಯ: 24,579
ದಿನದ ಕನಿಷ್ಠ: 24,522
45

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು 100 ಕ್ಕೆ ₹560, 12 ಕ್ಕೆ ₹75
ಮೈಸೂರು: 100 ಕ್ಕೆ ₹565

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹411-660
ದ್ವಿತಳಿ (ಬಿ.ವಿ) ₹490-809

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹188
ಆರ್‌ಎಸ್‌ಎಸ್-5 ₹183
ಗುಡ್ ಲಾಟ್ ₹168

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1370 (1360)
ಸೋಯಾ (ರಿಫೈನ್ಡ್) ₹1290 (1275)
ಸೂರ್ಯಕಾಂತಿ (ರಿಫೈನ್ಡ್) ₹1420 (1410)
ಪಾಮೋಲಿನ್ ₹1275 (1270)

ಜಿಎಸ್‌ಟಿ ಸರಳ: ಲಾಭ ಹೆಚ್ಚಳ

ರಾಜ್ಯಗಳಿಗೆ ₹14 ಲಕ್ಷ ಕೋಟಿ ವರಮಾನ ನಿರೀಕ್ಷೆ: ಎಸ್‌ಬಿಐ ರಿಸರ್ಚ್ ವರದಿ

ನವದೆಹಲಿ/ ಬೆಂಗಳೂರು (ಪಿಟಿಐ/ ರಾಯಿಟರ್ಸ್): ಪ್ರಸ್ತಾವಿತ ಜಿಎಸ್‌ಟಿ ಸರಳೀಕರಣದಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯಗಳಿಗೆ ಅಂದಾಜು ₹14 ಲಕ್ಷ ಕೋಟಿಗೂ ಹೆಚ್ಚು ವರಮಾನ ದೊರೆ ಯುವ ನಿರೀಕ್ಷೆ ಇದೆ ಎಂದು ಎಸ್‌ಬಿಐ ಸಂಶೋಧನಾ ವರದಿ ಮಂಗಳವಾರ ತಿಳಿಸಿದೆ.

2018 ಮತ್ತು 2019ರಲ್ಲಿ ನಡೆದ ಜಿಎಸ್‌ಟಿ ಸರಳೀಕರಣದಲ್ಲಿ ಕಂಡು ಬಂದಂತೆ, ಮಾಸಿಕ ಸಂಗ್ರಹದಲ್ಲಿ ಅಲ್ಪಾವಧಿವರೆಗೆ ಶೇ 3ರಿಂದ ಶೇ 4ರಷ್ಟು ಕಡಿಮೆಯಾಗಬಹುದು. ಇದು ಮಾಸಿಕವಾಗಿ ₹5 ಸಾವಿರ ಕೋಟಿ ಯಷ್ಟಾಗಿರಲಿದೆ. ಆದರೆ, ವರಮಾನವು ಶೇ 5ರಿಂದ ಶೇ 6ರಷ್ಟು ನಿರಂತರವಾಗಿ ಹೆಚ್ಚಳವಾ-ಗಲಿದೆ ಎಂದು ತಿಳಿಸಿದೆ.



ರಾಜ್ಯ ಸರ್ಕಾರಗಳು ₹10 ಲಕ್ಷ ಕೋಟಿ ಎಸ್‌ಜಿಎಸ್‌ಟಿ-ಯಾಗಿ ಪಡೆದರೆ, ಕೇಂದ್ರದ ತೆರಿಗೆ ಪಾಲಿನ ಮೂಲಕ ₹4.10 ಲಕ್ಷ ಕೋಟಿ ಪಡೆಯಲಿದೆ. ಒಟ್ಟು ₹14.10 ಲಕ್ಷ ಕೋಟಿ ಜಿಎಸ್‌ಟಿ ವರಮಾನ ಸಂಗ್ರಹ-ವಾಗಬಹುದು ಎಂದು ತಿಳಿಸಿದೆ.

ಕೇಂದ್ರ ಸರ್ಕಾರ ಪ್ರಸ್ತುತ ಇರುವ ನಾಲ್ಕು ಹಂತದ ಜಿಎಸ್‌ಟಿಯನ್ನು (ಶೇ 5, ಶೇ 12, ಶೇ 18 ಮತ್ತು ಶೇ 28) ಎರಡು ಹಂತಕ್ಕೆ (ಶೇ 5 ಮತ್ತು ಶೇ 18) ಇಳಿಸಲು ನಿರ್ಧರಿಸಿದೆ. ಕೆಲ ಉತ್ಪನ್ನಗಳ ಮೇಲೆ ಮಾತ್ರ ಶೇ 40ರಷ್ಟು ತೆರಿಗೆ ಹೇರಲು ಪ್ರಸ್ತಾಪಿಸಿದೆ.

ಇತ್ತೀಚೆಗೆ ವಿರೋಧ ಪಕ್ಷಗಳ ಆಡಳಿತವಿರುವ 8 ರಾಜ್ಯಗಳು ಜಿಎಸ್‌ಟಿ ಸರಳೀಕರಣದಿಂದ ₹2 ಲಕ್ಷ ಕೋಟಿವರೆಗೆ ವರಮಾನ ನಷ್ಟವಾಗಲಿದೆ ಎಂದು ಹೇಳಿದ್ದು, ನಷ್ಟವನ್ನು ತುಂಬಿ ಕೊಡಬೇಕು ಎಂದು ಒತ್ತಾಯಿಸಿವೆ.

ಆಗಸ್ಟ್ 19ರಂದು ಎಸ್‌ಬಿಐ ಸಂಶೋಧನಾ ವರದಿಯು ₹85 ಸಾವಿರ ಕೋಟಿ ವರಮಾನ ನಷ್ಟವಾಗಬಹುದು ಎಂದು ಹೇಳಿತ್ತು. ಆದರೆ ಮಂಗಳವಾರ ಬಿಡುಗಡೆ ಮಾಡಿರುವ ವರದಿಯಲ್ಲಿ, ಜಿಎಸ್‌ಟಿ ಸರಳೀಕರಣದ ನಂತರ ಜಿಎಸ್‌ಟಿ ವರಮಾನ ಸಂಗ್ರಹದಲ್ಲಿ ಯಾವುದೇ ಇಳಿಕೆ ಆಗುವುದಿಲ್ಲ. ರಾಜ್ಯಗಳು ಜಿಎಸ್‌ಟಿ ಸಂಗ್ರಹದಿಂದ ಹೆಚ್ಚಿನ ಲಾಭ ಗಳಿಸುತ್ತವೆ ಎಂದು ಹೇಳಿದೆ.

ಕೇಂದ್ರ ಮತ್ತು ರಾಜ್ಯಗಳ ನಡುವೆ ಜಿಎಸ್‌ಟಿ ಸಮವಾಗಿ ಹಂಚಿಕೆಯಾಗಲಿದ್ದು, ತಲಾ ಶೇ 50ರಷ್ಟು ಪಡೆಯಲಿವೆ. ಅಲ್ಲದೆ, ತೆರಿಗೆ ಹಂಚಿಕೆಯ ಅಡಿಯಲ್ಲಿ ಕೇಂದ್ರ ಸರ್ಕಾರವು ತನ್ನ ಪಾಲಿನ ಶೇ 41ರಷ್ಟನ್ನು ರಾಜ್ಯಗಳಿಗೆ ನೀಡಬೇಕಾಗುತ್ತದೆ. ಹೀಗಾಗಿ, ರಾಜ್ಯಗಳಿಗೆ ಒಟ್ಟು ಪಾಲು ಶೇ 70ರಷ್ಟಾಗಲಿದೆ ಎಂದು ತಿಳಿಸಿದೆ.

ಇಂದಿನಿಂದ ಸಭೆ


ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ 3 ಮತ್ತು 4ರಂದು ಜಿಎಸ್‌ಟಿ ಮಂಡಳಿ ಸಭೆ ನಡೆಯಲಿದೆ. ಸಭೆಯು ಜಿಎಸ್‌ಟಿ ದರದ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಿದೆ.

ಇ.ವಿ ಕಾರು ಆಮದಿಗೆ ತೆರಿಗೆ ಹೆಚ್ಚಿಸಿ

ಐಷಾರಾಮಿ ಬೆಲೆಯ ವಿದ್ಯುತ್‌ಚಾಲಿತ ವಾಹನಗಳ (ಇ.ವಿ) ಮೇಲಿನ ತೆರಿಗೆ ಹೆಚ್ಚಿಸುವಂತೆ ತೆರಿಗೆ ಸಮಿತಿ ಪ್ರಸ್ತಾಪಿಸಿದೆ.

ಇದು ಟೆಸ್ಲಾ, ಮರ್ಸಿಡಿಸ್ ಬೆಂಜ್, ಬಿಎಂಡಬ್ಲ್ಯು, ಬಿವೈಡಿಯಂತಹ ಕಾರು ತಯಾರಕ ಕಂಪನಿಗಳ ಮಾರಾಟದ ಮೇಲೆ ಪರಿಣಾಮ ಬೀರಬಹುದು ಎನ್ನಲಾಗಿದೆ.

ಪ್ರಸ್ತುತ ಎಲ್ಲ ವಿದ್ಯುತ್‌ಚಾಲಿತ ವಾಹನಗಳಿಗೆ ಶೇ 5ರಷ್ಟು ಜಿಎಸ್‌ಟಿ ವಿಧಿಸ-ಲಾಗುತ್ತಿದೆ. ಈ ಜಿಎಸ್‌ಟಿಯನ್ನು ₹20 ಲಕ್ಷದಿಂದ ₹40 ಲಕ್ಷದವರೆಗಿನ ಬೆಲೆಯ ವಾಹನಗಳಿಗೆ ಶೇ 18ಕ್ಕೆ ಹೆಚ್ಚಿಸುವಂತೆ ಸಮಿತಿ ಶಿಫಾರಸು ಮಾಡಿದೆ. ಅಲ್ಲದೆ, ₹40 ಲಕ್ಷಕ್ಕಿಂತ ಮೇಲಿರುವ ವಾಹನಗಳಿಗೆ ಶೇ 28ರಷ್ಟು ಜಿಎಸ್‌ಟಿ ವಿಧಿಸುವಂತೆಯೂ ಪ್ರಸ್ತಾಪಿಸಿದೆ.



ಆದರೆ, ಕೇಂದ್ರ ಸರ್ಕಾರವು, ಶೇ 28ರಷ್ಟು ತೆರಿಗೆ ದರವನ್ನು ತೆಗೆದು ಹಾಕಲು ನಿರ್ಧರಿಸಿದೆ. ಹೀಗಾಗಿ, ಜಿಎಸ್‌ಟಿ ಮಂಡಳಿ ಇ.ವಿಗಳ ಮೇಲಿನ ತೆರಿಗೆಯನ್ನು ಶೇ 18ಕ್ಕೆ ಹೆಚ್ಚಿಸುವ ಅಥವಾ ಕೆಲವು ಐಷಾರಾಮಿ ಸರಕುಗಳಿಗಾಗಿ ಹೊಸದಾಗಿ ಯೋಜಿಸಿರುವ ಶೇ 40ರ ವರ್ಗಕ್ಕೆ ಸೇರಿಸುವ ಆಯ್ಕೆ ಹೊಂದಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಜುಲೈ ತಿಂಗಳಿನಲ್ಲಿ ಟಾಟಾ ಮೋಟರ್ಸ್ ದೇಶದ ವಿದ್ಯುತ್‌ಚಾಲಿತ ಕಾರುಗಳ ಮಾರುಕಟ್ಟೆಯಲ್ಲಿ ಶೇ 40ರಷ್ಟು ಪಾಲನ್ನು ಹೊಂದಿತ್ತು. ಮಹೀಂದ್ರ ಆ್ಯಂಡ್ ಮಹೀಂದ್ರ (ಶೇ 18), ಬಿವೈಡಿ (ಶೇ 3) ಮರ್ಸಿಡಿಸ್ ಬೆಂಜ್ ಮತ್ತು ಬಿಎಂಡಬ್ಲ್ಯು ತಲಾ ಶೇ 2ರಷ್ಟು ಪಾಲು ಹೊಂದಿವೆ. ಟೆಸ್ಲಾ, ವಾಹನಗಳ ಬುಕಿಂಗ್ ಮಾತ್ರ ಪ್ರಾರಂಭಿಸಿದೆ, ವಿತರಣೆ ಇನ್ನು ಆರಂಭಿಸಿಲ್ಲ.

600 ಕಾರುಗಳಿಗೆ ಟೆಸ್ಲಾ ಕಾರ್ಯಾದೇಶ

ಜುಲೈನಿಂದ ಈ ವರೆಗೆ 600ಕ್ಕೂ ಹೆಚ್ಚು ವಿದ್ಯುತ್‌ಚಾಲಿತ ಕಾರುಗಳಿಗೆ ಟೆಸ್ಲಾ ಕಂಪನಿ ಕಾರ್ಯಾದೇಶ ಪಡೆದುಕೊಂಡಿದೆ ಎಂದು ಬ್ಲೂಮ್‌ಬರ್ಗ್ ನ್ಯೂಸ್ ವರದಿ ಉಲ್ಲೇಖಿಸಿ ರಾಯಿಟರ್ಸ್ ವರದಿ ಮಾಡಿದೆ.

ಆದರೆ, ಕಂಪನಿ ನಿರೀಕ್ಷಿಸಿದಕ್ಕಿಂತಲೂ ಇದು ಕಡಿಮೆ ಎಂದು ಹೇಳಿದೆ. ಜುಲೈ ಮಧ್ಯಭಾಗದಲ್ಲಿ ಉದ್ಯಮಿ ಇಲಾನ್ ಮಸ್ಕ್ ಒಡೆತನದ ಟೆಸ್ಲಾ ಕಂಪನಿ ಭಾರತದ ಮಾರುಕಟ್ಟೆಯನ್ನು ಪ್ರವೇಶಿಸಿತ್ತು.

ಪ್ರಸಕ್ತ ವರ್ಷದಲ್ಲಿ 350ರಿಂದ 500 ಕಾರುಗಳನ್ನು ಭಾರತಕ್ಕೆ ರವಾನೆ ಮಾಡಲು ಟೆಸ್ಲಾ ಯೋಜಿಸಿದೆ. ಅದರಲ್ಲಿ ಮೊದಲ ಬ್ಯಾಚ್ ಸೆಪ್ಟೆಂಬರ್ ಆರಂಭದಲ್ಲಿ ಶಾಂಘೈನಿಂದ ಬರಲಿವೆ. ಮುಂಬೈ, ದೆಹಲಿ, ಪುಣೆ ಮತ್ತು ಗುರುಗ್ರಾಮದಲ್ಲಿ ಆರಂಭಿಕವಾಗಿ ವಾಹನಗಳನ್ನು ವಿತರಿಸಲಿದೆ ಎಂದು ಹೇಳಿದೆ.

ಜುಲೈನಲ್ಲಿ ಭಾರತದಲ್ಲಿ ಬಿಡುಗಡೆಯಾದ ಟೆಸ್ಲಾದ 'ಮಾಡೆಲ್ ವೈ' ಕಾರಿನ ಬೆಲೆ ₹61.67 ಲಕ್ಷವಾಗಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ದಿವಾಕರ ಡಿ., ಬೈಂದೂರು

• **ಪ್ರಶ್ನೆ: ನಾನು ಕೆಲ ವರ್ಷಗಳ ಹಿಂದೆ ಇಎಲ್‌ಎಸ್‌ಎಸ್ ಮ್ಯೂಚುವಲ್ ಫಂಡ್‌ನಲ್ಲಿ ಹಣ ತೊಡಗಿಸಲು ಆರಂಭಿಸಿದೆ. ಆಗ ನನಗೆ ಅದರಿಂದ ಆದಾಯ ತೆರಿಗೆ ಉಳಿತಾಯವಾಗುತ್ತಿತ್ತು. ವರ್ಷಕ್ಕೆ ಈ ಬಗೆಯ ಫಂಡ್‌ನಲ್ಲಿ ನಾನು ₹18,000 ತೊಡಗಿಸುತ್ತಿದ್ದೆ. ಆದರೆ ಈಗ ಕೇಂದ್ರ ಸರ್ಕಾರವು ಆದಾಯ ತೆರಿಗೆ ಮಿತಿಯನ್ನು ಹೆಚ್ಚಿಸಿ ₹12 ಲಕ್ಷದವರೆಗೆ ಆದಾಯ ಹೊಂದಿರುವವರಿಗೆ ತೆರಿಗೆ ಇಲ್ಲ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ, ಈ ಇಎಲ್‌ಎಸ್‌ಎಸ್ ಹೂಡಿಕೆಯ ಪ್ರಸ್ತುತತೆಯ ಬಗ್ಗೆ ಪ್ರಶ್ನೆ ಉದ್ಭವವಾಗಿದೆ. ನನ್ನ ವರಮಾನ ₹12 ಲಕ್ಷಕ್ಕಿಂತ ಕಡಿಮೆಯೇ ಇದೆ. ಆದ್ದರಿಂದ ನನಗೆ ಆದಾಯ ತೆರಿಗೆ ಹೊಣೆ ಇಲ್ಲ. ಹೀಗಾಗಿ ನಾನು ಈ ಫಂಡ್‌ನಲ್ಲಿ ಹೂಡಿಕೆ ಮುಂದುವರಿಸುವುದು ಎಷ್ಟು ಸೂಕ್ತ ಎಂಬುದನ್ನು ತಿಳಿಯಲು ಇಚ್ಛಿಸುತ್ತೇನೆ.**

ಉತ್ತರ: ಕೇಂದ್ರ ಸರ್ಕಾರವು ಇತ್ತೀಚಿನ ಬಜೆಟ್‌ನಲ್ಲಿ ಹೊಸ ಆದಾಯ ತೆರಿಗೆ ವ್ಯವಸ್ಥೆಯಡಿ ₹12 ಲಕ್ಷದವರೆಗೆ ಆದಾಯ ಹೊಂದಿರುವವರಿಗೆ ಈ ತೆರಿಗೆ ವಿನಾಯಿತಿ ಘೋಷಿಸಿದೆ. ಇದು 2025–26 ಆರ್ಥಿಕ ವರ್ಷದಿಂದ ಅನ್ವಯವಾಗುತ್ತದೆ. ಈ ಮಿತಿ ಹಿಂದೆಯೂ ₹7 ಲಕ್ಷದವರೆಗೆ ಇತ್ತು. ಆದರೆ ನೀವು ಉಲ್ಲೇಖಿಸುವ ವಿನಾಯಿತಿ ಹಳೆಯ ತೆರಿಗೆ ಪದ್ಧತಿ ಅನುಸರಿಸುವವರಿಗೆ ಮಾತ್ರ ಅನ್ವಯವಾಗುತ್ತದೆ. ಬಹುತೇಕ ಸನ್ನಿವೇಶಗಳಲ್ಲಿ ಒಟ್ಟಾರೆ ತೆರಿಗೆ ಉಳಿತಾಯ, ಹೊಸ ತೆರಿಗೆ ಪದ್ಧತಿ ಅನುಸರಿಸುವವರಿಗೆ ಹೆಚ್ಚಾಗಿದೆ. ನೀವು ಉಲ್ಲೇಖಿಸಿರುವ ಯಾವುದೇ ವಿನಾಯಿತಿಗಳು ಈಗಲೂ ಹಳೆ ಪದ್ಧತಿಯಡಿ ಮುಂದುವರಿಯುತ್ತವೆ. ಪ್ರಸ್ತುತ, ತೆರಿಗೆ ಉಳಿತಾಯ, ಹೆಚ್ಚುವರಿ ರಿಬೇಟ್ ನೀಡುವ ಮೂಲಕ ಕೊಡಮಾಡಲಾಗುತ್ತಿರುವುದರಿಂದ, ಹೂಡಿಕೆಗಳನ್ನು ಕೇವಲ ತೆರಿಗೆ ಉಳಿತಾಯದ ದೃಷ್ಟಿಯಿಂದ ನೋಡುವುದಾದರೆ ಅರ್ಥ ಕಳೆದುಕೊಂಡಂತೆ ತೋರುತ್ತವೆ.

ಈ ಹಿನ್ನೆಲೆಯಲ್ಲಿ, ಇಎಲ್‌ಎಸ್‌ಎಸ್ ಮ್ಯೂಚುವಲ್ ಫಂಡ್‌ಗಳ ಹೂಡಿಕೆಗೆ ಸಂಬಂಧಿಸಿದಂತೆ ನಿಮ್ಮಂತೆಯೇ ಹಲವರು ಹೂಡಿಕೆ ಮುಂದುವರಿಸಬೇಕೆ ಅಥವಾ ಬೇಡವೆ ಎಂಬ ಬಗ್ಗೆ ಗಂಭೀರ ಚರ್ಚೆ ಮಾಡುತ್ತಿದ್ದಾರೆ. ನೀವು ಹೂಡಿಕೆಯನ್ನು ಕೇವಲ ತೆರಿಗೆ ಉಳಿತಾಯಕ್ಕಾಗಿ ಮಾಡಿದ್ದರೆ, ಇಂತಹ ಹೂಡಿಕೆಯನ್ನು ಮುಂದುವರಿಸುವ ಅಗತ್ಯವಿಲ್ಲ. ಲಾಕ್-ಇನ್ ಅವಧಿ (3 ವರ್ಷ) ಮುಗಿದ ನಂತರ ಹಣವನ್ನು ಹಿಂಪಡೆದು ಉಪಯೋಗಿಸಬಹುದು. ಆದರೆ ಪ್ರಸ್ತುತ ಇದರಲ್ಲಿ ನಿಮಗಾದ ಲಾಭದ ಮಟ್ಟವನ್ನು ನೀವೇ ಗಮನಿಸಿ. ಈ ಫಂಡ್‌ಗಳು ಸಾಮಾನ್ಯ ಬ್ಯಾಂಕ್ ಬಡ್ಡಿಗಿಂತ ವಾರ್ಷಿಕವಾಗಿ ಹೆಚ್ಚು ಲಾಭ ನೀಡುತ್ತಿವೆಯೇ ಎಂದು ತಿಳಿದುಕೊಳ್ಳಿ. ಹೀಗಾಗಿ, ತೆರಿಗೆ ಉಳಿತಾಯದ ಲಾಭ ಸಿಗುತ್ತದೆಯೇ ಇಲ್ಲವೇ ಎಂಬ ಪ್ರಶ್ನೆಯ ಬದಲು, ನಿಮ್ಮ ಸಂಪತ್ತಿನ ವೃದ್ಧಿಯ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು, ಆರ್ಥಿಕವಾಗಿ ಈ ಪಾವತಿ ನಿಮಗೆ ಹೊರೆ ಎಂದು ಅನಿಸದಿದ್ದರೆ, ಹೂಡಿಕೆಯನ್ನು ಖಂಡಿತವಾಗಿ ಮುಂದುವರಿಸಬಹುದು. ಒಂದು ವೇಳೆ ಈ ಹೂಡಿಕೆಯ ಲಾಭದಲ್ಲಿ ಅಷ್ಟೊಂದು ಸಮಾಧಾನ ಇಲ್ಲದಿದ್ದರೆ, ಬೇರೆ ವರ್ಗದ ಈಕ್ವಿಟಿ ಹೂಡಿಕೆಗಳಲ್ಲೂ ಗಮನಹರಿಸಬಹುದು. ನೀವು ಈಗಾಗಲೇ ಈಕ್ವಿಟಿ ಲಿಂಕ್ಡ್ ಫಂಡ್‌ಗಳಲ್ಲಿ ಹಣ ತೊಡಗಿಸಿರುವುದರಿಂದ, ಆರ್ಥಿಕ ಅಪಾಯದ ಅರಿವು ನಿಮಗೆ ಇದ್ದೇ ಇದೆ.

ಇಲ್ಲಿರುವ ಪರ್ಯಾಯ ಅವಕಾಶವೆಂದರೆ, ಪ್ರಸ್ತುತ ಇರುವ ಇಎಲ್‌ಎಸ್‌ಎಸ್ ಹೂಡಿಕೆಯನ್ನು ಲಾಕ್-ಇನ್ ಅವಧಿಯವರೆಗೆ ಮುಂದುವರಿಸುತ್ತಾ, ಮುಂದಿನ ಹೂಡಿಕೆಗಳನ್ನು ಫ್ಲೆಕ್ಸಿಕ್ಯಾಪ್, ಮಲ್ಟಿಕ್ಯಾಪ್ ಅಥವಾ ಬ್ಯಾಲೆನ್ಸ್ಡ್ ಸೇವಿಂಗ್ಸ್ ಫಂಡ್‌ಗಳಂತಹ ವಿವಿಧ ವರ್ಗಗಳಲ್ಲಿ ಈ ಹಣವನ್ನು ಹೆಚ್ಚುವರಿಯಾಗಿ ತೊಡಗಿಸುವುದು. ಇವು ದೀರ್ಘಾವಧಿಯಲ್ಲಿ ಬ್ಯಾಂಕ್ ಬಡ್ಡಿಗಿಂತ ಹೆಚ್ಚು ಲಾಭದಾಯಕವಾಗಿದ್ದು, ಲಾಕ್-ಇನ್ ಮಿತಿಯಿಲ್ಲದ ಉತ್ತಮ ಆಯ್ಕೆಯಾಗಬಹುದು. ಹೀಗಾಗಿ ನಿಮ್ಮ ಉದ್ದೇಶ ಹಾಗೂ ನಿಮ್ಮ ದೀರ್ಘಾವಧಿ ಆರ್ಥಿಕ ಯೋಜನೆಗಳ ಉದ್ದೇಶಕ್ಕೆ ಸರಿಹೊಂದುವಂತೆ ನಿಮ್ಮ ನಿರ್ಧಾರ ಕೈಗೊಳ್ಳಿ. ಇಎಲ್‌ಎಸ್‌ಎಸ್‌ನಿಂದ ಮೂರು ವರ್ಷದ ನಂತರ ಬರುವ ಹಣವನ್ನು ಲಾಭ ಸಹಿತ ಮರು ಹೂಡಿಕೆ ಮಾಡುವತ್ತ ಕೂಡಾ ಗಮನ ಹರಿಸಿ.

ಕೃಷ್ಣಕುಮಾರ್, ರಾಜಾಜಿನಗರ, ಬೆಂಗಳೂರು

• **ಪ್ರಶ್ನೆ: ಇತ್ತೀಚೆಗೆ ನಮ್ಮ ಸಂಸತ್ತಿನಲ್ಲಿ 2025ರ ಹೊಸ ಆದಾಯ ತೆರಿಗೆ ಕಾನೂನನ್ನು ಮತ್ತಷ್ಟು ಪರಿಷ್ಕರಿಸಿ ಮುಂದೆ ಕಾನೂನಾಗಿ ಜಾರಿ ಮಾಡಿದೆ. ಇದರ ಕಾರಣದಿಂದ ನಮಗೆ ಏನೆಲ್ಲಾ ಲಾಭ ಇದೆ ಹಾಗೂ ಇದು ಯಾವ ಆರ್ಥಿಕ ವರ್ಷದಿಂದ ಅನ್ವಯಿಸುತ್ತದೆ. ಇದರಿಂದ ತೆರಿಗೆ ಹೆಚ್ಚು ಪಾವತಿ ಮಾಡಬೇಕಾಗಿ ಬರುವ ಸಂಭವ ಇದೆಯೇ ಅಥವಾ ತೆರಿಗೆ ಉಳಿತಾಯ ಆಗಲಿದೆಯೇ.**

ಉತ್ತರ: ಇತ್ತೀಚೆಗೆ ಸಂಸತ್ತಿನಲ್ಲಿ ಹೊಸ 'ಆದಾಯ ತೆರಿಗೆ ಕಾನೂನು - 2025' ಅನ್ನು ಜಾರಿಗೆ ತರಲು ಅನು-ಮತಿಸಲಾಗಿದ್ದು ಇದಕ್ಕೆ ರಾಷ್ಟ್ರಪತಿ ಅಂಗೀಕಾರವೂ ಸಿಕ್ಕಿದೆ. ಹೀಗಾಗಿ ಇದು ಕಾನೂನಾಗಿ ಜಾರಿಗೆ ಬಂದಿದ್ದು, 2026ರ ಏಪ್ರಿಲ್ 1 ರಿಂದ (ತೆರಿಗೆ ವರ್ಷ 2026-27) ಇದು ಜಾರಿಗೆ ಬರಲಿದೆ. ಈ ಹೊಸ ಕಾನೂನಿನ ಉದ್ದೇಶ ತೆರಿಗೆ ವ್ಯವಸ್ಥೆ-ಯನ್ನು ಸರಳೀಕರಿಸುವುದಾಗಿದ್ದು, ಹಳೆಯ ನಿಯಮಗಳಲ್ಲಿ ಇದ್ದ ಲೋಪದೋಷಗಳನ್ನು ತೊಡೆದು ಹಾಕುವುದು ಹಾಗೂ ಜನಸಾಮಾನ್ಯ ಹಾಗೂ ತೆರಿಗೆ ಪಾವತಿದಾರ ಸರಳ ಭಾಷೆಯಲ್ಲಿ ಅರ್ಥೈಸುವಂತೆ ಹಾಗೂ ಅದನ್ನು ತಮ್ಮ ಆರ್ಥಿಕ ಚಟುವಟಿಕೆಯಲ್ಲಿ ಬಳಸಿಕೊಳ್ಳುವಂತೆ ಮಾಡುವುದೇ ಪ್ರಮುಖ ಉದ್ದೇಶ.

ಪ್ರತಿ ವರ್ಷದ ಬಜೆಟ್‌ನಲ್ಲಿ ಮುಂದಿನ ವರ್ಷಕ್ಕೆ ಅನ್ವಯಿಸುವ ತೆರಿಗೆ ದರದ ಯಥಾಸ್ಥಿತಿ ಅಥವಾ ಬದಲಾವಣೆ ಏನೇ ಇದ್ದರೂ ನಿರ್ಣಯವಾಗುತ್ತದೆ. ಹೀಗಾಗಿ ಹೊಸ ಕಾನೂನು ಏನೇ ಇದ್ದರೂ ತೆರಿಗೆ ನಿಯಮಾವಳಿಯ ಒಟ್ಟಾರೆ ಸರಳೀಕರಣವೇ ಹೊರತು ತೆರಿಗೆ ದರಗಳ ಮಾಹಿತಿ, ಬದಲಾವಣೆ ಯಾವುದಿದ್ದರೂ ಆಯಾ ವರ್ಷದ ವಿತ್ತ ನಿಯಮಗಳಂತೆಯೇ ಕಾರ್ಯರೂಪಕ್ಕೆ ಬರಬೇಕು. ಬದಲಾವಣೆ ಇಲ್ಲದಿದ್ದರೆ ಹಿಂದಿನ ವರ್ಷದ ದರಗಳನ್ನೇ ಮುಂದುವರಿಸುವದು ವಾಡಿಕೆ.

ಪ್ರಸ್ತುತ ಹೊಸ ತೆರಿಗೆ ಪದ್ಧತಿಯಡಿ ₹12 ಲಕ್ಷದವರೆಗೆ ಆದಾಯ ಹೊಂದಿರುವವರಿಗೆ ಯಾವುದೇ ತೆರಿಗೆ ಹೊಣೆ ಇಲ್ಲ. ಇದನ್ನು ಸಾಧ್ಯವಾಗಿಸಲು ಪ್ರಸ್ತುತ ಇರುವ ಸೆಕ್ಷನ್ 87ಎ ಅಡಿಯಲ್ಲಿ ರಿಯಾಯಿತಿಯನ್ನು ₹60 ಸಾವಿರಕ್ಕೆ ಹೆಚ್ಚಿಸಲಾಗಿದೆ. ಹೀಗಾಗಿ ಮಧ್ಯಮ ವರ್ಗದ ಉದ್ಯೋಗಿಗಳು ಮತ್ತು ಸಣ್ಣ ವ್ಯಾಪಾರಸ್ಥರಿಗೆ ಇದು ತೆರಿಗೆ ಉಳಿತಾಯದ ಅವಕಾಶ ಒದಗಿಸುತ್ತದೆ. ಹೀಗಾಗಿ, ಮುಂದಿನ 2026-27ರಿಂದ ಜಾರಿಗೆ ಬರುವ ಹೊಸ ಕಾನೂನಿನ ನಿಯಮ 156ರಂತೆ ಇದೇ ಮಿತಿ ಮುಂದುವರಿಯುತ್ತದೆ. ಮುಂದಿನ ವರ್ಷದ ಫೆಬ್ರುವರಿ ತಿಂಗಳಿನಲ್ಲಿ ಮಂಡಿಸುವ ಬಜೆಟ್‌ನಲ್ಲಿ ಯಾವುದೇ ಬದಲಾವಣೆ ಮಾಡದಿದ್ದಲ್ಲಿ, ಪ್ರಸ್ತುತ ದರಗಳೇ ಮುಂದುವರಿಯಲಿದೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಚುಟುಕು ಸುದ್ದಿ

ಟಿಸಿಎಸ್ ವೇತನ ಶೇ 7ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ದೇಶದ ಅತಿದೊಡ್ಡ ಐ.ಟಿ ಸೇವಾ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ತನ್ನ ಬಹುತೇಕ ಉದ್ಯೋಗಿಗಳ ವೇತನವನ್ನು ಶೇ 4.5ರಿಂದ ಶೇ 7ರ ವರೆಗೆ ಹೆಚ್ಚಿಸಿದೆ ಎಂದು ಮೂಲಗಳು ಮಂಗಳವಾರ ತಿಳಿಸಿವೆ.

ಉದ್ಯೋಗಿಗಳಿಗೆ ವೇತನ ಹೆಚ್ಚಳದ ಪತ್ರವನ್ನು ನೀಡಿರುವ ಕಂಪನಿ, ವೇತನ ಏರಿಕೆಯು ಸೆಪ್ಟೆಂಬರ್‌ನಿಂದ ಅನ್ವಯವಾಗಲಿದೆ ಎಂದು ತಿಳಿಸಿದೆ. ಉತ್ತಮವಾಗಿ ಕಾರ್ಯನಿರ್ವಹಿಸಿದವರಿ-ಗೆ ಶೇ 10ಕ್ಕಿಂತ ಹೆಚ್ಚಿನ ವೇತನ ನೀಡಿದೆ.

ಕಳೆದ ತಿಂಗಳು ತನ್ನ ಸಿಬ್ಬಂದಿಯಲ್ಲಿ 12 ಸಾವಿರ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸುವುದಾಗಿ ಹೇಳಿತ್ತು. ಬಳಿಕ ಶೇ 80ರಷ್ಟು ಉದ್ಯೋಗಿಗಳಿಗೆ ವೇತನ ಹೆಚ್ಚಳ ಮಾಡುವುದಾಗಿ ತಿಳಿಸಿತ್ತು.





ಥಲಸ್ಸೇಮಿಯಾ ಪೀಡಿತರಿಗೆ ಆರಕ್ಷಕರ ರಕ್ತ

ಒಂದನೇ ಪುಟದಿಂದ...

ಅಲ್ಲದೇ 'ಶಿಬಿರದ ವೇಳೆ ಥಲಸ್ಸೇಮಿಯಾ ಪೀಡಿತ ಮಕ್ಕಳು ಹಾಗೂ ಅವರ ಪೋಷಕರನ್ನೂ ಕರೆಸಿ, ಆತ್ಮಸ್ಥೈರ್ಯ ತುಂಬಲಾಗುತ್ತದೆ' ಎಂದರು.

ಸ್ನೇಹಮೈತ್ರಿ ಬ್ಲಡ್ ಆರ್ಮಿ, ಜಿಲ್ಲಾ ರಕ್ತಕೇಂದ್ರ ಶಿಬಿರಕ್ಕೆ ಕೈ ಜೋಡಿಸಿದೆ ಎಂದು ತಿಳಿಸಿದರು.

'ರಕ್ತಸಂಬಂಧದಲ್ಲಿ ಮದುವೆಯಿಂದಾಗಿ ಅಥವಾ ಆನುವಂಶಿಕವಾಗಿ ಥಲಸ್ಸೇಮಿಯಾ ಬರುತ್ತದೆ. ಕಾಯಿಲೆ ಪೀಡಿತ ಮಕ್ಕಳು, ಏಳು ವರ್ಷದಿಂದ 20 ವರ್ಷ ಬದುಕುತ್ತಾರೆ. ಬದುಕಿರುವ ಅವಧಿಯಲ್ಲಿ ಅಂತಹ ಮಕ್ಕಳಿಗೆ ರಕ್ತಬೇಕು. ಆ ಅಗತ್ಯವನ್ನು ತುಂಬಿಕೊಳ್ಳುವುದು ಶಿಬಿರ ಆಯೋಜನೆ ಉದ್ದೇಶವಾಗಿದೆ' ಎಂದರು.

ಯುಪಿಐ ವಹಿವಾಟು ₹24.85 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಆಗಸ್ಟ್ ತಿಂಗಳಿನಲ್ಲಿ ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ಮೂಲಕ ನಡೆದ ವಹಿವಾಟು 2 ಸಾವಿರ ಕೋಟಿ ದಾಟಿದೆ. ಇದರ ಮೌಲ್ಯ ₹24.85 ಲಕ್ಷ ಕೋಟಿ ಆಗಿದೆ ಎಂದು ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ತಿಳಿಸಿದೆ.

ಆಗಸ್ಟ್‌ನಲ್ಲಿ ಸರಾಸರಿ ಪ್ರತಿನಿತ್ಯ ಅಂದಾಜು 64.5 ಕೋಟಿ ವಹಿವಾಟು ನಡೆದಿದೆ. ಇದರ ಮೌಲ್ಯ ₹80,177 ಕೋಟಿಯಾಗಿದೆ ಎಂದು ತಿಳಿಸಿದೆ.

ಜುಲೈ ತಿಂಗಳಿನಲ್ಲಿ 1,947 ಕೋಟಿ ವಹಿವಾಟು ನಡೆದಿದ್ದು, ವಹಿವಾಟು ಮೌಲ್ಯ ₹25.08 ಲಕ್ಷ ಕೋಟಿಗಳಷ್ಟಾಗಿತ್ತು. ಇದು ಮೇ ತಿಂಗಳಿನಲ್ಲಿ ₹25.14 ಲಕ್ಷ ಕೋಟಿ ಆಗಿತ್ತು. ಇದು ಇದುವರೆಗಿನ ಗರಿಷ್ಠ ಮಟ್ಟವಾಗಿದೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ 1,490 ಕೋಟಿ ವಹಿವಾಟು ನಡೆದಿತ್ತು. ಅದು ಈ ಬಾರಿ 2 ಸಾವಿರ ಕೋಟಿ ದಾಟಿದ್ದು, ಶೇ 34ರಷ್ಟು ಏರಿಕೆ ದಾಖಲಿಸಿದೆ. ಮೌಲ್ಯದ ಲೆಕ್ಕದಲ್ಲಿ ಶೇ 21ರಷ್ಟು ಹೆಚ್ಚಳವಾಗಿದ್ದು, ₹24.85 ಲಕ್ಷ ಕೋಟಿಯಾಗಿದೆ.

ಅಡಿಕೆ ಧಾರಣೆ

ಸಾಗರ		ಶಿರಸಿ (ಮುಂದುವರಿದ)		ಯಲ್ಲಾಪುರ	
		ಕೋಕ	18319-25109		
ಬಿಳಿಗೋಟು	15690-27690	ಕೆಂಪುಗೋಟು	22119-23419	ಆಪಿ	63821-78821
ಚಾಲಿ	36730-37111	ರಾಶಿ	43099-49699	ಬಿಳಿಗೋಟು	20899-34001
ಕೋಕ	26899-26899	ತಟ್ಟಿಬೆಟ್ಟೆ	30800-36099	ಚಾಲಿ	35200-43811
ಕೆಂಪುಗೋಟು	34699-34699	**ಶಿರಸಿ**		ಕೋಕ	11012-20699
ರಾಶಿ	44199-55889	ಬೆಟ್ಟೆ	23899-41509	ಕೆಂಪುಗೋಟು	19699-27173
ಸಿಪ್ಪೆಗೋಟು	19689-19689	ಬಿಳಿಗೋಟು	23809-35299	ರಾಶಿ	41609-54900
ಸಿದ್ದಾಪುರ		ಚಾಲಿ	38618-44099	ತಟ್ಟಿಬೆಟ್ಟೆ	28999-38599
ಬಿಳಿಗೋಟು	24699-31899	ಕೆಂಪುಗೋಟು	17900-24099	**ಕಾರ್ಕಳ**	
ಚಾಲಿ	36599-42699	ರಾಶಿ	44299-50999	ಹೊಸತು	32500-49500


ಮುಂಬೈ ಧಾರಣೆ (ಶೇಂಗಾ)

02-09-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1380 (1370)
ಒಂದು ವಾರದ ಡೆಲಿವರಿ	1375 (1365)
ಪಾಮ್ ವಾರದ ಡೆಲಿವರಿ	1273 (1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1350)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,04,200 (1,04,500)
ಬೆಳ್ಳಿ ಕೆ.ಜಿಗೆ	1,22,500 (1,23,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

'ಏಕತೆಯ ಪ್ರದರ್ಶನ ಸಮಸ್ಯಾತ್ಮಕ'

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): 'ಭಾರತ, ರಷ್ಯಾ ಹಾಗೂ ಚೀನಾದ ಅಧ್ಯಕ್ಷರು ಏಕತೆ ಪ್ರದರ್ಶಿಸಿರುವುದು ಸಮಸ್ಯಾತ್ಮಕ ನಡೆಯಾಗಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವ್ಯಾಪಾರ ಸಲಹೆಗಾರ ಪೀಟರ್ ನವಾರೊ ತಿಳಿಸಿದ್ದಾರೆ.


ಪೀಟರ್ ನವಾರೊ


'ಭಾರತಕ್ಕೆ ಅಮೆರಿಕ, ಯುರೋಪ್, ಉಕ್ರೇನ್ ಅಗತ್ಯವೇ ಹೊರತು ರಷ್ಯಾ ಅಲ್ಲ' ಎಂದು ಹೇಳಿದ್ದಾರೆ.

ಚೀನಾದ ಟಿಯಾನ್‌ಜಿನ್‌ನಲ್ಲಿ ನಡೆದ 'ಶಾಂಘೈ ಸಹಕಾರ ಸಂಘಟನೆಯ' (ಎಸ್‌ಸಿಒ) ಶೃಂಗಸಭೆಯಲ್ಲಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಹಾಗೂ ಭಾರತದ ಪ್ರಧಾನಿ ನರೇಂದ್ರ ಮೋದಿ ಭೇಟಿಯಾಗಿದ್ದರು.

ಮೂವರೂ ನಾಯಕರ ಏಕತೆ ಪ್ರದರ್ಶನದ ಕುರಿತು ಶ್ವೇತಭವನ-ದಲ್ಲಿ ನಡೆದ ಪತ್ರಿಕಾಗೋಷ್ಠಿ ವೇಳೆ ಪತ್ರಕರ್ತರು ಪ್ರಶ್ನಿಸಿದರು. ಆಗ ನವಾರೊ, 'ಇದು ಸಮಸ್ಯಾತ್ಮಕ... ಇದು ಸಮಸ್ಯಾತ್ಮಕ' ಎಂದು ಪುನರುಚ್ಚರಿಸಿದರು.

ಯುದ್ಧನೌಕೆ ತಾಲೀಮು

ಪಿಟಿಐ ಚಿತ್ರ



ಐಎನ್‌ಎಸ್ ತೀರ್, ಐಎನ್‌ಎಸ್ ಶಾರ್ದೂಲ್ ಮತ್ತು ಸಿಜಿಎಸ್ ಸಾರಥಿಯನ್ನೊಳಗೊಂಡ ಭಾರತೀಯ ನೌಕಾಪಡೆಯ ಮೊದಲ ತರಬೇತಿ ನಿರತ ಯುದ್ಧನೌಕೆಗಳ ಸಮೂಹವು (1ಟಿಎಸ್) ಸೀಶೆಲ್ಸ್ ದೇಶದ ವಿಕ್ಟೋರಿಯಾ ಬಂದರಿಗೆ ತಲುಪಿದೆ

ಸಾವಿನ ಸಂಖ್ಯೆ 1,400ಕ್ಕೆ ಏರಿಕೆ

ಒಂದನೇ ಪುಟದಿಂದ...

'ಭೂಕಂಪದಿಂದ ತೀವ್ರ ಹಾನಿಗೊಳಗಾಗಿರುವ ಕುನಾರ್ ಪ್ರಾಂತ್ಯದಲ್ಲಿ ಹೆಚ್ಚು ಜನ ಮೃತಪಟ್ಟಿದ್ದಾರೆ. ನಂಗರಹಾರ್‌ನಲ್ಲಿಯೂ ಸುಮಾರು 12 ಮಂದಿ ಸಾವಿಗೀಡಾಗಿ-ದ್ದಾರೆ' ಎಂದು ತಾಲಿಬಾನ್ ಸರ್ಕಾರದ ವಕ್ತಾರರಾದ ಜಬೀವುಲ್ಲಾ ಮುಜಾಹಿದ್ ಅವರು 'ಎಕ್ಸ್'ನಲ್ಲಿ ಮಾಹಿತಿ ನೀಡಿದ್ದಾರೆ.

ನಂಗರಹಾರ್ ಪ್ರಾಂತ್ಯದ ಜಲಾಲಾಬಾದ್ ನಗರದಿಂದ 27 ಕಿ.ಮೀ. ದೂರದಲ್ಲಿ ಕಂಪನದ ಕೇಂದ್ರ ಬಿಂದುವಿದೆ ಎಂದು ಅಮೆರಿಕದ ಭೂವೈಜ್ಞಾನಿಕ ಸಮೀಕ್ಷಾ ಸಂಸ್ಥೆ (ಯುಎಸ್‌ಜಿಎಸ್) ದೃಢಪಡಿಸಿದೆ. ಬೆಳಿಗಿನ ಜಾವ 4 ಗಂಟೆಯವರೆಗೆ 6ಕ್ಕೂ ಹೆಚ್ಚು ಲಘು ಕಂಪನಗಳು ವರದಿಯಾಗಿವೆ. ಮಂಗಳವಾರವೂ ಇದೇ ಜಾಗದಲ್ಲಿ 5.2 ತೀವ್ರತೆಯ ಭೂಕಂಪ ಸಂಭವಿಸಿತು.

ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ಸಾವಿನ ಸಂಖ್ಯೆ ಹೆಚ್ಚಾಗುತ್ತಿದೆ. ಕುನಾರ್ ಒಂದರಲ್ಲೇ 5,400ಕ್ಕೂ ಅಧಿಕ ಮನೆಗಳು ನೆಲಸಮಗೊಂಡಿವೆ ಎಂದು ಕುನಾರ್ ಪ್ರಾಂತೀಯ ಅಧಿಕಾರಿಗಳು ತಿಳಿಸಿದರು.

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯಾ ಗುಟೆರೆಸ್ ಅವರು 50 ಲಕ್ಷ ಡಾಲರ್ (ಸುಮಾರು ₹44 ಕೋಟಿ) ನೆರವನ್ನು ಘೋಷಿಸಿದ್ದಾರೆ. 'ವಿಶ್ವಸಂಸ್ಥೆಯು ತುರ್ತು ನೆರವಿಗೆ ಸಜ್ಜಾಗಿದ್ದು, ಅಧಿಕಾರಿಗಳೊಂದಿಗೆ ಕೆಲಸ ಮಾಡುತ್ತಿದೆ' ಎಂದು ಅವರು ಸೋಮವಾರ ಹೇಳಿದ್ದಾರೆ.

'ನಾನು ನನ್ನ ಸ್ನೇಹಿತನಿಗಾಗಿ ಹುಡುಕುತ್ತಿದ್ದೇನೆ. ಅವನು ಎಲ್ಲೂ ಕಾಣಿಸುತ್ತಿಲ್ಲ. ಇಲ್ಲಿನ ಪರಿಸ್ಥಿತಿ ಹೃದಯವಿದ್ರಾವಕ-ವಾಗಿದೆ' ಎಂದು ಭೂಕಂಪ ಪೀಡಿತ ಪ್ರದೇಶದಲ್ಲಿರುವ ವಾಡಿರ್ ಗ್ರಾಮಕ್ಕೆ ಬಂದಿರುವ ಒಬೈದುಲ್ಲಾ ಅವರು ದುಃಖಿಸಿದರು.

ಐರೋಪ್ಯ ಒಕ್ಕೂಟವು ಅಫ್ಗಾನಿಸ್ತಾನಕ್ಕೆ 10 ಲಕ್ಷ ಯೂರೊ (₹10 ಕೋಟಿ) ನೆರವು ಘೋಷಿಸಿದೆ. 130 ಟನ್‌ನಷ್ಟು ಅಗತ್ಯ ಸಾಮಗ್ರಿಗಳನ್ನು ಕಳುಹಿಸಿದೆ.

ಮುಕ್ತ ವ್ಯಾಪಾರ ಒಪ್ಪಂದ: ಐರೋಪ್ಯ ಒಕ್ಕೂಟದ ಜೊತೆ 13ನೇ ಸುತ್ತಿನ ಚರ್ಚೆ-ಪೀಯೂಷ್

'ನವೆಂಬರ್ ಹೊತ್ತಿಗೆ ಮಾತುಕತೆ ಫಲಪ್ರದ ನಿರೀಕ್ಷೆ'

ನವದೆಹಲಿ (ಪಿಟಿಐ): ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ (ಬಿಟಿಎ) ಸಂಬಂಧಿಸಿದಂತೆ ಭಾರತವು ಅಮೆರಿಕ ದೊಂದಿಗೆ ಮಾತುಕತೆ ನಡೆಸಲಿದ್ದು, ನವೆಂಬರ್ ಹೊತ್ತಿಗೆ ಫಲಪ್ರದವಾಗುವ ನಿರೀಕ್ಷೆ ಇದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಮಂಗಳವಾರ ಇಲ್ಲಿ ತಿಳಿಸಿದರು.


ಪೀಯೂಷ್ ಗೋಯಲ್

'ನಮ್ಮ ನಡುವೆ ಬಹಳಷ್ಟು ಮಾತುಕತೆ ನಡೆದಿದೆ. ಇನ್ನಷ್ಟು ಚರ್ಚೆ ನಡೆಯುತ್ತದೆನ್ನುವುದೂ ನಿಜ. ಆದರೂ ಅಮೆರಿಕದೊಂದಿಗೆ ಸಾಗುವ ಪ್ರಯತ್ನವನ್ನು ಮುಂದುವರಿಸಿದ್ದೇವೆ. ಈ ಕಾರಣಕ್ಕೇ ಬಿಟಿಎ ಕುರಿತ ಮಾತುಕತೆ ನಡೆಯಲಿದೆ' ಎಂದು ಸುಸ್ಥಿರತೆಯ ಕುರಿತಂತೆ 'ಇಂಡಸ್ಟ್ರಿ ಚೇಂಬರ್' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೇಳಿದರು.

ಭಾರತವೇ ಹತ್ತಿರ: 'ಚೀನಾ, ರಷ್ಯಾಕ್ಕಿಂತಲೂ ಭಾರತವೇ ನಮಗೆ ಹತ್ತಿರವಾಗಿದೆ' ಎಂದಿರುವ ಅಮೆರಿಕದ ಹಣಕಾಸು ಇಲಾಖೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್, 'ಉಭಯ ದೇಶಗಳು ತಮ್ಮ ನಡುವಿನ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳಲಿವೆ' ಎಂದು 'ಫಾಕ್ಸ್ ನ್ಯೂಸ್'ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಮಾರ್ಚ್ ತಿಂಗಳಿನಿಂದಲೂ ಉಭಯ ರಾಷ್ಟ್ರಗಳ ನಡುವೆ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆ ನಡೆದಿದೆ. ಇದುವರೆಗೂ ಐದು ಸುತ್ತಿನ ಮಾತುಕತೆ ಪೂರ್ಣಗೊಂಡಿದೆ. ಅಮೆರಿಕವು ಶೇ 50ರಷ್ಟು ಸುಂಕವನ್ನು ವಿಧಿಸಿದ ನಂತರ ಆ. 25ರಿಂದ ನಿಗದಿಯಾಗಿದ್ದ ಮಾತುಕತೆಯನ್ನು ಮುಂದೂಡಲಾಗಿತ್ತು. ಇನ್ನೂ ಆರನೇ ಸುತ್ತಿನ ಮಾತುಕತೆಗೆ ಹೊಸ ದಿನಾಂಕ ನಿಗದಿಪಡಿಸಿಲ್ಲ.

8ರಂದು ಮಾತುಕತೆ: 'ಭಾರತ- ಐರೋಪ್ಯ ಒಕ್ಕೂಟದ ನಡುವೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ 13ನೇ ಸುತ್ತಿನ ಮಾತುಕತೆಯು ಸೆ. 8ರಿಂದ ನಡೆಯಲಿದ್ದು, ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ಸುನಿಲ್ ಬರ್ತ್ವಾಲ್ ಇದಕ್ಕಾಗಿಯೇ ಬ್ರಸೆಲ್ಸ್‌ನಲ್ಲಿದ್ದಾರೆ' ಎಂದು ಪೀಯೂಷ್ ತಿಳಿಸಿದರು.

'ಮಾತುಕತೆಗೆ ಸಂಬಂಧಿಸಿದಂತೆ ನಾವು ಸಕ್ರಿಯರಾಗಿದ್ದೇವೆ. ಮಹತ್ವದ ಪ್ರಗತಿ ಸಾಧಿಸುತ್ತಿದ್ದೇವೆ' ಎಂದಿದ್ದಾರೆ.

'ಭಾರತ- ಚೀನಾ ಸಂಬಂಧ ಸಹಜ ಸ್ಥಿತಿಗೆ'

'ಭಾರತ- ಚೀನಾ ನಡುವಿನ ಗಡಿ ಸಮಸ್ಯೆಯು ಪರಿಹಾರಗೊಳ್ಳಲು ಆರಂಭವಾಗುತ್ತಿದ್ದಂತೆ, ಉಭಯ ದೇಶಗಳ ನಡುವಿನ ಉದ್ವಿಗ್ನತೆಯು ಶಮನಗೊಳ್ಳುತ್ತಿದೆ. ಸಂಬಂಧವೂ ಸಹಜ ಸ್ಥಿತಿಯತ್ತ ಸಾಗುತ್ತಿದೆ' ಎಂದು ಕೇಂದ್ರ ಸಚಿವ ಪೀಯೂಷ್ ತಿಳಿಸಿದರು.

'ಗಾಲ್ವನ್‌ನಲ್ಲಿ ನಮಗೆ ಸಮಸ್ಯೆಯಿತ್ತು. ಇದರಿಂದಾಗಿಯೇ ಚೀನಾದೊಟ್ಟಿಗಿನ ಸಂಬಂಧ ಹದಗೆಟ್ಟಿತ್ತು. ಗಡಿಯ ವಿವಾದ ತಣ್ಣಗಾಗುತ್ತಿ-ದ್ದಂತೆ ಅಲ್ಲಿನ ಪರಿಸ್ಥಿತಿಯು ಸಾಮಾನ್ಯ ಸ್ಥಿತಿಗೆ ಮರಳುವುದು ಸಹಜ' ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.





ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ
ಬುಧವಾರ • ಸೆಪ್ಟೆಂಬರ್ 3, 2025



ಅಪ್ಪನ ಗರಡಿಯಲ್ಲಿ ರಿತನ್ಯಾ

ಶೀಘ್ರದಲ್ಲೇ ಯುವ ಜೊತೆ ಸಿನಿಮಾ

• ಅಭಿಲಾಷ್ ಪಿ.ಎಸ್.

ನಟ ದುನಿಯಾ ವಿಜಯ್ ಮಗಳು ರಿತನ್ಯಾ ವಿಜಯ್, ಜಡೇಶ್ ಕೆ.ಹಂಪಿ ನಿರ್ದೇಶನದ 'ಲ್ಯಾಂಡ್‌ಲಾರ್ಡ್' ಮುಖಾಂತರ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿದ್ದಾರೆ. ಇತ್ತೀಚೆಗೆ ಅವರ ಪಾತ್ರವನ್ನು ಚಿತ್ರತಂಡ ಪರಿಚಯಿಸಿದ್ದು, 'ಭಾಗ್ಯ' ಎನ್ನುವ ಪಾತ್ರದಲ್ಲಿ ಅವರು ಕಾಣಿಸಿಕೊಳ್ಳಲಿದ್ದಾರೆ. ಅಪ್ಪನ ಸಲಹೆಯಂತೆ ಹೆಜ್ಜೆ ಇಡುತ್ತಿರುವ ರಿತನ್ಯಾ ತಮ್ಮ ಪಾತ್ರದ ಬಗ್ಗೆ ಮಾತಿಗಿಳಿದರು.

ಸಿನಿಮಾ ಕ್ಷೇತ್ರಕ್ಕೆ ಹೆಜ್ಜೆ ಇಟ್ಟಿದ್ದು ಪೂರ್ವ ನಿರ್ಧರಿತವೇ' ಎಂಬ ಪ್ರಶ್ನೆಗೆ, 'ಖಂಡಿತಾ. ನಾನು ಹುಟ್ಟಿ ಬೆಳೆದಿದ್ದು ಸಿನಿಮಾ ವಾತಾವರಣದಲ್ಲೇ. ಚಿಕ್ಕವಯಸ್ಸಿನಲ್ಲಿ ಬಿಡುವಿದ್ದ ವೇಳೆಯನ್ನು ಸಿನಿಮಾ ಸೆಟ್‌ನಲ್ಲೇ ಕಳೆಯುತ್ತಿದ್ದೆ. ಮುಂದೆ ನಾನೂ ನಟಿಯಾಗಬೇಕು ಎನ್ನುವ ಆಸೆ ಆಗಲೇ ಇತ್ತು. ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಅಪ್ಪನ ಪ್ರಭಾವವೂ ಇತ್ತು. ಡಿಗ್ರಿ ಮಾಡದೆ ನಿಮ್ಮನ್ನು ಸಿನಿಮಾಗೆ ಕಳುಹಿಸುವುದಿಲ್ಲ ಎಂದು ಅಪ್ಪ ಹೇಳಿದ್ದರು. ಕೊನೆಯ ಗುರಿ ಸಿನಿಮಾವಾಗಿದ್ದರೂ ಡಿಗ್ರಿ ಪೂರ್ಣಗೊಳಿಸುವತ್ತ ನನ್ನ ಚಿತ್ತವಿತ್ತು. ಹೈಸ್ಕೂಲ್, ಕಾಲೇಜಿನಲ್ಲಿ ಇರುವಾಗಲೇ ಅವಕಾಶಗಳು ಬಂದವು. ಆದರೆ ಆಗ ಅಪ್ಪನೇ ಸಿನಿಮಾದಿಂದ ದೂರವಿರಿಸಿದ್ದರು' ಎಂದು ಆ ದಿನಗಳನ್ನು ನೆನಪಿಸಿಕೊಂಡರು.

'ಡಿಗ್ರಿ ಬಳಿಕ ಮುಂಬೈನಲ್ಲಿರುವ ಅನುಪಮ್ ಖೇರ್ ಇನ್ಸ್ಟಿಟ್ಯೂಟ್‌ನಲ್ಲಿ ಅಭಿನಯದ ತರಬೇತಿ ಪಡೆದೆ. ಇದು ಪೂರ್ಣಗೊಂಡ ಬಳಿಕ ಕೆಲವು ನಾಟಕಗಳನ್ನು ಮಾಡಿದೆ. ಈ ಸಂದರ್ಭದಲ್ಲೇ 'ಲ್ಯಾಂಡ್‌ಲಾರ್ಡ್' ಚಿತ್ರದ ಕಥೆಯ ಮಾತುಕತೆಯಾಗುತ್ತಿತ್ತು. ಅಲ್ಲಿ ಬರುವ ನಾಯಕನ ಮಗಳ ಪಾತ್ರಕ್ಕೆ ಕಲಾವಿದರ ಹುಡುಕಾಟ ನಡೆಯುತ್ತಿತ್ತು. ಆ ಸಂದರ್ಭದಲ್ಲೇ ಮಗಳ ಪಾತ್ರವನ್ನು ರಿತನ್ಯಾ ಏಕೆ ಮಾಡಬಾರದು ಎಂದು ಜಡೇಶ್ ಅವರು ಕೇಳಿದ್ದರು. ಹೀಗೆ ನನಗೆ ಈ ಪಾತ್ರ ದೊರೆಯಿತು. ಬಹಳ ಖುಷಿಯಿಂದಲೇ ಇದನ್ನು ಒಪ್ಪಿಕೊಂಡೆ. ಕಥೆ ಕೇಳಿದ ಬಳಿಕ 'ಭಾಗ್ಯ' ಎನ್ನುವ ಪಾತ್ರದ ಬರವಣಿಗೆ ಚೆನ್ನಾಗಿದೆ ಅನಿಸಿತು. ಎರಡು ಶೇಡ್‌ಗಳಲ್ಲಿ ನಾನು ಇಲ್ಲಿ ಕಾಣಿಸಿಕೊಂಡಿದ್ದೇನೆ. ಇಡೀ ಕಥೆಯಲ್ಲಿ ಈ ಪಾತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ತಂದೆಯ ಸಿನಿಮಾದಲ್ಲಿ ಮಗಳ ಪಾತ್ರವನ್ನು ಮಗಳೇ ನಿರ್ವಹಿಸಲು ಸಿಗುವ ಅವಕಾಶ ವಿರಳ. ನನಗೆ ಆ ಅವಕಾಶ ದೊರೆತಿದೆ. ರಿಯಲ್-ರೀಲ್‌ನಲ್ಲೂ ನಾವು ತಂದೆ-ಮಗಳಾಗಿದ್ದೇವೆ. ಇದು ಜವಾಬ್ದಾರಿಯನ್ನೂ ಹೊರಿಸಿದೆ' ಎನ್ನುತ್ತಾರೆ ರಿತನ್ಯಾ.



'ಲ್ಯಾಂಡ್‌ಲಾರ್ಡ್' ಸಿನಿಮಾದಲ್ಲಿ 'ಭಾಗ್ಯ' ಎಂಬ ಪಾತ್ರ

ಅಪ್ಪನ ಸಿನಿಮಾ ಆಯ್ಕೆ ಬಗ್ಗೆ ಹೆಮ್ಮೆಯಿದೆ

'ಪಾತ್ರವನ್ನು ನಿರ್ವಹಿಸಲು ಅಪ್ಪ ಹಾಗೂ ಜಡೇಶ್ ಅವರ ಸಲಹೆ ತೆಗೆದುಕೊಂಡೆ. ಪೂರ್ಣ ಕಥೆಯನ್ನು ಓದಿಕೊಂಡು ಈ ಪಾತ್ರ ಈ ರೀತಿಯಲ್ಲಿ ಬಂದರೆ ಚೆನ್ನಾಗಿರುತ್ತದೆ ಎಂದುಕೊಂಡು ಬದಲಾವಣೆಗಳನ್ನು ಮಾಡಿಕೊಂಡೆ. ಮಣ್ಣಿನ ಸೊಗಡಿನ ಕಥೆ ಹೇಳುವುದರಲ್ಲಿ ಜಡೇಶ್ ಅವರದ್ದು ಎತ್ತಿದ ಕೈ. ಅಪ್ಪನೂ ಬಹಳ ಭಿನ್ನವಾದ ಕಥೆಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಅವರ ಸಿನಿಮಾ ಆಯ್ಕೆಗಳ ಬಗ್ಗೆ ಹೆಮ್ಮೆ ಇದೆ' ಎಂದರು.

ಮುಂದೆ ಯುವ ಜೊತೆ ಸಿನಿಮಾ

ನಿರ್ದೇಶಕ ಸೂರಿ ಆ್ಯಕ್ಷನ್ ಕಟ್ ಹೇಳಲಿರುವ ಯುವ ರಾಜ್‌ಕುಮಾರ್ ನಟನೆಯ ಮೂರನೇ ಸಿನಿಮಾದಲ್ಲೂ ರಿತನ್ಯಾ ನಾಯಕಿಯಾಗಿ ನಟಿಸಲಿದ್ದಾರೆ. 'ಈ ಸಿನಿಮಾದ ಶೂಟಿಂಗ್ ಇನ್ನಷ್ಟೇ ಆರಂಭವಾಗಬೇಕಿದೆ. ಸದ್ಯದಲ್ಲೇ ಇದು ಆರಂಭವಾಗಲಿದೆ. ಹೊಸ ಕಥೆಗಳನ್ನು ಕೇಳುತ್ತಿದ್ದೇನೆ. ಒಂದು ಸಿನಿಮಾದ ಮಾತುಕತೆ ಅಂತಿಮ ಹಂತದಲ್ಲಿದೆ. ನಾನು ಬಹಳ ಯೋಚನೆ ಮಾಡಿ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೇನೆ. ಈ ಆಯ್ಕೆಯ ಪ್ರಕ್ರಿಯೆಯಲ್ಲಿ ಅಪ್ಪನ ಸಲಹೆಯನ್ನೂ ಕೇಳುತ್ತೇನೆ. ಇಬ್ಬರೂ ಚರ್ಚೆ ಮಾಡಿದ ನಂತರವೇ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತೇವೆ' ಎನ್ನುತ್ತಾರೆ ರಿತನ್ಯಾ.

'ಅರಸಯ್ಯನ ಪ್ರೇಮ ಪ್ರಸಂಗ'ಕ್ಕೆ ಯುವ ಸಾಥ್



ರಶ್ಮಿತ ಆರ್. ಗೌಡ

ಗ್ರಾಮೀಣ ಸೊಗಡಿನ ಹಾಸ್ಯಮಯ ಕಥಾಹಂದರ ಹೊಂದಿರುವ 'ಅರಸಯ್ಯನ ಪ್ರೇಮ ಪ್ರಸಂಗ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಯುವ ರಾಜಕುಮಾರ್ ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು.

ಜೆ.ವಿ.ಆರ್ ದೀಪು ನಿರ್ದೇಶನದ ಚಿತ್ರವಿದು.'ಫ್ರೆಂಚ್ ಬಿರಿಯಾನಿ' ಖ್ಯಾತಿಯ ಮಹಾಂತೇಶ್ ಹಿರೇಮಠಗೆ ರಶ್ಮಿತ ಆರ್. ಗೌಡ ಜೋಡಿಯಾಗಿದ್ದಾರೆ.

'ಲೂಸಿಯಾ ಪವನ್ ಕುಮಾರ್ ಅವರ ಬಳಿ ಕೆಲಸ ಮಾಡಿದ್ದೆ. ನಿರ್ದೇಶಕನಾಗಿ ಇದು ಮೊದಲ ಚಿತ್ರ. ಚಿತ್ರದ ಟೀಸರ್ ಹಾಗೂ ಹಾಡುಗಳು ಈಗಾಗಲೇ ಜನಮೆಚ್ಚುಗೆ ಗಳಿಸಿವೆ. ಸೆಪ್ಟೆಂಬರ್ 19ರಂದು ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

'ನಾನು ಜನರಿಗೆ ಪರಿಚಯವಾಗಿದ್ದೆ ಪುನೀತ್ ರಾಜಕುಮಾರ್ ನಿರ್ಮಾಣದ 'ಫ್ರೆಂಚ್ ಬಿರಿಯಾನಿ' ಚಿತ್ರದ ಮೂಲಕ. ಅವರ ಕುಟುಂಬದ ಯುವ ರಾಜಕುಮಾರ್ ಟ್ರೇಲರ್ ಬಿಡುಗಡೆ ಮಾಡಿಕೊಟ್ಟಿದ್ದಾರೆ. ಇದೊಂದು ಹಾಸ್ಯಮಯ ಕಥೆ ಆಧಾರಿತ ಚಿತ್ರ' ಎಂದರು ಮಹಾಂತೇಶ್ ಹಿರೇಮಠ.

ರಾಜೇಶ್ ಗೌಡ ಬಂಡವಾಳ ಹೂಡಿದ್ದಾರೆ. ಗುರುಪ್ರಸಾದ್ ನರ್ನಾಡ್ ಛಾಯಾಚಿತ್ರಗ್ರಹಣ, ಪ್ರವೀಣ್-ಪ್ರದೀಪ್ ಸಂಗೀತ, ಸುನೀಲ್ ಕಶ್ಯಪ್ ಸಂಕಲನವಿದೆ.

'ಸೀಟ್ ಎಡ್ಜ್'ನಲ್ಲಿ ಕುಳಿತ ಸಿದ್ದು

ಯುವನಟ ಸಿದ್ದು ಮೂಲಿಮನಿ ನಾಯಕನಾಗಿ ನಟಿಸಿರುವ 'ಸೀಟ್ ಎಡ್ಜ್' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಡಾರ್ಕ್ ಕಾಮಿಡಿಯ ಜೊತೆಗೆ ಹಾರರ್-ಥ್ರಿಲ್ಲರ್ ಶೈಲಿಯಲ್ಲಿ ಮೂಡಿಬರುತ್ತಿರುವ ಚಿತ್ರವನ್ನು ಚೇತನ್ ಶೆಟ್ಟಿ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ರವೀಕ್ಷಾ ಶೆಟ್ಟಿ ನಾಯಕಿ.

'ಕೆಮಿಸ್ಟ್ರಿ ಆಫ್ ಕರಿಯಪ್ಪ' ಹಾಗೂ 'ಕ್ರಿಟಿಕಲ್ ಕೀರ್ತನೆಗಳು' ಮೊದಲಾದ ಚಿತ್ರಗಳಲ್ಲಿ ಸಹ ನಿರ್ದೇಶಕನಾಗಿ ಕೆಲಸ ಮಾಡಿದ ಅನುಭವವಿದೆ. ನಿರ್ದೇಶಕನಾಗಿ ಇದು ನನ್ನ ಮೊದಲ ಸಿನಿಮಾ. ಚಿತ್ರೀಕರಣ ಮುಗಿದು ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಇತ್ತೀಚಿನ ದಿನಗಳಲ್ಲಿ ಯುಟ್ಯೂಬ್ ಮತ್ತು ಸೋಷಿಯಲ್ ಮೀಡಿಯಾಗಳಲ್ಲಿ ಅತಿಹೆಚ್ಚು ವೀವ್ಸ್ ಪಡೆಯಲು, ಜನಪ್ರಿಯರಾಗಲು ಯುಟ್ಯೂಬರ್ಸ್ ಮತ್ತು ವ್ಲಾಗರ್ಸ್ ಏನೇನು ಸಾಹಸಗಳನ್ನು ಮಾಡುತ್ತಾರೆ ಎಂಬ ಎಳೆಯನ್ನು ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇವೆ. ಇದು ಎಲ್ಲಾ ಥರದ ಪ್ರೇಕ್ಷಕರಿಗೂ ಕನೆಕ್ಟ್ ಆಗುವಂಥ ಸಿನಿಮಾ. ನಮಗೆ ಗೊತ್ತಿಲ್ಲದ ವಿಷಯದಲ್ಲಿ ದುಸ್ಸಾಹಸಕ್ಕೆ ಕೈಹಾಕಿದರೆ, ಏನೇನು ಆಗಬಹುದು ಎಂಬುದನ್ನು ಈ ಸಿನಿಮಾದಲ್ಲಿ ಹೇಳಿದ್ದೇವೆ' ಎಂದರು ನಿರ್ದೇಶಕರು.

ರಘು ರಾಮನಕೊಪ್ಪ, ಗಿರೀಶ್ ಶಿವಣ್ಣ, ಮಿಮಿಕ್ರಿ ಗೋಪಿ, ಲಕ್ಷ್ಮಿ ಸಿದ್ದಯ್ಯ, ಕಿರಣ್, ಪುನೀತ್ ಬಾಬು, ತೇಜು ಪೊನ್ನಪ್ಪ, ಮನಮೋಹನ್ ರೈ ಮೊದಲಾದವರು ಚಿತ್ರದ ಇತರ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಎನ್.ಆರ್. ಸಿನಿಮಾ ಪ್ರೊಡಕ್ಷನ್ಸ್ ಬ್ಯಾನರಿನಲ್ಲಿ ಗಿರಿಧರ ಟಿ.ವಸಂತಪುರ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

'ಇದೊಂದು ಸಸ್ಪೆನ್ಸ್-ಥ್ರಿಲ್ಲರ್ ಶೈಲಿಯಲ್ಲಿ ಮೂಡಿಬಂದಿರುವ ಸಿನಿಮಾ. ನಾನೊಬ್ಬ ಯುಟ್ಯೂಬ್ ವ್ಲಾಗರ್ ಆಗಿ ಕಾಣಿಸಿಕೊಂಡಿದ್ದೇನೆ. ಯಾರೂ ಹೋಗದ ಭಯಾನಕ ಜಾಗವನ್ನು ಪ್ರೇಕ್ಷಕರಿಗೆ ಪರಿಚಯಿಸಬೇಕು ಎಂದು ಹಠಕ್ಕೆ ಬಿದ್ದ ನಾನು, ಘೋಸ್ಟ್ ಟೌನ್‌ಗೆ ಹೋಗಿ ಘೋಸ್ಟ್ ಹಂಟಿಂಗ್ ವಿಡಿಯೊ ಮಾಡಲು ನಿರ್ಧರಿಸುತ್ತೇನೆ. ಕೊನೆಗೆ ನಾನು ಅಂದುಕೊಂಡಂತೆ ಘೋಸ್ಟ್ ಹಂಟಿಂಗ್ ವಿಡಿಯೊ ಮಾಡಿ ಪ್ರೇಕ್ಷಕರಿಗೆ ತೋರಿಸುತ್ತೇನಾ..? ಇಲ್ಲವಾ..? ಎಂಬುದೇ ಕಥೆ' ಎಂದರು ಸಿದ್ದು.

'ನಾನು ಈ ಸಿನಿಮಾದಲ್ಲಿ ಮಧ್ಯಮ ವರ್ಗದ ಕಾಲೇಜು ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಘೋಸ್ಟ್ ಹಂಟಿಂಗ್‌ಗೆ ಹೋಗುವ ಯುಟ್ಯೂಬರ್ ಜೊತೆಗೆ ನಾನು ಕೂಡ ತೊಂದರೆಗೆ ಸಿಲುಕಿಕೊಳ್ಳುತ್ತೇನೆ. ಎರಡು ಶೇಡ್‌ಗಳಿರುವಂಥ ಪಾತ್ರ ಈ ಸಿನಿಮಾದಲ್ಲಿ ಸಿಕ್ಕಿದೆ' ಎಂದರು ರವೀಕ್ಷಾ.



ಸಿದ್ದು ಮೂಲಿಮನೆ, ರವೀಕ್ಷಾ ಶೆಟ್ಟಿ

ಚಿಟಿಕೆ ಸುದ್ದಿ

ಖೇರಾಗೆ ಆಯೋಗದ ನೋಟಿಸ್

ನವದೆಹಲಿ (ಪಿಟಿಐ): ಎರಡು ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಸಿದ್ದಾರೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಕಾಂಗ್ರೆಸ್ ನಾಯಕ ಪವನ್ ಖೇರಾ ಅವರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ದೆಹಲಿ ಜಿಲ್ಲಾ ಚುನಾವಣಾ ಅಧಿಕಾರಿ 'ಎಕ್ಸ್'ನಲ್ಲಿ ಈ ಮಾಹಿತಿ ಹಂಚಿಕೊಂಡಿದ್ದಾರೆ. ನೋಟಿಸ್ ಪ್ರಕಾರ, ನವದೆಹಲಿ ಮತ್ತು ಜಂಗಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಖೇರಾ ಅವರು ಹೆಸರು ಮತದಾರರ ಪಟ್ಟಿಗಳಲ್ಲಿದೆ.

'ಆಯೋಗವು ನನಗೆ ನೋಟಿಸ್ ನೀಡಿದೆ. ಆಡಳಿತ ಪಕ್ಷವನ್ನು ಬೆಂಬಲಿಸಲು ಆಯೋಗವು ಹೇಗೆ ಕೆಲಸ ಮಾಡುತ್ತದೆ ಎಂಬುದಕ್ಕೆ ಇದು ಪುರಾವೆ. ಮತ ಕಳ್ಳತನದ ದೂರುಗಳನ್ನು ಕಡೆಗಣಿಸುತ್ತಿರುವ ಆಯೋಗವು, ವಿರೋಧ ಪಕ್ಷಗಳ ನಾಯಕರ ವಿರುದ್ಧ ಕ್ರಮಕ್ಕೆ ಧಾವಿಸುತ್ತಿದೆ' ಎಂದು ಖೇರಾ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಿಆರ್‌ಎಸ್‌ನಿಂದ ಕವಿತಾ ಅಮಾನತು

ಹೈದರಾಬಾದ್ (ಪಿಟಿಐ): ಪಕ್ಷ ವಿರೋಧಿ ಚಟುವಟಿಕೆಯ ಕಾರಣ ನೀಡಿ, ವಿಧಾನಪರಿಷತ್ ಸದಸ್ಯೆ ಕೆ. ಕವಿತಾ ಅವರನ್ನು ಭಾರತ್ ರಾಷ್ಟ್ರ ಸಮಿತಿ (ಬಿಆರ್‌ಎಸ್) ಸಮಿತಿಯಿಂದ ಅಮಾನತುಗೊಳಿಸಲಾಗಿದೆ.

ಕವಿತಾ ಅವರ ತಂದೆ ಬಿಆರ್‌ಎಸ್ ಪಕ್ಷದ ಅಧ್ಯಕ್ಷ ಕೆ.ಚಂದ್ರಶೇಖರ್ ರಾವ್ ಅವರು ತಕ್ಷಣದಿಂದಲೇ ಅನ್ವಯ ವಾಗುವಂತೆ ಅಮಾನತುಗೊಳಿಸಿದ್ದಾರೆ. ಕವಿತಾ ಅವರ ಇತ್ತೀಚಿನ ನಡವಳಿಕೆಗಳು ಹಾಗೂ ಪಕ್ಷ ವಿರೋಧಿ ಚಟುವಟಿಕೆಗಳಿಂದ ಬಿಆರ್‌ಎಸ್‌ಗೆ ತೀವ್ರ ಹಾನಿಯಾಗಿದೆ. ಇದನ್ನು ಪಕ್ಷದ ನಾಯಕತ್ವವು ಗಂಭೀರವಾಗಿ ಪರಿಗಣಿಸಿ, ಶಿಸ್ತುಕ್ರಮ ತೆಗೆದುಕೊಂಡಿದೆ ಎಂದು ತಿಳಿಸಿದ್ದಾರೆ.

ಶಿಕ್ಷೆಗೊಳಗಾದ ವಿದೇಶಿಯರಿಗೆ ಭಾರತ ಪ್ರವೇಶ ಇಲ್ಲ

ನವದೆಹಲಿ (ಪಿಟಿಐ): 'ದೇಶ ವಿರೋಧಿ ಕೃತ್ಯಗಳಲ್ಲಿ ಶಿಕ್ಷೆಗೊಳಗಾದ, ಬೇಹುಗಾರಿಕೆ, ಅತ್ಯಾಚಾರ, ಕೊಲೆ, ಭಯೋತ್ಪಾದಕ ಕೃತ್ಯ, ಮಕ್ಕಳ ಕಳ್ಳ ಸಾಗಣೆಯಲ್ಲಿ ಶಿಕ್ಷೆ ಅನುಭವಿಸಿದ ವಿದೇಶಿಯರಿಗೆ ಭಾರತದ ಒಳಗೆ ಪ್ರವೇಶಿಸಲು ಅಥವಾ ದೇಶದಲ್ಲಿ ನೆಲಸಲು ನಿರ್ಬಂಧ ಹೇರಲಾಗುತ್ತದೆ' ಎಂದು ಅಧಿಕೃತ ಆದೇಶದಲ್ಲಿ ತಿಳಿಸಲಾಗಿದೆ.

'ಇತ್ತೀಚೆಗೆ ಮಂಡಿಸಿದ 'ವಲಸೆ ಹಾಗೂ ವಿದೇಶಿಗರ ಕಾಯ್ದೆ-2025' ಅನ್ವಯ, ವಿದೇಶಿಗರನ್ನು ಗಡಿಪಾರು ಮಾಡುವ ತನಕ ಅವರ ಚಲನವಲನದ ಮೇಲೆ ನಿಗಾ ವಹಿಸಲು ಎಲ್ಲ ರಾಜ್ಯ ಸರ್ಕಾರಗಳು ಪ್ರತ್ಯೇಕ ಬಂಧನ ಕೇಂದ್ರ ಸ್ಥಾಪಿಸಬೇಕು' ಎಂದು ಗೃಹ ಸಚಿವಾಲಯವು ಆದೇಶದಲ್ಲಿ ತಿಳಿಸಿದೆ.

ಮರಾಠರಿಗೆ ಮೀಸಲಾತಿ: ಒಪ್ಪಿಗೆ

5 ದಿನಗಳ ಉಪವಾಸ ಸತ್ಯಾಗ್ರಹ ಅಂತ್ಯಗೊಳಿಸಿದ ಮನೋಜ್ ಜರಾಂಗೆ

ಮುಂಬೈ (ಪಿಟಿಐ): 'ಮರಾಠರಿಗೆ ಕುಣಬಿ ಜಾತಿ ಪ್ರಮಾಣಪತ್ರ ನೀಡಲು ಮಹಾರಾಷ್ಟ್ರ ಸರ್ಕಾರ ಮಂಗಳವಾರ ಒಪ್ಪಿಕೊಂಡಿದೆ. ಸ್ನೇಹಿತರೇ ನಾವು ಗೆದ್ದುಬಿಟ್ಟೆವು' ಎಂದು ಹೋರಾಟಗಾರ ಮನೋಜ್ ಜರಾಂಗೆ ಘೋಷಿಸಿದರು.

ಐದು ದಿನಗಳಿಂದ ಸಾವಿರಾರು ಹೋರಾಟಗಾರರೊಂದಿಗೆ ಜರಾಂಗೆ ಅವರು ಇಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರು.

ಮರಾಠ ಸಮುದಾಯದವರಿಗೆ ಈಗ ಹಿಂದುಳಿದ ವರ್ಗದ ಕೋಟಾದಡಿ ಮೀಸಲಾತಿ ದೊರೆಯಲಿದೆ. ಮರಾಠರಿಗೆ ಮೀಸಲಾತಿ ನೀಡುವ ವಿಷಯ ಪರಿಶೀಲಿಸಲು ರಚಿಸಿದ ಸಂಪುಟ ಉಪಸಮಿತಿಯು ಜರಾಂಗೆ ಅವರ ಬಹುಪಾಲು ಬೇಡಿಕೆಗಳನ್ನು ಒಪ್ಪಿಕೊಂಡಿದೆ. ಒಪ್ಪಿಗೆ ನೀಡಿರುವುದಾಗಿ ಸಮಿತಿಯ ಮುಖ್ಯಸ್ಥ, ಸಚಿವ ರಾಧಾಕೃಷ್ಣ ವಿಖೆ ಪಾಟೀಲ್ ಅವರು ಜರಾಂಗೆ ಅವರಿಗೆ ತಿಳಿಸಿದರು.

ಸಮಿತಿಯ ಕರಡು ಪ್ರತಿಯನ್ನು ಜರಾಂಗೆ ಅವರು ಓದಿ ಹೇಳುತ್ತಿದ್ದಂತೆಯೇ ಇಲ್ಲಿನ ಆಜಾದ್ ಮೈದಾನದಲ್ಲಿ ಹೋರಾಟಗಾರರು ಹಲಗೆ ಹೊಡೆದು, ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. 'ಸರ್ಕಾರದೊಂದಿಗೆ ಮಾತನಾಡಲು ಸಿದ್ಧನಿದ್ದೇನೆ. ನನ್ನ ಬೇಡಿಕೆಗಳು ಈಡೇರದ ಹೊರತು ಮುಂಬೈ ಬಿಟ್ಟು ತೆರಳುವುದಿಲ್ಲ' ಎಂದು ಜರಾಂಗೆ ಅವರು ಬೆಳಿಗ್ಗೆಯಷ್ಟೇ ಹೇಳಿದ್ದರು.

'ಮರಾಠ ಮೀಸಲಾತಿ ಹೋರಾಟಗಾರರ ವಿರುದ್ಧ ದಾಖಲಾಗಿರುವ ಎಲ್ಲ ಪ್ರಕರಣಗಳನ್ನು ಸೆಪ್ಟೆಂಬರ್ ಅಂತ್ಯದ ಒಳಗಾಗಿ ಕೈಬಿಡಲಾಗುವುದು ಎಂದು ಉಪ ಸಮಿತಿಯವರು ಹೇಳಿದ್ದಾರೆ' ಎಂದರು.

'ಕುಣಬಿ ಮತ್ತು ಮರಾಠರು ಒಂದೇ ಸಮುದಾಯದವರು ಎಂದು ಸರ್ಕಾರಿ ಆದೇಶ ಹೊರಡಿಸಲು ಕಾನೂನು ಪ್ರಕಾರ ಇರುವ ಆಯ್ಕೆಗಳ ಕುರಿತು ಹುಡುಕಾಟ ನಡೆಯುತ್ತಿದೆ. ಎಲ್ಲ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಎರಡು ತಿಂಗಳು ಬೇಕಾಗಬಹುದು' ಎಂದು ಸಚಿವ ರಾಧಾಕೃಷ್ಣ ಹೇಳಿದರು.

ಜರಾಂಗೆ ಅವರು ಉಪವಾಸ ಸತ್ಯಾಗ್ರಹವನ್ನು ಅಂತ್ಯಗೊಳಿಸಿ, ಕಣ್ಣೀರು ಹಾಕಿದರು. ಮೈದಾನದಿಂದ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು.

> **ಮೀಸಲಾತಿ ಜಾರಿ ಮಾಡದೆ ಮೋಸ ಮಾಡಿದರೆ, ನಮ್ಮ ಬೇಡಿಕೆಗಳನ್ನು ಈಡೇರಿಸದೇ ಹೋದರೆ, ನಾನು ರಾಧಾಕೃಷ್ಣ ಅವರ ಮನೆಗೆ ಹೋಗಿ, ಅಲ್ಲೇ ಕೂತು ಪ್ರಾಣ ಬಿಡುತ್ತೇನೆ**
> **ಮನೋಜ್ ಜರಾಂಗೆ,** ಮರಾಠ ಮೀಸಲಾತಿ ಹೋರಾಟಗಾರ

> **ಮರಾಠರ ಅಭಿವೃದ್ಧಿಗಾಗಿಯೇ ನನ್ನ ಸರ್ಕಾರ ಸದಾ ಕೆಲಸ ಮಾಡುತ್ತದೆ. ಅದು ಮರಾಠರು ಅಥವಾ ಒಬಿಸಿ ಇರಲಿ, ಎಲ್ಲ ಸಮುದಾಯಕ್ಕಾಗಿ ನಾವು ನಮ್ಮ ಕೆಲಸ ಮುಂದುವರಿಸುತ್ತೇವೆ**
> **ದೇವೇಂದ್ರ ಫಡಣವೀಸ್,** ಮಹಾರಾಷ್ಟ್ರ ಮುಖ್ಯಮಂತ್ರಿ

> **ನಾನೊಬ್ಬ ರೈತ. ನನ್ನ ಕಾಲ ಮುಗಿಯಿತು. ಆದರೆ, ನನ್ನ ಮಕ್ಕಳು ಉತ್ತಮ ಶಿಕ್ಷಣ ಪಡೆದುಕೊಳ್ಳಲಿದ್ದಾರೆ. ಇದಕ್ಕಾಗಿ ಧನ್ಯವಾದಗಳು**
> **ಭಾಗವತ್ ಸತ್ವಾಜಿ,** ಪ್ರತಿಭಟನಕಾರ



ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಅವರು ಹಣ್ಣಿನರಸ ಕುಡಿಯುವ ಮೂಲಕ ತಮ್ಮ ಉಪವಾಸ ಸತ್ಯಾಗ್ರಹವನ್ನು ಅಂತ್ಯಗೊಳಿಸಿದರು. ಜರಾಂಗೆ ಅವರಿಗೆ ಸಚಿವ ರಾಧಾಕೃಷ್ಣ ಹಣ್ಣಿನರಸ ಕುಡಿಸಿದರು — ಪಿಟಿಐ ಚಿತ್ರ

ಹೈಕೋರ್ಟ್ ತರಾಟೆ

'ಅನುಮತಿ ಪಡೆಯದೆಯೇ ಆಜಾದ್ ಮೈದಾನದಲ್ಲಿ ಪ್ರತಿಭಟನೆ ನಡೆಸಲಾಗುತ್ತಿದೆ. ಮಂಗಳವಾರ ಮಧ್ಯಾಹ್ನ 3ರ ಒಳಗೆ ಆಜಾದ್ ಮೈದಾನವನ್ನು ಖಾಲಿ ಮಾಡಬೇಕು' ಎಂದು ಬಾಂಬೆ ಹೈಕೋರ್ಟ್ ಹೇಳಿತ್ತು. 'ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸಿಲ್ಲ' ಎಂದು ರಾಜ್ಯ ಸರ್ಕಾರವನ್ನೂ ನ್ಯಾಯಾಲಯ ತರಾಟೆಗೆ ತೆಗೆದುಕೊಂಡಿತ್ತು. ಬಳಿಕ ಜರಾಂಗೆ ಅವರ ಮನವಿ ಮೇರೆಗೆ ಬುಧವಾರ ಬೆಳಿಗ್ಗೆವರೆಗೆ ಪ್ರತಿಭಟನೆ ನಡೆಸಲು ಕೋರ್ಟ್ ಅನುಮತಿ ನೀಡಿತ್ತು.

ಈ ಬಳಿಕ ಸಂಪುಟದ ಉಪ ಸಮಿತಿಯ ಮುಖ್ಯಸ್ಥ ರಾಧಾಕೃಷ್ಣ ಅವರು ಜರಾಂಗೆ ಅವರನ್ನು ಮಧ್ಯಾಹ್ನದ ವೇಳೆಗೆ ಭೇಟಿ ಮಾಡಿದರು.

ನೂರಾರು ಪ್ರತಿಭಟನಕಾರರು ದಕ್ಷಿಣ ಮುಂಬೈನ ಬೀದಿಗಳಲ್ಲಿ ಮತ್ತು ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಲ್ ಆವರಣದಲ್ಲಿ ಬೀಡುಬಿಟ್ಟಿದ್ದರು. ಇದರಿಂದ ಲಕ್ಷಾಂತರ ಜನರಿಗೆ ತೊಂದರೆಯಾಗುತ್ತಿತ್ತು.

'ಜರಾಂಗೆ ಮತ್ತು ಅವರ ಅನುಯಾಯಿಗಳು ಮೈದಾನವನ್ನು ಖಾಲಿ ಮಾಡದೆ ಇದ್ದರೆ ದಂಡ ವಿಧಿಸಲಾಗುವುದು. ಇವರ ಮೇಲೆ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲಾಗುವುದು' ಎಂದೂ ಕೋರ್ಟ್ ಎಚ್ಚರಿಸಿತ್ತು.

ಉತ್ತರ ಪ್ರದೇಶ: ಮಳೆಗೆ 16 ಮಂದಿ ಸಾವು

ಪ್ರಜಾವಾಣಿ ವಾರ್ತೆ/ ಪಿಟಿಐ

ಲಖನೌ: ಉತ್ತರ ಪ್ರದೇಶದ ವಿವಿಧೆಡೆ ಮಂಗಳವಾರ ಸಂಭವಿಸಿದ ಗುಡುಗು–ಮಿಂಚಿನ ಹೊಡೆತ ಹಾಗೂ ವ್ಯಾಪಕ ಮಳೆಯಿಂದ ಮನೆಗಳು ಕುಸಿದು 16 ಮಂದಿ ಮೃತಪಟ್ಟಿದ್ದಾರೆ.

ಭಾರಿ ಮಳೆಯಿಂದ ಮೀರತ್, ಮೊರಾದಾಬಾದ್ ಜಿಲ್ಲೆಯಲ್ಲಿ ಕಳೆದ 24 ಗಂಟೆಗಳಲ್ಲಿ ಮನೆಗಳು ಕುಸಿದು ಆರು ಮಂದಿ ಮೃತಪಟ್ಟಿರುವುದು ವರದಿಯಾಗಿದೆ.

ಮಿರ್ಜಾಪುರ, ಪ್ರಯಾಗರಾಜ್, ಪ್ರತಾಪಗಢ, ಗೊಂಡಾ ಜಿಲ್ಲೆಗಳಲ್ಲಿ ಮಿಂಚಿನ ಹೊಡೆತದಿಂದ 10 ಮಂದಿ ಮೃತಪಟ್ಟಿದ್ದಾರೆ.

ಮಳೆಯಿಂದ ಹಲವೆಡೆ ವಿದ್ಯುತ್ ಕಂಬಗಳು ಬಿದ್ದು, ಪೂರೈಕೆಯಲ್ಲಿ ವ್ಯತ್ಯಯವುಂಟಾಗಿದೆ. ಮರಗಳು ಬುಡ ಸಮೇತ ಕುಸಿದುಬಿದ್ದಿದ್ದು, ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿದೆ.

ಮಳೆ ಪೀಡಿತ ಪ್ರದೇಶಗಳಲ್ಲಿ ರಕ್ಷಣಾ ಕಾರ್ಯಾಚರಣೆ ಬಿರುಸು ಪಡೆದುಕೊಂಡಿದ್ದು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್), ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಸಿಬ್ಬಂದಿಯು ಸಂತ್ರಸ್ತರಿಗೆ ನೆರವು ಒದಗಿಸಿದ್ದಾರೆ.

ಶಿಮ್ಲಾ ವರದಿ: ಹಿಮಾಚಲ ಪ್ರದೇಶದಲ್ಲಿ ಮಂಗಳವಾರವೂ ಭಾರಿ ಮಳೆ ಮುಂದುವರಿದಿದ್ದು, ಆರು ರಾಷ್ಟ್ರೀಯ ಹೆದ್ದಾರಿ ಸೇರಿ 1,311 ರಸ್ತೆಗಳಲ್ಲಿ ವಾಹನಗಳ ಸಂಚಾರ, ರಾಜ್ಯದಾದ್ಯಂತ ರೈಲು ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ.

1,305 ರಸ್ತೆಗಳ ಪೈಕಿ ಮಂಡಿ ಜಿಲ್ಲೆಯಲ್ಲಿ 289, ಶಿಮ್ಲಾದಲ್ಲಿ 241, ಛಂಬಾದಲ್ಲಿ 239, ಕುಲ್ಲುವಿನಲ್ಲಿ 169 ಹಾಗೂ ಸಿರ್‌ಮೌರ್ ಜಿಲ್ಲೆಯ 127 ರಸ್ತೆಗಳಲ್ಲಿ ಸಂಚಾರ ಸ್ಥಗಿತಗೊಳಿಸಲಾಗಿದೆ.

ಸೋಲಾನ್ ಜಿಲ್ಲೆಯ ಸನ್ವಾರಾದಲ್ಲಿ ಸಂಭವಿಸಿದ ಭೂಕುಸಿತದಿಂದ ಶಿಮ್ಲಾದಿಂದ ಕಲ್ಕಾ ಸಂಪರ್ಕಿಸುವ ಹೆದ್ದಾರಿಯಲ್ಲಿ ವಾಹನಗಳ ಸಂಚಾರ ಸ್ಥಗಿತಗೊಂಡಿದೆ.

ನೆರೆ ದೇಶಗಳ ಅಲ್ಪಸಂಖ್ಯಾತರಿಗೆ ಭಾರತದಲ್ಲಿ ಉಳಿಯಲು ಅವಕಾಶ

ನವದೆಹಲಿ (ಪಿಟಿಐ): ಧಾರ್ಮಿಕ ಕಿರುಕುಳದಿಂದ ಪಾರಾಗಲು ಕಳೆದ ವರ್ಷ ಡಿಸೆಂಬರ್ 31ರ ವರೆಗೆ ಅಫ್ಗಾನಿಸ್ತಾನ, ಬಾಂಗ್ಲಾದೇಶ ಮತ್ತು ಪಾಕಿಸ್ತಾನದಿಂದ ಭಾರತಕ್ಕೆ ಬಂದಿರುವ ಅಲ್ಪಸಂಖ್ಯಾತರಾದ ಹಿಂದೂಗಳು, ಸಿಖ್ಖರು, ಬೌದ್ಧರು, ಜೈನರು, ಪಾರ್ಸಿಗಳು ಹಾಗೂ ಕ್ರೈಸ್ತರು ಇಲ್ಲಿಯೇ ಉಳಿದುಕೊಳ್ಳಬಹುದು ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ.

ಇವರು ಪಾಸ್‌ಪೋರ್ಟ್ ಅಥವಾ ಪ್ರಯಾಣಕ್ಕೆ ಸಂಬಂಧಿಸಿ ಯಾವುದೇ ದಾಖಲೆಗಳನ್ನು ಹೊಂದಿರದಿದ್ದರೂ ಭಾರತದಲ್ಲಿ ವಾಸಿಸಲು ಅನುಮತಿ ನೀಡಲಾಗುವುದು ಎಂದೂ ಸಚಿವಾಲಯ ಹೇಳಿದೆ.

ಕಳೆದ ವರ್ಷ ಜಾರಿಗೆ ಬಂದಿರುವ ಪೌರತ್ವ (ತಿದ್ದುಪಡಿ) ಕಾಯ್ದೆಯಡಿ, ಈ ಅಲ್ಪಸಂಖ್ಯಾತರಿಗೆ ಭಾರತೀಯ ಪೌರತ್ವ ನೀಡಲಾಗುತ್ತದೆ

ಬೈಕ್ ಕಳೆದುಕೊಂಡವನಿಗೆ ಬೈಕ್ ಕೊಡಿಸಿದ ರಾಹುಲ್ ಗಾಂಧಿ

ಪಟ್ನಾ (ಪಿಟಿಐ): ಬಿಹಾರದಲ್ಲಿ ನಡೆದ 'ಮತದಾರರ ಅಧಿಕಾರ ಯಾತ್ರೆ' ವೇಳೆ ದ್ವಿಚಕ್ರ ವಾಹನವನ್ನು ಕಳೆದುಕೊಂಡ ದರ್ಭಂಗಾದ ವ್ಯಕ್ತಿಯೊಬ್ಬರಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೊಸ ಮೋಟರ್ ಸೈಕಲ್ ಕೊಡಿಸಿದ್ದಾರೆ.

ರಾಹುಲ್ ಗಾಂಧಿ ಅವರೇ ಖುದ್ದು ಬೈಕ್ ಕೀ ಹಸ್ತಾಂತರಿಸುವ ವಿಡಿಯೊವನ್ನು ಪಕ್ಷದ ಅಧಿಕೃತ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದು, ಬೈಕ್ ಪಡೆದ ಶುಭಂ ಸೌರಭ್ ಅವರು ಸಂತಸ ವ್ಯಕ್ತಪಡಿಸಿದ್ದಾರೆ.

'ದರ್ಭಂಗಾದಲ್ಲಿ ನಡೆದ ರ‍್ಯಾಲಿಯಲ್ಲಿ ರಾಹುಲ್ ಗಾಂಧಿ ಜೊತೆ ಪಾಲ್ಗೊಂಡಿದ್ದೆ. ನನ್ನ ಬೈಕ್ ಅನ್ನು ಭದ್ರತಾ ಪಡೆಗಳಿಗೆ ನೀಡಿದ್ದೆ. ನಂತರ ನನ್ನ ಬೈಕ್ ಕಳೆದುಹೋಗಿರುವುದು ಗೊತ್ತಾಯಿತು' ಎಂದು ಸೌರಭ್ ತಿಳಿಸಿದ್ದಾರೆ.

'ಎರಡು ದಿನಗಳ ಹಿಂದೆ ವ್ಯಕ್ತಿಯೊಬ್ಬರು ಕರೆ ಮಾಡಿ, ರಾಹುಲ್ ಗಾಂಧಿ ಅವರು ಸೆ.1ರಂದು ಪಟ್ನಾದಲ್ಲಿ ಹೊಸ ಬೈಕ್ ನೀಡಲಿದ್ದಾರೆ ಎಂದು ದೂರವಾಣಿ ಕರೆ ಮಾಡಿ ತಿಳಿಸಿದರು. ಈ ವಿಷಯವನ್ನು ತಂದೆಗೂ ತಿಳಿಸಿದ್ದೆ. ನಾವಿಬ್ಬರೂ ಮೊದಲಿಗೆ ನಂಬಿರಲಿಲ್ಲ. ಆದರೂ ಪಟ್ನಾಕ್ಕೆ ತೆರಳಿ, 'ಮತದಾರರ ಅಧಿಕಾರ ಯಾತ್ರೆ'ಯಲ್ಲಿ ಭಾಗಿಯಾಗಲು ನಿರ್ಧರಿಸಿದ್ದೆವು. ರಾಹುಲ್ ಅವರು ಗಾಂಧಿ ಮೈದಾನಕ್ಕೆ ತೆರಳುತ್ತಿದ್ದ ವೇಳೆ ಬೈಕ್‌ನ ಕೀ ಹಸ್ತಾಂತರಿಸಿದರು' ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

'ಹೊಸ ಮೋಟರ್ ಸೈಕಲ್ ಸಿಕ್ಕಿರುವುದಕ್ಕೆ ಖುಷಿಯಾಗಿದೆ. ಇದೇ ಮಾದರಿಯ ಬೈಕ್ ಅನ್ನು ಕಳೆದುಕೊಂಡಿದ್ದೆ. ಹಿರಿಯ ನಾಯಕರ ನಡೆಯಿಂದ ನಾನು ಭಾವುಕನಾಗಿದ್ದೇನೆ' ಎಂದು ಸೌರಭ್ ಪ್ರತಿಕ್ರಿಯಿಸಿದ್ದಾರೆ.

ದೆಹಲಿ ಗಲಭೆ ಪ್ರಕರಣ ಶರ್ಜೀಲ್, ಖಾಲಿದ್ ಜಾಮೀನು ಅರ್ಜಿ ವಜಾ

ನವದೆಹಲಿ (ಪಿಟಿಐ): 2020ರ ದೆಹಲಿ ಗಲಭೆಗೆ ಪಿತೂರಿ ಆರೋಪದಲ್ಲಿ ಯುಎಪಿಎ ಅಡಿ ವಿಚಾರಣೆ ಎದುರಿಸುತ್ತಿರುವ ಹೋರಾಟಗಾರ ಉಮರ್ ಖಾಲಿದ್, ಶರ್ಜೀಲ್ ಇಮಾಮ್ ಮತ್ತು ಇತರ 7 ಮಂದಿಗೆ ದೆಹಲಿ ಹೈಕೋರ್ಟ್ ಮಂಗಳವಾರ ಜಾಮೀನು ನಿರಾಕರಿಸಿದೆ.

ಜುಲೈ 9ರಂದು ತನ್ನ ಆದೇಶವನ್ನು ಕಾಯ್ದಿರಿಸಿದ್ದ ನ್ಯಾಯಮೂರ್ತಿಗಳಾದ ನವೀನ್ ಚಾವ್ಲಾ ಮತ್ತು ಶಾಲಿಂದರ್ ಕೌರ್ ಅವರ ಪೀಠವು, ಎಲ್ಲಾ ಮೇಲ್ಮನವಿಗಳನ್ನು ವಜಾಗೊಳಿಸಲಾಗಿದೆ ಎಂದು ಮಂಗಳವಾರ ತೀರ್ಪು ನೀಡಿದೆ. ವಿವರವಾದ ಆದೇಶ ಇನ್ನಷ್ಟೆ ಬರಬೇಕಿದೆ.

ಆರೋಪಿಗಳಾದ ಉಮರ್ ಖಾಲಿದ್, ಶರ್ಜೀಲ್ ಇಮಾಮ್, ಮೊಹಮ್ಮದ್ ಸಲೀಮ್ ಖಾನ್, ಶಿಫಾ ಉರ್ ರೆಹಮಾನ್, ಅಥರ್ ಖಾನ್, ಮೀರಾನ್ ಹೈದರ್, ಅಬ್ದುಲ್ ಖಾಲಿದ್ ಸೈಫಿ, ಗುಲ್ಫಿಶಾ ಫಾತಿಮಾ ಮತ್ತು ಶಾದಾಬ್ ಅಹ್ಮದ್ ಅವರು 2020ರಿಂದ ಜೈಲಿನಲ್ಲಿದ್ದಾರೆ.

ತಮ್ಮ ಜಾಮೀನು ಅರ್ಜಿಗಳನ್ನು ವಜಾಗೊಳಿಸಿದ ವಿಚಾರಣಾ ನ್ಯಾಯಾಲಯದ ಆದೇಶದ ವಿರುದ್ಧ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ರಾಜ್ಯಪಾಲರ ವಿಳಂಬ ಧೋರಣೆ; ಸುಪ್ರೀಂ ಕೋರ್ಟ್ ಪ್ರಶ್ನೆ

'ನ್ಯಾಯಾಂಗ ನಿಂದನೆ ಆಗುವುದೇ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ತಮಿಳುನಾಡಿಗೆ ಸಂಬಂಧಿಸಿದ ಪ್ರಕರಣದಲ್ಲಿ ಏಪ್ರಿಲ್ 8ರಂದು ನೀಡಿರುವ ತೀರ್ಪಿನಂತೆ ರಾಷ್ಟ್ರಪತಿ ಅಥವಾ ರಾಜ್ಯಪಾಲರು ಮಸೂದೆಗಳಿಗೆ ಅಂಕಿತ ಹಾಕಲು ನಿಗದಿಪಡಿಸಿದ ಗಡುವು ಪಾಲಿಸದಿದ್ದರೆ ಅದರಿಂದ ಆಗುವ ಪರಿಣಾಮಗಳೇನು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಕೇಳಿದೆ.

ಎಲ್ಲಾ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಸಂಬಂಧಿಸಿದಂತೆ ಕಾಲಮಿತಿ ನಿಗದಿಪಡಿಸಲು ನ್ಯಾಯಾಲಯಕ್ಕೆ ಇರುವ ಅಧಿಕಾರದ ಬಗ್ಗೆಯೂ ಸುಪ್ರೀಂ ಕೋರ್ಟ್ ಪೀಠ ಅನುಮಾನ ವ್ಯಕ್ತಪಡಿಸಿದೆ.

ಯಾವ ರಾಜಕೀಯ ಪಕ್ಷ ಅಧಿಕಾರದಲ್ಲಿದೆ ಅಥವಾ ಅಧಿಕಾರದಲ್ಲಿತ್ತು ಎಂಬುದರ ಆಧಾರದ ಮೇಲೆ ಈ ವಿಷಯವನ್ನು ನಿರ್ಧರಿಸುವುದಿಲ್ಲ ಎಂಬುದನ್ನೂ ಪೀಠವು ಸ್ಪಷ್ಟಪಡಿಸಿದೆ.

ರಾಜ್ಯ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ಕಾಲಮಿತಿ ನಿಗದಿಪಡಿಸಬಹುದೇ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಲ್ಲೇಖಿಸಿರುವ ಸಾಂವಿಧಾನಿಕ ಪ್ರಶ್ನೆಗಳ ಕುರಿತ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

ಆರನೇ ದಿನದ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠವು, 'ಮಸೂದೆಗಳಿಗೆ ನಿಗದಿತ ಸಮಯದೊಳಗೆ ಅಂಕಿತ ಹಾಕದಿದ್ದರೆ, ರಾಷ್ಟ್ರಪತಿ ಅಥವಾ ರಾಜ್ಯಪಾಲರನ್ನು ನ್ಯಾಯಾಂಗ ನಿಂದನೆಗಾಗಿ ವಿಚಾರಣೆಗೆ ಒಳಪಡಿಸಬಹುದೇ' ಎಂದು ಕೇಳಿತು.

'ಅಂಕಿತ ಹಾಕಲು ವಿಳಂಬ ಮಾಡಿದರೆ, ಸಂಬಂಧಪಟ್ಟವರು ಸಮಸ್ಯೆಗೆ ಪರಿಹಾರ ಕೋರಿ ನ್ಯಾಯಾಲಯದ ಮೊರೆಹೋಗಬಹುದು. ಆಗ ನ್ಯಾಯಾಲಯವು ಸಮಯದ ಮಿತಿಯೊಳಗೆ ನಿರ್ಧಾರ ತೆಗೆದುಕೊಳ್ಳಬೇಕೆಂದು ನಿರ್ದೇಶಿಸಬಹುದು. ರಾಜ್ಯಪಾಲರು ಮತ್ತು ರಾಷ್ಟ್ರಪತಿಯವರಿಗೆ ನ್ಯಾಯಾಲಯವು ಸಾಮಾನ್ಯ ಕಾಲಮಿತಿ ನಿಗದಿಪಡಿಸಬೇಕು ಎಂದು ಇದರ ಅರ್ಥವಲ್ಲ' ಎಂದಿದೆ.

ತಮಿಳುನಾಡು ಸರ್ಕಾರದ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, 'ರಾಜ್ಯಪಾಲರು ಮಸೂದೆಗಳನ್ನು ಅನಿರ್ದಿಷ್ಟ ಅವಧಿಯವರೆಗೆ ತಡೆಹಿಡಿದ ಪುನರಾವರ್ತಿತ ಪ್ರಕರಣಗಳನ್ನು ಗಮನದಲ್ಲಿಟ್ಟುಕೊಂಡು ಕಾಲಮಿತಿ ನಿಗದಿಪಡಿಸುವುದು ಅಗತ್ಯ' ಎಂದು ವಾದಿಸಿದರು.

'ಸಂವಿಧಾನದ ಅಂಶಗಳ ವ್ಯಾಖ್ಯಾನ'

ರಾಜ್ಯ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ರಾಜ್ಯಪಾಲರು ಮತ್ತು ರಾಷ್ಟ್ರಪತಿಯವರಿಗೆ ನ್ಯಾಯಾಲಯವು ಸಮಯ ಮಿತಿ ನಿಗದಿಪಡಿಸಬಹುದೇ ಎಂಬ ರಾಷ್ಟ್ರಪತಿಯವರ ಉಲ್ಲೇಖವನ್ನು ಪರಿಗಣಿಸುವಾಗ ಸಂವಿಧಾನ ಏನು ಹೇಳಿದೆಯೋ ಅದನ್ನು ಮಾತ್ರ ವ್ಯಾಖ್ಯಾನಿಸುತ್ತೇವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಆಂಧ್ರಪ್ರದೇಶ, ತೆಲಂಗಾಣ ಅಥವಾ ಕರ್ನಾಟಕಕ್ಕೆ ಸಂಬಂಧಿಸಿದ ಪ್ರತ್ಯೇಕ ಪ್ರಕರಣಗಳನ್ನು ನಾವು ಪರಿಗಣಿಸುವುದಿಲ್ಲ. ಸಂವಿಧಾನದಲ್ಲಿರುವ ವಿಚಾರಗಳನ್ನು ಮಾತ್ರ ವ್ಯಾಖ್ಯಾನಿಸುತ್ತೇವೆ. ಅದರ ಹೊರತಾದುದು ಏನೂ ಇಲ್ಲ' ಎಂದು ಸಿಜೆಐ ಹೇಳಿದರು.

ದಬಾಂಗ್ ದಿಲ್ಲಿಗೆ ಮಣಿದ ಬುಲ್ಸ್

ಪ್ರೊ ಕಬಡ್ಡಿ ಲೀಗ್: ಉತ್ತರಾರ್ಧದಲ್ಲಿ ಹೋರಾಟ ತೋರಿದ ಬೆಂಗಳೂರು



ದಬಾಂಗ್ ಡೆಲ್ಲಿ ತಂಡದ ಆಶು ಮಲಿಕ್ ರೇಡಿಂಗ್ ವೈಖರಿ 'ಎಕ್ಸ್' ಚಿತ್ರ

ವಿಶಾಖಪಟ್ಟಣ: ಆರಂಭದ ತೀವ್ರ ಹಿನ್ನಡೆಯಿಂದ ಒತ್ತಡಕ್ಕೆ ಸಿಲುಕಿದ ಬೆಂಗಳೂರು ಬುಲ್ಸ್ ತಂಡ ಪ್ರೊ ಕಬಡ್ಡಿ ಲೀಗ್ 12ನೇ ಆವೃತ್ತಿಯ ತನ್ನ ಎರಡನೇ ಪಂದ್ಯದಲ್ಲಿ ದಬಾಂಗ್ ಡೆಲ್ಲಿ ಎದುರು ಐದು ಅಂಕಗಳಿಂದ ಸೋಲನುಭವಿಸಿತು. ಇದು ಬೆಂಗಳೂರಿನ ತಂಡಕ್ಕೆ ಎರಡನೇ ಸೋಲು.

ವಿಶ್ವನಾಥ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಮಂಗಳವಾರ ನಡೆದ ಮೊದಲ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ 34-41 ಅಂಕಗಳಿಂದ ಡೆಲ್ಲಿಗೆ ಶರಣಾಯಿತು. ಬುಲ್ಸ್ ಪರ ರೇಡರ್ ಆಶೀಶ್ ಮಲಿಕ್ (8 ಅಂಕ) ಮತ್ತು ಆಲ್‌ರೌಂಡರ್ ಅಲಿರೇಜಾ ಮಿರ್ಜಾಯನ್ (10 ಅಂಕ) ಹೋರಾಟದಿಂದ ಅಲ್ಲದೆ ಗಮನಾರ್ಹ ಪ್ರದರ್ಶನ ಮೂಡಿಬರಲಿಲ್ಲ.

ದಬಾಂಗ್ ಡೆಲ್ಲಿ ತಂಡದ ಪರ ಸ್ಟಾರ್ ರೇಡರ್ ಆಶು ಮಲಿಕ್ (15 ಅಂಕ) ಮಿಂಚಿದರು, ನೀರಜ್ ನರ್ವಾಲ್ (7 ಅಂಕ) ಆಕರ್ಷಕ ಆಟವಾಡಿದರು.

ಆರಂಭದ 30 ನಿಮಿಷಗಳ ನಂತರ 17-34 ರಲ್ಲಿ ತೀವ್ರ ಹಿನ್ನಡೆ ಅನುಭವಿಸಿದ್ದ ಬೆಂಗಳೂರು ಮರುಹೋರಾಟ ನಡೆಸಿ ಎದುರಾಳಿ ತಂಡಕ್ಕೆ ಆತಂಕ ಮೂಡಿಸಿತು. ಆದರೆ ಆ ಲಯವನ್ನು ಕೊನೆಯವರೆಗೆ ಮುಂದುವರಿಸಲು ಸಾಧ್ಯವಾಗಲಿಲ್ಲ. ಕೊನೆಯ ನಿಮಿಷ ಇದ್ದಾಗ ಹಿನ್ನಡೆಯನ್ನು 29-39ರಲ್ಲಿ ತಗ್ಗಿಸಲು ಸಾಧ್ಯವಾಯಿತು.

ಪೂರ್ವಾರ್ಧದಲ್ಲಿ ಮೂರು ಟ್ಯಾಕಲ್ ಹಾಗೂ ಎಂಟು ರೇಡಿಂಗ್ ಅಂಕ ಕಲೆಹಾಕಿದ ಬುಲ್ಸ್, ಉತ್ತರಾರ್ಧದಲ್ಲಿ 13 ಟ್ಯಾಕಲ್ ಜತೆಗೆ 20 ರೇಡಿಂಗ್ ಅಂಕ ಗಳಿಸಿ ಪರಿಣಾಮಕಾರಿಯಾಗಿ ಪ್ರತಿಹೋರಾಟ ನಡೆಸಿತು.

ಆಟದ 25ನೇ ನಿಮಿಷ ಅಲಿರೇಜಾ ಡೆಲ್ಲಿ ತಂಡದ ಟ್ಯಾಕಲ್‌ಗೆ ಒಳಗಾದ ಕಾರಣ ಬುಲ್ಸ್ ಎರಡನೇ ಬಾರಿ ಆಲ್‌ಔಟ್ ಬಲೆಗೆ ಸಿಲುಕಿ 13-28 ರಲ್ಲಿ ಹಿನ್ನಡೆಗೆ ಒಳಗಾಯಿತು. ಇದು ಸಹಜವಾಗಿ ಬೆಂಗಳೂರು ತಂಡದ ಮೇಲಿನ ಒತ್ತಡವನ್ನು ಇಮ್ಮಡಿಗೊಳಿಸಿತು.

ಬೆಂಗಳೂರು ಬುಲ್ಸ್ ತನ್ನ ಮುಂದಿನ ಪಂದ್ಯವನ್ನು ಇದೇ 5ರಂದು ಯು ಮುಂಬಾ ಎದುರು ಆಡಲಿದೆ.

ಜೈಪುರ ಜಯ: ಅಂತಿಮ ಕ್ಷಣದ ವರೆಗೂ ತೀವ್ರ ಪೈಪೋಟಿ ಕಂಡ ದಿನದ ಎರಡನೇ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು 39-36ರಿಂದ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿತು.

ಜೈಪುರ ಪರ ನಿತಿನ್ ಕುಮಾರ್ 13 ರೇಡಿಂಗ್ ಪಾಯಿಂಟ್ಸ್ ಪಡೆದರೆ, ಅಲಿ ಸಮದಿ ಚೌಬ್ತರಶ್ (8) ಅವರಿಗೆ ಉತ್ತಮ ಬೆಂಬಲ ನೀಡಿದರು. ರೆಝಾ ಮೀರ್‌ಬಘೇರಿ ಮೂರು ಟ್ಯಾಕಲ್ ಪಾಯಿಂಟ್ಸ್ ಪಡೆದು ಮಿಂಚಿದರು.

ಪಂದ್ಯದಲ್ಲಿ ಒಮ್ಮೆಯೂ ಆಲೌಟ್ ಆಗದಿದ್ದರೂ, ಮೂರು ಅಂಕಗಳ ಅಂತರದಲ್ಲಿ ಪಟ್ನಾ ಸೋಲನುಭವಿಸಬೇಕಾಯಿತು. ಮಣಿಂದರ್ ಸಿಂಗ್ (15), ಸುಧಾಕರ್ ಎಂ. (9) ಹಾಗೂ ಅಯಾನ್ ಲೋಚಬ್ (6) ರೇಡಿಂಗ್‌ನಲ್ಲಿ ಪ್ರಾಬಲ್ಯ ಮೆರೆದರಾದರೂ, ಟ್ಯಾಕಲ್ ವಿಭಾಗವು ವೈಫಲ್ಯ ಅನುಭವಿಸಿತು.

ಪೈರೇಟ್ಸ್ ತಂಡವು ಸೋಮವಾರ 31-34ರಿಂದ ಯುಪಿ ಯೋಧಾಸ್ ಎದುರು ಅಲ್ಪ ಅಂತರದಲ್ಲಿ ಸೋತಿತ್ತು.

ಭಾರತಕ್ಕೆ ಕೊರಿಯಾ ಸವಾಲು

ಏಷ್ಯಾ ಕಪ್: ಇಂದು ಸೂಪರ್ ಫೋರ್ ಹಂತದ ಪಂದ್ಯಗಳು



ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಪಿಟಿಐ ಸಂಗ್ರಹ ಚಿತ್ರ

ರಾಜಗೀರ್ (ಪಿಟಿಐ): ಗುಂಪು ಹಂತದಲ್ಲಿ ಪ್ರದರ್ಶಿಸಿದ ಆಟದಿಂದ ಉತ್ಸಾಹದಲ್ಲಿ ಇರುವ ಭಾರತ ತಂಡ ಈಗ ಆತ್ಮವಿಶ್ವಾಸ ಮತ್ತು ದೃಢಸಂಕಲ್ಪದಲ್ಲಿದೆ. ಆದರೆ ಏಷ್ಯಾ ಕಪ್ ಸೂಪರ್ ಫೋರ್ ಹಂತದಲ್ಲಿ ಹಾಲಿ ಚಾಂಪಿಯನ್ ದಕ್ಷಿಣ ಕೊರಿಯಾ ಎದುರು ಬುಧವಾರ ಇಲ್ಲಿ ಆಡಲಿರುವ ಆತಿಥೇಯ ತಂಡವು ತನ್ನ ಪ್ರದರ್ಶನದ ಮಟ್ಟವನ್ನು ಎತ್ತರಿಸಬೇಕಾದ ಅಗತ್ಯವಿದೆ.

'ಎ' ಗುಂಪಿನಲ್ಲಿ ಭಾರತ ತಂಡವು ಚೀನಾ ವಿರುದ್ಧ 4-3, ಜಪಾನ್ ವಿರುದ್ಧ 3-2 ಮತ್ತು ಕೆಳಕ್ರಮಾಂಕದ ದುರ್ಬಲ ತಂಡವೆನಿಸಿದ ಕಜಕಸ್ತಾನ ವಿರುದ್ಧ 15-0 ಗೋಲುಗಳ ಜಯ ಪಡೆದು ಅಜೇಯ ಸಾಧನೆ ಪ್ರದರ್ಶಿಸಿತ್ತು.

ಆದರೆ ಪ್ರಬಲ ತಂಡಗಳಾದ ಚೀನಾ ಮತ್ತು ಜಪಾನ್ ವಿರುದ್ಧ ಭಾರತದ ಆಟ ಅಂಥ ಉತ್ತಮ ಮಟ್ಟದಲ್ಲಿರಲಿಲ್ಲ. ಟೂರ್ನಿಯಲ್ಲಿ ಎರಡನೇ ಬಾರಿ ಭಾಗವಹಿಸಿದ್ದ ಕಜಕಸ್ತಾನ ವಿರುದ್ಧ ಗೆದ್ದ ರೀತಿ ಮಾತ್ರ ಸಮಾಧಾನ ಮೂಡಿಸಿದೆ.

ಕೊರಿಯಾ ಸಹ ಎಂದಿನ ಲಯದಲ್ಲಿ ಆಡಿಲ್ಲ. 'ಬಿ' ಗುಂಪಿನಲ್ಲಿ ಮಲೇಷ್ಯಾ ನಂತರ ಎರಡನೇ ಸ್ಥಾನ ಗಳಿಸಿ ಐದು ಬಾರಿಯ ಚಾಂಪಿಯನ್ ತಂಡ ಸೂಪರ್ ಫೋರ್‌ಗೆ ಅರ್ಹತೆ ಪಡೆದಿದೆ. ಈ ಟೂರ್ನಿ ಗೆಲ್ಲುವ ನೆಚ್ಚಿನ ತಂಡವೆನಿಸಿರುವ ಕೊರಿಯಾ ಲೀಗ್ ಹಂತದಲ್ಲಿ ಮಲೇಷ್ಯಾ ಎದುರು ಆಘಾತಕಾರಿ 1-4 ಸೋಲನುಭವಿಸಿತ್ತು.

ಮಧ್ಯಾಹ್ನದ ಪಂದ್ಯಗಳನ್ನು ಆಡುವಾಗ ಕೊರಿಯನ್ನರು ಇಲ್ಲಿನ ಬಿಸಿಲು ಮತ್ತು ಸೆಕೆಯಿಂದ ಸುಸ್ತಾಗಿದ್ದರು. ಆದರೆ ಸೂಪರ್ ಫೋರ್ ಹಂತದ ಪಂದ್ಯಗಳು ಸಂಜೆಯಿಂದ ನಡೆಯುತ್ತಿವೆ. ಮಂಗಳವಾರದ ವಿರಾಮವು ತಂಡಕ್ಕೆ ಸ್ವಲ್ಪ ನೆರವಾಗಬಹುದು.

ಸೋಮವಾರ ಕಜಕಸ್ತಾನ ತಂಡದ ಎದುರು ಭಾರತ ಎಲ್ಲ – ಗೋಲ್ ಕೀಪಿಂಗ್, ಡಿಫೆನ್ಸ್, ಮಿಡ್‌ಫೀಲ್ಡ್ ಅಥವಾ ದಾಳಿ – ವಿಭಾಗಗಳಲ್ಲಿ ಉತ್ತಮವಾಗಿ ಆಡಿದೆ. ಅಭಿಷೇಕ್ ನಾಲ್ಕು ಗೋಲು ಗಳಿಸಿ ಗಮನಸೆಳೆದಿದ್ದಾರೆ.

ಆದರೆ ಮುನ್ನಡೆಯಲ್ಲಿರುವ ದಿಲ್‌ಪ್ರೀತ್ ಸಿಂಗ್ ಟೂರ್ನಿಯಲ್ಲಿ ಅಷ್ಟೊಂದು ಯಶಸ್ಸು ಕಂಡಿಲ್ಲ. ಅವರು ಲಯ ಕಂಡುಕೊಳ್ಳಬೇಕಾಗಿದೆ.

ಆದರೆ ಚೀಫ್ ಕೋಚ್ ಕ್ರೇಗ್ ಫುಲ್ಟನ್ ಅವರು ತಂಡದ ಫಾರ್ವರ್ಡ್ ಆಟಗಾರರ ಮೇಲೆ ಭರವಸೆ ಹೊಂದಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30

ಮಲೇಷ್ಯಾ–ಚೀನಾ ಸೆಣಸಾಟ

ಬುಧವಾರ ನಡೆಯುವ ಇನ್ನೊಂದು ಪಂದ್ಯದಲ್ಲಿ ಮಲೇಷ್ಯಾ ತಂಡವು, ಸಾಕಷ್ಟು ಸುಧಾರಣೆ ಕಂಡಿರುವ ಚೀನಾ ತಂಡವನ್ನು ಎದುರಿಸಲಿದೆ.

ಸೂಪರ್ ಫೋರ್ ಹಂತದಲ್ಲಿ ಎಲ್ಲ ತಂಡಗಳು ಮೂರು ಎದುರಾಳಿಗಳ ವಿರುದ್ಧ ಆಡಲಿವೆ. ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಭಾನುವಾರ ಫೈನಲ್‌ನಲ್ಲಿ ಎದುರಾಗಲಿವೆ.

ಪಂದ್ಯ ಆರಂಭ: ಸಂಜೆ 5

ಚಿಟಿಕೆ ಸುದ್ದಿ

ಡಿ. 6ಕ್ಕೆ ಮಿಡ್‌ನೈಟ್ ಮ್ಯಾರಥಾನ್

ಬೆಂಗಳೂರು: 'ಬೆಂಗಳೂರು ಮಿಡ್‌ನೈಟ್ ಮ್ಯಾರಥಾನ್' (ಬಿಎಂಎಂ) ಡಿಸೆಂಬರ್ 6ರಂದು ವೈಟ್‌ಫೀಲ್ಡ್‌ನ ಕೆಟಿಪಿಒ ಮೈದಾನದಲ್ಲಿ ನಡೆಯಲಿದೆ.

ರೋಟರಿ ಬೆಂಗಳೂರು ಐಟಿ ಕಾರಿಡಾರ್ (ಆರ್‌ಬಿಐಟಿಸಿ) ಆಯೋಜಿಸುವ ಮಿಡ್‌ನೈಟ್ ಮ್ಯಾರಥಾನ್‌ನ ಈ ವರ್ಷದ ಧ್ಯೇಯವಾಕ್ಯ 'ಸುರಕ್ಷಿಯ ನಗರಕ್ಕಾಗಿ ಓಟ'. 18ನೇ ಆವೃತ್ತಿಯ ಈ ವಿಶಿಷ್ಟ ಮ್ಯಾರಥಾನ್‌ಗೆ ಈಗಾಗಲೇ ನೋಂದಣಿ ನಡೆಯುತ್ತಿದ್ದು, ಡಿಸೆಂಬರ್ 6ರವರೆಗೆ ಅವಕಾಶವಿದೆ. www.midnightmarathon.in ವೆಬ್‌ಸೈಟ್‌ಗೆ ಲಾಗಿನ್ ಮಾಡಿ ನೋಂದಣಿ ಮಾಡಿಕೊಳ್ಳಬಹುದು.

ದೇಶ–ವಿದೇಶಗಳ ಸುಮಾರು 12,000 ಓಟಗಾರರು, ಅಥ್ಲೀಟುಗಳು, ಕಾರ್ಪೊರೇಟ್ ಕಂಪನಿ ಸಿಬ್ಬಂದಿ ಭಾಗವಹಿಸುವ ನಿರೀಕ್ಷೆಯಿದೆ ಎಂದು ಬಿಎಂಎಂ 2025ರ ಅಧ್ಯಕ್ಷೆ ಸುಶ್ಮಿತಾ ಬಾಲಸುಬ್ರಮಣಿಯಮ್ ತಿಳಿಸಿದ್ದಾರೆ.

ಭಾರತ ವಿರುದ್ಧದ ಸರಣಿಗೆ ಕಮಿನ್ಸ್ ಅಲಭ್ಯ

ಮೆಲ್ಬರ್ನ್ (ಪಿಟಿಐ): ಬೆನ್ನುನೋವಿನ ಕಾರಣ ಆಸ್ಟ್ರೇಲಿಯಾದ ಅಗ್ರ ವೇಗಿ ಮತ್ತು ಟೆಸ್ಟ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರು ಭಾರತ ಮತ್ತು ನ್ಯೂಜಿಲೆಂಡ್ ವಿರುದ್ಧದ ಸೀಮಿತ ಓವರುಗಳ ಕ್ರಿಕೆಟ್ ಸರಣಿಗೆ ಅಲಭ್ಯರಾಗಿದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ಮಂಗಳವಾರ ತಿಳಿಸಿದೆ.



ಮುಂಬರುವ ಆ್ಯಷಸ್ ಸರಣಿಯನ್ನು ಗಮನದಲ್ಲಿಟ್ಟುಕೊಂಡು ಅವರ 'ಪುನಃಶ್ಚೇತನ' ನಿರ್ವಹಣೆ ನಡೆಯುತ್ತಿದೆ ಎಂದೂ ತಿಳಿಸಿದೆ.

ಆಸ್ಟ್ರೇಲಿಯಾ ತಂಡವು ತವರಿನಲ್ಲಿ ನ್ಯೂಜಿಲೆಂಡ್ ತಂಡದ ವಿರುದ್ಧ ಅಕ್ಟೋಬರ್ 1ರಿಂದ ಮೂರು ಟಿ20 ಪಂದ್ಯಗಳ ಸರಣಿ ಆಡಲಿದೆ. ಇದರ ನಂತರ ಪ್ರವಾಸಿ ಭಾರತ ತಂಡದ ವಿರುದ್ಧ ಮೂರು ಏಕದಿನ (ಅಕ್ಟೋಬರ್ 19–25ರ ನಡುವೆ) ಮತ್ತು ಐದು ಟಿ20 ಪಂದ್ಯಗಳನ್ನು (ಅ. 29 ರಿಂದ ನವೆಂಬರ್ 8ರ ಅವಧಿಯಲ್ಲಿ) ಆಡಲಿದೆ.

ಪ್ರವಾಸಿ ಇಂಗ್ಲೆಂಡ್ ತಂಡದ ವಿರುದ್ಧ ಆ್ಯಷಸ್ ಸರಣಿ ನವೆಂಬರ್ 21ರಂದು ಪರ್ತ್ ಟೆಸ್ಟ್ ಮೂಲಕ ಆರಂಭವಾಗಲಿದೆ.

ಟೆನಿಸ್: 16ರ ಘಟ್ಟಕ್ಕೆ ಸ್ನಿಗ್ಧಾ, ರೋಹಿತ್

ಬೆಂಗಳೂರು: ಅಗ್ರ ಶ್ರೇಯಾಂಕದ ಸ್ನಿಗ್ಧಾ ಕಾಂತ ಹಾಗೂ ಶ್ರೇಯಾಂಕರಹಿತ ಆಟಗಾರ ರೋಹಿತ್ ಗೋಪಿನಾಥ್ ಅವರು ಮಂಗಳವಾರ ಇಲ್ಲಿ ಆರಂಭಗೊಂಡ ಕೆಎಸ್‌ಎಲ್‌ಟಿಎ ಐಟಿಎಫ್ ವಿಶ್ವ ಟೆನಿಸ್ ಜೂನಿಯರ್ ಟೂರ್ನಿಯ ಪ್ರಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ರೋಹಿತ್ ಅವರು ಬಾಲಕರ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ 2-6, 6-3, 6-2ರಿಂದ ಏಳನೇ ಶ್ರೇಯಾಂಕದ ಪ್ರಕಾಶ್ ಸರನ್ ಅವರಿಗೆ ಆಘಾತ ನೀಡಿದರು. ಅಮೆರಿಕದ ನಿಯಾಂತ್ ಬದರಿನಾರಾಯಣನ್ 6-7 (4), 6-3, 6-1ರಿಂದ ಯಶ್ವಿನ್ ದಹಿಯಾ ವಿರುದ್ಧ ಜಯಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ಸ್ನಿಗ್ಧಾ 6-2, 6-1ರಿಂದ ಶ್ರೇಯಾಂಕ ರಹಿತ ಆಟಗಾರ್ತಿ ಶ್ರೀಯಾ ದೇಶಪಾಂಡೆ ಅವರನ್ನು ನೇರ ಸೆಟ್‌ಗಳಲ್ಲಿ ಮಣಿಸಿ 16ರ ಘಟ್ಟಕ್ಕೆ ಪ್ರವೇಶ ಪಡೆದರು. ಸೃಷ್ಟಿ ಕಿರಣ್ ಅವರು 7-6 (6), 6-3ರಿಂದ ತೇಜಸ್ವಿ ಮನ್ನೆನ್ ವಿರುದ್ಧ ಸುಲಭ ಗೆಲುವು ದಾಖಲಿಸಿದರು.

ಟೈಟಲ್ ಪ್ರಾಯೋಜಕರಿಗಾಗಿ ಬಿಸಿಸಿಐ ಬಿಡ್

ಆನ್‌ಲೈನ್ ಗೇಮಿಂಗ್, ಕ್ರಿಪ್ಟೋಕರೆನ್ಸಿ ಕಂಪನಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಟೈಟಲ್ ಪ್ರಾಯೋಜಕರಿಗಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಬಿಡ್ ಆಹ್ವಾನಿಸಿದೆ. ಹಣದ ಜೂಜಾಟಗಳು ಮತ್ತು ಕ್ರಿಪ್ಟೋ ಕರೆನ್ಸಿ ವ್ಯವಹರಿಸುವ ಕಂಪನಿಗಳನ್ನು ಬಿಡ್‌ನಲ್ಲಿ ಭಾಗವಹಿಸದಂತೆ ನಿರ್ಬಂಧಿಸಲಾಗಿದೆ.

ಕೇಂದ್ರ ಸರ್ಕಾರ ಈಚೆಗೆ ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಕಾಯ್ದೆಯನ್ನು ಜಾರಿಗೊಳಿಸಿದೆ. ಅದರಿಂದಾಗಿ ಈ ಮೊದಲು ಭಾರತ ತಂಡದ ಟೈಟಲ್ ಪ್ರಾಯೋಜಕರಾಗಿದ್ದ ಡ್ರೀಮ್ ಇಲೆವನ್ ಜೊತೆಗಿನ ಒಪ್ಪಂದವನ್ನು ಬಿಸಿಸಿಐ ರದ್ದುಗೊಳಿಸಿದೆ. ಆದ್ದರಿಂದ ಈಗ ಹೊಸ ಪ್ರಾಯೋಜಕರನ್ನು ಆಹ್ವಾನಿಸುತ್ತಿದೆ. ಡ್ರೀಮ್ ಇಲೆವನ್ ಮತ್ತು ಮೈ ಇಲೆವನ್ ಸರ್ಕಲ್ ಗೇಮಿಂಗ್ ಆ್ಯಪ್‌ಗಳ ಪ್ರಾಯೋಜಕತ್ವದಿಂದ ಬಿಸಿಸಿಐಗೆ ಸುಮಾರು ಒಂದು ಕೋಟಿ ರೂಪಾಯಿ ಆದಾಯವಿತ್ತು.

ಪ್ರಸ್ತುತ ಬಿಡ್ ಸಲ್ಲಿಸುವ ಸಂಸ್ಥೆಗಳಿಗೂ ಬಿಸಿಸಿಐ ಕೆಲವು ನಿಬಂಧನೆಗಳನ್ನು ಹಾಕಿದೆ.

'ಬಿಡ್ ಸಲ್ಲಿಸುವ ಸಂಸ್ಥೆಗಳು ಅಥವಾ ಸಮೂಹ ಸಂಸ್ಥೆಗಳು; ಭಾರತದೊಳಗೆ ಅಥವಾ ವಿಶ್ವದ ಯಾವುದೇ ಭಾಗದಲ್ಲಿಯೂ ಮನಿ ಗೇಮಿಂಗ್, ಬೆಟ್ಟಿಂಗ್, ಜೂಜಾಟ ಅಥವಾ ಅಂತಹದೇ ಸೇವೆಗಳಲ್ಲಿ ತೊಡಗಿಕೊಂಡಿರಬಾರದು. ಅಂತಹ ಸೇವೆಗಳನ್ನು ಭಾರತದಲ್ಲಿ ಯಾವುದೇ ವ್ಯಕ್ತಿಗೂ ಒದಗಿಸಿರಬಾರದು, ಭಾರತದಲ್ಲಿ ಬೆಟ್ಟಿಂಗ್ ಅಥವಾ ಜೂಜಾಟಗಳಲ್ಲಿ ತೊಡಗಿಕೊಂಡಿರುವ ವ್ಯಕ್ತಿಗಳಲ್ಲಿ ಹೂಡಿಕೆ ಮಾಡಿರಬಾರದು ಅಥವಾ ಅಂತಹ ವ್ಯಕ್ತಿಗಳು ಮಾಲೀಕತ್ವದ ಭಾಗವಾಗಿರಬಾರದು' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

'ಆಸಕ್ತಿ ಅಭಿವ್ಯಕ್ತಿ ಅರ್ಜಿ' (ಐಇಒಐ) ನಮೂನೆ ಖರೀದಿಸಲು ಸೆ.12 ಕೊನೆಯ ದಿನವಾಗಿದೆ. ಬಿಡ್ ದಾಖಲೆಗಳನ್ನು ಸೆ. 16ರೊಳಗೆ ಸಲ್ಲಿಸಬೇಕು.

'ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಕಾಯ್ದೆ ಅನ್ವಯ ಜೂಜಾಟ, ಬೆಟ್ಟಿಂಗ್ ಪ್ರಚಾರ, ವ್ಯವಹಾರಗಳಲ್ಲಿ ತೊಡಗಿರುವ ಕಂಪನಿಗಳಿಗೆ ಬಿಡ್ ಸಲ್ಲಿಸುವಂತಿಲ್ಲ. ಅಷ್ಟೇ ಅಲ್ಲ; ತಂಬಾಕು, ಮದ್ಯ, ಅಶ್ಲೀಲತೆ ಮತ್ತು ಸಾರ್ವಜನಿಕರ ನೈತಿಕತೆಗೆ ಧಕ್ಕೆ ತರುವ ಯಾವುದೇ ರೀತಿಯ ಸಂಸ್ಥೆಗಳಿಗೂ ನಿರ್ಬಂಧ ಹಾಕಲಾಗಿದೆ' ಎಂದೂ ಪ್ರಕಟಣೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಪ್ರಸ್ತುತ ಆಡಿದಾಸ್, ಕ್ಯಾಂಪಾ ಕೋಲಾ, ಐಡಿಎಫ್‌ಸಿ ಫರ್ಸ್ಟ್ ಬ್ಯಾಂಕ್ ಮತ್ತು ಎಸ್‌ಬಿಐ ಲೈಫ್ ಸಂಸ್ಥೆಗಳಿವೆ. ಅಲ್ಲದೇ ಇನ್ನೂ ಕೆಲವು ಕ್ರೀಡಾ ಪೋಷಾಕು ಸಂಸ್ಥೆಗಳು, ಬ್ಯಾಂಕ್‌ಗಳು, ಹಣಕಾಸು ಸೇವಾ ಮತ್ತು ನಾನ್ ಬ್ಯಾಂಕಿಂಗ್ ಕಂಪೆನಿಸ್, ಆಲ್ಕೋಹಾಲ್ ರಹಿತ ತಂಪು ಪಾನೀಯಗಳು, ಫ್ಯಾನ್ಸ್, ಮಿಕ್ಸರ್ ಗ್ರೈಂಡರ್ಸ್, ಸೇಫ್ಟಿ ಲಾಕ್ಸ್ ಮತ್ತು ವಿಮಾ ಸಂಸ್ಥೆಗಳೂ ಇವೆ.

ಕೆಎಸ್‌ಸಿಎ ಇಲೆವನ್‌ಗೆ ಸ್ಮರಣ್ ನಾಯಕ

ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಭಾನ್ವಿತ, ಯುವ ಬ್ಯಾಟರ್ ಆರ್. ಸ್ಮರಣ್ ಅವರನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆಶ್ರಯದಲ್ಲಿ ನಡೆಯಲಿರುವ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕರ್ನಾಟಕ ಇಲೆವನ್ ತಂಡದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ತಂಡದಲ್ಲಿ ಭಾರತ ಟೆಸ್ಟ್ ತಂಡದ ವೇಗಿ ಪ್ರಸಿದ್ಧ ಕೃಷ್ಣ ಅವರೂ ಸ್ಥಾನ ಪಡೆದಿದ್ದಾರೆ.



ಆರ್. ಸ್ಮರಣ್

ಗುರುವಾರದಿಂದ ಬೆಂಗಳೂರಿನಲ್ಲಿ ಈ ಟೂರ್ನಿಯು ಆರಂಭವಾಗಲಿದೆ. ಕೆಎಸ್‌ಸಿಎ ಆಯ್ಕೆ ಸಮಿತಿಯು ಕೆಎಸ್‌ಸಿಎ ಇಲೆವನ್, ಕೆಎಸ್‌ಸಿಎ ಅಧ್ಯಕ್ಷರ ಇಲೆವನ್, ಸೆಕ್ರೆಟರಿಸ್ ಇಲೆವನ್ ಮತ್ತು ಕೋಲ್ಟ್ಸ್ ಇಲೆವನ್ ತಂಡಗಳನ್ನು ಪ್ರಕಟಿಸಿದೆ. ಯುವ ಆಟಗಾರರಿಗೆ ನಾಯಕತ್ವದ ಹೊಣೆ ವಹಿಸಲಾಗಿದೆ.

ತಂಡಗಳು ಇಂತಿವೆ: ಕೆಎಸ್‌ಸಿಎ ಇಲೆವನ್: ಆರ್. ಸ್ಮರಣ್ (ನಾಯಕ), ಮೆಕ್ನಿಲ್ ಎಚ್. ನರೋನಾ, ಕೆ.ವಿ. ಅನೀಶ್, ಕೆ.ಎಲ್. ಶ್ರೀಜಿತ್ (ವಿಕೆಟ್‌ಕೀಪರ್), ಶ್ರೇಯಸ್ ಗೋಪಾಲ್, ಯಶೋವರ್ಧನ್ ಪರಂತಾಪ್, ಹಾರ್ದಿಕ್ ರಾಜ್, ಕೆ. ಶಶಿಕುಮಾರ್, ವಿದ್ವತ್ ಕಾವೇರಪ್ಪ, ವಿದ್ಯಾಧರ್ ಪಾಟೀಲ, ಅಭಿಲಾಷ್ ಶೆಟ್ಟಿ, ಲುವನೀತ್ ಸಿಸೊಡಿಯಾ (ವಿಕೆಟ್‌ಕೀಪರ್), ನೇಥನ್ ಡಿಮೆಲ್ಲೊ, ಪ್ರಸಿದ್ಧ ಎಂ ಕೃಷ್ಣ, ಗೌತಮ್ ಮಿಶ್ರಾ, ಸಂತೋಷ್ ಹತ್ತಿ. ಮನ್ಸೂರ್ ಅಲಿ ಖಾನ್ (ಕೋಚ್).

ಕೆಎಸ್‌ಸಿಎ ಅಧ್ಯಕ್ಷರ ಇಲೆವನ್: ಕಿಶನ್ ಎಸ್. ಬೆದರೆ (ನಾಯಕ), ಸುಜಯ್ ಸತೇರಿ (ವಿಕೆಟ್‌ಕೀಪರ್), ಎಸ್.ಯು. ಕಾರ್ತಿಕ್, ಇ.ಜೆ. ಜಾಸ್ಪರ್, ಹರ್ಷವರ್ಧನ್ ಖುಬಾ, ನಿರಂಜನ್, ಅಧೋಕ್ಷ ಹೆಗಡೆ, ಶ್ರೀಶಾ ಎಸ್. ಆಚಾರ, ಧನುಷ್ ಗೌಡ, ಆದಿತ್ಯ ನಾಯರ್, ಕೆ.ಎಂ. ಪ್ರವೇಶ್, ನಿತಿನ್ ಶಾಂತವೇರಿ, ಯಶ್ ರಾಜ್ ಪೂಂಜಾ, ರಾಜೇಂದ್ರ ಡಂಗನವರ, ಶರತ್ ಶ್ರೀನಿವಾಸ್. ಆದಿತ್ಯ ಬಿ ಸಾಗರ್ (ಕೋಚ್), ಆರ್.ಆರ್. ದೀಪು (ಕೋಚ್).


ಕೆಎಸ್‌ಸಿಎ ಸೆಕ್ರೆಟರಿ'ಸ್ ಇಲೆವನ್: ಎಸ್.ಜೆ. ನಿಕಿನ್ ಜೋಸ್ (ನಾಯಕ), ಕೃತಿಕ್ ಕೃಷ್ಣ (ವಿಕೆಟ್‌ಕೀಪರ್), ಬಿ.ಎನ್. ಯಶವಂತ್, ತುಷಾರ್ ಸಿಂಗ್, ಸಮಿತ್ ದ್ರಾವಿಡ್, ಲೋಚನ್ ಎಸ್ ಗೌಡ, ಧೀರಜ್ ಜೆ ಗೌಡ, ಎಂ. ವೆಂಕಟೇಶ್, ರಾಜವೀರ್ ವಾಧ್ವಾ, ನಿಶ್ಚಿತ್ ಪೈ, ಫೈಜಾನ್ ಖಾನ್ (ವಿಕೆಟ್‌ಕೀಪರ್), ಎಸ್.ಎಚ್. ಸ್ವರೂಪ್, ಅಭಿಷೇಕ್ ಅಹ್ಲಾವತ್, ಆದಿತ್ಯ ರಾವ್, ಮಾಧವ್ ಪಿ. ಬಜಾಜ್, ಧ್ರುವ ಪ್ರಭಾಕರ್. ಕುನಾಲ್ ಕಪೂರ್ (ಕೋಚ್).

ಕೆಎಸ್‌ಸಿಎ ಕೋಲ್ಟ್ಸ್ ಇಲೆವನ್: ಅನೀಶ್ವರ್ ಗೌತಮ್ (ನಾಯಕ), ಸಂಜಯ್ ಅಶ್ವಿನ್ (ವಿಕೆಟ್‌ಕೀಪರ್), ಪ್ರಖರ್ ಚತುರ್ವೇದಿ, ವಿಶಾಲ್ ಓನತ್, ಹರ್ಷಿಲ್ ಧರ್ಮಾನಿ, ಕೆ.ಪಿ. ಕಾರ್ತಿಕೇಯ, ಮೊಹಸಿನ್ ಖಾನ್, ಶಿಖರ್ ಶೆಟ್ಟಿ, ಸಮರ್ಥ ನಾಗರಾಜ್, ಮೊನಿಷ್ ರೆಡ್ಡಿ, ಎಸ್. ಇಶಾನ್, ಶ್ರೇಯಾಂಕ ಸಾಗರ್, ಅನಿರುದ್ಧ ಶ್ರೀನಿವಾಸ್ (ವಿಕೆಟ್‌ಕೀಪರ್), ಎಸ್. ತೌಫಿಕ್, ಅಭಯ್ ರಂಗನ್, ಅರವ್ ಮಹೇಶ್. ಸೋಮಶೇಖರ್ ಶಿರಗುಪ್ಪಿ (ಕೋಚ್).

ಅಮೆರಿಕ ಓಪನ್ ಟೆನಿಸ್: ಕ್ವಾರ್ಟರ್ ಫೈನಲ್‌ಗೆ ಸಿನ್ನರ್, ಶ್ವಾಂಟೆಕ್

ಒಸಾಕಾಗೆ ಸಾಟಿಯಾಗದ ಗಾಫ್

ನ್ಯೂಯಾರ್ಕ್ (ಎಎಫ್‌ಪಿ): ಬಹು ನಿರೀಕ್ಷಿತ ಸೆಣಸಾಟದಲ್ಲಿ ನವೋಮಿ ಒಸಾಕಾ ಅವರು ತವರಿನ ಫೇವರಿಟ್ ಕೊಕೊ ಗಾಫ್ ಅವರನ್ನು ನಿರೀಕ್ಷೆಗಿಂತ ಸುಲಭವಾಗಿ ಸೋಲಿಸಿ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಎಂಟರ ಸುತ್ತಿಗೆ ದಾಪುಗಾಲಿಟ್ಟರು. ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಮತ್ತು ಎರಡನೇ ಶ್ರೇಯಾಂಕದ ಆಟಗಾರ್ತಿ ಇಗಾ ಶ್ವಾಂಟೆಕ್ ಅವರೂ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.



ಗೆಲುವಿನ ಸಂಭ್ರಮ.... ಅಮೆರಿಕ ಓಪನ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ ನವೊಮಿ ಒಸಾಕಾ ಎಎಫ್‌ಪಿ ಚಿತ್ರ

ಅಮೆರಿಕ ಓಪನ್ ಮಾಜಿ ಚಾಂಪಿಯನ್ನರ ಪಂದ್ಯ ಸಮಬಲದ ಹೋರಾಟ ಕಾಣಲಿಲ್ಲ. ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಜಪಾನಿನ ತಾರೆ ಆರಂಭದಿಂದಲೇ ಮೇಲುಗೈ ಸಾಧಿಸಿ 6-3, 6-2 ರಿಂದ ಮೂರನೇ ಶ್ರೇಯಾಂಕದ ಗಾಫ್ ಅವರನ್ನು ಸದೆಬಡಿದರು.

27 ವರ್ಷ ವಯಸ್ಸಿನ ಒಸಾಕಾ ಮೊದಲ ಗೇಮ್‌ನಲ್ಲೇ ಗಾಫ್ ಅವರ ಸರ್ವಿಸ್ ಬ್ರೇಕ್ ಮಾಡಿದರು. ಒಸಾಕಾ ಅವರ ಬಿರುಸಿನ ಸರ್ವ್‌ಗಳನ್ನು ನಿಭಾಯಿಸಲು ಅಮೆರಿಕದ ಆಟಗಾರ್ತಿಗೆ ಸಾಧ್ಯವಾಗಲಿಲ್ಲ.

23ನೇ ಶ್ರೇಯಾಂಕದ ಒಸಾಕಾ ಕ್ವಾರ್ಟರ್‌ಫೈನಲ್‌ನಲ್ಲಿ 11ನೇ ಶ್ರೇಯಾಂಕದ ಕರೋಲಿನಾ ಮುಚೋವಾ ಅವರನ್ನು ಎದುರಿಸಲಿದ್ದಾರೆ. ಝೆಕ್ ರಿಪಬ್ಲಿಕ್‌ನ ಕರೋಲಿನಾ ಇನ್ನೊಂದು ಪಂದ್ಯದಲ್ಲಿ 27ನೇ ಶ್ರೇಯಾಂಕದ ಮಾರ್ತಾ ಕೊಸ್ಟಿಯುಕ್ (ಉಕ್ರೇನ್) ಅವರನ್ನು 6-3, 6-7 (0/7), 6-3 ರಿಂದ ಹಿಮ್ಮೆಟ್ಟಿಸಿದರು.

ಸಿನ್ನರ್ ವಿನ್ನರ್: ಹಾಲಿ ಚಾಂಪಿಯನ್ ಸಿನ್ನರ್ ನಿರಾಯಾಸವಾಗಿ ಕಜಾಕಸ್ತಾನದ ಅಲೆಕ್ಸಾಂಡರ್ ಬುಬ್ಲಿಕ್ ಅವರನ್ನು 6-1, 6-1, 6-1 ರಿಂದ ಸೋಲಿಸಿದರು.

ಬುಬ್ಲಿಕ್ ಟೂರ್ನಿಯಲ್ಲಿ ಇದುವರೆಗೆ ಒಂದೂ ಸೆಟ್ ಬಿಟ್ಟುಕೊಟ್ಟಿರಲಿಲ್ಲ. ಆದರೆ ವಿಶ್ವದ ಅಗ್ರ ಆಟಗಾರ ಸಿನ್ನರ್ ಈ ಪಂದ್ಯದಲ್ಲಿ ಎಂಟು ಬಾರಿ ಅವರ ಸರ್ವ್ ಮುರಿದರು.

81 ನಿಮಿಷಗಳಲ್ಲಿ ಗೆದ್ದ ಇಟಲಿಯ ಆಟಗಾರ ಮುಂದಿನ ಸುತ್ತಿನಲ್ಲಿ ಸ್ವದೇಶದ ಲೊರೆಂಜೊ ಮುಸೆಟ್ಟಿ ಅವರನ್ನು ಎದುರಿಸಲಿದ್ದಾರೆ. ಹತ್ತನೇ ಶ್ರೇಯಾಂಕದ ಮುಸೆಟ್ಟಿ 6-3, 6-0, 6-1 ರಿಂದ ಸ್ಪೇನ್‌ನ ಜೇಮ್ ಮುನರ್ ಅವರನ್ನು ಸೋಲಿಸಿ ಮೊದಲ ಬಾರಿ ಇಲ್ಲಿ ಎಂಟರ ಘಟ್ಟ ತಲುಪಿದರು.

ಪುರುಷರ ವಿಭಾಗದಲ್ಲಿ ಎಂಟನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ 6-3, 6-2, 6-1 ರಿಂದ ಸ್ವಿಸ್ ಕ್ವಾಲಿಫೈಯರ್ ಲಿಯಾಂಡ್ರೊ ರೀಡಿ ಅವರನ್ನು ಮಣಿಸಿ ಎಂಟರ ಘಟ್ಟ ತಲುಪಿದರು. ಆಸ್ಟ್ರೇಲಿಯಾದ ಮಿನೋರ್ ಎಂಟರ ಘಟ್ಟದಲ್ಲಿ ಕೆನಡಾದ ಫೆಲಿಕ್ಸ್ ಆಗರ್ ಅಲಿಯಾಸಿಮ್ ಅವರನ್ನು ಎದು-ರಿಸಲಿದ್ದಾರೆ.

ಶ್ವಾಂಟೆಕ್‌ಗೆ ಜಯ: ಪೋಲೆಂಡ್‌ನ ಇಗಾ ಶ್ವಾಂಟೆಕ್, ಮಹಿಳೆಯರ ಸಿಂಗಲ್ಸ್ ನಾಲ್ಕನೇ ಸುತ್ತಿನಲ್ಲಿ 6-3, 6-1 ರಿಂದ 13ನೇ ಶ್ರೇಯಾಂಕದ ಎಕಟೆರಿನಾ ಅಲೆಕ್ಸಾಂಡ್ರೊವಾ (ರಷ್ಯಾ) ಅವರನ್ನು ಸೋಲಿಸಿ ಎಂಟರ ಘಟ್ಟ ತಲುಪಿದರು.

ಸೆಮಿಗೆ ಪೆಗುಲಾ



ಎರಡು ಬಾರಿಯ ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ವಿಜೇತೆ ಬಾರ್ಬರಾ ಕ್ರಾಚಿಕೋವಾ ಅವರನ್ನು 6-3, 6-3ರಿಂದ ನೇರ ಸೆಟ್‌ಗಳಲ್ಲಿ ಮಣಿಸಿದ ಆತಿಥೇಯ ಅಮೆರಿಕದ ಜೆಸಿಕಾ ಪೆಗುಲಾ ಅವರು ಮಹಿಳಾ ಸಿಂಗಲ್ಸ್ ಸೆಮಿಫೈನಲ್ ತಲುಪಿದರು.

ನಾಲ್ಕನೇ ಶ್ರೇಯಾಂಕದ ಪೆಗುಲಾ, ಕಳೆದ ವರ್ಷ ರನ್ನರ್ ಅಪ್ ಆಗಿದ್ದರು. ಅವರಿಗೆ ಝೆಕ್ ರಿಪಬ್ಲಿಕ್‌ನ ಮರ್ಕೆತಾ ವಂದ್ರುಸೋವಾ ಅಥವಾ ಹಾಲಿ ಚಾಂಪಿಯನ್ ಅರಿನಾ ಸಬಲೆಂಕಾ ಅವರು ಮುಂದಿನ ಸುತ್ತಿನಲ್ಲಿ ಎದುರಾಳಿಯಾಗಲಿದ್ದಾರೆ.

ಗ್ರ್ಯಾನ್‌ಸ್ಲಾಮ್‌ನಲ್ಲಿ ಅವರ ಗೆಲುವಿನ ಸರಪಣಿ 11ಕ್ಕೆ ಏರಿತು.

ಶ್ವಾಂಟೆಕ್ ಮುಂದಿನ ಪಂದ್ಯದಲ್ಲಿ ಅಮೆರಿಕದ ಅಮಂಡಾ ಅನಿಸಿನೋವಾ ಅವರನ್ನು ಎದುರಿಸಲಿದ್ದಾರೆ. ಕಳೆದ ತಿಂಗಳು ವಿಂಬಲ್ಡನ್ ಫೈನಲ್‌ನಲ್ಲಿ ಇವರಿಬ್ಬರು ಎದುರಾಳಿ ಗಳಾಗಿದ್ದರು. ಆಗ ಶ್ವಾಂಟೆಕ್ 6-0, 6-0ಯಿಂದ ಜಯಗಳಿಸಿದ್ದರು.

ಎಂಟನೇ ಶ್ರೇಯಾಂಕದ ಅನಿಸಿಮೋವಾ 6-0, 6-3 ರಿಂದ 18ನೇ ಶ್ರೇಯಾಂಕದ ಬೀಟ್ರಿಝ್ ಹದಾದ್ (ಬ್ರೆಜಿಲ್) ಅವರನ್ನು ಸೋಲಿಸಿದರು.

ಟಿ.ಟಿ: ಸಹನಾ, ಅಭಿನವ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸಹನಾ ಮೂರ್ತಿ ಹಾಗೂ ಅಭಿನವ್ ಮೂರ್ತಿ ಅವರು ಮಂಗಳವಾರ ಇಲ್ಲಿ ಮುಕ್ತಾಯಗೊಂಡ ವಿನಯಾ ಕೋಟ್ಯಾನ್ ಸ್ಮರಣಾರ್ಥ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಹಾಗೂ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆದರು. ಆರ್ಣವ್ ಎನ್. ಅವರು 19 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಅಭಿನವ್ ಮೂರ್ತಿ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದುಕೊಂಡರು.



ಸಹನಾ ಮೂರ್ತಿ(ಎಡ) ಅಭಿನವ್ ಮೂರ್ತಿ

ಟಿಳಕವಾಡಿ ಕ್ಲಬ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ವಿಭಾಗದ ಫೈನಲ್‌ನಲ್ಲಿ ಅಭಿನವ್ 6-11, 4-11, 11-6, 11-4, 11-4, 12-10ರಿಂದ ವರುಣ್ ಕಶ್ಯಪ್ ಅವರನ್ನು ಮಣಿಸಿದರು. ಆರಂಭಿಕ ಹಿನ್ನಡೆಯನ್ನು ಮೆಟ್ಟಿ ನಿಂತು ಚಾಂಪಿಯನ್ ಆದರು.

ಸೆಮಿಫೈನಲ್ ಪಂದ್ಯಗಳಲ್ಲಿ ವರುಣ್ 11-8, 11-5, 11-4, 11-3ರಿಂದ ಯಶ್ವಂತ್ ಪಿ. ವಿರುದ್ಧ ಜಯಗಳಿಸಿದರೆ, ಅಭಿನವ್ 11-7, 3-11, 11-8, 11-6, 11-8ರಿಂದ ಆರ್ಣವ್ ಅವರನ್ನು ಸೋಲಿಸಿದ್ದರು.

ಸಹನಾ ಮೂರ್ತಿ ಅವರು ತೀವ್ರ ಪೈಪೋಟಿ ಕಂಡ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ 11-8, 9-11, 10-12, 11-5, 5-11, 11-3, 11-7ರಿಂದ ತನಿಷ್ಕಾ ಕಪಿಲ್ ಕಾಲಭೈರವ ಅವರನ್ನು ಮಣಿಸಿದರು.


ಆರ್ಣವ್‌ಗೆ ಪ್ರಶಸ್ತಿ: 19 ವರ್ಷದೊಳಗಿನ ಬಾಲಕರ ಪ್ರಶಸ್ತಿ ಸುತ್ತಿನಲ್ಲಿ ಆರ್ಣವ್ 11-6, 7-11, 11-9, 7-11, 11-9, 11-5ರಿಂದ ಅಭಿನವ್ ಅವರನ್ನು ಸೋಲಿಸಿದರು.

ಅಂತರರಾಷ್ಟ್ರೀಯ ಟಿ20ಗೆ ಸ್ಟಾರ್ಕ್ ನಿವೃತ್ತಿ

ಬ್ರಿಸ್ಬೇನ್ (ಪಿಟಿಐ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಪರಿಣಾಮಕಾರಿ ವೇಗಿ ಮಿಚೆಲ್ ಸ್ಟಾರ್ಕ್ ಅಂತರ ರಾಷ್ಟ್ರೀಯ ಟಿ20 ಕ್ರಿಕೆಟ್ ಮಾದರಿಗೆ ಮಂಗಳವಾರ ನಿವೃತ್ತಿ ಘೋಷಿಸಿದರು.

ಮುಂಬರುವ ಆ್ಯಷಸ್ ಸರಣಿ, ಭಾರತದಲ್ಲಿ ನಡೆಯಲಿರುವ ಕ್ರಿಕೆಟ್ ಸರಣಿಗಳು ಮತ್ತು ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವತ್ತ ಹೆಚ್ಚು ಗಮನ ನೀಡುವ ದೃಷ್ಟಿಯಿಂದ ಅವರು ಈ ನಿರ್ಧಾರ ಕೈಗೊಂಡಿದ್ದಾರೆ.

ಬಿರುಗಾಳಿ ವೇಗದ ಎಸೆತಗಳು, ಸ್ವಿಂಗ್, ನಿಖರವಾದ ಯಾರ್ಕರ್‌ಗಳು ಮತ್ತು ಎದೆಯೆತ್ತರದ ಬೌನ್ಸರ್‌ಗಳನ್ನು ಹಾಕುವಲ್ಲಿ ನಿಷ್ಣಾತರಾಗಿರುವ ಸ್ಟಾರ್ಕ್ 'ಮ್ಯಾಚ್ ವಿನ್ನಿಂಗ್' ಬೌಲರ್ ಆಗಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ಅವರು 65 ಪಂದ್ಯಗಳನ್ನು ಆಡಿ 79 ವಿಕೆಟ್ ಗಳಿಸಿದ್ದಾರೆ. ಈ ಮಾದರಿಯಲ್ಲಿ ಆ್ಯಡಂ ಜಂಪಾ (103 ಪಂದ್ಯ; 130 ವಿಕೆಟ್) ಅವರ ನಂತರ ಅತ್ಯಧಿಕ ವಿಕೆಟ್ ಗಳಿಸಿರುವ ಆಸ್ಟ್ರೇಲಿಯಾ ಬೌಲರ್ ಆಗಿದ್ದಾರೆ.



ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ವೇಗಿ ಮಿಚೆಲ್ ಸ್ಟಾರ್ಕ್ ಎಎಫ್‌ಪಿ ಚಿತ್ರ

'ನಾನು ಆಡಿರುವ ಪ್ರತಿಯೊಂದು ಟಿ20 ಪಂದ್ಯದ ಅನುಕ್ಷಣವನ್ನೂ ಆನಂದಿಸಿದ್ದೇನೆ. ಅದರಲ್ಲಿ 2021ರ ವಿಶ್ವಕಪ್ ಟೂರ್ನಿ ವಿಶೇಷವಾದುದು. ಆ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದ ತಂಡವು ಅದ್ಭುತವಾಗಿತ್ತು' ಎಂದು ಸ್ಟಾರ್ಕ್ ಹೇಳಿದರು.

'ಆ್ಯಷಸ್ ಟೆಸ್ಟ್ ಸರಣಿ, ಭಾರತದಲ್ಲಿ ಸರಣಿ ಮತ್ತು 2027ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗಳಲ್ಲಿ ಆಡುವತ್ತ ನನ್ನ ಗಮನವಿದೆ. ಆದ್ದರಿಂದ ಕಾರ್ಯೋ-ತ್ತಡವನ್ನು ಕಡಿಮೆ ಮಾಡಿಕೊಳ್ಳಲು ಈ ನಿರ್ಧಾರ ಮಾಡಿರುವೆ. ಇದರಿಂದ (ನಿವೃತ್ತಿ ನಿರ್ಧಾರ) ತಂಡದ ಉಳಿದ ಬೌಲರ್‌ಗಳಿಗೂ ಮುಂಬರುವ ಟಿ20 ವಿಶ್ವಕಪ್ ಟೂರ್ನಿಗೆ ಸಿದ್ಧವಾಗಲು ಅನುಕೂಲವಾಗುತ್ತದೆ' ಎಂದೂ ಹೇಳಿದ್ದಾರೆ.

2015 ಮತ್ತು 2023ರಲ್ಲಿ ಆಸ್ಟ್ರೇಲಿಯಾ ತಂಡವು ಏಕದಿನ ವಿಶ್ವಕಪ್ ಜಯಿಸುವಲ್ಲಿ ಸ್ಟಾರ್ಕ್ ಬೌಲಿಂಗ್ ಕಾಣಿಕೆಯೂ ಮಹತ್ವದ್ದಾಗಿತ್ತು.

35 ವರ್ಷದ ಸ್ಟಾರ್ಕ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮುಂದು-ವರಿಯಲಿದ್ದಾರೆ. ಈ ಹಿಂದೆ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳಲ್ಲಿ ಆಡಿದ್ದಾರೆ. ಕೆಲವು ಪಂದ್ಯಗಳಲ್ಲಿ ಗೆಲುವಿನ ಕಾಣಿಕೆಯನ್ನೂ ನೀಡಿದ್ದಾರೆ. ಎಡಗೈ ವೇಗಿ ಸ್ಟಾರ್ಕ್ ಅವರಿಗೆ 2024ರ ಐಪಿಎಲ್ ಬಿಡ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ₹ 24.75 ಕೋಟಿ ನೀಡಿ ಖರೀದಿಸಿತ್ತು. ಈ ವರ್ಷದ ಐಪಿಎಲ್‌ನಲ್ಲಿ ಅವರು ಡೆಲ್ಲಿ ಕ್ಯಾಪಿಟಲ್ಸ್ (₹11.75ಕೋಟಿ) ಸೇರಿದ್ದರು.

ಉನ್ನತ ಕ್ರಿಕೆಟ್ ಮೇಲೆ 'ನಿಷೇಧ'ದ ನೆರಳು

• ಮಧು ಜವಳಿ

ಬೆಂಗಳೂರು: ಉದ್ಯಾನನಗರಿಯ ಕ್ರಿಕೆಟ್ ಹಿಂದೆಂದೂ ಇಂತಹ ಬಿಕ್ಕಟ್ಟನ್ನು ಎದುರಿಸಿರಲಿಲ್ಲ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಐಪಿಎಲ್ ಟ್ರೋಫಿ ಗೆಲುವಿನ ಸಂಭ್ರಮಾಚರಣೆಯ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣ ಬಳಿ ಸಂಭವಿಸಿದ್ದ ಕಾಲ್ತುಳಿತದ ಘಟನೆಯು ರಾಜ್ಯದ ಕ್ರಿಕೆಟ್ ಚಟುವಟಿಕೆಗಳ ಮೇಲೆ ಕರಿನೆರಳಂತೆ ಆವರಿಸಿದೆ. ಆ ದುರ್ಘಟನೆಯಲ್ಲಿ 11 ಜನ ಬಲಿಯಾಗಿದ್ದರು. ಹಲವರು ಗಾಯಗೊಂಡಿದ್ದರು. ಆ ಘಟನೆಯಿಂದ ಚಿನ್ನಸ್ವಾಮಿ ಕ್ರೀಡಾಂಗಣವು ಆರೋಪ ಪ್ರತ್ಯಾರೋಪಗಳ ಆಟಕ್ಕೆ ವೇದಿಕೆಯಾಗಿದೆ. ಒಬ್ಬರಿನ್ನೊಬ್ಬರತ್ತ ಬೆರಳು ತೋರಿಸುವುದರಲ್ಲಿ ನಿರತರಾಗಿದ್ದಾರೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮತ್ತು ಆರ್‌ಸಿಬಿಯು ಕ್ರಮವಾಗಿ ವಿಜಯೋತ್ಸವ ಕಾರ್ಯಕ್ರಮದ ಆತಿಥೇಯರು ಮತ್ತು ಆಯೋಜಕರು. ಆದ್ದರಿಂದ ಅವರೀಗ ಇಕ್ಕಟ್ಟಿಗೆ ಸಿಲುಕಿರುವುದು ಅರ್ಥವಾಗುತ್ತದೆ. ರಾಜ್ಯ ಸರ್ಕಾರ ಮಾತ್ರ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿರುವುದೂ ಗುಟ್ಟೇನಲ್ಲ.

ಈ ಸಂಭ್ರಮಾಚರಣೆಯ ಆಯೋಜನೆಯಲ್ಲಿ ರಾಜ್ಯದ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರು ಕೂಡ ಪ್ರಮುಖ ಪಾತ್ರವಹಿಸಿದ್ದರು. ವಿಧಾನಸೌಧದ ಮೆಟ್ಟಿಲುಗಳ ಮೇಲೆ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಅಲ್ಲದೇ ವಿಮಾನನಿಲ್ದಾಣದಲ್ಲಿ ತಂಡವನ್ನು ಸ್ವಾಗತಿಸಿದ್ದ ಉಪಮುಖ್ಯಮಂತ್ರಿ, ಕ್ರೀಡಾಂಗಣದಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿಯೂ ಮುಂಚೂಣಿಯಲ್ಲಿದ್ದರು. ಆದರೆ ದುರ್ಘಟನೆಯ ಹೊಣೆಗಾರಿಕೆಯಿಂದ ಸರ್ಕಾರವು ಅಂತರ ಕಾಯ್ದುಕೊಳ್ಳುತ್ತಿರುವುದು ವಿಚಿತ್ರ.

ಸರ್ಕಾರ ನೇಮಕ ಮಾಡಿದ ನ್ಯಾಯಮೂರ್ತಿ ಮೈಕೆಲ್ ಡಿಕುನ್ಹಾ ಆಯೋಗವು ದುರ್ಘಟನೆಯ ಕುರಿತು ಕೂಲಂಕಷ ತನಿಖೆ ನಡೆಸಿ ವರದಿ ಕೊಟ್ಟಿದೆ. ಅದರಲ್ಲಿ 'ಕ್ರೀಡಾಂಗಣವು ದೊಡ್ಡಮಟ್ಟದಲ್ಲಿ ಜನ ಸೇರುವ ಕಾರ್ಯಕ್ರಮಗಳಿಗೆ ಯೋಗ್ಯವಾಗಿಲ್ಲ' ಎಂದು ಉಲ್ಲೇಖಿಸಿದ್ದು, ಮೂಲಸೌಲಭ್ಯ ಮತ್ತು ವಿನ್ಯಾಸದ ನವೀಕರಣಕ್ಕಾಗಿ ಶಿಫಾರಸು ಮಾಡಿದೆ.

'ಶಿಫಾರಸು ಮಾಡಿರುವ ಸುಧಾರಣೆ ಕ್ರಮಗಳನ್ನು ಕೈಗೊಳ್ಳದೇ ದೊಡ್ಡ ಸಂಖ್ಯೆಯಲ್ಲಿ ಜನ ಸೇರುವ ಕಾರ್ಯಕ್ರಮಗಳನ್ನು ಅಯೋಜಿಸುವುದು ಆತಂಕಕಾರಿ. ಜನರ ಸುರಕ್ಷತೆ, ನಗರ ಸಂಚಾರ ವ್ಯವಸ್ಥೆ ಮತ್ತು ತುರ್ತು ಘಟನೆಗಳ ನಿರ್ವಹಣೆಗೆ ಅಡ್ಡಿಯಾಗುವ ಸಾಧ್ಯತೆಗಳು ಹೆಚ್ಚು' ಎಂದೂ ಆಯೋಗ ಹೇಳಿದೆ.

ಇದೀಗ ಕೆಎಸ್‌ಸಿಎಯನ್ನು ತನ್ನ ಆಣತಿಗೆ ತಕ್ಕಂತೆ ಆಡಿಸಲು ಸರ್ಕಾರವು ಈ ವರದಿಯನ್ನು ಕೋಲಿನಂತೆ ಬಳಸುತ್ತಿದೆ. ಅದಕ್ಕಾಗಿಯೇ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಹಾರಾಜ ಟ್ರೋಫಿ ಟಿ20 ಟೂರ್ನಿಯನ್ನು ಆಯೋಜಿಸಲು ಅನುಮತಿ ನೀಡಲಿಲ್ಲ. ಟೂರ್ನಿಯನ್ನು ಮೈಸೂರಿಗೆ ಸ್ಥಳಾಂ-ತರಿಸಲಾಯಿತು. ಅಲ್ಲಿಯೂ ಕ್ರೀಡಾಂಗಣದಲ್ಲಿ ಪ್ರೇಕ್ಷಕರ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು.

ಇದೇ ತಿಂಗಳು ಆರಂಭವಾಗಲಿರುವ ಐಸಿಸಿ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಕೆಲವು ಪಂದ್ಯಗಳು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿತ್ತು. ಆದರೆ ಅವುಗಳ ಆಯೋಜನೆಗೆ ಷರತ್ತುಗಳನ್ನು ನಗರ ಪೊಲೀಸ್ ಇಲಾಖೆ ಹಾಕಿತು. ಇದರಿಂದಾಗಿ ಪಂದ್ಯಗಳನ್ನು ನವೀ ಮುಂಬೈಗೆ ಸ್ಥಳಾಂತರಿಸಲಾಯಿತು. ಉದಾಹರಣೆಗೆ; ಕ್ರೀಡಾಂಗಣದಲ್ಲಿ ವಾಹನ ನಿಲುಗಡೆಗಾಗಿ ಪ್ರತ್ಯೇಕ ಸ್ಥಳವನ್ನು ನೀಡಬೇಕು ಎಂಬುದೂ ಒಂದು ಷರತ್ತು. ಇದು ಪ್ರಾಯೋಗಿಕವಾಗಿ ಸಾಧ್ಯವಿಲ್ಲ. ಜಗತ್ತಿನಲ್ಲಿ ಯಾವುದೇ ಕ್ರಿಕೆಟ್ ಮೈದಾನದಲ್ಲಿಯೂ ಇಂತಹ ಸೌಲಭ್ಯ ಇಲ್ಲ. ಪರೋಕ್ಷವಾಗಿ ನಿಷೇಧ ಹೇರುವ ಕ್ರಮ ಇದಾಗಿದೆಯೇ?

ಆದಾಗ್ಯೂ, ಜೂನ್ 4ರ ಘಟನೆಯು ಕ್ರಿಕೆಟ್ ಪಂದ್ಯದಲ್ಲಿ ಆಗಿರಲಿಲ್ಲ ಎಂಬುದನ್ನು ಮರೆಯಬಾರದು. ಉಚಿತ ಪ್ರವೇಶ ಅಥವಾ ಉಚಿತ ಪಾಸ್ ವಿತರಿಸಲಾಗುವುದು ಎಂದು ಭಾವಿಸಿದ್ದ ಸುಮಾರು ಮೂರು ಲಕ್ಷ ಜನರು ಅಲ್ಲಿ ಜಮಾಯಿಸಿದ್ದರು. ಇಷ್ಟು ದೊಡ್ಡ ಜನಸಂಖ್ಯೆಗೆ ಪೊಲೀಸ್ ವ್ಯವಸ್ಥೆ ಅಸಮರ್ಪಕವಾಗಿತ್ತು.

50 ವರ್ಷಗಳ ಇತಿಹಾಸವಿರುವ ಈ ಕ್ರೀಡಾಂಗಣದಲ್ಲಿ ಹಲವಾರು ಮಹತ್ವದ ಪಂದ್ಯಗಳು ನಡೆದಿವೆ. ಟಿಕೆಟ್ ಮಾರಾಟದ ಸಂದರ್ಭಗಳಲ್ಲಿ ಕೆಲ ಸಣ್ಣಪುಟ್ಟ ಘಟನೆಗಳನ್ನು ಬಿಟ್ಟರೆ ದೊಡ್ಡ ದುರಂತಗಳು ಆಗಿರಲಿಲ್ಲ. ಜೂನ್ 4 ಅಂತಹದೊಂದು ದುರಂತದ ದಿನವಾಗಲು ಕಾದಿತ್ತೇನೋ?

ಹೆಚ್ಚೆಂದರೆ ನೂರು ಜನ ಸೇರುವ ದೇಶಿ ಕ್ರಿಕೆಟ್ ಪಂದ್ಯಗಳು, ಟಿಕೆಟ್ ಮೂಲಕ ಜನರಿಗೆ ಪ್ರವೇಶ ನೀಡಲಾಗುವ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಮಿತಿಮೀರಿದ ದಟ್ಟಣೆಗೆ ಅವಕಾಶವಿರುವುದಿಲ್ಲ. ಅದರಲ್ಲೂ ಜೂನ್ 4ರಂದು ಸೇರಿದಷ್ಟು ಜನದಟ್ಟಣೆಯಂತೂ ಸಾಧ್ಯವೇ ಇಲ್ಲ. ಅದರ ಹಿಂದಿನ ದಿನ ಆರ್‌ಸಿಬಿ ಫೈನಲ್ ಗೆದ್ದ ನಂತರ ರಾತ್ರಿಯಿಡೀ ನಗರದಲ್ಲಿ ಜನರು ಬೀದಿಗಿಳಿದು ಸಂಭ್ರಮಿಸಿದ್ದರು. ಪೊಲೀಸರು ಬೆಳಗಿನ ಜಾವದವರೆಗೂ ಬಂದೋಬಸ್ತ್ ಮಾಡಿದ್ದರು. ಅದಾಗಿ ಕೆಲವೇ ಗಂಟೆಗಳಲ್ಲಿ ವಿಜಯೋತ್ಸವ ನಡೆಯಿತು. ದುರಂತ ಸಂಭವಿಸಿತು.

1974ರಲ್ಲಿ ಈ ಕ್ರೀಡಾಂಗಣ ನಿರ್ಮಾಣವಾಗಿದೆ. ಇಷ್ಟು ವರ್ಷಗಳಲ್ಲಿ ನಗರವೂ ಅಗಾಧವಾಗಿ ಬೆಳೆದಿದೆ. ಕ್ರೀಡಾಂಗಣದಲ್ಲಿರುವ ಸೌಲಭ್ಯಗಳೂ ಪ್ರಸ್ತುತ ಕಾಲಕ್ಕೆ ಹೊಂದಾಣಿಕೆಯಾಗಲಿಕ್ಕಿಲ್ಲ. ಆದರೆ ಕ್ರಿಕೆಟ್ ಪಂದ್ಯಗಳನ್ನು ನಿಷೇಧಿಸುವುದು ಇದಕ್ಕೆ ಪರಿಹಾರವಲ್ಲ. ರಸ್ತೆ ಗುಂಡಿಗಳಿಂದಾಗಿ ಸಂಭವಿಸುವ ಅಪಘಾತಗಳಿಂದಾಗಿ ಪ್ರತಿದಿನವೂ ಹಲವು ಜನ ಸಾಯುತ್ತಾರೆ. ಹಾಗೆಂದು ರಸ್ತೆಗಳನ್ನೇ ನಿರ್ಬಂಧಿಸಲು ಸಾಧ್ಯವೇ?